'ಸೋಂಕು ತಡೆಯಿರಿ – ಪಿಡುಗು ಹತ್ತಿಕ್ಕಿ' ಘೋಷಣೆಯಡಿ ಹೊಸ ಮಾರ್ಗಸೂಚಿ ಬಿಡುಗಡೆ

'ಶುದ್ಧ ಪರಿಸರದಲ್ಲಿ ಸೋಂಕು ಪ್ರಸರಣ ಕಡಿಮೆ'

ಪ್ರಜಾವಾಣಿ ವಾರ್ತೆ

ನವದೆಹಲಿ: ಮಾಸ್ಕ್ ಧರಿಸುವುದು, ಅಂತರ ಕಾಪಾಡುವಿಕೆ ಜೊತೆಗೆ ಸ್ವಚ್ಛತೆಗೆ ಆದ್ಯತೆ ಹಾಗೂ ವಾತಾವರಣದಲ್ಲಿ ಶುದ್ಧ ಗಾಳಿ ಇರುವಂತೆ ನೋಡಿಕೊಳ್ಳುವುದು ಕೊರೊನಾ ಸೋಂಕು ಹರಡುವಿಕೆಯನ್ನು ತಡೆಯಲಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

'ಸೋಂಕು ಪ್ರಸರಣ ತಡೆಯಿರಿ –ಪಿಡುಗು ಹತ್ತಿಕ್ಕಿ' ಘೋಷಣೆಯಡಿ ಈ ಬಗ್ಗೆ ಹೊಸ ಮಾರ್ಗಸೂಚಿ ನಿಯಮಗಳನ್ನು ನೀಡಿದ್ದು, ಸರ್ಕಾರದ ಪ್ರಧಾನ ವೈಜ್ಞಾನಿಕ ಸಲಹೆಗಾರರ ಕಚೇರಿ ಈ ಸೂಚನೆಗಳನ್ನು ನೀಡಿದೆ. ಶುದ್ಧ ಗಾಳಿ, ವಾತಾವರಣ ಇದ್ದಲ್ಲಿ ಸೋಂಕು ಹರಡುವಿಕೆಯ ಅಪಾಯವೂ ಕಡಿಮೆ ಎಂದು ಹೇಳಿದೆ.

ವಾಸನೆಯಂತೆ ಸೋಂಕು ಕೂಡಾ ತೆರೆದ ವಾತಾವರಣದಲ್ಲಿ ಚದುರಲಿದ್ದು, ದುರ್ಬಲಗೊಳ್ಳಲಿದೆ. ಹೀಗಾಗಿ, ಶುದ್ಧ ಗಾಳಿ ಆವರಿಸುವಂತೆ ಕಿಟಕಿ, ಬಾಗಿಲು ತೆರೆದಿರುವುದು, ವೆಂಟಿಲೇಷನ್ ವ್ಯವಸ್ಥೆ ಇದ್ದಲ್ಲಿ ಸೋಂಕು ಒಂದೆಡೇ ಕ್ರೋಡಿಕರಣ ಆಗುವುದು ತಪ್ಪಲಿದೆ ಎಂದು ಅಭಿಪ್ರಾಯಪಟ್ಟಿದೆ.



ಕೆಲವೆಡೆ ಸ್ಥಳ, ಮನೆಗಳಲ್ಲಿ ಶುದ್ಧ ಗಾಳಿ ಇರುವುದು ಸಮುದಾಯವನ್ನು ರಕ್ಷಿಸಲಿದೆ. ನಗರ ಮತ್ತು ಗ್ರಾಮೀಣ ಪ್ರದೇಶದಲ್ಲಿ ಈ ನಿಟ್ಟಿನಲ್ಲಿ ತುರ್ತು ಕ್ರಮ ಜರುಗಿಸಬೇಕು. ವ್ಯವಸ್ಥಿತ ದಿಕ್ಕಿನಲ್ಲಿ ಗಾಳಿ ಚಲಿಸುವಂತೆ ಫ್ಯಾನ್ ಬಳಕೆ, ಕಿಟಕಿ ಮತ್ತು ಬಾಗಿಲು ತೆರೆದಿರುವುದು, ಛಾವಣಿ ಕಿಟಕಿ ತೆರೆದರೂ ಹೊರಗಿನ ಗಾಳಿ ಬರಲಿದ್ದು, ಒಳಗಿನ ಗಾಳಿಯ ಗುಣಮಟ್ಟ ಹೆಚ್ಚಲಿದೆ. ಒಳಗಿನ ಗಾಳಿ ಹೊರಹೋಗುವಂತ ವ್ಯವಸ್ಥೆ, ಎಕ್ಸಾಸ್ಟ್ ಫ್ಯಾನ್‌ಗಳ ಬಳಕೆಯು ಸೋಂಕು ತಡೆಗೆ ಅನುಕೂಲ ಎಂದು ಹೇಳಲಾಗಿದೆ.

ಸರಳಕ್ರಮ ಮತ್ತು ಕಾರ್ಯಶೈಲಿಯು ಸೋಂಕು ಪ್ರಸರಣವನ್ನು ತಡೆಯಲಿದೆ ಎಂದು ಒತ್ತಿ ಹೇಳಿದೆ. ಗಾಳಿಯ ಸರಾಗ ಚಲನೆಗೆ ತೆರೆದ ವಾತಾವರಣವಿದ್ದಲ್ಲಿ ಸೋಂಕು ಒಬ್ಬರಿಂದ ಮತ್ತೊಬ್ಬರಿಗೆ ಹರಡುವ ಸಾಧ್ಯತೆಗಳು ಕಡಿಮೆ ಎಂದು ಪ್ರತಿಪಾದಿಸಿದೆ.

ಕೇಂದ್ರೀಕೃತ ವಾಯು ನಿರ್ವಹಣಾ ವ್ಯವಸ್ಥೆ, ವಾಯು ಶುದ್ಧೀಕರಣ ವ್ಯವಸ್ಥೆಯುಳ್ಳ ಕಟ್ಟಡಗಳು, ನಿಯಮಿತವಾಗಿ ಗಾಳಿ ಶುದ್ಧತೆಗೆ ಕ್ರಮವಹಿಸುವುದು ಅಗತ್ಯ. ಸಭಾಂಗಣಗಳು, ಕಚೇರಿ, ಶಾಪಿಂಗ್ ಮಾಲ್‌ಗಳಲ್ಲಿ ಎಕ್ಸಾಸ್ಟ್ ಫ್ಯಾನ್‌ಗಳ ಬಳಕೆ ಅಗತ್ಯ. ನಿಯಮಿತವಾಗಿ ಗಾಳಿ ಶುದ್ಧೀಕರಣ ಪರಿಕರಗಳ ನಿರ್ವಹಣೆಯೂ ಅಗತ್ಯ ಎಂದು ಸಲಹೆ ಮಾಡಲಾಗಿದೆ.

ಸೋಂಕು ಪರೀಕ್ಷೆ ಪ್ರಮಾಣ ಹೆಚ್ಚಿಸಲು ಕ್ರಮ

ಕೊರೊನಾ ಸೋಂಕು 22 ರಾಜ್ಯಗಳಲ್ಲಿ ಹೆಚ್ಚುತ್ತಿರುವ ಹಿಂದೆಯೇ, ಪರೀಕ್ಷೆಗಳ ಸಂಖ್ಯೆ ಹೆಚ್ಚಿಸಲೂ ಕೇಂದ್ರ ಸರ್ಕಾರ ತೀರ್ಮಾನಿಸಿದೆ. ಮೇ ಅಂತ್ಯದ ವೇಳೆಗೆ 25 ಲಕ್ಷ, ಜೂನ್ ಅಂತ್ಯದವೇಳೆಗೆ 45 ಲಕ್ಷಕ್ಕೆ ಪರೀಕ್ಷಾ ಸಾಮರ್ಥ್ಯವನ್ನು ಹೆಚ್ಚಿಸಲಾಗುವುದು ಎಂದು ಕೇಂದ್ರ ತಿಳಿಸಿದೆ.

ಸೋಂಕು ಹೆಚ್ಚಾಗುತ್ತಿರುವ ಗ್ರಾಮೀಣ ಪ್ರದೇಶದಲ್ಲಿ ಈ ಪರೀಕ್ಷೆಗಳು ನಡೆಯಲಿವೆ.

ಗ್ರಾಮೀಣ ಭಾಗದಲ್ಲಿ ರ‍್ಯಾಪಿಡ್ ಆ್ಯಂಟಿಜನ್ ಪರೀಕ್ಷೆಗೆ ಆದ್ಯತೆ ನೀಡಲಾಗುವುದು ಎಂದು ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿ (ಐಸಿಎಂಆರ್) ಪ್ರಧಾನ ನಿರ್ದೇಶಕ ಬಲರಾಂ ಭಾರ್ಗವ ತಿಳಿಸಿದರು.

ಜೂನ್ ಅಂತ್ಯದ ವೇಳೆಗೆ 18 ಲಕ್ಷ ಆರ್‌ಟಿ–ಪಿಸಿಆರ್ ಮತ್ತು 27 ಲಕ್ಷ ರ‍್ಯಾಪಿಡ್ ಆ್ಯಂಟಿಜನ್ ಪರೀಕ್ಷೆಗಳು ನಡೆಸಲಾಗುವುದು ಎಂದು ಅವರು ತಿಳಿಸಿದರು.

ಯುವ ಜನರಲ್ಲಿ ಕೋವಿಡ್: ದತ್ತಾಂಶ ದಾಖಲಿಸಲು ಪ್ರಧಾನಿ ಸೂಚನೆ

ನವದೆಹಲಿ (ಪಿಟಿಐ): ಯುವ ಜನರು ಮತ್ತು ಮಕ್ಕಳಲ್ಲಿ ಕೋವಿಡ್ ಹರಡುವಿಕೆ ಮತ್ತು ಅದರ ತೀವ್ರತೆಯನ್ನು ದಾಖಲಿಸಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಜಿಲ್ಲಾಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದಾರೆ. ಸಣ್ಣ ಪ್ರಮಾಣದಲ್ಲಿ ಉಳಿದಿರುವ ಕೋವಿಡ್‌ನ ಸವಾಲು ದೇಶದ ಮುಂದೆ ಇದ್ದೇ ಇರುತ್ತದೆ ಎಂಬ ಎಚ್ಚರಿಕೆಯನ್ನೂ ನೀಡಿದ್ದಾರೆ.

> ಧೂರ್ತ ಮತ್ತು ಬಹುರೂಪಿಯಾಗಿರುವ ವೈರಾಣುವನ್ನು ಎದುರಿಸಲು ಹೊಸ ಕಾರ್ಯತಂತ್ರಗಳು ಮತ್ತು ವಿನೂತನ ಪರಿಹಾರಗಳು ಬೇಕು
> **ನರೇಂದ್ರ ಮೋದಿ,** ಪ್ರಧಾನಿ

ಕೋವಿಡ್‌ನ ಅತಿ ಹೆಚ್ಚು ಪ್ರಕರಣಗಳು ಇರುವ ಜಿಲ್ಲೆಗಳ ಜಿಲ್ಲಾಧಿಕಾರಿಗಳ ಜತೆಗಿನ ಸಂವಾದವನ್ನು ಅವರು ಗುರುವಾರ ನಡೆಸಿದರು. ವೈರಾಣುವಿನ ರೂಪಾಂತರದಿಂದಾಗಿ ಯುವ ತಲೆಮಾರಿನಲ್ಲಿ ಕೂಡ ಸೋಂಕು ಹರಡುತ್ತಿರುವುದರ ಬಗ್ಗೆ ಪ್ರಧಾನಿ ಕಳವಳ ವ್ಯಕ್ತಪಡಿಸಿದರು. ಯುವ ಜನರಲ್ಲಿ ಸೋಂಕಿನ ಅಂಕಿಅಂಶಗಳನ್ನು ವಿಶ್ಲೇಷಿಸಬೇಕು. ಆ ಮೂಲಕ ಭವಿಷ್ಯದಲ್ಲಿ ಸೋಂಕನ್ನು ಎದುರಿಸಲು ಸಜ್ಜಾಗಬೇಕು ಎಂದು ಅವರು ಕರೆ ಕೊಟ್ಟರು.

ಕಳೆದ ಕೆಲವು ದಿನಗಳಲ್ಲಿ ಸಕ್ರಿಯ ಪ್ರಕರಣಗಳ ಸಂಖ್ಯೆ ಇಳಿಕೆಯಾಗುತ್ತಿದೆ. ಹಾಗಿದ್ದರೂ ಜನರು ಕೋವಿಡ್ ತಡೆ ಮಾರ್ಗಸೂಚಿಗಳನ್ನು ಪಾಲಿಸುವುದನ್ನು ಅಧಿಕಾರಿಗಳು ಖಚಿತಪಡಿಸಿಕೊಳ್ಳಬೇಕು. ಪ್ರಕರಣಗಳ ಸಂಖ್ಯೆ ಇಳಿಕೆಯಾಗುತ್ತಿದ್ದಂತೆಯೇ 'ಇನ್ನು ಚಿಂತೆಯ ಅಗತ್ಯವಿಲ್ಲ' ಎಂದು ಜನರು ಭಾವಿಸುತ್ತಾರೆ ಎಂದು ಕಳೆದ ಒಂದುವರೆ ವರ್ಷದ ಅನುಭವವನ್ನು ಉಲ್ಲೇಖಿಸಿ ಮೋದಿ ಹೇಳಿದರು.

ಕೋವಿಡ್ ನಿಯಂತ್ರಣವು ಆಡಳಿತ ವ್ಯವಸ್ಥೆ, ಸಾಮಾಜಿಕ ಸಂಘಟನೆಗಳು ಮತ್ತು ಚುನಾಯಿತ ಪ್ರತಿನಿಧಿಗಳ ಸಾಮೂಹಿಕ ಹೊಣೆಗಾರಿಕೆ ಎಂದರು.

ಸುದ್ದಿ 2 ನಿಮಿಷ

ವೈದ್ಯ ಸಾಹಿತ್ಯ ಸಮ್ಮೇಳನಕ್ಕೆ ಡಾ.ಪಿ.ಎಸ್.ಶಂಕರ ಸರ್ವಾಧ್ಯಕ್ಷ

ಕಲಬುರ್ಗಿ: ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ರಜತಮಹೋತ್ಸವದ ಅಂಗವಾಗಿ ಮೇ 22 ಮತ್ತು

23ರಂದು 'ರಾಜ್ಯಮಟ್ಟದ ಆನ್‌ಲೈನ್ ಕನ್ನಡ ವೈದ್ಯ ಸಾಹಿತ್ಯ ಸಮ್ಮೇಳನ ಆಯೋಜಿಸಿದೆ. ಕಲಬುರ್ಗಿಯ ಹಿರಿಯ ವೈದ್ಯ ಡಾ.ಪಿ.ಎಸ್. ಶಂಕರ ಅವರು ಸಮ್ಮೇಳನದ ಸರ್ವಾಧ್ಯಕ್ಷರಾಗಿದ್ದಾರೆ. ವೈದ್ಯವಿಜ್ಞಾನ ಅಂದು-ಇಂದು-ಮುಂದು ವಿಷಯಗಳ ಕುರಿತು ಗೋಷ್ಠಿಗಳು, ಸಂವಾದ, ಕವಿಗೋಷ್ಠಿ ನಡೆಯಲಿವೆ.

'ಅನುದಾನರಹಿತ ಶಾಲಾ ಸಿಬ್ಬಂದಿಗೆ ಪ್ಯಾಕೇಜ್ ಘೋಷಿಸಿ'

ಬೆಂಗಳೂರು: 'ಕೋವಿಡ್ ಕಾರಣದಿಂದ ಸಂಕಷ್ಟಕ್ಕೆ ಸಿಲುಕಿರುವ, ಅನುದಾನರಹಿತ ಶಾಲೆ– ಕಾಲೇಜುಗಳ ಶಿಕ್ಷಕ-ಶಿಕ್ಷಕೇತರ ಸಿಬ್ಬಂದಿಗೆ ವಿಶೇಷ ಆರ್ಥಿಕ ಪ್ಯಾಕೇಜ್ ಘೋಷಿಸಿಸಬೇಕು' ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಬಳಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಎಸ್. ಸುರೇಶ್ ಕುಮಾರ್ ಮನವಿ ಮಾಡಿದ್ದಾರೆ.

ರಾಜ್ಯದಲ್ಲಿ ಖಾಸಗಿ ಅನುದಾನರಹಿತ ಶಾಲಾ ಕಾಲೇಜುಗಳಲ್ಲಿ ಅಂದಾಜು ಎರಡು ಲಕ್ಷ ಬೋಧಕ-ಬೋಧಕೇತರ ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದಾರೆ.

'ರಾಜ್ಯದಾದ್ಯಂತ ಖಾಸಗಿ ಅನುದಾನರಹಿತ ಶಿಕ್ಷಣ ಸಂಸ್ಥೆಗಳ ಮೇಲೆ ಅವಲಂಬಿಸಿದ್ದ ಹಲವು ವರ್ಗಗಳ ಜೀವನದ ಮೇಲೆ ಲಾಕ್‌ಡೌನ್ ಗಂಭೀರ ಪರಿಣಾಮ ಬೀರಿದೆ. ಕಳೆದ ಸಾಲಿನಲ್ಲಿ ನೇರವಾಗಿ ತರಗತಿಗಳು ನಡೆಯದ ಕಾರಣ, ಮಕ್ಕಳ ಬೋಧನಾ ಶುಲ್ಕ ಪಾವತಿಸಲು ಪೋಷಕರು ನಿರೀಕ್ಷಿತ ರೀತಿಯಲ್ಲಿ ಆಸಕ್ತಿ ತೋರಲಿಲ್ಲ. ಇದು ಕೂಡಾ ಸಮಸ್ಯೆಗಳಿಗೆ ಕಾರಣವಾಯಿತು' ಎಂದು ಪತ್ರದಲ್ಲಿ ಅವರು ಉಲ್ಲೇಖಿಸಿದ್ದಾರೆ.

'ವಿದ್ಯಾ ಸಂಸ್ಥೆಗಳ ಆಡಳಿತ ವರ್ಗಗಳು ನೀಡುವ ವೇತನ-ಭತ್ಯೆಗಳನ್ನು ಸಂತೃಪ್ತಿಯಿಂದ ಸ್ವೀಕರಿಸಿ ಮಕ್ಕಳ ಭವಿಷ್ಯವನ್ನು ಈ ಶಿಕ್ಷಕರು ಕಾಯುತ್ತಿದ್ದಾರೆ. ಪೋಷಕ-ಶಾಲೆಗಳ ನಡುವಿನ ಸಮಸ್ಯೆಗಳ ನೇರ ಪರಿಣಾಮ ಈ ಸಮುದಾಯದ ಮೇಲಾಗಿದೆ. ಅಸಂಖ್ಯ ಶಿಕ್ಷಕರು ನರೇಗಾ ಯೋಜನೆಯಡಿ ಕೂಲಿ ಕೆಲಸ ಮಾಡಿದ್ದಾರೆ. ಹಣ್ಣು ತರಕಾರಿ ಮಾರಿದ್ದಾರೆ. ಈ ವರ್ಗದ ನೆರವಿಗೆ ಧಾವಿಸುವುದು ಸರ್ಕಾರದ ಜವಾಬ್ದಾರಿ' ಎಂದೂ ಪತ್ರದಲ್ಲಿ ಹೇಳಿದ್ದಾರೆ.

ಅನಾಥ ಮಕ್ಕಳಿಗೆ ಆದಿಚುಂಚನಗಿರಿ ಮಠದ ಆಸರೆ

ಬೆಂಗಳೂರು: ಕೋವಿಡ್‌ನಿಂದ ತಂದೆ, ತಾಯಿ ಮತ್ತು ಪೋಷಕರನ್ನು ಕಳೆದುಕೊಂಡು ಅನಾಥರಾಗಿರುವ ಮಕ್ಕಳಿಗೆ ಆಶ್ರಯ ನೀಡಿ, ಅವರ ವಿದ್ಯಾಭ್ಯಾಸದ ಸಂಪೂರ್ಣ ಜವಾಬ್ದಾರಿ ವಹಿಸಿಕೊಳ್ಳುವುದಾಗಿ ಆದಿಚುಂಚನಗಿರಿ ಮಠ ಪ್ರಕಟಿಸಿದೆ.

'ಸಂಕಷ್ಟದಲ್ಲಿರುವ ಮಕ್ಕಳಿಗೆ ಆದಿಚುಂಚನಗಿರಿ ಕ್ಷೇತ್ರದಲ್ಲಿ ಊಟ ವಸತಿ ಕಲ್ಪಿಸಿ ಅವರ ಭವಿಷ್ಯದ ಬದುಕಿಗೆ ಪೂರಕವಾಗುವ ಶಿಕ್ಷಣ ಒದಗಿಸಲಾಗುವುದು' ಎಂದು ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷರಾದ ನಿರ್ಮಲಾನಂದನಾಥ ಸ್ವಾಮೀಜಿ ತಿಳಿಸಿದ್ದಾರೆ.

ಈ ಕುರಿತು ಹೆಚ್ಚಿನ ಮಾಹಿತಿಗಾಗಿ ಮೊಬೈಲ್ ಸಂಖ್ಯೆ 9448071803 ಅಥವಾ 9148024141 ಸಂಪರ್ಕಿಸಬಹುದು ಎಂದು ಮನವಿ ಮಾಡಿದ್ದಾರೆ.

ಕೋವಿಡ್ ನಿಗ್ರಹ: ಸಚಿವರಿಬ್ಬರ ನಿಲುವು ಭಿನ್ನ

ಡಾ ಸಿ.ಎನ್.ಅಶ್ವತ್ಥನಾರಾಯಣ – ಸುಧಾಕರ್ ಮಧ್ಯೆ ಸಮನ್ವಯದ ಕೊರತೆ: ಬಿಜೆಪಿಯಲ್ಲಿ ಚರ್ಚೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಕಾರ್ಯಪಡೆಯ ಅಧ್ಯಕ್ಷರೂ ಆಗಿರುವ ಉಪಮುಖ್ಯಮಂತ್ರಿ ಡಾ.ಸಿ.ಎನ್.ಅಶ್ವತ್ಥನಾರಾಯಣ ಮತ್ತು ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ಅವರು ಕೋವಿಡ್‌ಗೆ ಸಂಬಂಧಿಸಿದಂತೆ ಪದೇ ಪದೇ ವ್ಯತಿರಿಕ್ತ ಹೇಳಿಕೆಗಳನ್ನು ನೀಡುತ್ತಿರುವುದು ಬಿಜೆಪಿ ವಲಯದಲ್ಲಿ ಚರ್ಚೆಗೆ ಕಾರಣವಾಗಿದೆ.

ಸಚಿವರ ಮಧ್ಯೆ ಸಮನ್ವಯ ಇಲ್ಲದೇ ಇರುವುದು ಅಥವಾ ಸಚಿವರ ಮಧ್ಯೆ ಪೈಪೋಟಿ ಇರುವುದು ಈ ರೀತಿಯ ಗೊಂದಲಕಾರಿ ಹೇಳಿಕೆಗಳಿಗೆ ಕಾರಣವೇ ಎಂಬ ಪ್ರಶ್ನೆ ಎದ್ದಿದೆ. ಇಂತಹ ಹೇಳಿಕೆಯಿಂದ ಸಾರ್ವಜನಿಕರಿಗೆ ತಪ್ಪು ಸಂದೇಶ ಹೋಗುತ್ತಿದೆ. ಇದರಿಂದ ಸರ್ಕಾರದ ವರ್ಚಸ್ಸಿಗೂ ಧಕ್ಕೆ ಬರುತ್ತದೆ

ಅಶ್ವತ್ಥ ನಾರಾಯಣ

ಡಾ.ಸುಧಾಕರ್

ಎಂಬ ಅಭಿಪ್ರಾಯ ವ್ಯಕ್ತವಾಗಿದೆ.

ಕಳೆದ ವಾರ ಲಸಿಕೆ ಕುರಿತಾಗಿ ಇಬ್ಬರೂ ವಿಭಿನ್ನ ಹೇಳಿಕೆ ನೀಡಿದ್ದರು. 'ವಿದೇಶಗಳಿಂದ ಲಸಿಕೆ ಆಮದು ಮಾಡಿಕೊಳ್ಳಲು ತೀರ್ಮಾನಿಸಲಾಗಿದೆ. ಅದಕ್ಕಾಗಿ ಟೆಂಡರ್ ಕರೆಯಲಾಗಿದೆ' ಎಂದು ಅಶ್ವತ್ಥನಾರಾಯಣ ಹೇಳಿದ್ದರು. ಬೇರೊಂದು ಕಡೆ ಮಾತನಾಡಿದ್ದ ಸುಧಾಕರ್ ಅವರು, 'ವಿದೇಶದಿಂದ ಲಸಿಕೆ ಆಮದು ಮಾಡಿಕೊಳ್ಳುವ ವಿಚಾರ ನನಗೆ ಗೊತ್ತಿಲ್ಲ' ಎಂದು ಹೇಳಿದ್ದರು.

ಬಳಿಕ ಮುಖ್ಯಮಂತ್ರಿಯವರೇ ಸುದ್ದಿಗೋಷ್ಠಿಯಲ್ಲಿ ಲಸಿಕೆ ಆಮದು ಮಾಡಿಕೊಳ್ಳುವುದು ಖಚಿತ ಎಂದು ಸ್ಪಷ್ಟಪಡಿಸಬೇಕಾದ ಅನಿವಾರ್ಯ ಬಂದೊದಗಿತು.

ಇದೀಗ ಶಿಲೀಂಧ್ರ ಸೋಂಕಿಗೆ ಸಂಬಂಧಿಸಿದಂತೆ ಔಷಧಿಯ ಕೊರತೆ ಇಲ್ಲ ಎಂದು ಅಶ್ವತ್ಥನಾರಾಯಣ ಅವರು ಹೇಳಿದ್ದರೆ, ಕೊರತೆ ಇದೆ ಎಂದು ಸುಧಾಕರ್ ಹೇಳಿರುವುದು ಮತ್ತೊಮ್ಮೆ ಗೊಂದಲಕ್ಕೆ ಕಾರಣವಾಗಿದೆ.

ಡಿಸಿಎಂ ಹೇಳಿದ್ದೇನು?: ಸದ್ಯಕ್ಕೆ ಶಿಲೀಂದ್ರ ಸೋಂಕಿಗೆ ಬಳಸಲಾಗುವ ಔಷಧಿಯ ಕೊರತೆ ಇಲ್ಲ. ಕೇಂದ್ರದಿಂದ 1,000 ವಯಲ್ಸ್ ಬಂದಿದೆ. ಮುಂದಿನ ದಿನಗಳಲ್ಲಿ ಔಷಧಿಯ ಕೊರತೆ ನೀಗಿಸಲು ಸರ್ಕಾರ ಪ್ರಯತ್ನ ಮಾಡುತ್ತಿದೆ. ಬೆಂಗಳೂರಿನ ಬೌರಿಂಗ್ ಆಸ್ಪತ್ರೆ ಸೇರಿದಂತೆ ರಾಜ್ಯದ ಆರು ಕಡೆಗಳಲ್ಲಿ ಶಿಲೀಂಧ್ರ ಸೋಂಕಿಗೆ ಉಚಿತ ಚಿಕಿತ್ಸೆ ಕೊಡಲಾಗುತ್ತಿದೆ. ಎಲ್ಲಿಯೂ ಔಷಧಿ ಕೊರತೆ ಆಗದಂತೆ ನೋಡಿಕೊಳ್ಳಲಾಗಿದೆ. ಕೇಂದ್ರದಿಂದ ಇನ್ನೂ ಹೆಚ್ಚಿನ ಔಷಧಿ ಪಡೆಯಲು ಯತ್ನಿಸಲಾಗುತ್ತಿದೆ ಎಂದು ಅಶ್ವತ್ಥನಾರಾಯಣ ಹೇಳಿದರು.

ಆರೋಗ್ಯ ಸಚಿವರು ಹೇಳಿದ್ದೇನು?: ರಾಜ್ಯದಲ್ಲಿ ಶಿಲೀಂಧ್ರ ಸೋಂಕು ಚಿಕಿತ್ಸೆಗೆ ಔಷಧದ ಕೊರತೆ ಇದೆ. ಎಷ್ಟು ಲಭ್ಯವಿದೆಯೋ ಅಷ್ಟನ್ನು ಮಾತ್ರ ಚಿಕಿತ್ಸೆಗೆ ಬಳಸುತ್ತಿದ್ದೇವೆ. ಆರು ವಿಭಾಗಗಳಿಗೆ ಆಗುವಷ್ಟು ಮಾತ್ರ ಔಷಧಿ ಇದೆ. ಮುಂದಿನ ದಿನಗಳಲ್ಲಿ ಎಲ್ಲ ಜಿಲ್ಲಾ ಕೇಂದ್ರಗಳಲ್ಲೂ ಶಿಲೀಂಧ್ರ ಸೋಂಕಿಗೆ ಚಿಕಿತ್ಸೆ ನೀಡಲಾಗುತ್ತದೆ ಎಂದು ಡಾ.ಸುಧಾಕರ್ ಸುದ್ದಿಗಾರರಿಗೆ ತಿಳಿಸಿದರು.

ಹೆಚ್ಚು ಔಷಧವನ್ನು ಪೂರೈಸುವಂತೆ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದೆ. ಔಷಧಿ ಸಮರ್ಪಕವಾಗಿ ಪೂರೈಕೆ ಆಗುತ್ತಿಲ್ಲ. ಔಷಧಿ ಕೊರತೆಯ ಕಾರಣ, ಯಾರಿಗೆಲ್ಲ ಅಗತ್ಯವಿದೆಯೋ ಅವರಿಗೆ ಮಾತ್ರ ಡೋಸ್ ವಿತರಣೆ ಮಾಡಲಾಗುತ್ತಿದೆ. ವಿಜಯಪುರದಲ್ಲಿ 30 ಜನರಿಗೆ ಶಿಲೀಂಧ್ರ ಸೋಂಕು ತಗುಲಿದೆ ಎಂದು ಅವರು ಹೇಳಿದರು.

ಗೊಂದಲ ಕಾರಣ: ಕೋವಿಡ್ ನಿರ್ವಹಣೆಯ ವಿವಿಧ ಜವಾಬ್ದಾರಿಗಳನ್ನು ಐವರು ಸಚಿವರಿಗೆ ವಹಿಸಲಾಗಿದೆ. ಆದರೆ, ಜಗದೀಶ ಶೆಟ್ಟರ್ ಬಿಟ್ಟು ಉಳಿದವರೆಲ್ಲ, ಪ್ರತಿ ದಿನ ಹೇಳಿಕೆ ನೀಡುತ್ತಾರೆ. ಇದರಲ್ಲಿ ಸಾಕಷ್ಟು ಗೊಂದಲಗಳಿರುತ್ತವೆ. ಸಚಿವರಾದ ಬಸವರಾಜ ಬೊಮ್ಮಾಯಿ, ಆರ್.ಅಶೋಕ, ಅರವಿಂದ ಲಿಂಬಾವಳಿ ಸ್ವತಂತ್ರ ಹೇಳಿಕೆಗಳನ್ನು ನೀಡುತ್ತಿದ್ದಾರೆ. ಇದು ಗೊಂದಲಕ್ಕೆ ಕಾರಣವಾಗಿದೆ ಎಂದು ಬಿಜೆಪಿ ಶಾಸಕರೇ ಹೇಳುತ್ತಿದ್ದಾರೆ.

ಮೈಸೂರಿನಲ್ಲಿ ಬಿರುಸಿನ ಮಳೆ

ಮೈಸೂರು/ಮಂಗಳೂರು: ಮೈಸೂರು, ಕೊಡಗು, ಕರಾವಳಿ, ಚಿಕ್ಕಮಗಳೂರು ಜಿಲ್ಲೆಯ ವಿವಿಧೆಡೆ ಗುರುವಾರ ಮಳೆಯಾಗಿದೆ.

ಮೈಸೂರಿನಲ್ಲಿ ಸಂಜೆ ಒಂದು ತಾಸು ಗುಡುಗು–ಸಿಡಿಲು ಸಹಿತ ಬಿರುಸಿನ ಮಳೆಯಾಗಿದೆ. ಕೆ.ಆರ್.ನಗರ ಪಟ್ಟಣ ಸೇರಿದಂತೆ ತಾಲ್ಲೂಕಿನ ವಿವಿಧೆಡೆ ಸಾಧಾರಣವಾಗಿ ಸುರಿದಿದೆ.

ಕೊಡಗು ಜಿಲ್ಲೆಯ ಗೋಣಿಕೊಪ್ಪಲು ಸುತ್ತಮುತ್ತ ಗುರುವಾರ ಮುಂಜಾನೆ ಸಾಧಾರಣ ಮಳೆಯಾಗಿದೆ.

ಮಂಡ್ಯ ಜಿಲ್ಲೆ ಮಳವಳ್ಳಿ ತಾಲ್ಲೂಕಿನ ಕುಂದೂರು ಗ್ರಾಮದಲ್ಲಿ, ಬುಧವಾರ ರಾತ್ರಿ ಸುರಿದ ಗಾಳಿ ಸಹಿತ ಮಳೆಗೆ 10 ಎಕರೆ ಬಾಳೆ ನೆಲಕಚ್ಚಿದೆ.

ಕೇರಳ: ಸಚಿವ ಸಂಪುಟಕ್ಕೆ 20 ಮಂದಿ ಸೇರ್ಪಡೆ

ಪಿಣರಾಯಿ ವಿಜಯನ್ ಪ್ರಮಾಣ ವಚನ

ಪ್ರಜಾವಾಣಿ ವಾರ್ತೆ

ತಿರುವನಂತಪುರ: ಸಿಪಿಐ(ಎಂ) ಹಿರಿಯ ಮುಖಂಡ ಪಿಣರಾಯಿ ವಿಜಯನ್ ಅವರು ಗುರುವಾರ ಎರಡನೇ ಅವಧಿಗೆ ಕೇರಳದ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದರು.

ಇದೇ ಸಂದರ್ಭದಲ್ಲಿ 20 ಮಂದಿ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದರು. ಇವರಲ್ಲಿ ಮೂವರು ಮಹಿಳೆಯರು ಸೇರಿದ್ದಾರೆ.

77 ವರ್ಷದ ಪಿಣರಾಯಿ ವಿಜಯನ್ ನೇತೃತ್ವದಲ್ಲಿ ಎಡ ಪ್ರಜಾಸತ್ತಾತ್ಮಕ ರಂಗ (ಎಲ್‌ಡಿಎಫ್) ಕೇರಳದಲ್ಲಿ ಮತ್ತೊಮ್ಮೆ ಅಧಿಕಾರ ಹಿಡಿಯುವ ಮೂಲಕ ಇತಿಹಾಸ ಸೃಷ್ಟಿಸಿದೆ.

ಪ್ರಮಾಣವಚನ ಸಮಾರಂಭವು ನಗರದ ಸೆಂಟ್ರಲ್ ಸ್ಟೇಡಿಯಂನಲ್ಲಿ ಕೋವಿಡ್ ಮಾರ್ಗಸೂಚಿಗೆ ಅನುಗುಣವಾಗಿ ನಡೆಯಿತು. ಸರಳ ಸಮಾರಂಭದಲ್ಲಿ ಪಿಣರಾಯಿ ವಿಜಯನ್ ಮತ್ತು ನೂತನ ಸಚಿವರಿಗೆ ರಾಜ್ಯಪಾಲ ಅರೀಫ್ ಮೊಹಮ್ಮದ್ ಖಾನ್ ಅವರು ಪ್ರಮಾಣವಚನ ಬೋಧಿಸಿದರು.

ಮುಖ್ಯಮಂತ್ರಿ ಸೇರಿದಂತೆ 15 ಸಚಿವರು ಸಂವಿಧಾನದ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದರು. ಐವರು ದೇವರ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದರು. ಸಂಪುಟಕ್ಕೆ ಸೇರ್ಪಡೆಯಾಗಿರುವ ಇಂಡಿಯನ್ ನ್ಯಾಷನಲ್ ಲೀಗ್‌ನ ಅಹ್ಮದ್ ದೇವರ್ಕೋವಿಲ್ ಅವರು ಅಲ್ಲಾ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದರು.

ಕೋವಿಡ್–19 ಕಾರಣಕ್ಕೆ ವಿರೋಧ ಪಕ್ಷ ಕಾಂಗ್ರೆಸ್–ಯುಡಿಎಫ್ ನಾಯಕರು ಕಾರ್ಯಕ್ರಮದಿಂದ ದೂರ ಉಳಿದರು.

ಸಾಂಕ್ರಾಮಿಕ ಕಾಯಿಲೆ ಕಾರಣಕ್ಕೆ ಸಮಾರಂಭದಲ್ಲಿ ಪಾಲ್ಗೊಳ್ಳುವವರ ಸಂಖ್ಯೆಯನ್ನು ಕಡಿಮೆಗೊಳಿಸಬೇಕು ಎಂದು ಕೇರಳ ಹೈಕೋರ್ಟ್ ಬುಧವಾರ ಸರ್ಕಾರಕ್ಕೆ ಸೂಚನೆ ನೀಡಿತ್ತು.

ಕೇರಳದ ಮುಖ್ಯಮಂತ್ರಿಯಾಗಿ ಪಿಣರಾಯಿ ವಿಜಯನ್ ಅವರು ಗುರುವಾರ ಪ್ರಮಾಣ ವಚನ ಸ್ವೀಕರಿಸಿದರು ಪಿಟಿಐ ಚಿತ್ರ

ದಲಿತ ನಾಯಕನಿಗೆ ದೇವಸ್ವಂ ಖಾತೆ

ಪಿಣರಾಯಿ ವಿಜಯನ್ ಅವರ ನೂತನ ಸರ್ಕಾರದಲ್ಲಿ ದೇವಸ್ವಂ (ಮುಜರಾಯಿ) ಖಾತೆಯನ್ನು ಸಿಪಿಎಂ ಹಿರಿಯ ಸದಸ್ಯ ಮತ್ತು ದಲಿತ ನಾಯಕ ಕೆ. ರಾಧಾಕೃಷ್ಣನ್ ಅವರಿಗೆ ನೀಡಿರುವುದು ಚರ್ಚೆಗೆ ಗ್ರಾಸವಾಗಿದೆ.

ಇದು ರಾಜಕೀಯ ಸಂದೇಶ ರವಾನಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತದೆ ಎಂದು ಸಿಪಿಎಂ ಕಾರ್ಯಕರ್ತರು ಪ್ರತಿಪಾದಿಸುತ್ತಿದ್ದಾರೆ. ಆದರೆ, ಹಿರಿಯ ನಾಯಕನನ್ನು ಕಡೆಗಣಿಸಲಾಗಿದೆ ಮತ್ತು ತಮ್ಮ ಸಮುದಾಯಕ್ಕೆ ಸೂಕ್ತ ಪ್ರಾತಿನಿಧ್ಯ ನೀಡಿಲ್ಲ ಎಂದು ದಲಿತ ಸಮುದಾಯ ಅಸಮಾಧಾನ ವ್ಯಕ್ತಪಡಿಸಿದೆ.

ಕೇರಳದಲ್ಲಿ ಸುಮಾರು 40 ವರ್ಷಗಳ ಬಳಿಕ ದಲಿತ ಸಮುದಾಯದ ವ್ಯಕ್ತಿಗೆ ದೇವಸ್ವಂ ಖಾತೆ ನೀಡಲಾಗಿದೆ.

'ಸರ್ಕಾರಕ್ಕೆ ಹುಳುಕು ಮುಚ್ಚಿಕೊಳ್ಳುವ ತುರ್ತು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಾನು ಯಾವುದೇ ಆದೇಶ ಕೊಡಲು ಜಿಲ್ಲಾಧಿಕಾರಿಗಳ ಸಭೆ ಕರೆದಿಲ್ಲ. ಅವರು (ಸರ್ಕಾರ) ಹುಳುಕು ಮುಚ್ಚಿಕೊಳ್ಳಲು ಅವಕಾಶ ನಿರಾಕರಿಸಿದ್ದಾರೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಆರೋಪಿಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಕೋವಿಡ್ ಅನ್ನು ಯಾವ ಜಿಲ್ಲೆಯಲ್ಲೂ ಸರ್ಕಾರ ಸಮರ್ಥವಾಗಿ ನಿಭಾಯಿಸಿಲ್ಲ. ನಾನು ಸಭೆ ನಡೆಸಿದರೆ ಎಲ್ಲಾ ಗೊತ್ತಾಗಿ ಬಿಡಬಹುದು ಎಂಬ ಭಯ ಅವರಿಗೆ. ಚಾಮರಾಜನಗರಕ್ಕೆ ನಾನು ಮತ್ತು ಡಿ.ಕೆ. ಶಿವಕುಮಾರ್ ಹೋಗದೆ ಇದ್ದಿದ್ದರೆ ಅಲ್ಲಿ ಸತ್ತವರ ಸಂಖ್ಯೆ ಹೊರಗೇ ಬರುತ್ತಿರಲಿಲ್ಲ' ಎಂದರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಮಾತನಾಡಿ, 'ಸಿದ್ದರಾಮಯ್ಯ ಅವರು ಕೇವಲ ಸಿದ್ದರಾಮಯ್ಯ ಅಲ್ಲ. ಅವರು ವಿರೋಧ ಪಕ್ಷದ ನಾಯಕ. ಅದು ಸಾಂವಿಧಾನಿಕ ಹುದ್ದೆ. ಅದಕ್ಕೆ ಗೌರವ ಇಲ್ಲವೇ. ಯಡಿಯೂರಪ್ಪ ಅವರು ವಿರೋಧ ಪಕ್ಷದ ನಾಯಕ ಆಗಿದ್ದಾಗ ಜಿಲ್ಲಾಧಿಕಾರಿಗಳ ಸಭೆ ಮಾಡುತ್ತಿರಲಿಲ್ಲವೇ' ಎಂದು ಪ್ರಶ್ನಿಸಿದರು.

ಸಿಎಂಗೆ ಮತ್ತೆ ಪತ್ರ: ಜಿಲ್ಲಾಮಟ್ಟದ ಅಧಿಕಾರಿಗಳ ಜೊತೆ ಝೂಮ್ ತಂತ್ರಾಂಶದ ಮೂಲಕ ಸಭೆ ನಡೆಸಲು ಅವಕಾಶ ನೀಡದ ಬಗ್ಗೆ ಮುಖ್ಯಮಂತ್ರಿಗೆ ಗುರುವಾರ ಮತ್ತೆ ಪತ್ರ ಬರೆದಿರುವ ಸಿದ್ದರಾಮಯ್ಯ, 'ಹಿಂದೆ ಸುತ್ತೋಲೆಗಳನ್ನು ಹೊರಡಿಸಿದಾಗ ತಂತ್ರಜ್ಞಾನ ಸಂಬಂಧಿ ಅನುಕೂಲಗಳು ಇರಲಿಲ್ಲ. ಹೀಗಾಗಿ ಸಭೆ ಕರೆದು ಮಾಹಿತಿ ಪಡೆಯಬೇಕಾಗಿತ್ತು. ಆದರೆ, ಝೂಮ್, ಗೂಗಲ್ ಮುಂತಾದ ಆ್ಯಪ್‌ಗಳ ಮೂಲಕ ಮಾಹಿತಿ ಪಡೆಯಬಹುದಾಗಿದೆ. ಅಧಿಕಾರಿಗಳ ಕಾರ್ಯವೈಖರಿಗಳ ಕುರಿತು ಪರಿಶೀಲನೆ ನಡೆಸಲು, ನಿರ್ದೇಶನನೀಡುವ ಉದ್ದೇಶವಿಲ್ಲ. ಅಷ್ಟರಮಟ್ಟಿಗಿನ ಸಾಂವಿಧಾನಿಕ ಅರಿವಿದೆ. ಕೇವಲ ಮಾಹಿತಿ ಪಡೆಯುವುದಷ್ಟೆ ನನ್ನ ಉದ್ದೇಶ. ಎರಡು ವರ್ಷಗಳಿಂದ ನಾನು ಕೇಳಿರುವ ಮಾಹಿತಿಯ ಬದಲು ಅಧಿಕಾರಿಗಳು ಬೇರೆ ಮಾಹಿತಿ ನೀಡಿದ್ದಾರೆ. ಈ ಗೊಂದಲಗಳಿಗೆ ಅವಕಾಶ ನೀಡಬಾರದೆಂಬ ಕಾರಣದಿಂದ ನೇರವಾಗಿ ಮಾಹಿತಿ ಪಡೆಯಲು ಉದ್ದೇಶಿಸಿದ್ದೇನೆ. ಅಧಿಕಾರಿಗಳಿಗೆ ನಿರ್ದೇಶನ ನೀಡಿ ಝೂಮ್ ಮೂಲಕ ಹಾಜರಾಗಿ ಮಾಹಿತಿ ನೀಡಲು ನಿರ್ದೇಶನ ನೀಡಬೇಕು' ಎಂದು ಆಗ್ರಹಿಸಿದ್ದಾರೆ.

'ವಿರೋಧ ಪಕ್ಷಗಳ ಕಾರ್ಯನಿರ್ವಹಣೆಗೆ ಅಡ್ಡಿ'

'ಕೊರೊನಾ ನೆಪ ಮುಂದಿಟ್ಟು ವಿರೋಧ ಪಕ್ಷಗಳ ಕಾರ್ಯನಿರ್ವಹಣೆಗೆ ರಾಜ್ಯ ಸರ್ಕಾರ ಅಡ್ಡಿಪಡಿಸುತ್ತಿದೆ' ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾರೆಡ್ಡಿ ಸುದ್ದಿ ಗೋಷ್ಠಿಯಲ್ಲಿ ಆರೋಪಿಸಿದರು.

ಬಿ.ಎಲ್. ಶಂಕರ್ ಮಾತನಾಡಿ, 'ವಿರೋಧ ಪಕ್ಷದ ನಾಯಕ ಅಂದರೆ, ಮುಖ್ಯಮಂತ್ರಿಯ ನೆರಳಿದ್ದಂತೆ. ಸರ್ಕಾರದಲ್ಲಿ ಆಗುತ್ತಿರುವ ಲೋಪ ಎತ್ತಿ ಹಿಡಿಯಲು ಅವಕಾಶ ಇದೆ' ಎಂದರು.

ರಮೇಶ್ ಬಾಬು ಮಾತನಾಡಿ, 'ಪರಿಸ್ಥಿತಿ ನಿಭಾಯಿಸಲು ಸಾಧ್ಯ ಆಗದಿದ್ದರೆ ಅಧಿಕಾರ ಬಿಟ್ಟು ಹೋಗಿ. ವಿರೋಧ ಪಕ್ಷದ ನಾಯಕನನ್ನು ಯಾಕೆ ಕಟ್ಟಿ ಹಾಕುತ್ತೀರಿ' ಎಂದು ಪ್ರಶ್ನಿಸಿದರು.

'ರಾಜ್ಯ ಸಿದ್ದರಾಮಯ್ಯ ಜಹಗೀರಲ್ಲ'

ಬೆಂಗಳೂರು: 'ನೀವು (ಸಿದ್ದರಾಮಯ್ಯ) ಕೇಳಿದ್ದನ್ನೆಲ್ಲ ಒಪ್ಪಿಕೊಳ್ಳುವುದಕ್ಕೆ ರಾಜ್ಯ ಸರ್ಕಾರವೇನು ಛತ್ರವಲ್ಲ. ಅಧಿಕಾರಿಗಳ ಸಭೆ ಕರೆಯಲು ರಾಜ್ಯವೇನು ನಿಮ್ಮ ಜಹಗೀರಲ್ಲ' ಎಂದು ಬಿಜೆಪಿ ಹರಿಹಾಯ್ದಿದೆ.

ಈ ಕುರಿತು ಸರಣಿ ಟ್ವೀಟ್ ಮಾಡಿರುವ ಬಿಜೆಪಿ, 'ನಿಮಗೆ ಅಗತ್ಯ ಮಾಹಿತಿ ಬೇಕಿದ್ದರೆ ಸರ್ಕಾರದ ಮುಖ್ಯ ಕಾರ್ಯದರ್ಶಿಯಿಂದ ಪಡೆಯಬಹುದಿತ್ತು. ಅದನ್ನು ಬಿಟ್ಟು ಜಿಲ್ಲಾಧಿಕಾರಿಗಳು ಮತ್ತು ಎಸ್ಪಿಗಳ ಜತೆ ಝೂಮ್ ಮೀಟಿಂಗ್ ಸಭೆ ನಡೆಸುತ್ತೇನೆ ಎಂದರೆ ಏನರ್ಥ' ಎಂದು ಪ್ರಶ್ನಿಸಿದೆ.

'ಹಿಂದೆ ನೀವು ಮುಖ್ಯಮಂತ್ರಿ ಆಗಿದ್ದಾಗ, ಅಂದಿನ ಕೆಪಿಸಿಸಿ ಅಧ್ಯಕ್ಷ ಜಿ.ಪರಮೇಶ್ವರ ಅವರು ಸಚಿವರ ಕಾರ್ಯವೈಖರಿ ಮೌಲ್ಯಮಾಪನ ಮಾಡುತ್ತೇನೆ ಎಂದಿದ್ದರು. ಆಗ ನಿಮ್ಮ ಪ್ರತಿಕ್ರಿಯೆ ಹೇಗಿತ್ತು ಎಂಬುದನ್ನು ನೆನಪು ಮಾಡಿಕೊಳ್ಳಿ. ನಿಮ್ಮ ಪಕ್ಷದ ಅಧ್ಯಕ್ಷರಿಗೆ ಅವಮಾನ ಮಾಡಿದ್ದ ನೀವು, ಬೇರೆ ಸರ್ಕಾರ ಇರುವಾಗ ಜಿಲ್ಲಾಧಿಕಾರಿಗಳು ಮತ್ತು ಎಸ್ಪಿ ಸಭೆ ನಡೆಸಲು ರಾಜ್ಯವೇನು ನಿಮ್ಮ ಅಡಿಯಾಳೇ' ಎಂದು ಬಿಜೆಪಿ ಪ್ರಶ್ನಿಸಿದೆ.

ವರ್ಷಾಂತ್ಯದೊಳಗೆ ಎಲ್ಲರಿಗೂ ಮೊದಲ ಡೋಸ್ ಲಸಿಕೆ: ಅಶ್ವತ್ಥನಾರಾಯಣ

ಕಪ್ಪು ಶಿಲೀಂಧ್ರ ರೋಗದಿಂದ ಸಾವು: ಮಾಹಿತಿ ಇಲ್ಲ

ಪ್ರಜಾವಾಣಿ ವಾರ್ತೆ

ಮೈಸೂರು: ರಾಜ್ಯದಲ್ಲಿ ಕಪ್ಪು ಶಿಲೀಂಧ್ರ ರೋಗದಿಂದ ಮೃತಪಟ್ಟ ಬಗ್ಗೆ ಮಾಹಿತಿ ಬಂದಿಲ್ಲ ಎಂದು ಉಪಮುಖ್ಯಮಂತ್ರಿ ಡಾ.ಸಿ.ಎನ್.ಅಶ್ವತ್ಥನಾರಾಯಣ ಗುರುವಾರ ಇಲ್ಲಿ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ರಾಜ್ಯದ ವಿವಿಧೆಡೆ ಸುಮಾರು 100 ಮಂದಿ ಇದಕ್ಕೆ ಚಿಕಿತ್ಸೆ ಪಡೆಯುತ್ತಿದ್ದಾರೆ. ಪ್ರತಿಯೊಂದು ಪ್ರಕರಣದ ಬಗ್ಗೆ ಮಾಹಿತಿ ನೀಡುವಂತೆ ಎಲ್ಲಾ ಆಸ್ಪತ್ರೆಗಳಿಗೆ ಸೂಚನೆ ನೀಡಿದ್ದೇವೆ' ಎಂದರು.

'ಕೋವಿಡ್‌ಗೆ ಚಿಕಿತ್ಸೆ ಪಡೆದ ನಂತರ ಬರುತ್ತಿರುವ ಈ ರೋಗದ ಬಗ್ಗೆ ಸರ್ಕಾರ ನಿಗಾ ಇಟ್ಟಿದೆ. ಯಾರಿಗೂ ಗೊತ್ತಾಗದಂತೆ ಚಿಕಿತ್ಸೆ ನೀಡುವುದು ಅಪರಾಧ. ಸರ್ಕಾರಿ ಅಥವಾ ಖಾಸಗಿ ಆಸ್ಪತ್ರೆಗಳು ಈ ಸಂಬಂಧ ಮಾಹಿತಿ ಮುಚ್ಚಿಟ್ಟರೆ ಕ್ರಮ ಜರುಗಿಸಲಾಗುವುದು' ಎಂದು ಎಚ್ಚರಿಕೆ ನೀಡಿದರು.

'ಕಪ್ಪು ಶಿಲೀಂಧ್ರ ರೋಗಕ್ಕೆ ಚಿಕಿತ್ಸೆ ನೀಡುವ ಸಂಬಂಧ ಔಷಧವನ್ನು ವಿದೇಶದಿಂದ ತರಿಸಲಾಗುತ್ತಿದೆ. ಆಮದು ಮಾಡಿಕೊಂಡ ಔಷಧವನ್ನು ರಾಜ್ಯಗಳಿಗೂ ಕೇಂದ್ರ ಸರ್ಕಾರ ಹಂಚಲಿದೆ. ಮೈಸೂರು ಸೇರಿದಂತೆ ಆರು ವಲಯಗಳ ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತ ಚಿಕಿತ್ಸೆಗೆ ವಿಶೇಷ ವ್ಯವಸ್ಥೆ ಮಾಡಲಾಗುತ್ತಿದೆ. ಖಾಸಗಿ ಆಸ್ಪತ್ರೆಗಳಲ್ಲೂ ಚಿಕಿತ್ಸೆಗೆ ವ್ಯವಸ್ಥೆ ಇರಲಿದೆ. ಅಗತ್ಯವಾದ ಔಷಧ ಪೂರೈಸಲು ಸರ್ಕಾರ ಪ್ರಯತ್ನ ಮಾಡಲಿದೆ' ಎಂದರು.

'ದೇಶದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಲಸಿಕೆ ಉತ್ಪಾದನೆಗೆ ತಯಾರಿ ನಡೆದಿದ್ದು, ಈ ವರ್ಷಾಂತ್ಯದೊಳಗೆ ಕನಿಷ್ಠ ಮೊದಲ ಡೋಸ್ ಲಸಿಕೆಯನ್ನು ಎಲ್ಲರಿಗೂ ನೀಡಬೇಕೆನ್ನುವ ಗುರಿ ಹೊಂದಿದ್ದೇವೆ' ಎಂದು ಹೇಳಿದರು.

'ರಾಜ್ಯದಲ್ಲಿ ಕೋವಿಡ್ ಪರೀಕ್ಷೆ ಪ್ರಮಾಣ ಕಡಿಮೆ ಮಾಡಿಲ್ಲ. ಪ್ರತಿ ದಿನ 50 ಸಾವಿರ ರ‍್ಯಾಪಿಡ್ ಆ್ಯಂಟಿಜೆನ್ ಟೆಸ್ಟ್ ಮಾಡಲಾಗುತ್ತಿದೆ. ಇನ್ನೂ ಒಂದು ಕೋಟಿ ರ‍್ಯಾಪಿಡ್ ಆ್ಯಂಟಿಜೆನ್ ಟೆಸ್ಟ್ ಕಿಟ್, ಒಂದು ಕೋಟಿ ಆರ್‌ಟಿ–ಪಿಸಿಆರ್ ಟೆಸ್ಟ್ ಕಿಟ್ ಖರೀದಿಸಲು ಸರ್ಕಾರ ನಿರ್ಧರಿಸಿದೆ' ಎಂದರು.

'ಔಷಧ ಖರೀದಿಗೆ ಟೆಂಡರ್ ಮಾಡಿದ್ದೇವೆ. ಅಗತ್ಯವಿದ್ದ ಕಡೆ 4ಜಿ ವಿನಾಯಿತಿ ನೀಡಲಾಗುತ್ತಿದೆ. ಜಾಗತಿಕ ಟೆಂಡರ್ ಕೂಡ ಕರೆಯಲಾಗುತ್ತಿದೆ' ಎಂದು ತಿಳಿಸಿದರು.

ಆರೋಗ್ಯ ಸಚಿವ ಡಾ.ಕೆ.ಸುಧಾಕರ ಅವರು ಕಪ್ಪು ಶಿಲೀಂಧ್ರ ರೋಗ ಕಾಣಿಸಿಕೊಂಡ ನಾಲ್ವರು ಮೃತಪಟ್ಟಿದ್ದಾಗಿ ಮಂಗಳವಾರವಷ್ಟೇ ಹೇಳಿದ್ದರು.

ಪಿಎಚ್‌ಸಿಯಲ್ಲೂ ಕೋವಿಡ್ ಕೇರ್

ಮಂಡ್ಯ: 'ಗ್ರಾಮೀಣ ಭಾಗದಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚುತ್ತಿರುವುದರಿಂದ, ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಕೋವಿಡ್ ಕೇರ್ ಕೇಂದ್ರಗಳನ್ನಾಗಿ ಪರಿವರ್ತಿಸಿ ಚಿಕಿತ್ಸೆ ನೀಡಲಾಗುವುದು' ಎಂದು ಡಾ.ಸಿ.ಎನ್.ಅಶ್ವತ್ಥನಾರಾಯಣ ಹೇಳಿದರು.'ಸೋಂಕು ಪತ್ತೆಯಾದ ನಂತರ ರೋಗಿಗಳನ್ನು ಆಯಾ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಇರಿಸಿ ಚಿಕಿತ್ಸೆ ನೀಡಲಾಗುವುದು' ಎಂದು ತಿಳಿಸಿದರು.

ಸಿದ್ದರಾಮಯ್ಯ ಅವರ ಸಭೆಗೆ ಸರ್ಕಾರ ಅಡ್ಡಿ ಮಾಡಿರುವ ಕುರಿತು, ವಿರೋಧ ಪಕ್ಷದ ನಾಯಕರು ಸಭೆ ನಡೆಸಲು ಅವಕಾಶ ಇಲ್ಲ ಎಂದು ಸರ್ಕಾರ ಸ್ಪಷ್ಟವಾಗಿ ತಿಳಿಸಿದೆ ಎಂದರು.

ಇಬ್ಬರ ಸಾವು

ಮೈಸೂರು: ಶಿಲೀಂಧ್ರ ರೋಗದಿಂದ ಮೈಸೂರಿನ ಕೆ.ಆರ್. ಆಸ್ಪತ್ರೆಯಲ್ಲಿ ಇಬ್ಬರು ಮೃತಪಟ್ಟಿರುವುದಾಗಿ ಅಲ್ಲಿಯ ವೈದ್ಯರು ಗುರುವಾರ ದೃಢಪಡಿಸಿದ್ದಾರೆ. ಹಾಸನ ಜಿಲ್ಲೆಯಲ್ಲೂ ನಾಲ್ವರಿಗೆ ಈ ಸೋಂಕು ದೃಢಪಟ್ಟಿದೆ.

ಕೋವಿಡ್ ಪರೀಕ್ಷೆ ಹೆಚ್ಚಳ: ಸಚಿವ ಸುಧಾಕರ್

ಬೆಂಗಳೂರು: 'ಕೋವಿಡ್ ಅಂಕಿ ಅಂಶ ಮುಚ್ಚಿಟ್ಟರೆ ಯಾವುದೇ ಲಾಭವಿಲ್ಲ. ಸದ್ಯ 1.25 ಲಕ್ಷಕ್ಕಿಂತಲೂ ಹೆಚ್ಚು ಕೋವಿಡ್ ಪರೀಕ್ಷೆ ನಡೆಯುತ್ತಿದ್ದು, ಅದನ್ನು ಹೆಚ್ಚಿಸಲು ಮತ್ತು 24 ಗಂಟೆಯೊಳಗೆ ವರದಿ ನೀಡಲು ಸೂಚಿಸಲಾಗಿದೆ' ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ತಿಳಿಸಿದರು.

ಸುದ್ದಿಗಾರರ ಜೊತೆ ಗುರುವಾರ ಮಾತನಾಡಿದ ಅವರು, 'ಕೋವಿಡ್ ಪ್ರಕರಣ ಹೆಚ್ಚುತ್ತಿರುವ ಕಡೆಗಳಲ್ಲಿ ತಲಾ 25ರಂತೆ ಆಮ್ಲಜನಕ ಸಾಂದ್ರಕಗಳನ್ನು ಕಳುಹಿಸಿಕೊಡಲಾಗುತ್ತಿದೆ. ಕೇಂದ್ರದಿಂದ ಇತ್ತೀಚೆಗೆ 800 ಆಮ್ಲಜನಕ ಸಾಂದ್ರಕಗಳು ಬಂದಿವೆ. ಮೂಲಸೌಕರ್ಯ ಕಡಿಮೆ ಇರುವ ಮಂಡ್ಯ, ಚಿತ್ರದುರ್ಗ, ಕೋಲಾರ, ಹಾಸನ, ಚಿಕ್ಕಬಳ್ಳಾಪುರ ಮತ್ತಿತರ ಜಿಲ್ಲೆಗಳಿಗೆ ಅವುಗಳನ್ನು ನೀಡಲಾಗುತ್ತಿದೆ' ಎಂದರು.

'ಶೇ 37ರಿಂದ 40ರಷ್ಟಿದ್ದ ಕೋವಿಡ್ ಪಾಸಿಟಿವಿಟಿ ದರ ಶೇ 27ಕ್ಕೆ ಬಂದಿದೆ. ಇದನ್ನು ಶೇ 5ಕ್ಕಿಂತ ಕೆಳಗೆ ಇಳಿಸುವ ಗುರಿ ಇದೆ. ಸಾವಿನ ಸಂಖ್ಯೆಯನ್ನೂ ಕಡಿಮೆ ಮಾಡಬೇಕಿದೆ. ಬೇರೆ ದೇಶಗಳ ಕೊರೊನಾ ಅಲೆ ಬಗ್ಗೆ ಕಾನ್ಪುರ ಐಐಟಿ ನೀಡಿರುವ ವರದಿ ಕುರಿತಂತೆ ಕೇಂದ್ರದ ಜೊತೆ ಚರ್ಚಿಸಲಾಗಿದೆ' ಎಂದರು.

ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದ ಅವರು, 'ಕಪ್ಪು ಶಿಲೀಂಧ್ರ ರೋಗ ನೋಡಿಕೊಂಡು ಔಷಧಿ ವಿತರಣೆ ಮಾಡಲಾಗುತ್ತಿದೆ. ಹೆಚ್ಚಿನ ಪ್ರಮಾಣದ ಔಷಧಿ ಹಂಚಿಕೆ ಮಾಡಬೇಕೆಂದು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಲಾಗಿದೆ. ಕೋವಿಡ್‌ನಿಂದ ಚೇತರಿಸಿಕೊಂಡವರ ಮೇಲೆಯೂ ನಿಗಾ ವಹಿಸುವಂತೆ ಸೂಚಿಸಲಾಗಿದೆ' ಎಂದರು.

'ಕೋವಿಡ್ ನಿರ್ವಹಣೆಗಾಗಿ ಪ್ರತಿ ಗ್ರಾಮ ಪಂಚಾಯಿತಿಗೆ ₹ 50 ಸಾವಿರ ಮುಂಗಡ ನೀಡುವುದರಿಂದ ಹಳ್ಳಿಗಳಲ್ಲಿ ಸೋಂಕಿತರನ್ನು ಕೋವಿಡ್ ಆರೈಕೆ ಕೇಂದ್ರಕ್ಕೆ ಸಾಗಿಸಲು ಸ್ಥಳೀಯಮಟ್ಟದ ಕಾರ್ಯಪಡೆಗೆ ಅನುಕೂಲ ಆಗಲಿದೆ' ಎಂದೂ ಹೇಳಿದರು.

ಬಿ.ವೈ. ವಿಜಯೇಂದ್ರ ದಂಪತಿಯಿಂದ ಪೂಜೆ ಪ್ರಕರಣ

ಶಿಕ್ಷೆ ಕೊಡಿಸಿ–ಇಒ ಅಳಲು: ಆಡಿಯೊ ವೈರಲ್

ಮೈಸೂರು: ನಂಜನಗೂಡಿನ ಶ್ರೀಕಂಠೇಶ್ವರ ದೇಗುಲದಲ್ಲಿ ಮುಖ್ಯಮಂತ್ರಿ ಪುತ್ರ ಬಿ.ವೈ.ವಿಜಯೇಂದ್ರ ದಂಪತಿ ಪೂಜೆ ಸಲ್ಲಿಸಿದ್ದಕ್ಕೆ ಸಂಬಂಧಿಸಿದಂತೆ, ಬೆಂಗಳೂರಿನ ವ್ಯಕ್ತಿಯೊಬ್ಬರೊಂದಿಗೆ ದೇಗುಲದ ಕಾರ್ಯ ನಿರ್ವಹಣಾಧಿಕಾರಿ ಮಾತನಾಡಿದ್ದು ಎನ್ನಲಾದ ಆಡಿಯೊ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ.

ಕರೆ ಮಾಡಿದ ವ್ಯಕ್ತಿಯು, ಮುಂದಿನ ವಾರ ತಮಗೆ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಲು ಅವಕಾಶ ಸಿಗಲಿದೆಯಾ ಎಂದು ಮಾತು ಆರಂಭಿಸುತ್ತಿದ್ದಂತೆಯೇ, ಅಧಿಕಾರಿಯು ತಕ್ಷಣವೇ 'ಆ ಘಟನೆಗೆ ಸಂಬಂಧಿಸಿದಂತೆ ಕ್ಷಮೆ ಯಾಚಿಸುವೆ' ಎನ್ನುತ್ತಾರೆ.

ಇಬ್ಬರ ನಡುವಿನ ಮಾತುಕತೆಯಲ್ಲಿ 'ಪ್ರಜಾವಾಣಿ'ಯಲ್ಲಿ ಸುದ್ದಿ ಪ್ರಕಟವಾಗಿರುವುದೂ ಪ್ರಸ್ತಾಪವಾಗಿದೆ.

'ಸರ್ಕಾರಿ ಅಧಿಕಾರಿಯಾಗಿ ಲಾಕ್‌ಡೌನ್ ನಿಯಮಾವಳಿ ಉಲ್ಲಂಘಿಸಿದ್ದು ಸರಿಯೇ' ಎಂದು ಕರೆ ಮಾಡಿದ ವ್ಯಕ್ತಿ ಪ್ರಶ್ನಿಸಿದ್ದಕ್ಕೆ, 'ಅವರು (ವಿಜಯೇಂದ್ರ ದಂಪತಿ) ಅಂತರ ಜಿಲ್ಲಾ ಪ್ರಯಾಣ ಮಾಡಿಕೊಂಡು ಬಂದಿದ್ದಾರೆ. ಅದನ್ನು ಯಾರಾದರೂ ಕೇಳ್ತಿದ್ದಾರಾ? ಕೋವಿಡ್–19 ನಿಯಮಾವಳಿಗಳನ್ನು ಅವರು ಕೂಡ ತಿಳಿದುಕೊಳ್ಳಬೇಕಿತ್ತಲ್ಲಾ' ಎಂದು ಇಒ ಪ್ರತ್ಯುತ್ತರಿಸಿದ್ದಾರೆ.

'ಅವರನ್ನು ಬಿಡಿ. ನಿಮಗೆ ಪ್ರಜ್ಞೆ ಇರಲಿಲ್ಲವೇ? ಸಂಬಂಧಿಸಿದ ಅಧಿಕಾರಿಯಾಗಿ ನೀವು ಬರಬೇಡಿ ಎಂದು ಹೇಳಬಹುದಿತ್ತು' ಎಂದು ಕರೆ ಮಾಡಿದ ವ್ಯಕ್ತಿಯು ತರಾಟೆಗೆ ತೆಗೆದುಕೊಂಡಿದ್ದಾರೆ. ಆಗ ಅಧಿಕಾರಿಯು, 'ನನ್ನಿಂದ ತಪ್ಪಾಗಿದೆ. ಶಿಕ್ಷೆ ಕೊಡಿಸಿ. ನೀವೇ ಏನು ಬೇಕಾದರೂ ಮಾಡಿಸಿ. ಇನ್ನೊಂದು ವರ್ಷ ಸೇವಾ ಅವಧಿಯಿದೆ. ಸ್ವಯಂ ನಿವೃತ್ತಿಯನ್ನಾದರೂ ಪಡೆಯುವೆ. ನಾವೂ ಮನುಷ್ಯರಲ್ವಾ. ತಪ್ಪು ನಡೆದಿದೆ. ನನಗೂ ಸಾಕಾಗಿದೆ. ಕುಕ್ಕೆ ಸುಬ್ರಹ್ಮಣ್ಯದಲ್ಲಿ ಇದ್ದಾಗಲೂ ಇದೇ ರೀತಿ ಆಗಿತ್ತು' ಎಂದೆಲ್ಲ ಅಸಹಾಯಕರಾಗಿ ಮಾತನಾಡಿದ್ದಾರೆ. ವೈರಲ್ ಆದ ಆಡಿಯೊಗೆ ಸಂಬಂಧಿಸಿದಂತೆ ಪ್ರತಿಕ್ರಿಯೆಗಾಗಿ ದೇಗುಲದ ಕಾರ್ಯ ನಿರ್ವಹಣಾಧಿಕಾರಿ ರವೀಂದ್ರ ಅವರನ್ನು ಸಂಪರ್ಕಿಸಲು ಯತ್ನಿಸಿದಾಗ, ಅವರ ಮೊಬೈಲ್ ಫೋನ್ ಸ್ವಿಚ್ ಆಫ್ ಆಗಿತ್ತು.

ಕೋವಿಡ್: ಮತ್ತೆ ಹೆಚ್ಚಿತು ಮರಣ ಸಂಖ್ಯೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಪೀಡಿತರ ಸಂಖ್ಯೆ ಇಳಿಕೆ ಕಂಡರೂ ಸೋಂಕಿನ ತೀವ್ರತೆಗೆ ಮೃತಪಡುವವರ ಸಂಖ್ಯೆ ನಿಯಂತ್ರಣಕ್ಕೆ ಬಂದಿಲ್ಲ. ಕಾಯಿಲೆ ಎದುರಿಸುತ್ತಿರುವವರಲ್ಲಿ 548 ಮಂದಿ ಸಾವಿಗೀಡಾಗಿರುವುದು ಗುರುವಾರ ದೃಢಪಟ್ಟಿದೆ.

ಮೃತಪಟ್ಟವರು ಶೀತಜ್ವರ ಮಾದರಿಯ ಅನಾರೋಗ್ಯ ಸಮಸ್ಯೆ (ಐಎಲ್‌ಐ) ಹಾಗೂ ತೀವ್ರ ಉಸಿರಾಟದ ಸಮಸ್ಯೆಯನ್ನು (ಸಾರಿ) ಎದುರಿಸಿದ್ದಾರೆ. 10 ದಿನಗಳಲ್ಲಿ 4,482 ಮಂದಿ ಮರಣ ಹೊಂದಿದ್ದಾರೆ. ಇದರಿಂದಾಗಿ ಈವರೆಗೆ ಕೋವಿಡ್‌ಗೆ ಮರಣ ಹೊಂದಿದವರ ಸಂಖ್ಯೆ 23,854ಕ್ಕೆ ತಲುಪಿದೆ. ಮರಣ ಪ್ರಮಾಣ ದರ ಶೇ 1.89ರಷ್ಟಿದೆ. ಕೋವಿಡ್ ಹೊಸ ಪ್ರಕರಣಗಳ ಸಂಖ್ಯೆ ಇಳಿಕೆ ಕಂಡಿದ್ದು, 28,869 ಮಂದಿ ಸೋಂಕಿತರಾಗಿರುವುದು ದೃಢಪಟ್ಟಿದೆ.

ಒಂದು ದಿನದ ಅವಧಿಯಲ್ಲಿ 1.20 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಸೋಂಕು ದೃಢ ಪ್ರಮಾಣ ಶೇ 23.91ಕ್ಕೆ ಇಳಿಕೆ ಕಂಡಿದೆ. ಈವರೆಗೆ ಕೋವಿಡ್ ಪೀಡಿತರಾದವರ ಸಂಖ್ಯೆ 23.35 ಲಕ್ಷ ದಾಟಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ ಇಳಿಕೆ ಕಂಡಿದ್ದು, ಸದ್ಯ 5.34 ಲಕ್ಷ ಮಂದಿ ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. ಸೋಂಕಿತರಲ್ಲಿ 52,257 ಮಂದಿಗೆ ಕಾಯಿಲೆ ವಾಸಿಯಾಗಿದೆ. ಈವರೆಗೆ ಗುಣಮುಖರಾದವರ ಒಟ್ಟು ಸಂಖ್ಯೆ 17.76 ಲಕ್ಷ ದಾಟಿದೆ.

ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಮರಣ ಪ್ರಕರಣಗಳು ಹೊಸದಾಗಿ ವರದಿಯಾಗಿವೆ. ಬೆಂಗಳೂರಿನಲ್ಲಿ 289 ಮಂದಿ ಮೃತಪಟ್ಟಿದ್ದಾರೆ. ಬೆಂಗಳೂರು ಗ್ರಾಮಾಂತರದಲ್ಲಿ 37 ಮಂದಿ, ಹಾಸನದಲ್ಲಿ 23 ಮಂದಿ, ಬಳ್ಳಾರಿಯಲ್ಲಿ 22 ಮಂದಿ, ತುಮಕೂರಿನಲ್ಲಿ 21 ಮಂದಿ, ಶಿವಮೊಗ್ಗದಲ್ಲಿ 17 ಮಂದಿ, ಮೈಸೂರಿನಲ್ಲಿ 16 ಮಂದಿ ಸಾವಿಗೀಡಾಗಿರುವುದು ದೃಢಪಟ್ಟಿದೆ.

ಶುಕ್ರವಾರ, ಮೇ 21, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 141 | ಪುಟ 14
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಬಾರ್ಜ್ ದುರಂತ: 37 ಮಂದಿಯ ಸುಳಿವಿಲ್ಲ 9

ಆಳ-ಅಗಲ
ಟೂಲ್‌ಕಿಟ್ ಜಟಾಪಟಿ
ಎಚ್‌ಡಿಕೆ- ಸಿದ್ದರಾಮಯ್ಯ ಟ್ವೀಟ್ ಜಗಳ 8

ಸೆನ್ಸೆಕ್ಸ್	ನಿಫ್ಟಿ	₹/$
49,564 ▼	14,906 ▼	73.12 ▲

ಕೋವಿಡ್ ಅಪಾಯ: ಅಪೌಷ್ಟಿಕತೆ ಸುಳಿಯಲ್ಲಿ 4.43 ಲಕ್ಷ ಮಕ್ಕಳು

• ವರುಣ ಹೆಗಡೆ

ಬೆಂಗಳೂರು: ರಾಜ್ಯದಲ್ಲಿ ಆರು ವರ್ಷದೊಳಗಿನ 4.43 ಲಕ್ಷ ಮಕ್ಕಳು ಅಪೌಷ್ಟಿಕ ಸಮಸ್ಯೆ ಎದುರಿಸುತ್ತಿದ್ದಾರೆ. ಇಂತಹ ಮಕ್ಕಳಲ್ಲಿ ರೋಗನಿರೋಧಕ ಶಕ್ತಿ ಕಡಿಮೆ ಇರುವ ಕಾರಣ ಕೋವಿಡ್ ಮೂರನೇ ಅಲೆಯು ಇವರಿಗೆ ಹೆಚ್ಚಿನ ಅಪಾಯ ತಂದೊಡ್ಡುವ ಸಾಧ್ಯತೆ ಇದೆ ಎಂದು ಆರೋಗ್ಯ ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಮೂರನೇ ಅಲೆಗೆ ಮುನ್ನ ಈ ಮಕ್ಕಳಿಗೆ ಲಸಿಕೆ ಕೊಡುವುದಕ್ಕೆ ನೀಡುವಷ್ಟೇ ಆದ್ಯತೆಯನ್ನು ಪೌಷ್ಟಿಕಾಂಶಯುಕ್ತ ಆಹಾರ ಒದಗಿಸಿ, ಅವರನ್ನು ಸಬಲರಾಗಿಸುವ ವಿಷಯದಲ್ಲೂ ನೀಡಬೇಕಾಗಿದೆ ಎಂದು ತಜ್ಞರು ಸಲಹೆ ನೀಡಿದ್ದಾರೆ.

ಕೋವಿಡ್ ಮೊದಲ ಅಲೆಯಲ್ಲಿ 60 ವರ್ಷ ದಾಟಿದವರು ಹೆಚ್ಚಿನ ಸಂಖ್ಯೆಯಲ್ಲಿ ಅಸ್ವಸ್ಥರಾಗಿ, ಸಮಸ್ಯೆ ಎದುರಿಸಿದ್ದರು. ಎರಡನೇ ಅಲೆಯಲ್ಲಿ ಮಧ್ಯವಯಸ್ಕರು ಅಧಿಕ ಸಂಖ್ಯೆಯಲ್ಲಿ ಸೋಂಕಿತರಾಗುತ್ತಿದ್ದಾರೆ. ಅಕ್ಟೋಬರ್ ಬಳಿಕ ಕಾಣಿಸಿಕೊಳ್ಳುವ ಮೂರನೇ ಅಲೆಯಲ್ಲಿ ಮಕ್ಕಳಿಗೆ ಸೋಂಕು ಹೆಚ್ಚು ಬಾಧಿಸಲಿದೆ ಎಂದು ತಜ್ಞರು ಎಚ್ಚರಿಸಿದ್ದಾರೆ.

8ನೇ ಪುಟ ನೋಡಿ

ಪ್ರಜಾವಾಣಿ ವಿಶೇಷ

‘ಮಕ್ಕಳಲ್ಲಿ ಅಪೌಷ್ಟಿಕ ಸಮಸ್ಯೆ ಇಳಿಕೆ’

‘ಕೋವಿಡ್‌ನಿಂದ ಅಂಗನವಾಡಿಗಳು ಸ್ಥಗಿತವಾಗಿರುವುದರಿಂದ ಮಕ್ಕಳ ಮನೆಗೇ ಆಹಾರ ಸಾಮಗ್ರಿಗಳನ್ನು ಪೂರೈಸಲಾಗುತ್ತಿದೆ. ಸರ್ಕಾರೇತರ ಸಂಸ್ಥೆಗಳ ಸಹಯೋಗದಲ್ಲಿ ಕೆಲವೊಂದು ಚಟುವಟಿಕೆಗಳನ್ನು ಮಾಡಿಸಲಾಗುತ್ತಿದೆ. ವಿವಿಧ ಲಸಿಕೆಗಳ ವಿತರಣೆ ಹಾಗೂ ಆರೋಗ್ಯ ತಪಾಸಣೆ ಕೂಡ ಕ್ರಮಬದ್ಧವಾಗಿ ನಡೆಯುತ್ತಿದೆ. ಅಪೌಷ್ಟಿಕತೆ ನಿವಾರಣೆಗೆ ಮೊಟ್ಟೆ, ಹಾಲು ನೀಡಲಾಗುತ್ತಿದೆ. ಕಲ್ಯಾಣ ಕರ್ನಾಟಕ ಭಾಗದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಪೌಷ್ಟಿಕ ಆಹಾರ ಒದಗಿಸಲಾಗುತ್ತಿದೆ. ಇದರಿಂದ ಅಪೌಷ್ಟಿಕ ಮಕ್ಕಳ ಸಂಖ್ಯೆ ಕಡಿಮೆಯಾಗುತ್ತಿದೆ’ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಜಂಟಿ ನಿರ್ದೇಶಕಿ ಉಷಾ ಬಿ. ತಿಳಿಸಿದರು.

ಅಪೌಷ್ಟಿಕತೆ ದೃಢ ಪ್ರಮಾಣ ಅಧಿಕ ಇರುವ ಜಿಲ್ಲೆ

ಜಿಲ್ಲೆ	ಸಾಮಾನ್ಯ ಮಕ್ಕಳು	ಅಪೌಷ್ಟಿಕ ಮಕ್ಕಳು	ಪ್ರಮಾಣ
ಕೋಲಾರ	29,967	10,434	ಶೇ 25.83
ಹಾವೇರಿ	19,194	6,971	ಶೇ 26.64
ಬೀದರ್	1,05,731	28,272	ಶೇ 21.10
ಕೊಪ್ಪಳ	1,27,947	33,842	ಶೇ 20.92
ಕೊಡಗು	27,182	6,937	ಶೇ 20.33

ಅಪೌಷ್ಟಿಕ ಮಕ್ಕಳಲ್ಲಿ ರೋಗನಿರೋಧಕ ಶಕ್ತಿ ಕಡಿಮೆ ಇರುತ್ತದೆ. ಇದರಿಂದಾಗಿ ಸೋಂಕು ತಗಲುವ ಸಾಧ್ಯತೆ ಹೆಚ್ಚಿರಲಿದೆ. ನ್ಯುಮೋನಿಯಾ ಸೇರಿದಂತೆ ವಿವಿಧ ಸಮಸ್ಯೆಗಳೂ ಕಾಣಿಸಿಕೊಳ್ಳುತ್ತವೆ

ಡಾ. ಕೆ.ಎಸ್. ಸಂಜಯ್, ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯ ನಿರ್ದೇಶಕ

ಕಾರ್ಯತಂತ್ರ ಪುನರ್‌ರೂಪಿಸಿ: ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶನ

ಕಾಲಮಿತಿಯಲ್ಲಿ ಲಸಿಕೆ ಕೊಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಸರ್ಕಾರ ಮಾರ್ಪಾಟು ಮಾಡಿ ಹೊರಡಿಸಿರುವ ಮಾರ್ಗಸೂಚಿ ಪ್ರಕಾರ ಕಾಲಮಿತಿಯೊಳಗೆ ಎರಡೂ ಡೋಸ್ ಕೋವಿಡ್ ಲಸಿಕೆ ನೀಡುವ ಕಾರ್ಯತಂತ್ರವನ್ನು ನಿಖರವಾಗಿ ಪುನರ್ ರೂಪಿಸುವಂತೆ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶನ ನೀಡಿದೆ.

‘ರಾಜ್ಯದಲ್ಲಿ ಲಸಿಕೆ ಕೊರತೆ ಪರಿಸ್ಥಿತಿ ಮುಂದುವರಿದಿದೆ. ಮೊದಲ ಡೋಸ್ ಪಡೆದುಕೊಂಡು ಎರಡನೇ ಡೋಸ್‌ಗೆ ಕಾದಿದ್ದಾರೆ. ಆ ಅವಧಿ ಮುಗಿಯುತ್ತಿದೆ. ಹೀಗಾಗಿ, ಎರಡನೇ ಡೋಸ್ ಕೂಡಲೇ ನೀಡಬೇಕು’ ಎಂದು ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ಮತ್ತು ನ್ಯಾಯಮೂರ್ತಿ ಅರವಿಂದ್‌ಕುಮಾರ್ ಅವರನ್ನು ಒಳಗೊಂಡ ವಿಶೇಷ ಪೀಠ ಗುರುವಾರ ಸೂಚಿಸಿತು.

‘ಕೋವಿಶೀಲ್ಡ್ ಪಡೆದು 12 ವಾರ ಆಗಿದ್ದವರು, ಕೋವಾಕ್ಸಿನ್ ಪಡೆದು 6 ವಾರ ಪೂರೈಸಿದ ಫಲಾನುಭವಿಗಳ ಪಟ್ಟಿಯನ್ನು ದಿನಾಂಕವಾರು ರಾಜ್ಯ ಸರ್ಕಾರ ರೂಪಿಸಬೇಕು. ಹೀಗೆ ಮಾಡದಿದ್ದರೆ ಎರಡನೇ ಡೋಸ್‌ಗಾಗಿ ಕಾದಿರುವ ಜನರಿಗೆ ಪರಿಣಾಮಕಾರಿಯಾಗಿ ಲಸಿಕೆ ನೀಡಲು ಆಗುವುದಿಲ್ಲ’ ಎಂದು ಪೀಠ ಹೇಳಿತು.

‘7.17 ಲಕ್ಷ ಕೋವಿಶೀಲ್ಡ್ ಮತ್ತು 97,400 ಕೋವ್ಯಾಕ್ಸಿನ್ ಡೋಸ್ ಮಾತ್ರ ಲಭ್ಯವಿದೆ’ ಎಂದು ಅಡ್ವೊಕೇಟ್ ಜನರಲ್ ಪ್ರಭುಲಿಂಗ ನಾವಡಗಿ ವಿವರಿಸಿದರು.

‘ಮೇ ಕೊನೆಯ ಎರಡು ವಾರಗಳಲ್ಲಿ ಒಟ್ಟು 9.17 ಲಕ್ಷ ಕೋವಿಶೀಲ್ಡ್, 1.64 ಲಕ್ಷ ಕೋವ್ಯಾಕ್ಸಿನ್ ಅನ್ನು ಕೇಂದ್ರ ಸರ್ಕಾರ ಪೂರೈಸಲಿದೆ. 7.04 ಲಕ್ಷ ಕೋವಿಶೀಲ್ಡ್ ಮತ್ತು 2.44 ಲಕ್ಷ ಕೋವ್ಯಾಕ್ಸಿನ್ ಅನ್ನು ರಾಜ್ಯ ಸರ್ಕಾರ ನೇರವಾಗಿ ಖರೀದಿಸಬಹುದು’ ಎಂದು ಕೇಂದ್ರ ಸರ್ಕಾರದ ಸಾಲಿಸಿಟರ್ ಜನರಲ್ ವಿವರಿಸಿದರು.

ಕೋವ್ಯಾಕ್ಸಿನ್ ಕೊರತೆಯ ಗಂಭೀರ ಸಮಸ್ಯೆಯನ್ನು ಜಂಟಿಯಾಗಿ ಪರಿಹರಿಸಿಕೊಳ್ಳುವಂತೆ ಎರಡೂ ಸರ್ಕಾರಗಳಿಗೆ ಪೀಠ ನಿರ್ದೇಶನ ನೀಡಿತು. ಎರಡನೇ ಡೋಸ್ ನೀಡಲು ಖಾಸಗಿ ಏಜೆನ್ಸಿಗಳಿಗೆ ಅವಕಾಶ ಇದೆಯೇ ಎಂಬುದನ್ನು ತಿಳಿಸುವಂತೆಯೂ ಪೀಠ ರಾಜ್ಯ ಸರ್ಕಾರಕ್ಕೆ ಸೂಚಿಸಿತು.

ಲಸಿಕೆ ಟೆಂಡರ್: 24ಕ್ಕೆ ಕಡೆ ದಿನ

• ರಾಜೇಶ್ ರೈ ಚಟ್ಲ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಲಸಿಕೆಗೆ ಬೇಡಿಕೆ ಹೆಚ್ಚಿದ ಬೆನ್ನಲ್ಲೇ, ಬಹು ಡೋಸ್‌ಗಳಿರುವ 2 ಕೋಟಿ ವಯಲ್ಸ್ ಕೋವಿಡ್ ಲಸಿಕೆ ಪೂರೈಕೆಗಾಗಿ ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮ ‘ಮುಕ್ತ ಅಂತರರಾಷ್ಟ್ರೀಯ ಟೆಂಡರ್’ (ಒಐಟಿ) ಆಹ್ವಾನಿಸಿದೆ.

ಜಾಗತಿಕ ಮಟ್ಟದಲ್ಲಿ ಟೆಂಡರ್ ಆಹ್ವಾನಿಸಿ ಲಸಿಕೆ ಖರೀದಿಸಲು ರಾಜ್ಯ ಸರ್ಕಾರ ಈಗಾಗಲೇ ₹ 843 ಕೋಟಿ ಮೀಸಲಿಟ್ಟಿದೆ.

ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮ (ಕೆಎಸ್‌ಎಂಎಸ್‌ಸಿಎಲ್) ಇದೇ 14ರಂದು ಟೆಂಡರ್ ಆಹ್ವಾನಿಸಿದೆ. ವಿಶ್ವದ ಯಾವುದೇ ಮೂಲೆಯಲ್ಲಿರುವ ಲಸಿಕೆ ಉತ್ಪಾದಕ ಕಂಪನಿಗಳು ಅಥವಾ ವಿತರಕರು ಭಾಗವಹಿಸಲು ಅವಕಾಶ ಇದೆ. ಹೀಗೆ ಪೂರೈಸುವ ಲಸಿಕೆಯ ಬಳಕೆಯ ಅವಧಿ, ಪೂರೈಸಿದ ದಿನದಿಂದ ಕನಿಷ್ಠ ಆರು ತಿಂಗಳು ಇರಬೇಕು ಎಂದು ಷರತ್ತು ವಿಧಿಸಲಾಗಿದೆ.

44 ವರ್ಷ ದಾಟಿದವರಿಗೆ ಕೇಂದ್ರ ಸರ್ಕಾರ ಉಚಿತವಾಗಿ ಲಸಿಕೆ ನೀಡಲಿದೆ. 18ರಿಂದ 44 ವರ್ಷ ವಯೋಮಾನದವರಿಗೆ ಉಚಿತವಾಗಿ ನೀಡುವುದಾಗಿ ರಾಜ್ಯ ಸರ್ಕಾರ ಘೋಷಿಸಿದ್ದು, ಈ ವಯೋಮಾನದವರಿಗೆ ನೀಡುವುದಕ್ಕಾಗಿ, ಉತ್ಪಾದಕ ಕಂಪನಿಗಳಿಂದ ನೇರವಾಗಿ ಖರೀದಿಸಲು ರಾಜ್ಯ ಸರ್ಕಾರ ಹಣ ಪಾವತಿಸಿದೆ. ಕೇಂದ್ರ ಅಥವಾ ಉತ್ಪಾದಕ ಕಂಪನಿಗಳಿಂದ ನಿರೀಕ್ಷಿತ ಪ್ರಮಾಣದಲ್ಲಿ ಲಸಿಕೆ ಸರಬರಾಜು ಆಗುತ್ತಿಲ್ಲ. ಹೀಗಾಗಿ, ಜಾಗತಿಕ ಮಟ್ಟದ ಲಸಿಕೆ ಉತ್ಪಾದಕ ಕಂಪನಿ ಅಥವಾ ವಿತರಕರ ಮೂಲಕ ಲಸಿಕೆ ಖರೀದಿಸಲು ರಾಜ್ಯ ಸರ್ಕಾರ ಮುಂದಾಗಿದೆ. ಇದಕ್ಕಾಗಿ ಟೆಂಡರ್ ಆಹ್ವಾನಿಸುವಂತೆ ರಾಷ್ಟ್ರೀಯ ಆರೋಗ್ಯ ಅಭಿಯಾನ ನಿರ್ದೇಶಕರು ಕೆಎಸ್‌ಎಂಎಸ್‌ಸಿಎಲ್‌ಗೆ ಸೂಚಿಸಿದ್ದರು.

‘ರಾಷ್ಟ್ರೀಯ ಆರೋಗ್ಯ ಅಭಿಯಾನದ ಬೇಡಿಕೆಯಂತೆ, ಷರತ್ತು ನಮೂದಿಸಿ ಟೆಂಡರ್ ಆಹ್ವಾನಿಸುವುದಷ್ಟೆ ನಮ್ಮ ಕೆಲಸ. ತಿಂಗಳಿಗೆ ಕನಿಷ್ಠ 1 ಕೋಟಿ ಲಸಿಕೆ ಉತ್ಪಾದಿಸುವ ಸಾಮರ್ಥ್ಯ ಇರುವ ಕಂಪನಿಗಳು ಮಾತ್ರ ಈ ಟೆಂಡರ್‌ನಲ್ಲಿ ಭಾಗವಹಿಸಲು ಅವಕಾಶವಿದೆ. ಈ ಬಗ್ಗೆ ದೃಢೀಕೃತ ಪ್ರಮಾಣ ಪತ್ರ ಸಲ್ಲಿಸಬೇಕು. ಟೆಂಡರ್‌ನಲ್ಲಿ ಭಾಗವಹಿಸುವ ವಿತರಕರು, ತಿಂಗಳಿಗೆ ಕನಿಷ್ಠ 1 ಕೋಟಿ ಲಸಿಕೆ ಉತ್ಪಾದಿಸುವ ಸಾಮರ್ಥ್ಯವಿರುವ ಕಂಪನಿಯಿಂದ ಪಡೆದ ದೃಢೀಕರಣ ಪತ್ರವನ್ನು ಬಿಡ್ ಜೊತೆ ಸಲ್ಲಿಸಬೇಕು’ ಎಂದು ಕೆಎಸ್‌ಎಂಎಸ್‌ಸಿಎಲ್ ಮೂಲಗಳು ತಿಳಿಸಿವೆ.

8ನೇ ಪುಟ ನೋಡಿ

ಲಸಿಕೆಯ ತುರ್ತು ಅಗತ್ಯ ಪೂರೈಸಲು ಜಾಗತಿಕ ಟೆಂಡರ್ ಆಹ್ವಾನಿಸಿದ್ದೇವೆ. ಬಿಡ್ ತೆರೆದ ಬಳಿಕ ಪೂರೈಕೆದಾರರ ಜೊತೆ ಒಪ್ಪಂದ ಮಾಡಿಕೊಳ್ಳುತ್ತೇವೆ

ಡಾ.ಸಿ.ಎನ್. ಅಶ್ವತ್ಥನಾರಾಯಣ
ರಾಜ್ಯ ಕೋವಿಡ್ ಕಾರ್ಯಪಡೆ ಅಧ್ಯಕ್ಷ

‘ಬ್ರ್ಯಾಂಡ್’ ಷರತ್ತು ಇಲ್ಲ

‘ಇಂಥದ್ದೇ ಕಂಪನಿಯ ಅಥವಾ ಇಂಥದ್ದೇ ಲಸಿಕೆಯನ್ನು ಪೂರೈಕೆ ಮಾಡಬೇಕೆಂಬ ‘ಬ್ರ್ಯಾಂಡ್’ ಅನ್ನು ಷರತ್ತಿನಲ್ಲಿ ಉಲ್ಲೇಖಿಸಿಲ್ಲ. ಕೋವಿಡ್‌ಗೆ ‘ಸಂಜೀವಿನಿ’ ಎಂದು ಪರಿಗಣಿಸಿ ವಿಶ್ವದಾದ್ಯಂತ ಬಳಸುವ ಯಾವುದೇ (ಕೋವಿಶೀಲ್ಡ್, ಕೋವ್ಯಾಕ್ಸಿನ್, ಸ್ಪುಟ್ನಿಕ್... ಹೀಗೆ) ಲಸಿಕೆಯನ್ನು ಪೂರೈಸಲು ಅವಕಾಶ ನೀಡಲಾಗಿದೆ. ಅಲ್ಲದೆ, ಒಂದು ವಯಲ್ಸ್‌ನಲ್ಲಿ ಕನಿಷ್ಠ ಡೋಸ್ ಬಗ್ಗೆಯೂ ಮಿತಿ ನಿಗದಿಪಡಿಸಿಲ್ಲ. ಆ ಪ್ರಮಾಣವನ್ನು ಉತ್ಪಾದಕ ಕಂಪನಿಗಳು ತೀರ್ಮಾನಿಸುತ್ತವೆ. ಆದರೆ, ಪೂರ್ತಿ ಪೂರೈಸಲು ಸಾಧ್ಯವೇ, ಎಷ್ಟು ದಿನದಲ್ಲಿ ಸಾಧ್ಯ ಎಂದು ನಮೂದಿಸುವಂತೆ ಕಂಪನಿ ಅಥವಾ ವಿತರಕರಿಗೆ ಕೋರಿದ್ದೇವೆ’ ಎಂದು ಕೆಎಸ್‌ಎಂಎಸ್‌ಸಿಎಲ್ ಅಧಿಕಾರಿಯೊಬ್ಬರು ತಿಳಿಸಿದರು.

ಚಾಮರಾಜನಗರ ದುರಂತ: ತಲಾ ₹2 ಲಕ್ಷ ಪರಿಹಾರ

ಬೆಂಗಳೂರು: ಚಾಮರಾಜನಗರ ಆಸ್ಪತ್ರೆಯಲ್ಲಿ ಆಮ್ಲಜನಕ ಕೊರತೆಯಿಂದ ಮೃತಪಟ್ಟ 24 ಜನರ ಕುಟುಂಬಗಳಿಗೆ ತಲಾ ₹2 ಲಕ್ಷ ಪರಿಹಾರ ನೀಡಲಾಗುವುದು ಎಂದು ಹೈಕೋರ್ಟ್‌ಗೆ ರಾಜ್ಯ ಸರ್ಕಾರ ಭರವಸೆ ನೀಡಿದೆ.

ಪರಿಹಾರ ನೀಡಲು ಸರ್ಕಾರ ನಿರ್ಧಾರ ಕೈಗೊಂಡಿದೆ ಎಂದು ಅಡ್ವೊಕೇಟ್ ಜನರಲ್ ಪ್ರಭುಲಿಂಗ ನಾವಡಗಿ ಅವರು ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಶೇಷ ವಿಭಾಗೀಯ ಪೀಠಕ್ಕೆ ಮಾಹಿತಿ ನೀಡಿದರು. ‘ಆದಷ್ಟು ಬೇಗ ಪರಿಹಾರವನ್ನು ಮೃತರ ಕುಟುಂಬದವರಿಗೆ ತಲುಪಿಸಬೇಕು’ ಎಂದು ಪೀಠ ತಿಳಿಸಿತು.

‘ಮೃತಪಟ್ಟವರು 24 ಜನರು ಮಾತ್ರವೇ ಎಂಬುದನ್ನೂ ಪರಿಶೀಲಿಸುವ ಅಗತ್ಯವಿದೆ. ಕಾನೂನು ಸೇವೆಗಳ ಪ್ರಾಧಿಕಾರದ (ಕೆಎಸ್‌ಎಲ್‌ಎಸ್‌ಎ) ಮೂವರು ಸದಸ್ಯರ ಸಮಿತಿಯು ಮೇ 4ರಿಂದ ಮೇ10ರ ನಡುವೆ 36 ರೋಗಿಗಳು ಆಮ್ಲಜನಕ ಕೊರತೆಯಿಂದ ಮೃತಪಟ್ಟಿರಬಹುದು ಎಂದು ಶಂಕಿಸಿದೆ’ ಎಂದು ಪೀಠ ಹೇಳಿದೆ.

ಮೇ 17 ಮತ್ತು 18ರಂದು ದಿನಕ್ಕೆ 1,015 ಟನ್‌ಗೂ ಕಡಿಮೆ ಆಮ್ಲಜನಕ ಸಂಗ್ರಹ ಇತ್ತು ಎಂದು ಸರ್ಕಾರ ಮಾಹಿತಿ ನೀಡಿತು. ರಾಜ್ಯಕ್ಕೆ ಮೇ 17ರಿಂದ 24ರ ಅವಧಿಗೆ ಆಮ್ಲಜನಕದ ಅವಶ್ಯಕತೆ ಎಷ್ಟಿದೆ. ಸಂಗ್ರಹ ಇರುವ ಪ್ರಮಾಣ ಎಷ್ಟು ಎಂಬ ವಿವರ ಸಲ್ಲಿಸುವಂತೆ ಸರ್ಕಾರಕ್ಕೆ ಪೀಠ ನಿರ್ದೇಶನ ನೀಡಿತು. ಸುಪ್ರೀಂ ಕೋರ್ಟ್ ಆದೇಶದಂತೆ ಆಮ್ಲಜನಕ ಹೆಚ್ಚುವರಿಯಾಗಿ ಸಂಗ್ರಹಿಸಲು ಕೈಗೊಂಡ ಕ್ರಮಗಳ ಬಗ್ಗೆ ಮಾಹಿತಿ ನೀಡುವಂತೆ ತಿಳಿಸಿತು.

ಪ್ರಜಾವಾಣಿ DH DECCAN HERALD
ಕೋವಿಡ್ ಪರಿಹಾರ ನಿಧಿ

ಆಸ್ಪತ್ರೆಗಳ ಮುಂದೆ ಏದುಸಿರು ಬಿಡುವ ರೋಗಿಗಳನ್ನು ಹೊತ್ತುನಿಂತ ಆಂಬುಲೆನ್ಸ್‌ಗಳು, ಆಪ್ತರ ಜೀವ ಉಳಿಸಲು ಪ್ರಾಣವಾಯುವಿಗಾಗಿ ಅಂಗಲಾಚುವವರು, ಚಿತಾಗಾರಗಳ ಮುಂದೆ ಸಾಲು ಸಾಲು ಮೃತದೇಹಗಳು... ರಾಜ್ಯದಲ್ಲಿ ಕಳೆದ ಕೆಲವು ವಾರಗಳಿಂದ ಇಂತಹದ್ದೇ ಹೃದಯವಿದ್ರಾವಕ ನೋಟಗಳು. ಕೋವಿಡ್–19 ಕಾಣಿಸಿಕೊಂಡ ದಿನದಿಂದ ಇಲ್ಲಿಯವರೆಗೂ 23 ಲಕ್ಷಕ್ಕೂ ಅಧಿಕ ಜನ ಕಾಯಿಲೆಪೀಡಿತರಾಗಿದ್ದು, 23 ಸಾವಿರಕ್ಕೂ ಅಧಿಕ ಜನ ಮೃತಪಟ್ಟಿದ್ದಾರೆ. ಈ ಅಂಕಿ–ಸಂಖ್ಯೆಗಳು ಅಧಿಕೃತ ಮಾಹಿತಿಯಷ್ಟೆ. ನೈಜ ಚಿತ್ರಣ ಇನ್ನೂ ಕರಾಳವಾಗಿದೆ. ಎರಡನೇ ಅಲೆ ಪ್ರಾರಂಭವಾಗಿ ಈಗಾಗಲೇ ಎರಡು ತಿಂಗಳಿಗೂ ಅಧಿಕ ಸಮಯ ಕಳೆದಿದೆ.

ಕಳೆದ ವರ್ಷ ಲಾಕ್‌ಡೌನ್ ಆದಂತಹ ಸಂದರ್ಭದಲ್ಲಿ ನಡೆಸಿದ ಸಮೀಕ್ಷೆಯ ವೇಳೆ ಪ್ರತೀ ಹತ್ತು ಜನರಲ್ಲಿ ಏಳು ಜನರು ನಿರುದ್ಯೋಗಿಗಳಾಗಿದ್ದರು. ಈ ಪಿಡುಗು ಆರಂಭವಾದಾಗಿನಿಂದ ಕನಿಷ್ಠ ಒಂದು ಲಕ್ಷ ಮಹಿಳಾ ಗಾರ್ಮೆಂಟ್ ಕಾರ್ಮಿಕರು ಉದ್ಯೋಗ ಕಳೆದುಕೊಂಡಿದ್ದಾರೆ. ಕೋವಿಡ್‌ನ ಮೊದಲನೇ ಅಲೆಯ ಹೊಡೆತದ ಈ ಅಂಕಿ ಅಂಶಗಳು, ಅಸಂಘಟಿತ ವಲಯದ ಕಾರ್ಮಿಕರು ಮತ್ತೆ ತೀವ್ರ ಸಂಕಷ್ಟಕ್ಕೆ ಸಿಲುಕಿರುವ ದಾರುಣ ಸನ್ನಿವೇಶದ ಕಿರುಚಿತ್ರಣವನ್ನು ನೀಡಬಲ್ಲವು.

ಇಂತಹ ಸನ್ನಿವೇಶದಲ್ಲಿ, ಕೋವಿಡ್ ಪರಿಹಾರ ಕಾರ್ಯದಲ್ಲಿ ತೊಡಗಿಸಿಕೊಂಡಿರುವ ಸ್ವಯಂಸೇವಾ ಸಂಸ್ಥೆಗಳಿಗೆ ‘ಡೆಕ್ಕನ್ ಹೆರಾಲ್ಡ್’ ಹಾಗೂ ‘ಪ್ರಜಾವಾಣಿ’ ಪತ್ರಿಕೆಗಳು ಬೆಂಬಲ ನೀಡಲು ನಿರ್ಧರಿಸಿವೆ. ನೀವು ನೀಡುವ ದೇಣಿಗೆಯ ಪ್ರತೀ ಪೈಸೆಯೂ ಸಂಕಷ್ಟಕ್ಕೆ ಒಳಗಾಗಿರುವ ಅರ್ಹ ಫಲಾನುಭವಿಗೆ ನೇರವಾಗಿ ಸೇರಿ, ಅವರ ಕಣ್ಣೀರು ಒರೆಸಲು ನೆರವಾಗಲಿದೆ.

₹ 1000 ಮತ್ತು ಅದಕ್ಕಿಂತ ಹೆಚ್ಚಿನ ದೇಣಿಗೆ ನೀಡಿದವರ ಹೆಸರನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು. ಈ ದೇಣಿಗೆಗೆ 80ಜಿ ಅನ್ವಯ ಆದಾಯ ತೆರಿಗೆಯಲ್ಲಿ ವಿನಾಯಿತಿ ಸಿಗಲಿದೆ.

ಹೀಗಾಗಿ, ನಿಮ್ಮ ಕೈಲಾದ ದೇಣಿಗೆಯನ್ನು (ಅದರ ಪ್ರಮಾಣ ಎಷ್ಟೇ ಇರಲಿ) ನೀಡಿ ಸಂಕಷ್ಟದಲ್ಲಿ ಸಿಲುಕಿದವರ ಬೆಂಬಲಕ್ಕೆ ನಿಲ್ಲುವ ಮಾನವೀಯ ಕಾರ್ಯದಲ್ಲಿ ಕೈಜೋಡಿಸುವಂತೆ ಕೋರುತ್ತೇವೆ.

ಆನ್‌ಲೈನ್ ಹಣ ವರ್ಗಾವಣೆ ಮೂಲಕ ಡೆಕ್ಕನ್ ಹೆರಾಲ್ಡ್–ಪ್ರಜಾವಾಣಿ ಪರಿಹಾರ ನಿಧಿ ಟ್ರಸ್ಟ್‌ಗೆ ದೇಣಿಗೆ ನೀಡಬಹುದು:
**(Canara Bank, Cantonment Branch;
A/C NO.0404101200385,
IFSC CODE : CNRB0000404)**

ದೇಣಿಗೆದಾರರು ತಾವು ನೀಡಿದ ದೇಣಿಗೆ ವಿವರದ ಜತೆಗೆ ಹೆಸರು, ವಿಳಾಸ ಹಾಗೂ ಸಂಪರ್ಕ ಸಂಖ್ಯೆಯನ್ನು dept.finc@printersmysore.co.in ಈ ಇ–ಮೇಲ್‌ಗೆ ಕಳುಹಿಸಲು ವಿನಂತಿ. ಇದರಿಂದ ದೇಣಿಗೆದಾರರಿಗೆ ರಸೀದಿ ಕಳಿಸಲು ಅನುಕೂಲವಾಗುತ್ತದೆ.

ಕಪ್ಪುಶಿಲೀಂಧ್ರ: ಸಾಂಕ್ರಾಮಿಕ ರೋಗವಾಗಿ ಪರಿಗಣಿಸಲು ಸೂಚನೆ

ನವದೆಹಲಿ (ಪಿಟಿಐ): ಕಪ್ಪು ಶಿಲೀಂಧ್ರ ಸೋಂಕು ಅಥವಾ ಮ್ಯೂಕರ್ ಮೈಕೊಸಿಸ್ ಅನ್ನು 1897ರ ಸಾಂಕ್ರಾಮಿಕ ರೋಗಗಳ ಕಾಯ್ದೆಯಡಿ ಸಾಂಕ್ರಾಮಿಕ ರೋಗ ಎಂಬುದಾಗಿ ಪರಿಗಣಿಸಬೇಕು ಎಂದು ಕೇಂದ್ರ ಆರೋಗ್ಯ ಸಚಿವಾಲಯವು ಗುರುವಾರ ಎಲ್ಲ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಸೂಚಿಸಿದೆ.

‘ಈ ರೋಗವು ಕೋವಿಡ್–19 ಪೀಡಿತರಲ್ಲಿ ಸುದೀರ್ಘ ಕಾಲದ ಅಸ್ವಸ್ಥತೆ ಅಥವಾ ಸಾವಿಗೆ ಕಾರಣವಾಗಲಿದೆ’ ಎಂದು ಸಚಿವಾಲಯದ ಜಂಟಿ ಕಾರ್ಯದರ್ಶಿ ಲವ್ ಅಗರವಾಲ್ ಈ ಕುರಿತ ಪತ್ರದಲ್ಲಿ ಅಭಿಪ್ರಾಯಪಟ್ಟಿದ್ದಾರೆ.

’ಕಪ್ಪು ಶಿಲೀಂಧ್ರ ರೋಗವು ಹೊಸ ಸವಾಲಾಗಿ ಪರಿಣಮಿಸಿದೆ. ವಿವಿಧ ರಾಜ್ಯಗಳಲ್ಲಿ ಕೋವಿಡ್ ಪೀಡಿತರಲ್ಲಿ ಮುಖ್ಯವಾಗಿ ಈಗಾಗಲೇ ಮಧುಮೇಹ ಸಮಸ್ಯೆಯಿಂದ ಬಳಲುತ್ತಿದ್ದವರು ಹಾಗೂ ಸ್ಟಿರಾಯ್ಡ್ ಚಿಕಿತ್ಸೆಯಲ್ಲಿ ಇದ್ದವರಲ್ಲಿ ಕಪ್ಪು ಶಿಲೀಂಧ್ರ ರೋಗ ಕಾಣಿಸಿಕೊಂಡಿದೆ’ ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಈ ಸೋಂಕಿಗೆ ಬಹುಶಿಸ್ತೀಯ ಚಿಕಿತ್ಸೆಯ ಅಗತ್ಯವಿದೆ. ಅಂದರೆ, ನೇತ್ರ ತಜ್ಞರು, ಇಎನ್‌ಟಿ ಪರಿಣತರು, ಜನರಲ್ ಸರ್ಜನ್‌ಗಳು, ನರರೋಗ ತಜ್ಞರು, ದಂತವೈದ್ಯರ ಸೇವೆ ಅಗತ್ಯ. ಇದಕ್ಕೆ ನಿರೋಧಕ ಔಷಧವಾಗಿ ಅಂಫೊಟೆರಿಸಿನ್ ಲಸಿಕೆಯನ್ನು ನೀಡಬೇಕಾಗಿದೆ ಎಂದು ಸಲಹೆ ಮಾಡಿದ್ದಾರೆ.

8ನೇ ಪುಟ ನೋಡಿ

ರಾಜ್ಯ ಕೋವಿಡ್ ಅಂಕಿ–ಅಂಶ

ಒಟ್ಟು ಸೋಂಕಿತರು (23,06,655 ನಿನ್ನೆಯ ವಿವರ)	23,35,524 ▲
ಸಕ್ರಿಯ ಪ್ರಕರಣಗಳು	5,34,954 ▼
ಗುಣಮುಖರಾದವರು	17,76,695 ▲
ಒಟ್ಟು ಸಾವು	23,854 ▲

ದಿನದ ಏರಿಕೆ

ಹೊಸ ಪ್ರಕರಣ	28,869 ▼
ಗುಣಮುಖ	52,257 ▲
ಸಾವು	548 ▲

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಲಾಕ್‌ಡೌನ್ ಮತ್ತಷ್ಟು ಬಿಗಿ: ಬೊಮ್ಮಾಯಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಲಾಕ್‌ಡೌನ್ ನಿಯಮಗಳನ್ನು ಜನರು ಸರಿಯಾಗಿ ಪಾಲಿಸದೇ ಇರುವ ಕಾರಣ ಮುಂದಿನ ವಾರದಿಂದ ನಿಯಮಗಳನ್ನು ಇನ್ನಷ್ಟು ಕಠಿಣವಾಗಿ ಜಾರಿ ಮಾಡಲು ರಾಜ್ಯ ಸರ್ಕಾರ ನಿರ್ಧರಿಸಿದೆ.



ಬಸವರಾಜ ಬೊಮ್ಮಾಯಿ

ಸುದ್ದಿಗಾರರ ಜತೆ ಗುರುವಾರ ಮಾತನಾಡಿದ ಗೃಹ ಸಚಿವ ಬಸವರಾಜ ಬೊಮ್ಮಾಯಿ, ‘ಲಾಕ್‌ಡೌನ್ ನಿಯಮಗಳನ್ನು ಜನರು ಸರಿಯಾಗಿ ಪಾಲಿಸುತ್ತಿಲ್ಲ. ಹೀಗಾಗಿ, ನಿಯಮಗಳ ಜಾರಿಗೆ ಪೊಲೀಸರು ಕೈಗೊಂಡಿರುವ ಕ್ರಮಗಳನ್ನು ಮತ್ತಷ್ಟು ಬಿಗಿಗೊಳಿಸಲಾಗುವುದು’ ಎಂದರು.

‘ಗ್ರಾಮಾಂತರ ಪ್ರದೇಶದಲ್ಲಿ ಕೊರೊನಾ ಸೋಂಕು ವ್ಯಾಪಕವಾಗಿ ಹಬ್ಬುತ್ತಿದೆ. ಜನ ಅನವಶ್ಯಕವಾಗಿ ಮನೆಯಿಂದ ಹೊರಗಡೆ ಬರುತ್ತಿದ್ದಾರೆ. ಯಾದಗಿರಿಯಲ್ಲಿ ಮದುವೆಗೆ ಬೈಕ್‌ನಲ್ಲಿ ಐದು ಜನ ತೆರಳುತ್ತಿದ್ದರು. ಹೀಗಾಗಿ, ವಾಹನಗಳನ್ನು ಜಪ್ತಿ ಮಾಡುವ ಕಾರ್ಯಾಚರಣೆಯನ್ನು ಮತ್ತಷ್ಟು ಕಠಿಣವಾಗಿ ಜಾರಿಗೊಳಿಸಲಾಗುವುದು’ ಎಂದು ಎಚ್ಚರಿಸಿದ್ದಾರೆ.

‘ಗ್ರಾಮಾಂತರ ಪ್ರದೇಶಗಳಲ್ಲಿ ಜಿಲ್ಲಾಧಿಕಾರಿಗಳು 3–4 ದಿನ ನಿರಂತರವಾಗಿ ಲಾಕ್‌ಡೌನ್ ಜಾರಿ ಮಾಡಿದ್ದಾರೆ. ಆದರೂ ಜನರು ಗಂಭೀರತೆ ಅರಿತುಕೊಳ್ಳುತ್ತಿಲ್ಲ. ಲಾಕ್‌ಡೌನ್‌ಗೆ ಸಹಕಾರ ಕೊಡುತ್ತಿಲ್ಲ. ಲಾಕ್‌ಡೌನ್ ಯಾಕೆ ಜಾರಿ ಮಾಡಲಾಗಿದೆ ಎಂಬುದನ್ನು ಅರ್ಥ ಮಾಡಿಕೊಳ್ಳದಿದ್ದರೆ ಕೋವಿಡ್ ನಿಯಂತ್ರಣ ಸಾಧ್ಯವಿಲ್ಲ’ ಎಂದು ಅವರು ಅಭಿಪ್ರಾಯಪಟ್ಟರು.

‘ತೀವ್ರ ಆರ್ಥಿಕ ಸಂಕಷ್ಟದ ಮಧ್ಯೆಯೂ ಬಡ ಜನರಿಗಾಗಿ ಮುಖ್ಯಮಂತ್ರಿ ವಿಶೇಷ ಆರ್ಥಿಕ ಪ್ಯಾಕೇಜ್ ಘೋಷಿಸಿದ್ದಾರೆ. ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಜನರಿಗೆ ಯಾವ ರೀತಿ ಸಹಾಯ ಮಾಡಬೇಕೆಂಬ ಬಗ್ಗೆ ಪರಿಶೀಲನೆ ಮಾಡುತ್ತೇವೆ ಎಂದೂ ಹೇಳಿದ್ದಾರೆ. ಎಲ್ಲ ವಿಷಯಗಳು ಮುಖ್ಯಮಂತ್ರಿಯ ಗಮನದಲ್ಲಿದೆ’ ಎಂದೂ ಹೇಳಿದರು.

ಮುಂದಿನ ವಾರದಿಂದ ಕಠಿಣ ನಿಯಮ ಜಾರಿ ಮಾಡುವುದು ಅನಿವಾರ್ಯವಾಗಿದ್ದು, ಈ ಸಂಬಂಧ ಸರ್ಕಾರದಲ್ಲಿ ಚರ್ಚೆ ಆರಂಭವಾಗಿದೆ

ಆರ್. ಅಶೋಕ
ಕಂದಾಯ ಸಚಿವ

ಮಾದರಿ ಸಂಗ್ರಹ

ಹುಬ್ಬಳ್ಳಿಯ ಲ್ಯಾಮಿಂಗ್ಟನ್ ಶಾಲಾ ಆವರಣದಲ್ಲಿ ಗುರುವಾರ ಕೊರೊನಾ ಸೋಂಕು ತಪಾಸಣೆಗೆ ಒಳಗಾದ ಬಾಲಕನೊಬ್ಬನ ಗಂಟಲು ಹಾಗೂ ಮೂಗಿನ ದ್ರವದ ಮಾದರಿ ಸಂಗ್ರಹಿಸಲಾಯಿತು ಪ್ರಜಾವಾಣಿ ಚಿತ್ರ/ ತಾಜುದ್ದೀನ್ ಆಜಾದ್

ಐ.ಟಿ. ವಿವರ ಸಲ್ಲಿಕೆ ಗಡುವು ವಿಸ್ತರಣೆ

ನವದೆಹಲಿ (ಪಿಟಿಐ): ಆದಾಯ ತೆರಿಗೆ ವ್ಯಾಪ್ತಿಗೆ ಬರುವ ವ್ಯಕ್ತಿಗಳು 2020–21ನೇ ಸಾಲಿನ ಆದಾಯ ತೆರಿಗೆ ವಿವರ ಸಲ್ಲಿಸುವುದಕ್ಕೆ ಇದ್ದ ಕಡೆಯ ದಿನಾಂಕವನ್ನು ಕೇಂದ್ರ ಸರ್ಕಾರವು ಸೆಪ್ಟೆಂಬರ್ 30ರವರೆಗೆ ವಿಸ್ತರಿಸಿದೆ. ಆದಾಯ ತೆರಿಗೆ ವಿವರ ಸಲ್ಲಿಸಲು ಕಂಪನಿಗಳಿಗೆ ಇರುವ ಗಡುವನ್ನು ನವೆಂಬರ್ 30ರವರೆಗೆ ವಿಸ್ತರಣೆ ಮಾಡಲಾಗಿದೆ.

ಸಾಮಾನ್ಯವಾಗಿ, ವ್ಯಕ್ತಿಗಳು ಜುಲೈ 31ರೊಳಗೆ, ಕಂಪನಿಗಳು ಅಕ್ಟೋಬರ್ 31ರೊಳಗೆ ತಮ್ಮ ಆದಾಯ ತೆರಿಗೆ ವಿವರ ಸಲ್ಲಿಸಬೇಕು. ‘ಸಾಂಕ್ರಾಮಿಕವು ತೀವ್ರವಾಗಿರುವ ಕಾರಣ, ತೆರಿಗೆ ಪಾವತಿದಾರರ ಅನುಕೂಲಕ್ಕಾಗಿ ಈ ಗಡುವು ವಿಸ್ತರಿಸಲಾಗಿದೆ’ ಎಂದು ನೇರ ತೆರಿಗೆಗಳ ಕೇಂದ್ರ ಮಂಡಳಿ (ಸಿಬಿಡಿಟಿ) ಹೇಳಿದೆ. ಉದ್ಯೋಗದಾತರು ಉದ್ಯೋಗಿಗಳಿಗೆ ಫಾರ್ಮ್–16 ನೀಡುವುದಕ್ಕೆ ಇರುವ ಗಡುವನ್ನು ಜುಲೈ 15ರವರೆಗೆ ವಿಸ್ತರಿಸಲಾಗಿದೆ.

ಒಳ ಪುಟ

ಕೋವಿಡ್: ಮನೆಯಲ್ಲಿ 15 ನಿಮಿಷದಲ್ಲೇ ಪರೀಕ್ಷೆ 9

ಇಂದಿನ ಪಾಡ್‌ಕಾಸ್ಟ್ ವಿಶೇಷ
ಪ್ರಜಾವಾಣಿ ಕನ್ನಡ ಧ್ವನಿ
ಕಥೆ ಕೇಳು ಮಗುವೆ
ಸಿನಿಮಾ ಮ್ಯಾಟಿನಿ
ಪ್ರತೀ ದಿನ: ದಿನದ ಸೂಕ್ತಿ, ವಚನವಾಣಿ ಸಂಪಾದಕೀಯ, ಪ್ರಚಲಿತ
Prajavani.net/podcast

ಚಿನಕುರಳಿ

ಪ್ರಕಾಶ್ ಶೆಟ್ಟಿ

ಮುಖ್ಯಮಂತ್ರಿಗಳ ಮಾತಿಗೆ ಅವಕಾಶವಿಲ್ಲ: ಮಮತಾ ಬ್ಯಾನರ್ಜಿ ಆಕ್ರೋಶ

ಡಿ.ಸಿಗಳ ಜತೆ ಪ್ರಧಾನಿ ಸಭೆ ‘ಸೂಪರ್ ಫ್ಲಾಪ್’

ಪ್ರಜಾವಾಣಿ ವಾರ್ತೆ

ನವದೆಹಲಿ: ಕೋವಿಡ್ ಪ್ರಕರಣಗಳು ಅತಿ ಹೆಚ್ಚು ಇರುವ 54 ಜಿಲ್ಲೆಗಳ ಜಿಲ್ಲಾಧಿಕಾರಿಗಳ ಜತೆಗೆ ಪ್ರಧಾನಿ ನರೇಂದ್ರ ಮೋದಿ ಅವರು ಗುರುವಾರ ನಡೆಸಿದ ಸಭೆಯು ರಾಜಕೀಯ ವಿವಾದಕ್ಕೆ ಕಾರಣವಾಗಿದೆ. ‘ಈ ಸಭೆಯಲ್ಲಿ ಭಾಗವಹಿಸಿದ ಮುಖ್ಯಮಂತ್ರಿಗಳನ್ನು ಕೈಗೊಂಬೆಗಳಂತೆ ನೋಡಲಾಗಿದೆ. ಇದರಿಂದಾಗಿ ನನಗೆ ಅವಮಾನ ಆಗಿದೆ’ ಎಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಹೇಳಿದ್ದಾರೆ.

ಮೋದಿ

ಮಮತಾ ಅವರು ಸಭೆ ಮುಗಿದ ಕೂಡಲೇ ಮಾಧ್ಯಮ ಪ್ರತಿನಿಧಿಗಳ ಜತೆಗೆ ಮಾತನಾಡಿದ್ದಾರೆ. ‘ಅದೊಂದು ಅನೌಪಚಾರಿಕ ಮತ್ತು ಸೂಪರ್ ಫ್ಲಾಪ್ ಸಭೆ. ಬಿಜೆಪಿ ಆಳ್ವಿಕೆ ಇರುವ ರಾಜ್ಯಗಳ ಮುಖ್ಯಮಂತ್ರಿಗಳಿಗೆ ಮಾತ್ರ ಮಾತನಾಡಲು ಅವಕಾಶ ಇತ್ತು. ಉಳಿದವರನ್ನು ಕೈಗೊಂಬೆಗಳಂತೆ ನೋಡಲಾಗಿದೆ. ನಮಗೆ ಇದರಿಂದ ಅವಮಾನ ಆಗಿದೆ. ಇದು ಒಕ್ಕೂಟ ವ್ಯವಸ್ಥೆಯನ್ನು ಬುಡಮೇಲು ಮಾಡುವ ಯತ್ನ. ಪ್ರಧಾನಿ ಮೋದಿ ಅವರಲ್ಲಿ ಎಷ್ಟು ಅಭದ್ರ ಭಾವ ಇದೆಯೆಂದರೆ, ನಮ್ಮ ಮಾತನ್ನೇ ಅವರು ಆಲಿಸುವುದಿಲ್ಲ’ ಎಂದು ಮಮತಾ ಹೇಳಿದ್ದಾರೆ.

ಮಮತಾ

ಕೋವಿಡ್ ಪರಿಸ್ಥಿತಿಯನ್ನು ಪಶ್ಚಿಮ ಬಂಗಾಳ ಹೇಗೆ ಎದುರಿಸುತ್ತಿದೆ ಎಂದಾಗಲಿ, ರಾಜ್ಯದಲ್ಲಿ ಲಸಿಕೆಗಳು ಮತ್ತು ಆಮ್ಲಜನಕ ಸಂಗ್ರಹ ಇದೆಯೇ ಎಂದಾಗಲಿ ಪ್ರಧಾನಿಯವರು ಪ್ರಶ್ನಿಸಿಲ್ಲ. ‘ಕಪ್ಪು ಶಿಲೀಂಧ್ರ’ದ ಬಗ್ಗೆ ಪ್ರಧಾನಿಯವರು ಒಂದೇ ಒಂದು ಪ್ರಶ್ನೆ ಕೇಳಿಲ್ಲ ಎಂದೂ ಮಮತಾ ಆರೋಪಿಸಿದ್ದಾರೆ.

ಪಶ್ಚಿಮ ಬಂಗಾಳ ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸುವೇಂದು ಅಧಿಕಾರಿ ಅವರು ಮಮತಾ ಅವರ ಈ ಹೇಳಿಕೆಗೆ ತಿರುಗೇಟು ನೀಡಿದ್ದಾರೆ. ‘ಅವರ ಶೈಲಿಯೇ ಹಾಗೆ. ಕೋವಿಡ್ ತಡೆಗೆ ತಳಮಟ್ಟದಲ್ಲಿ ಕೈಗೊಂಡ ಪದ್ಧತಿಗಳ ಚರ್ಚೆಗೆ ಜಿಲ್ಲಾ ಮಟ್ಟದ ಅಧಿಕಾರಿಗಳ ಜತೆಗೆ ಪ್ರಧಾನಿ ನಡೆಸಿದ ಸಭೆಯನ್ನು ಮಮತಾ ಅವರು ರಾಜಕೀಯಗೊಳಿಸಿದ್ದಾರೆ’ ಎಂದು ಸುವೇಂದು ಹೇಳಿದ್ದಾರೆ.

ಛತ್ತೀಸಗಢ, ಹರಿಯಾಣ, ಕೇರಳ, ಮಹಾರಾಷ್ಟ್ರ, ಒಡಿಶಾ, ಪುದುಚೇರಿ, ರಾಜಸ್ಥಾನ, ಉತ್ತರಪ್ರದೇಶ ಮತ್ತು ಆಂಧ್ರ ಪ್ರದೇಶ ಮುಖ್ಯಮಂತ್ರಿಗಳೂ ಸಭೆಯಲ್ಲಿ ಇದ್ದರು.

ನಾಚಿಕೆಗೇಡಿನ ವರ್ತನೆ: ರವಿಶಂಕರ್ ಪ್ರಸಾದ್

ಮಮತಾ ಅವರದ್ದು ನಾಚಿಕೆಗೇಡಿನ, ಘನತೆಯಿಲ್ಲದ, ಖಂಡನಾರ್ಹ ವರ್ತನೆ ಎಂದು ಕೇಂದ್ರ ಸಚಿವ ರವಿಶಂಕರ್ ಪ್ರಸಾದ್ ಹೇಳಿದ್ದಾರೆ. ಪಶ್ಚಿಮ ಬಂಗಾಳದಂತಹ ದೊಡ್ಡ ರಾಜ್ಯದ ಮುಖ್ಯಮಂತ್ರಿಯಿಂದ ಇಂತಹ ನಡವಳಿಕೆಯನ್ನು ಯಾರೂ ನಿರೀಕ್ಷಿಸುವುದಿಲ್ಲ ಎಂದಿದ್ದಾರೆ.

ಪ್ರಧಾನಿ ಕರೆದ ಸಭೆಗಳಿಗೆ ಮಮತಾ ಅವರು ಹಾಜರಾಗುವುದೇ ಅಪರೂಪ. ಗುರುವಾರದ ಸಭೆಗೆ ಅಡ್ಡಿಪಡಿಸಲು ಮಮತಾ ಯತ್ನಿಸಿದ್ದರು. 24 ಪರಗಣ ಜಿಲ್ಲೆಯ ಜಿಲ್ಲಾಧಿಕಾರಿಯು ಮಾತನಾಡುವುದಕ್ಕೂ ಮಮತಾ ಅವಕಾಶ ಕೊಟ್ಟಿಲ್ಲ ಎಂದೂ ಪ್ರಸಾದ್ ಆರೋಪಿಸಿದ್ದಾರೆ. ‘ಪ್ರಧಾನಿ ಕರೆದ ಸಭೆಯಲ್ಲಿ ಮುಖ್ಯಮಂತ್ರಿಯೊಬ್ಬರು ಈ ರೀತಿ ಘನತೆಯಿಲ್ಲದ ವರ್ತನೆ ತೋರುವುದು ದುರದೃಷ್ಟಕರ. ಜತೆಗೆ, ಅವರು ಈ ರೀತಿ ಮಾಡುತ್ತಿರುವುದು ಇದೇ ಮೊದಲ ಬಾರಿ ಅಲ್ಲ. ಜಿಲ್ಲೆಗಳಲ್ಲಿ ಜಾರಿ ಮಾಡಲಾಗಿರುವ ಅತ್ಯುತ್ತಮ ಪದ್ಧತಿಗಳೇನು ಎಂದು ದೇಶದ ಪ್ರಧಾನಿಯು ಜಿಲ್ಲಾಧಿಕಾರಿಗಳಿಂದ ತಿಳಿಯಲು ಬಯಸಿದರೆ ಮಮತಾ ಅವರಿಗೆ ಆಗುವ ತೊಂದರೆ ಏನು ಎಂದು ಕೇಳಲು ಬಯಸುತ್ತೇನೆ’ ಎಂದು ಅವರು ಹೇಳಿದ್ದಾರೆ.

ಸಭೆಯಲ್ಲಿ ಅಪಸ್ವರ ಎರಡನೇ ಬಾರಿ

ಕೋವಿಡ್ ನಿರ್ವಹಣೆಗೆ ಸಂಬಂಧಿಸಿ ಪ್ರಧಾನಿ ನಡೆಸಿದ ಸಭೆಯಲ್ಲಿ ಅಪಸ್ವರ ಕೇಳಿ ಬಂದಿದ್ದು ಇದು ಎರಡನೇ ಬಾರಿ. ‘ದೇಶದ 130 ಕೋಟಿ ಜನರಿಗೆ ದೇಶದ ಸಂಪನ್ಮೂಲದಲ್ಲಿ ಸಮಾನ ಹಕ್ಕು ಇಲ್ಲವೇ? ದೆಹಲಿಯ ಮುಖ್ಯಮಂತ್ರಿಯಾಗಿದ್ದರೂ ರೋಗಿಗಳಿಗೆ ಆಮ್ಲಜನಕ ವ್ಯವಸ್ಥೆ ಮಾಡಲು ನನಗೆ ಸಾಧ್ಯವಾಗುತ್ತಿಲ್ಲ. ಅದು ಬಹುದೊಡ್ಡ ದುರಂತಕ್ಕೆ ಕಾರಣವಾಗಬಹುದು’ ಎಂದು ಅರವಿಂದ ಕೇಜ್ರಿವಾಲ್ ಅವರು ಪ್ರಧಾನಿ ಸಭೆಯಲ್ಲಿ ಹೇಳಿದ್ದು ನೇರಪ್ರಸಾರವಾಗಿತ್ತು. ಇದಕ್ಕೆ ಟೀಕೆಯೂ ವ್ಯಕ್ತವಾಗಿತ್ತು.

ಕೋವಿಡ್ ನಿಯಂತ್ರಣ: ಪಿಐಎಲ್ ವಿಲೇವಾರಿ

ಕಾಂಗ್ರೆಸ್ ಶಾಸಕರ ಕೊಡುಗೆ ಪ್ರಶ್ನಿಸಿದ ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ನಿಯಂತ್ರಣ ಸಂಬಂಧ ವಿವಿಧ ವಿಷಯಗಳ ಕುರಿತು ಮೂವರು ಕಾಂಗ್ರೆಸ್ ಶಾಸಕರು ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು ಹೈಕೋರ್ಟ್ ವಿಲೇವಾರಿ ಮಾಡಿದೆ.

ಶಾಸಕರಾದ ಕೆ.ಆರ್.ರಮೇಶ್‌ಕುಮಾರ್, ಎಚ್.ಕೆ. ಪಾಟೀಲ, ಎಸ್.ಆರ್. ಪಾಟೀಲ ಸಲ್ಲಿಸಿದ್ದ ಪ್ರತ್ಯೇಕ ಅರ್ಜಿಗಳ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ಮತ್ತು ನ್ಯಾಯಮೂರ್ತಿ ಅರವಿಂದಕುಮಾರ್ ಅವರಿದ್ದ ವಿಶೇಷ ವಿಭಾಗೀಯ ಪೀಠ, ‘ಕೋವಿಡ್ ಎದುರಿಸಲು ನೀವುಗಳು ನೀಡಿರುವ ಕೊಡುಗೆ ಏನು’ ಎಂದು ಪ್ರಶ್ನಿಸಿತು

‘ಕಳೆದ ಒಂದು ವರ್ಷದ ಅವಧಿಯಲ್ಲಿ 800 ಪುಟಗಳಷ್ಟು ನಿರ್ದೇಶನಗಳನ್ನು ನ್ಯಾಯಾಲಯ ನೀಡಿದೆ. ಶಾಸಕರಾಗಿ ನಿಮ್ಮ ಕ್ಷೇತ್ರಗಳಲ್ಲಿ ಎಷ್ಟು ಹಾಸಿಗೆಗಳನ್ನು ಹೆಚ್ಚಿಸಿದ್ದೀರಿ, ವೈದ್ಯಕೀಯ ತುರ್ತು ಸಂದರ್ಭಕ್ಕೆ ಆಮ್ಲಜನಕ ಸಂಗ್ರಹಿಸಲು ಏನು ಕೊಡುಗೆ ನೀಡಿದ್ದೀರಿ’ ಎಂದು ಪ್ರಶ್ನಿಸಿತು. ಅರ್ಜಿ ವಿಲೇವಾರಿಗೂ ಮೊದಲು ಪ್ರತಿಕ್ರಿಯೆ ಸಲ್ಲಿಸುವಂತೆ ಸರ್ಕಾರಕ್ಕೂ ನಿರ್ದೇಶನ ನೀಡಿತು.

’ಹಳ್ಳಿಗಳಲ್ಲೂ ಆರ್‌ಟಿ–ಪಿಸಿಆರ್ ಪರೀಕ್ಷೆಗೆ ಗಂಟಲು ದ್ರವ ಸಂಗ್ರಹಿಸಲು ವ್ಯವಸ್ಥೆ ಮತ್ತು ರಾಜ್ಯದ ಮೂಲೆ ಮೂಲೆಗೂ ತಲುಪುವ ಸಂಚಾರಿ ಪ್ರಯೋಗಾಲಯ ತೆರೆಯಲು ನಿರ್ದೇಶನ ನೀಡಬೇಕು’ ಎಂದು ಕೆ.ಆರ್. ರಮೇಶ್‌ಕುಮಾರ್ ಕೋರಿದ್ದರು.



ಕೋವಿಡ್‌ನಿಂದ ಮೃತಪಟ್ಟವರ ಶವಗಳನ್ನು ಸಂಬಂಧಿಕರಿಗೆ ಹಸ್ತಾಂತರಿಸದೆ ಖಾಸಗಿ ಆಸ್ಪತ್ರೆಗಳು ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ(ಕೆಪಿಎಂಇ) ಕಾಯ್ದೆ ಉಲ್ಲಂಘಿಸುತ್ತಿವೆ ಎಂದು ಅವರು ದೂರಿದ್ದರು.

ಆಮ್ಲಜನಕ ಸಿಲಿಂಡರ್‌ಗಳನ್ನು ಇಸ್ರೊದಲ್ಲಿ ಶೇಖರಣೆ ಮಾಡಲು ಅವಕಾಶ ಮಾಡಿಕೊಳ್ಳುವಂತೆ ನಿರ್ದೇಶನ ನೀಡಬೇಕು ಎಂದು ಎಚ್.ಕೆ.ಪಾಟೀಲ ಕೋರಿದ್ದರು. ಮನವಿ ಪರಿಗಣಿಸಲು ಪೀಠ ನಿರಾಕರಿಸಿದಾಗ ಅರ್ಜಿಯನ್ನು ಹಿಂಪಡೆಯಲಾಯಿತು.

ಕೋವಿಡ್ ವಿಷಯದಲ್ಲಿ ಬಾಗಲಕೋಟೆಯ ಖಾಸಗಿ ಆಸ್ಪತ್ರೆಗಳ ಮೇಲೆ ಜಿಲ್ಲಾಡಳಿತ ಒತ್ತಡ ಹೇರುತ್ತಿದೆ ಎಂದು ವಿಧಾನ ಪರಿಷತ್ತಿನ ಪ್ರತಿಪಕ್ಷದ ನಾಯಕರೂ ಆಗಿರುವ ಎಸ್. ಆರ್. ಪಾಟೀಲ ಆರೋಪಿಸಿದ್ದರು. ‘ಒಬ್ಬ ಶಾಸಕರಾಗಿ ಖಾಸಗಿ ಆಸ್ಪತ್ರೆಗಳ ಪರ ವಕಾಲತ್ತು ವಹಿಸಬಾರದು. ಆಸ್ಪತ್ರೆಗಳು ತಮ್ಮ ಕುಂದುಕೊರತೆ ಪರಿಹರಿಸಿಕೊಳ್ಳಲು ಸೂಕ್ತ ವೇದಿಕೆಯನ್ನು ಹೊಂದಿವೆ’ ಎಂದು ಪೀಠ ಹೇಳಿತು.

ಮೈಸೂರು ರಸ್ತೆ ವಿಸ್ತರಿತ ಮಾರ್ಗದಲ್ಲಿ ತಿಂಗಳಲ್ಲಿ ವಾಣಿಜ್ಯ ಸಂಚಾರ ಆರಂಭ ಸಾಧ್ಯತೆ

ಜೂನ್ ಅಂತ್ಯಕ್ಕೆ ಕೆಂಗೇರಿಯವರೆಗೆ 'ಮೆಟ್ರೊ'

ಪ್ರಜಾವಾಣಿ ವಾರ್ತೆ

ಕೆಂಗೇರಿ ಮಾರ್ಗದಲ್ಲಿನ ಮೆಟ್ರೊ ಕಾಮಗಾರಿ ಪರಿಶೀಲನೆ ನಡೆಸಿದ ಅಧಿಕಾರಿಗಳು

ಬೆಂಗಳೂರು: 'ನಮ್ಮ ಮೆಟ್ರೊ'ದ ಬಹುನಿರೀಕ್ಷಿತ ವಿಸ್ತರಿತ ಮಾರ್ಗವಾದ ಕೆಂಗೇರಿಯಲ್ಲಿ ಇನ್ನೊಂದು ತಿಂಗಳಲ್ಲಿ ಮೆಟ್ರೊ ರೈಲಿನ ಸದ್ದು ಕೇಳಿ ಬರಲಿದೆ. ಮೈಸೂರು ರಸ್ತೆಯಿಂದ ಕೆಂಗೇರಿಯವರೆಗೆ ಜೂನ್ ಅಂತ್ಯದಲ್ಲಿ ವಾಣಿಜ್ಯ ಸಂಚಾರ ಆರಂಭಿಸಲಾಗುವುದು ಎಂದು ಬೆಂಗಳೂರು ಮೆಟ್ರೊ ರೈಲು ನಿಗಮ ಹೇಳಿದೆ.

ಈ ಮಾರ್ಗದಲ್ಲಿ ಬರುವ ಮೆಟ್ರೊ ನಿಲ್ದಾಣಗಳು ಮತ್ತು ವಾಹನ ನಿಲುಗಡೆ ಸ್ಥಳಗಳನ್ನು ಗುರುವಾರ ಪರಿಶೀಲಿಸಿದ ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ರಾಕೇಶ್ ಸಿಂಗ್ ಈ ಮಾಹಿತಿ ನೀಡಿದರು.

'ಈ ಮಾರ್ಗ ನಿರ್ಮಾಣ ಕೆಲಸ ಪೂರ್ಣಗೊಂಡಿದ್ದು, ಆರು ನಿಲ್ದಾಣಗಳ ಪೈಕಿ ಐದರಲ್ಲಿ ಶೇ 90ರಿಂದ ಶೇ 95ರಷ್ಟು ಕೆಲಸ ಪೂರ್ಣಗೊಂಡಿದೆ. ಉಳಿದ ಒಂದು ನಿಲ್ದಾಣದ ಕೆಲಸ ಶೇ 70-75ರಷ್ಟಾಗಿದೆ. ಎಲ್ಲ ಕಾರ್ಯ ಪೂರ್ಣಗೊಳಿಸಲು 30ರಿಂದ 45 ದಿನ ಬೇಕಾಗಬಹುದು. ಜೂನ್ 15-20ರ ವೇಳೆಗೆ ರೈಲ್ವೆ ಸುರಕ್ಷತಾ ಆಯುಕ್ತರಿಗೆ ಆಹ್ವಾನ ನೀಡಲಾಗುವುದು' ಎಂದರು.

7.53 ಕಿ.ಮೀ. ಉದ್ದದ ಈ ಮಾರ್ಗದಲ್ಲಿ ಒಟ್ಟು ಆರು ನಿಲ್ದಾಣಗಳು ಹಾಗೂ ವಾಹನ ನಿಲುಗಡೆ ಸ್ಥಳಗಳು ಬರಲಿವೆ.

ಒಟ್ಟು 26 ಕಿ.ಮೀ. ಉದ್ದದ ಮಾರ್ಗ: ಪ್ರಸ್ತುತ ನೇರಳೆ ಮಾರ್ಗವು (ಬೈಯಪ್ಪನಹಳ್ಳಿ-ಮೈಸೂರು ರಸ್ತೆ) 18.10 ಕಿ.ಮೀ. ಇದ್ದು, 17 ನಿಲ್ದಾಣಗಳು ಬರುತ್ತವೆ. ಕೆಂಗೇರಿವರೆಗೆ ವಿಸ್ತರಣೆಯಿಂದ ಮಾರ್ಗದ ಉದ್ದ ಸುಮಾರು 26 ಕಿ.ಮೀ. ಆಗುತ್ತದೆ. ಈ ಮಾರ್ಗ ಪೂರ್ಣಗೊಂಡರೆ ನಿತ್ಯ ಸುಮಾರು 75 ಸಾವಿರ ಜನ ಪ್ರಯಾಣಿಸುವ ನಿರೀಕ್ಷೆ ಇದೆ.

ಬೈಯಪ್ಪನಹಳ್ಳಿಯಿಂದ ಕೆಂಗೇರಿಯವರೆಗೆ ಗರಿಷ್ಠ ಪ್ರಯಾಣ ದರ ₹56 ಹಾಗೂ ಕೆಂಗೇರಿಯಿಂದ ರೇಷ್ಮೆ ಸಂಸ್ಥೆಯವರೆಗೆ ₹60 ನಿಗದಿ ಮಾಡುವ ಉದ್ದೇಶವನ್ನು ನಿಗಮ ಹೊಂದಿದೆ.

ಬೈಯಪ್ಪನಹಳ್ಳಿಯಿಂದ ವೈಟ್‌ಫೀಲ್ಡ್‌ವರೆಗಿನ 15.25 ಕಿ.ಮೀ. ಉದ್ದದ ವಿಸ್ತರಿತ ಮಾರ್ಗದ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ. ಇನ್ನು ಹಸಿರು ಮಾರ್ಗವು (ನಾಗಸಂದ್ರ-ರೇಷ್ಮೆ ಸಂಸ್ಥೆ) 30 ಕಿ.ಮೀ. ಇದೆ.

ಭೂಮಿಗೆ ಬೇಡಿಕೆ: ಕೆಂಗೇರಿವರೆಗೆ ಮೆಟ್ರೊ ವಿಸ್ತರಣೆಯಿಂದ ಆ ಮಾರ್ಗದುದ್ದಕ್ಕೂ ಬರುವ ಪ್ರದೇಶಗಳಲ್ಲಿರುವ ಭೂಮಿಗೆ ಬೇಡಿಕೆ ಬರಲಿದೆ. ಅಲ್ಲದೆ, ಈಗಾಗಲೇ ತಲೆಯೆತ್ತಿರುವ ವಸತಿ ಸಮುಚ್ಛಯಗಳು ಮತ್ತು ವಾಣಿಜ್ಯ ಸಮುಚ್ಛಯಗಳಿಗೂ ಬೇಡಿಕೆ ಬರಲಿದೆ.

ಪದೇ ಪದೇ ಗಡುವು ಪರಿಷ್ಕರಣೆ: '2021ರ ಜನವರಿಗೇ ಕೆಂಗೇರಿ ಮಾರ್ಗದಲ್ಲಿ ವಾಣಿಜ್ಯ ಸಂಚಾರ ಆರಂಭವಾಗಲಿದೆ ಎಂದು ನಿಗಮ ಹೇಳಿತ್ತು. ಆದರೆ, ಹಲವು ತಾಂತ್ರಿಕ ಕಾರಣಗಳಿಂದ ಅದು ಸಾಧ್ಯವಾಗಲಿಲ್ಲ. ಇದಕ್ಕೂ ಮುನ್ನ ಕಳೆದ ವರ್ಷ ಸೆಪ್ಟೆಂಬರ್ ಅಥವಾ ಅಕ್ಟೋಬರ್ ವೇಳೆಗೆ ಸೇವೆಗೆ ಸಿದ್ಧವಾಗಲಿದೆ ಎಂದೂ ಹೇಳಲಾಗಿತ್ತು.

ಈ ರೀತಿ ಹಲವು ಗಡುವುಗಳನ್ನು ಮೈಸೂರು ರಸ್ತೆ-ಕೆಂಗೇರಿ ಮಾರ್ಗ ಮೀರಿದೆ. ಮೂಲ ಗಡುವು 2017 ಆಗಿತ್ತು.

'ಮೆಟ್ರೊ ಆರೈಕೆ ಕೇಂದ್ರದಲ್ಲಿ ಬೇರೆಯವರಿಗೂ ಅವಕಾಶ'

'ನಮ್ಮ ಮೆಟ್ರೊ ಕಾರ್ಮಿಕರಿಗಾಗಿ ನಿರ್ಮಿಸಲಾಗಿರುವ ಕೋವಿಡ್ ಆರೈಕೆ ಕೇಂದ್ರದಲ್ಲಿ ಸಾಮಾನ್ಯ ರೋಗಿಗಳು ಕೂಡ ಚಿಕಿತ್ಸೆ ಪಡೆಯಲು ಅವಕಾಶ ಕಲ್ಪಿಸಲಾಗಿದೆ' ಎಂದು ರಾಕೇಶ್ ಸಿಂಗ್ ತಿಳಿಸಿದ್ದಾರೆ.

'ಉದ್ದೇಶಿತ ಕೋವಿಡ್ ಆರೈಕೆ ಕೇಂದ್ರದಲ್ಲಿ 200 ಹಾಸಿಗೆಗಳ ಸಾಮರ್ಥ್ಯದ್ದಾಗಿದೆ. ಇಲ್ಲಿ ಪ್ರಸ್ತುತ 80 ರೋಗಿಗಳು ಚಿಕಿತ್ಸೆ ಪಡೆಯುತ್ತಿದ್ದು, 18 ಜನ ಈಗಾಗಲೇ ಗುಣಮುಖರಾಗಿ ಮನೆಗೆ ತೆರಳಿದ್ದಾರೆ. 120 ಹಾಸಿಗೆಗಳು ಖಾಲಿ ಇವೆ' ಎಂದರು.

ಸೋಂಕಿತರಿಗೆ ಆಕ್ಸಿಜನ್ ಕಾನ್ಸಂಟ್ರೇಟರ್ ಸೇರಿದಂತೆ ಅಗತ್ಯ ಚಿಕಿತ್ಸಾ ಸೌಲಭ್ಯಗಳನ್ನು ಈ ಕೇಂದ್ರದಲ್ಲಿ ಅಳವಡಿಸಲಾಗಿದೆ. ಹೊಸೂರು ಮುಖ್ಯರಸ್ತೆಯ ಕೂಡ್ಲು ಗೇಟ್ ಬಳಿ ಇರುವ ಹೋಟೆಲ್ ಏಕಾದಲ್ಲಿ ಈ ಆರೈಕೆ ಕೇಂದ್ರ ತೆರೆಯಲಾಗಿದೆ.

ಈ ಮಾರ್ಗದಲ್ಲಿನ ನಿಲ್ದಾಣಗಳು

- ನಾಯಂಡಹಳ್ಳಿ
- ರಾಜರಾಜೇಶ್ವರಿ ನಗರ
- ಜ್ಞಾನಭಾರತಿ
- ಪಟ್ಟಣಗೆರೆ
- ಕೆಂಗೇರಿ ಬಸ್ ನಿಲ್ದಾಣ
- ಕೆಂಗೇರಿ ಮೆಟ್ರೊ ನಿಲ್ದಾಣ

ಸುದ್ದಿ 2 ನಿಮಿಷ

ಕೋವಿಡ್–19 ನಿರ್ವಹಣೆಗೆ ಭಾರತ್ ಸ್ಕೌಟ್ಸ್ ಸಾಥ್

ಬೆಂಗಳೂರು: 'ಕೋವಿಡ್ ನಿರ್ವಹಣೆಗೆ ರಾಜ್ಯ ಸರ್ಕಾರ ಕೈಗೊಳ್ಳುತ್ತಿರುವ ಪರಿಹಾರ ಕ್ರಮಗಳಿಗೆ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ರಾಜ್ಯ ಶಾಖೆಯು ಕೈ ಜೋಡಿಸಿದೆ. ಅಗತ್ಯವಿದ್ದರೆ ಇನ್ನೂ ಹೆಚ್ಚಿನ ಸಹಕಾರ ನೀಡಲು ಸಿದ್ಧವಿದೆ' ಎಂದು ಸಂಸ್ಥೆಯ ಮುಖ್ಯ ಆಯುಕ್ತ ಪಿ.ಜಿ. ಆರ್. ಸಿಂಧ್ಯ ತಿಳಿಸಿದ್ದಾರೆ.

'ರಾಜ್ಯದಲ್ಲಿ ಸುಮಾರು ಐದು ಲಕ್ಷಕ್ಕೂ ಹೆಚ್ಚು ಮುಖಂಡರು, ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಸ್ಕೌಟ್-ಗೈಡ್ ಚಳವಳಿಯಲ್ಲಿ ತೊಡಗಿಸಿಕೊಂಡಿದ್ದಾರೆ. ಕಳೆದ ವರ್ಷ ಸಂಸ್ಥೆಯ ವತಿಯಿಂದ 40 ಲಕ್ಷ ಮಾಸ್ಕ್ ಸಿದ್ಧಪಡಿಸಿ ವಿತರಿಸಲಾಗಿತ್ತು. ಅಲ್ಲದೆ, ಮುಖ್ಯಮಂತ್ರಿಗಳ ಕೋವಿಡ್ ಪರಿಹಾರ ನಿಧಿಗೆ ₹1 ಕೋಟಿ ನೀಡಲಾಗಿತ್ತು' ಎಂದು ಅವರು ಹೇಳಿದ್ದಾರೆ.

'ರಾಜ್ಯದ ಪ್ರಮುಖ ಜಿಲ್ಲೆಗಳಲ್ಲಿರುವ ಸಂಸ್ಥೆಯ ತರಬೇತಿ ಕೇಂದ್ರಗಳನ್ನು ಕೋವಿಡ್ ನಿಯಂತ್ರಣಕ್ಕೆ ಸಂಬಂಧಿಸಿದ ಕಾರ್ಯಗಳಿಗೆ ಬಳಸಿಕೊಳ್ಳಬಹುದಾಗಿದೆ' ಎಂದೂ ಅವರು ತಿಳಿಸಿದ್ದಾರೆ.

'ವಿಮಾನ ನಿಲ್ದಾಣ ಮಾರ್ಗ ಕಾಮಗಾರಿ ಸದ್ಯಕ್ಕೆ ಸ್ಥಗಿತಗೊಳಿಸಿ'

ಬೆಂಗಳೂರು: 'ಕೋವಿಡ್ ಸಾಂಕ್ರಾಮಿಕ ರೋಗ ವ್ಯಾಪಕವಾಗಿ ಹರಡುತ್ತಿದೆ. ಈ ಸಂದರ್ಭದಲ್ಲಿ ವಿಮಾನ ನಿಲ್ದಾಣ ಮಾರ್ಗದಲ್ಲಿ ಮೆಟ್ರೊ ಯೋಜನೆಯನ್ನು ಮುಂದುವರಿಸಬಾರದು. ಸದ್ಯಕ್ಕೆ ಸ್ಥಗಿತಗೊಳಿಸಬೇಕು' ಎಂದು 'ಗ್ರೋಥ್‌ವಾಚ್' ಸಂಸ್ಥೆ ಹೇಳಿದೆ.

'ಎರಡನೇ ಅಲೆಗೇ ಕೋವಿಡ್ ಮುಕ್ತಾಯವಾಗುವ ಲಕ್ಷಣವಿಲ್ಲ. ಮೂರು–ನಾಲ್ಕನೇ ಅಲೆಗಳಂತೆ ಈ ಬಿಕ್ಕಟ್ಟು ಮುಂದುವರಿಯಬಹುದು. ಈ ಸಂದರ್ಭದಲ್ಲಿ ಹೊಸಮಾರ್ಗದ ನಿರ್ಮಾಣ ಕಾರ್ಯ ಕೈಗೆತ್ತಿಕೊಳ್ಳುವುದು ಸರಿಯಲ್ಲ' ಎಂದು ಸಂಸ್ಥೆಯ ಸಂಯೋಜಕಿ ವಿದ್ಯಾ ದಿನಕರ್ ಹೇಳಿದರು.

'ಸಿಲ್ಕ್‌ಬೋರ್ಡ್‌ನಿಂದ ಕೆ.ಆರ್. ಪುರ ಅಥವಾ ಕೆ.ಆರ್. ಪುರದಿಂದ ವಿಮಾನ ನಿಲ್ದಾಣ ಮಾರ್ಗದಲ್ಲಿನ ಹಲವು ಬಹುರಾಷ್ಟ್ರೀಯ ಕಂಪನಿಗಳು, ಐಟಿ ಕಂಪನಿಗಳು ಬರುತ್ತವೆ. ಆದರೆ, ಬಹುತೇಕ ಕಂಪನಿಗಳಲ್ಲಿ ಈಗಾಗಲೇ ಮನೆಯಿಂದಲೇ ಕೆಲಸ ಮಾಡುವ ವ್ಯವಸ್ಥೆ ತರಲಾಗಿದೆ. ಈ ವ್ಯವಸ್ಥೆಯೇ ಶಾಶ್ವತವಾಗಿ ಮುಂದುವರಿಸುವ ಸಾಧ್ಯತೆಯೂ ಇದೆ. ಹೀಗಾಗಿ, ಯೋಜನೆ ರೂಪಿಸಿರುವ ಸಂದರ್ಭದ ಸ್ಥಿತಿ–ಗತಿಗೂ, ಯೋಜನೆ ಪೂರ್ಣಗೊಂಡ ನಂತರ ಇರುವ ಸ್ಥಿತಿಗತಿಗೂ ಸಾಕಷ್ಟು ವ್ಯತ್ಯಾಸ ಇರಲಿದೆ' ಎಂದು ಅವರು ಹೇಳಿದ್ದಾರೆ.

'ಈ ಮಾರ್ಗದ ಸಮಗ್ರ ಯೋಜನಾ ವರದಿಯನ್ನು ಮತ್ತೊಮ್ಮೆ ರೂಪಿಸಬೇಕು. ಎಷ್ಟು ಜನ ಪ್ರಯಾಣಿಸುತ್ತಾರೆ, ಎಷ್ಟು ಅಗತ್ಯವಿದೆ ಎಂಬ ಬಗ್ಗೆ ಮತ್ತೊಮ್ಮೆ ಅಧ್ಯಯನ ನಡೆಸಬೇಕು. ಈ ಮಾರ್ಗದಲ್ಲಿ ಬರುವ ಐಟಿ ಕಂಪನಿಗಳ ಅಭಿಪ್ರಾಯ ಕೇಳಬೇಕು' ಎಂದು ಅವರು ಒತ್ತಾಯಿಸಿದರು.

'ವಿಮಾನ ನಿಲ್ದಾಣ ಮಾರ್ಗದಲ್ಲಿ ಇನ್ನೂ ಕಾಮಗಾರಿಯೇ ಪ್ರಾರಂಭವಾಗಿಲ್ಲದಿರುವುದರಿಂದ ಸದ್ಯಕ್ಕೆ ಸ್ಥಗಿತಗೊಳಿಸಿದರೂ ಸಮಸ್ಯೆ ಆಗುವುದಿಲ್ಲ' ಎಂದು ಅವರು ಅಭಿಪ್ರಾಯಪಟ್ಟರು.

ನಗರದಲ್ಲಿ ಇಂದು

'ರಸ್ತೆ ಸುರಕ್ಷತೆ' ಕುರಿತು ಉಪನ್ಯಾಸ: ಮಾತನಾಡುವವರು–ಮಸಾಚುಸೆಟ್ಸ್ ತಾಂತ್ರಿಕ ಸಂಸ್ಥೆಯ ಕಂಪ್ಯೂಟರ್ ಸೈನ್ಸ್ ವಿಭಾಗದ ಪ್ರಾಧ್ಯಾಪಕ ಹರಿ ಬಾಲಕೃಷ್ಣನ್, ಸಂವಾದದಲ್ಲಿ ಪಾಲ್ಗೊಳ್ಳುವವರು–ನಿವೃತ್ತ ಐಎಎಸ್ ಅಧಿಕಾರಿ ಕೆ.ಜೈರಾಜ್, ಆಯೋಜನೆ–ಇನ್ಫೋಸಿಸ್ ಸೈನ್ಸ್ ಫೌಂಡೇಷನ್ (ಆನ್‌ಲೈನ್ ಕಾರ್ಯಕ್ರಮ)-ಸಂಜೆ 6.30

ಒಳನುಡಿಗಳ ಒಳ್ನುಡಿ; ಜಾಲಗೋಷ್ಠಿ ಸರಣಿಯ ಉದ್ಘಾಟನೆ: ವಿಷಯ–ಕೊಡವ ಭಾಷೆ ಮತ್ತು ಸಾಹಿತ್ಯ, ಉದ್ಘಾಟಕರು–ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್.ನಾಗಾಭರಣ, ಅಧ್ಯಕ್ಷತೆ–ಕುವೆಂಪು ಭಾಷಾಭಾರತಿ ಪ್ರಾಧಿಕಾರದ ಅಧ್ಯಕ್ಷ ಅಜಕ್ಕಳ ಗಿರೀಶ ಭಟ್, ಮುಖ್ಯ ಅತಿಥಿ–ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ ಅಧ್ಯಕ್ಷೆ ಪಾರ್ವತಿ ಅಪ್ಪಯ್ಯ, ಉಪನ್ಯಾಸ–ರಂಗಾಯಣದ ನಿರ್ದೇಶಕ (ಮೈಸೂರು) ಅಡ್ಡಂಡ ಸಿ.ಕಾರ್ಯಪ್ಪ, ಆಯೋಜನೆ–ಕುವೆಂಪು ಭಾಷಾಭಾರತಿ ಪ್ರಾಧಿಕಾರ (ಆನ್‌ಲೈನ್ ಕಾರ್ಯಕ್ರಮ)-ಸಂಜೆ 6.

ವಿವಿಧ ವಲಯಗಳಲ್ಲಿ ಕೆಲಸ ಮಾಡುತ್ತಿರುವ ಮಹಿಳೆಯರ ಪ್ರಶ್ನೆ

'₹2 ಸಾವಿರದಲ್ಲಿ ಬದುಕು ಸಾಗಿಸುವುದು ಹೇಗೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಲಾಕ್‌ಡೌನ್‌ನಿಂದಾಗಿ ಕೆಲಸ ಹೋಗಿದೆ. ಕೈಯಲ್ಲಿ ಬಿಡಿಗಾಸು ಇಲ್ಲದಂತಾಗಿದೆ. ಇದರಿಂದ ಜೀವನ ನಿರ್ವಹಣೆ ಕಷ್ಟವಾಗಿದೆ. ಇಷ್ಟೆಲ್ಲಾ ತೊಂದರೆ ಎದುರಾದರೂ ರಾಜ್ಯ ಸರ್ಕಾರ ಕಾರ್ಮಿಕರ ಕಷ್ಟಕ್ಕೆ ಸ್ಪಂದಿಸುತ್ತಿಲ್ಲ' ಎಂದು ವಿವಿಧ ವಲಯಗಳಲ್ಲಿ ಕೆಲಸ ಮಾಡುತ್ತಿರುವ ಮಹಿಳೆಯರು ದೂರಿದರು.

ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ಬೆಂಗಳೂರು ದಕ್ಷಿಣ ಜಿಲ್ಲಾ ಘಟಕ ಗುರುವಾರ ಆಯೋಜಿಸಿದ್ದ 'ಕೊರೊನಾ ಕಾಲದ ತಲ್ಲಣಗಳು; ಮಹಿಳೆ ಮತ್ತು ದುಡಿಮೆ-ಗೋಚರ ಕೆಲಸ ಅಗೋಚರ ನೋವು' ಕುರಿತ ಆನ್‌ಲೈನ್ ಸಂವಾದದಲ್ಲಿ ಮಹಿಳೆಯರು ನೋವು ತೋಡಿಕೊಂಡರು.

ಮುಖ್ಯಾಂಶಗಳು

- ಆನ್‌ಲೈನ್ ಸಂವಾದದಲ್ಲಿ ಅಳಲು
- ಕಷ್ಟಕ್ಕೆ ಸರ್ಕಾರ ಸ್ಪಂದಿಸುತ್ತಿಲ್ಲ ಎಂದ ಮಹಿಳೆಯರು
- ಆರ್ಥಿಕ ಭದ್ರತೆ ನೀಡುವಂತೆ ಆಶಾ ಕಾರ್ಯಕರ್ತೆ ಒತ್ತಾಯ

'ಕೋವಿಡ್ ಸಮಯದಲ್ಲಿ ಜೀವದ ಹಂಗು ತೊರೆದು ಕೆಲಸ ಮಾಡುತ್ತಿದ್ದೇವೆ. ಮನೆಗೆ ಹೋದರೆ ಮಕ್ಕಳ ಜೊತೆ ಬೆರೆಯಲು ಭಯವಾಗುತ್ತದೆ. ಸರಿಯಾದ ಸಮಯಕ್ಕೆ ಸಂಬಳ ಸಿಗದೆ ಬದುಕು ದುಸ್ತರವಾಗಿದೆ. ನಮ್ಮ ಸೇವೆ ಪರಿಗಣಿಸಿ ರಾಜ್ಯ, ಕೇಂದ್ರ ಸರ್ಕಾರ ಆರ್ಥಿಕ ಭದ್ರತೆ ಒದಗಿಸಲಿ' ಎಂದು ಆಶಾ ಕಾರ್ಯಕರ್ತೆ ಮಂಜುಳಾ ಒತ್ತಾಯಿಸಿದರು.

ಆಟೊ ಚಾಲಕಿ ಜಿ.ಶಕುಂತಲಾ 'ಕೊರೊನಾದಿಂದಾಗಿ ಕೆಲಸದ ಅವಧಿ ಸೀಮಿತಗೊಳಿಸಲಾಗಿದೆ. ಇದರಿಂದ ದುಡಿಮೆಗೆ ಪೆಟ್ಟು ಬಿದ್ದಿದೆ. ಬ್ಯಾಂಕ್‌ಗೆ ಸಾಲದ ಕಂತು ಪಾವತಿಸುವುದು ಕಷ್ಟವಾಗಿದೆ. ರಾಜ್ಯ ಸರ್ಕಾರ ಈ ಹಿಂದೆ ಘೋಷಿಸಿದ್ದ ಪ್ಯಾಕೇಜ್‌ನಲ್ಲಿ ಆಟೊ ಚಾಲಕರಿಗೆ ₹5 ಸಾವಿರ ನೆರವು ನೀಡುವುದಾಗಿ ಹೇಳಿತ್ತು. ಆ ಮೊತ್ತ ಇದುವರೆಗೂ ಕೈ ಸೇರಿಲ್ಲ' ಎಂದರು.

ಬ್ಯಾಂಕ್ ಸಿಬ್ಬಂದಿ ಸುಷ್ಮಾ ವರ್ಮಾ, 'ಬ್ಯಾಂಕಿಂಗ್ ಅನ್ನು ಅಗತ್ಯ ಸೇವೆ ಎಂದು ಪರಿಗಣಿಸಿರುವ ಕಾರಣ ಲಾಕ್‌ಡೌನ್ ಅವಧಿಯಲ್ಲೂ ಕಾರ್ಯನಿರ್ವಹಿಸಬೇಕಾಗಿದೆ. ಹಣಕಾಸು ವಿಭಾಗದಲ್ಲಿ ಕೆಲಸ ಮಾಡುವವರು ಗ್ರಾಹಕರ ನೇರ ಸಂಪರ್ಕಕ್ಕೊಳಗಾಗುವುದರಿಂದ ಅವರಿಗೆ ಸೋಂಕು ತಗಲುವ ಅಪಾಯ ಹೆಚ್ಚಿರುತ್ತದೆ. ಅನಾರೋಗ್ಯ ಪೀಡಿತರಾದರೆ ರಜೆ ನೀಡಲು ಅಧಿಕಾರಿಗಳು ನಿರಾಕರಿಸುತ್ತಾರೆ' ಎಂದು ತಿಳಿಸಿದರು.

ಗಾರ್ಮೆಂಟ್ಸ್ ಕಾರ್ಮಿಕೆ ಧನಲಕ್ಷ್ಮಿ, 'ಮನೆ ಬಾಡಿಗೆ ಕಟ್ಟಲೂ ದುಡ್ಡಿಲ್ಲದ ಪರಿಸ್ಥಿತಿ ನಿರ್ಮಾಣವಾಗಿದೆ. ಮನೆಯವರಿಗೆ ಹುಷಾರಿಲ್ಲದಂತಾದರೆ ಆಸ್ಪತ್ರೆಗೆ ಕರೆದೊಯ್ಯಲೂ ಹಣವಿಲ್ಲದಂತಾಗಿದೆ' ಎಂದರು.

ಬೀದಿ ಬದಿ ಸಂಘಟನೆಯ ಭವಾನಿ, 'ಸರ್ಕಾರ ಈಗ ₹2 ಸಾವಿರ ನೆರವು ಪ್ರಕಟಿಸಿದೆ. ಈ ಹಣದಲ್ಲಿ ಬದುಕು ಸಾಗಿಸುವುದು ಹೇಗೆ' ಎಂದು ಪ್ರಶ್ನಿಸಿದರು.

ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಉಪಾಧ್ಯಕ್ಷೆ ಕೆ.ಎಸ್.ವಿಮಲಾ, ಜಿಲ್ಲಾ ಸಂಚಾಲಕಿ ಬಸಮ್ಮ, ವಿಮಾ ನೌಕರರ ಸಂಘದ ಎಸ್.ಕೆ.ಗೀತಾ, ಸಿಐಟಿಯು ರಾಜ್ಯ ಮುಖಂಡ ಕೆ.ಎನ್. ಉಮೇಶ್ ಇದ್ದರು.

ಮಾನಸಿಕ ಸಮಸ್ಯೆಗೆ ಟೆಲಿ ಸಹಾಯವಾಣಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಪೀಡಿತರಾಗಿ ಮಾನಸಿಕ ಸಮಸ್ಯೆಗಳನ್ನು ಎದುರಿಸುತ್ತಿರುವವರಿಗೆ ಆತ್ಮವಿಶ್ವಾಸ ತುಂಬಲು ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆಯು (ನಿಮ್ಹಾನ್ಸ್) ಟೆಲಿ ಸಹಾಯವಾಣಿ ಪ್ರಾರಂಭಿಸಿದೆ.

ಆತಂಕ, ಖಿನ್ನತೆ ಸೇರಿದಂತೆ ನಾನಾ ರೀತಿಯ ಮನೋರೋಗಕ್ಕೆ ಒಳಗಾಗಿರುವ ಸೋಂಕಿತರಿಗೆ ತಜ್ಞ ವೈದ್ಯರು ಅಗತ್ಯ ಸಲಹೆ, ಸೂಚನೆಗಳನ್ನು ನೀಡಲಿದ್ದಾರೆ. ಈ ಸಹಾಯವಾಣಿ ವಾರದ ಎಲ್ಲ ದಿನಗಳು ಬೆಳಿಗ್ಗೆ 8ರಿಂದ ರಾತ್ರಿ 8 ಗಂಟೆಯವರೆಗೆ ಕಾರ್ಯನಿರ್ವಹಿಸಲಿದೆ ಎಂದು ಪ್ರಕಟಣೆ ತಿಳಿಸಿದೆ.

ಉಚಿತ ಸಹಾಯವಾಣಿ ಸಂಖ್ಯೆ: 080-47116414

ಹೆಬ್ಬಾಳ ವಿಧಾನಸಭಾಕ್ಷೇತ್ರದಲ್ಲಿ ಬೈರತಿ ಸುರೇಶ್ ಮಾದರಿ ಕಾರ್ಯ • 100 ಹಾಸಿಗೆಗಳ ಆಸ್ಪತ್ರೆಯಲ್ಲಿ ಎಲ್ಲವೂ ಉಚಿತ

ಮನಸನ್ನು ಹೂವಾಗಿಸುವ ಕೋವಿಡ್ ಆಸ್ಪತ್ರೆ !

ಬೆಂಗಳೂರು: ಸುತ್ತ–ಮುತ್ತ ಹಸಿರು ವಾತಾವರಣ. ಕೊಠಡಿಯ ಅಕ್ಕ–ಪಕ್ಕ ಬಲೂನು, ಹೂವುಗಳ ಅಲಂಕಾರ. ಕಿವಿಗೆ ಹಿತವೆನಿಸುವ ಸಂಗೀತ. ನಗುಮೊಗದಿಂದ ಚಿಕಿತ್ಸೆ ನೀಡುವ ವೈದ್ಯರು, ಶುಶ್ರೂಷಕರು...

ಹೆಬ್ಬಾಳ ವಿಧಾನಸಭಾ ಕ್ಷೇತ್ರದ ಚೋಳನಗರದಲ್ಲಿನ ರಾಜೀವ್‌ಗಾಂಧಿ ದಂತವೈದ್ಯಕೀಯ ಕಾಲೇಜು ಆವರಣದಲ್ಲಿ ಗುರುವಾರದಿಂದ ಕಾರ್ಯಾರಂಭ ಮಾಡಿರುವ ನೂತನ ಕೋವಿಡ್ ಆಸ್ಪತ್ರೆಯ ನೋಟವಿದು. ಚಿಕಿತ್ಸೆಯ ಜೊತೆಗೆ ರೋಗಿಗಳನ್ನು ಮಾನಸಿಕವಾಗಿಯೂ ಲವಲವಿಕೆಯಿಂದ ಇಡುವ ವ್ಯವಸ್ಥೆಯನ್ನು ಈ ಆಸ್ಪತ್ರೆಯಲ್ಲಿ ಮಾಡಲಾಗಿದೆ.

ಹೆಬ್ಬಾಳ ಕ್ಷೇತ್ರದ ಕಾಂಗ್ರೆಸ್ ಶಾಸಕ ಬೈರತಿ ಬಸವರಾಜ ಅವರ ದೂರದೃಷ್ಟಿ ನಾಯಕತ್ವಕ್ಕೆ ಸಾಕ್ಷಿಯಂತಿರುವ ಈ ಆಸ್ಪತ್ರೆಯು ಈ ಭಾಗದ ಕೋವಿಡ್ ಸೋಂಕಿತರ ಪಾಲಿಗೆ ಆಶಾಕಿರಣದಂತೆ ಗೋಚರಿಸುತ್ತಿದೆ.

100 ಹಾಸಿಗೆಗಳ ಈ ಆಸ್ಪತ್ರೆಯಲ್ಲಿ ಶೇ 50ರಷ್ಟು ಹಾಸಿಗೆಗಳನ್ನು ಹೆಬ್ಬಾಳ ಕ್ಷೇತ್ರದ ಕೊರೊನಾ ಸೋಂಕಿತರಿಗೆ ಮೀಸಲಿಡಲಾಗಿದೆ. ಉಳಿದ ಶೇ 50ರಷ್ಟನ್ನು ಬಿಬಿಎಂಪಿ ಮೂಲಕ ಬಂದ ರೋಗಿಗಳಿಗೆ ನೀಡಲಾಗುತ್ತದೆ.

ಖಾಸಗಿ ಆಸ್ಪತ್ರೆಗಳನ್ನೂ ಮೀರಿಸುವಂತೆ ಈ ನೂತನ ಕೋವಿಡ್ ಆಸ್ಪತ್ರೆಯನ್ನು ರೂಪಿಸಲಾಗಿದೆ. 30 ಐಸಿಯು, 40 ಆಮ್ಲಜನಕ ವ್ಯವಸ್ಥೆ, 5 ವೆಂಟಿಲೇಟರ್ ಮತ್ತು 25 ಸಾಮಾನ್ಯ ಹಾಸಿಗೆಗಳು ಇಲ್ಲಿವೆ. ಹೆಬ್ಬಾಳ ಕ್ಷೇತ್ರದವರ ಪಾಲಿಗೆ ನೇರ ಚಿಕಿತ್ಸಾ ಕೇಂದ್ರದಂತೆ (ಟ್ರಯಾಜ್ ಸೆಂಟರ್) ಇದು ಕಾರ್ಯನಿರ್ವಹಿಸುತ್ತದೆ. ಕೋವಿಡ್ ಪೀಡಿತರು ಈ ಕ್ಷೇತ್ರದ ನಿವಾಸಿಗಳು ಎಂಬ ದಾಖಲೆ ಒದಗಿಸಿದರೂ ಸಾಕು.

ತಿಂಗಳಿಗೆ ₹1 ಕೋಟಿ ಖರ್ಚು: ಈ ಆಸ್ಪತ್ರೆಯ ನಿರ್ವಹಣೆಗೆ ಪ್ರತಿ ತಿಂಗಳು ₹1 ಕೋಟಿ ಬೇಕಾಗುತ್ತದೆ. ಬಿಬಿಎಂಪಿ ₹30 ಲಕ್ಷ ಭರಿಸಿದರೆ, ಗ್ಲೋಬಲ್ ಟೆಕ್ನಾಲಜೀಸ್ ಕಂಪನಿ, ಪ್ರೆಸಿಡೆನ್ಸಿ ವಿಶ್ವವಿದ್ಯಾಲಯ ಹಾಗೂ ಮಾನ್ಯತೆ ರೋಟರಿ ಸಂಸ್ಥೆಗಳು ಉಳಿದ ₹30 ಲಕ್ಷವನ್ನು ಭರಿಸಲಿವೆ. ಉಳಿದ ಮೊತ್ತವನ್ನು ಶಾಸಕ ಬೈರತಿ ಸುರೇಶ್ ವೈಯಕ್ತಿಕವಾಗಿ ಭರಿಸುತ್ತಿದ್ದಾರೆ.

ಕಾಲೇಜಿನ ಕೆಲವು ಕೊಠಡಿಗಳನ್ನು ಬಾಡಿಗೆ ಪಡೆದು ಈ ಆಸ್ಪತ್ರೆ ರೂಪಿಸಲಾಗಿದೆ.

ಹೆಬ್ಬಾಳ ವಿಧಾನಸಭಾ ಕ್ಷೇತ್ರದ ಚೋಳನಗರದಲ್ಲಿನ ರಾಜೀವ್‌ಗಾಂಧಿ ದಂತವೈದ್ಯಕೀಯ ಕಾಲೇಜು ಆವರಣದಲ್ಲಿ ರೂಪಿಸಲಾಗಿರುವ ಕೋವಿಡ್ ಆಸ್ಪತ್ರೆ

70 ವೈದ್ಯಕೀಯ ಸಿಬ್ಬಂದಿ: ಕನಕ ಡಾಕ್ಟರ್ಸ್ ಅಸೋಸಿಯೇಷನ್‌ನ 70 ವೈದ್ಯಕೀಯ ಸಿಬ್ಬಂದಿ ಈ ಆಸ್ಪತ್ರೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. 20 ವೈದ್ಯರು, 20 ಶುಶ್ರೂಷಕರು ಮತ್ತು ಸಹಾಯಕರು ಇಲ್ಲಿ ಮೂರು ಪಾಳಿಗಳಲ್ಲಿ ಕೆಲಸ ಮಾಡುತ್ತಾರೆ.

ಹಲವು ಕೈ ಒಂದುಗೂಡಬೇಕು: 'ಕೊರೊನಾ ಮೊದಲ ಅಲೆಗಿಂತ ಎರಡನೇ ಅಲೆ ಹತ್ತು ಪಟ್ಟು ತೀವ್ರವಾಗಿದೆ. ಈ ಸಂದರ್ಭದಲ್ಲಿ ದುಡ್ಡು ಇರುವವರು, ಸಮಾನ ಮನಸ್ಕರು ಕೈ ಜೋಡಿಸಿ ಇಂತಹ ಆಸ್ಪತ್ರೆಗಳನ್ನು ರೂಪಿಸಿದರೆ ಕೋವಿಡ್ ನಿಯಂತ್ರಿಸಲು ಸಾಧ್ಯವಿದೆ' ಎನ್ನುತ್ತಾರೆ ಬೈರತಿ ಸುರೇಶ್.

'ಈ ಸಂಕಷ್ಟದ ಸಂದರ್ಭದಲ್ಲಿ ನಾನು ಸರ್ಕಾರಗಳನ್ನು ಟೀಕಿಸುವುದಿಲ್ಲ. ಆದರೆ, ಎಲ್ಲ ಶಾಸಕರು ಮನಸು ಮಾಡಿದರೆ ಎಲ್ಲ ವಿಧಾನಸಭಾ ಕ್ಷೇತ್ರದಲ್ಲಿಯೂ ಇಂಥ ಆಸ್ಪತ್ರೆಯನ್ನು ರೂಪಿಸಬಹುದಾಗಿದೆ' ಎಂದೂ ಅವರು ಸಲಹೆ ನೀಡುತ್ತಾರೆ.

ಸಂಘ–ಸಂಸ್ಥೆಗಳ ನೆರವಿನಿಂದ ಮತ್ತು ನಗರಪಾಲಿಕೆ ಹಾಗೂ ಸ್ಥಳೀಯ ಶಾಸಕರ ಸೇರಿ ರೂಪಿಸಿರುವ ಈ ಮಾದರಿ ಆಸ್ಪತ್ರೆ ರಾಜ್ಯದಲ್ಲಿಯೇ ಮೊದಲ ಪ್ರಯೋಗ.

'ಈಗ ಆಸ್ಪತ್ರೆಯಲ್ಲಿ ಆಮ್ಲಜನಕಕ್ಕೆ 100 ಜಂಬೋ ಸಿಲಿಂಡರ್ ವ್ಯವಸ್ಥೆ ಮಾಡಲಾಗಿದೆ. ಅದಕ್ಕೆ ₹35 ಲಕ್ಷ ನಾನೇ ಭರಿಸಿದ್ದೇನೆ. ಮುಂದೆ ಪರಿಸ್ಥಿತಿ ಕೈಮೀರಿ ಕೋವಿಡ್ ಪ್ರಕರಣಗಳ ಸಂಖ್ಯೆ ಇನ್ನೂ ಹೆಚ್ಚಾದರೆ ಮತ್ತೆ 30ರಿಂದ 40 ಹಾಸಿಗೆಗಳನ್ನು ಹೆಚ್ಚುವರಿಯಾಗಿ ವ್ಯವಸ್ಥೆ ಮಾಡಲಾಗುವುದು' ಎಂದೂ ಹೇಳಿದರು.

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

ನೂತನವಾಗಿ ಕಾರ್ಯಾರಂಭಿಸಿರುವ ಆಸ್ಪತ್ರೆಯ ವಾರ್ಡ್‌ವೊಂದರ ನೋಟ

ಕ್ಯಾಶ್ ಕೌಂಟರ್ ಇಲ್ಲದ ಆಸ್ಪತ್ರೆ !

ಇದು ಕ್ಯಾಶ್ ಕೌಂಟರ್ ಇಲ್ಲದ ಆಸ್ಪತ್ರೆ. ಅಂದರೆ, ಇಲ್ಲಿ ಎಲ್ಲವೂ ಉಚಿತ. ಚಿಕಿತ್ಸೆ ಮಾತ್ರವಲ್ಲದೆ, ಔಷಧಿ–ಊಟೋಪಚಾರವನ್ನೂ ಇಲ್ಲಿ ಉಚಿತವಾಗಿ ನೀಡಲಾಗುತ್ತದೆ.

'ಕಾಫಿ, ಟೀ, ಉಪಾಹಾರ ಮತ್ತು ಎರಡು ಊಟವನ್ನು ನೀಡಲಾಗುತ್ತದೆ. ಇದಕ್ಕೆ 100 ರೋಗಿಗಳಿಗೆ ದಿನಕ್ಕೆ ₹50 ಸಾವಿರ ಮತ್ತು ತಿಂಗಳಿಗೆ ₹15 ಲಕ್ಷ ಬೇಕಾಗುತ್ತದೆ. ಇದನ್ನೂ ನಾವೇ ಭರಿಸುತ್ತೇವೆ. ಯಾವುದೇ ಆತಂಕ ಇಲ್ಲದೆ ರೋಗಿಗಳು ಚಿಕಿತ್ಸೆ ಪಡೆದು, ಬೇಗ ಗುಣಮುಖರಾಗಬೇಕು ಎಂಬ ಆಶಯ ನಮ್ಮದು' ಎಂದು ಸುರೇಶ್ ಹೇಳಿದರು.

ಆಸ್ಪತ್ರೆಯನ್ನ ಉದ್ಘಾಟಿಸಿದ ವಸತಿ ಸಚಿವ ವಿ. ಸೋಮಣ್ಣ ಮತ್ತು ಗೃಹ ಸಚಿವ ಬಸವರಾಜ ಬೊಮ್ಮಾಯಿ ಅವರು ಆಸ್ಪತ್ರೆ ವಾರ್ಡ್‌ಗಳನ್ನು ವೀಕ್ಷಿಸಿದರು. ಶಾಸಕ ಬೈರತಿ ಸುರೇಶ್, ಕಾಂಗ್ರೆಸ್ ಮುಖಂಡ ಅಬ್ದುಲ್ ವಾಜಿದ್ ಇದ್ದಾರೆ

ಆಮ್ಲಜನಕ ಹಾಸಿಗೆಯ ಮೊದಲ ಆರೈಕೆ ಕೇಂದ್ರ

ಹೆಬ್ಬಾಳ ಕ್ಷೇತ್ರದಲ್ಲಿ ಕೋವಿಡ್ ನಿರ್ವಹಣೆ ಕಾರ್ಯ ಮೊದಲಿನಿಂದಲೂ ಚುರುಕಿನಿಂದ ನಡೆಯುತ್ತಿದೆ. ಹೆಬ್ಬಾಳದ ಪಶು ವೈದ್ಯಕೀಯ ಕಾಲೇಜಿನಲ್ಲಿ ಆಮ್ಲಜನಕ ವ್ಯವಸ್ಥೆ ಹೊಂದಿರುವ ಹಾಸಿಗೆಗಳ ಕೋವಿಡ್ ಆರೈಕೆ ಕೇಂದ್ರ ತೆರೆಯಲಾಗಿದೆ. ರಾಜ್ಯದಲ್ಲಿಯೇ ಈ ವ್ಯವಸ್ಥೆ ಸಹಿತ ಆರಂಭವಾದ ಮೊದಲ ಕೇಂದ್ರವಿದು.

'60 ಹಾಸಿಗೆಗಳ ಈ ಕೇಂದ್ರದಲ್ಲಿ ನೂರಾರು ಮಂದಿ ಗುಣಮುಖರಾಗಿ ಹೋಗಿದ್ದಾರೆ. ಇನ್ನು, ಮೂರು ಲಾರಿ ತರಿಸಿ ಇಡೀ ಕ್ಷೇತ್ರವನ್ನು ಎರಡನೇ ಬಾರಿ ಸ್ಯಾನಿಟೈಸ್ ಮಾಡುತ್ತಿದ್ದೇವೆ. ಅಲ್ಲದೆ, ₹1.5 ಕೋಟಿ ವೆಚ್ಚದಲ್ಲಿ 30 ಸಾವಿರ ಕುಟುಂಬಗಳಿಗೆ 30 ಸಾವಿರ ಆಹಾರ ಕಿಟ್ ವಿತರಿಸಲಾಗಿದೆ' ಎಂದು ಬೈರತಿ ಸುರೇಶ್ ಮಾಹಿತಿ ನೀಡಿದರು.

ಪ್ರತಿ ವಾರ್ಡ್‌ನಲ್ಲಿ ಲಸಿಕೆ ಅಭಿಯಾನ

'ವಿರೋಧಪಕ್ಷದ ನಾಯಕರಾದ ಸಿದ್ದರಾಮಯ್ಯ ಮತ್ತು ನಮ್ಮ ಪಕ್ಷದ ರಾಜ್ಯ ಘಟಕದ ಅಧ್ಯಕ್ಷರಾದ ಡಿ.ಕೆ. ಶಿವಕುಮಾರ್ ಅವರು ಕ್ಷೇತ್ರದಲ್ಲಿ ಆಂಬುಲೆನ್ಸ್ ಕೊಡಬೇಕು ಮತ್ತು ಬಡವರಿಗೆ ಸಹಾಯ ಮಾಡಬೇಕು ಎಂದು ಆದೇಶಿಸಿದ್ದರು. ಅದರಂತೆ ಎಲ್ಲ ಕಾರ್ಯಗಳನ್ನು ಮಾಡುತ್ತಿದ್ದೇನೆ. ಕ್ಷೇತ್ರದಲ್ಲಿ ಬಿಬಿಎಂಪಿಯ ಆಂಬುಲೆನ್ಸ್‌ಗಳು ಸೇವೆ ನೀಡುತ್ತಿವೆ. ಅಲ್ಲದೆ, ಈ ಆಸ್ಪತ್ರೆಗಾಗಿಯೇ ಎರಡು ಆಂಬುಲೆನ್ಸ್‌ಗಳನ್ನು ಒದಗಿಸಿದ್ದೇನೆ' ಎಂದು ಬೈರತಿ ಸುರೇಶ್ ಹೇಳಿದರು.

'ಮುಂದಿನ ಸೋಮವಾರದಿಂದ ಕ್ಷೇತ್ರ ವ್ಯಾಪ್ತಿಯ ಪ್ರತಿ ವಾರ್ಡ್‌ನಲ್ಲಿ ಉಚಿತವಾಗಿ ಲಸಿಕಾ ಅಭಿಯಾನ ನಡೆಸಲಾಗುವುದು. ಅಲ್ಲದೆ, ಮನೆ ಆರೈಕೆಯಲ್ಲಿ ಇರುವವರಿಗೆ ವೈದ್ಯಕೀಯ ಕಿಟ್ ವಿತರಿಸಲಾಗುವುದು. ಎಲ್ಲ ನಾಗರಿಕರಿಗೂ ಮಾಸ್ಕ್ ಹಾಗೂ ಸ್ಯಾನಿಟೈಸರ್ ವಿತರಿಸಲಾಗುವುದು' ಎಂದೂ ಹೇಳಿದರು.

ಬಿಜೆಪಿ ನಾಯಕರಿಂದಲೂ ಮೆಚ್ಚುಗೆ

ಈ ಆಸ್ಪತ್ರೆಯನ್ನು ಗುರುವಾರ ಉದ್ಘಾಟಿಸಿದ ಗೃಹ ಸಚಿವ ಬಸವರಾಜ ಬೊಮ್ಮಾಯಿ ಮತ್ತು ವಸತಿ ಸಚಿವ ವಿ. ಸೋಮಣ್ಣನವರು ಕೂಡ ಸುರೇಶ್ ಅವರ ಕಾರ್ಯವನ್ನು ಮುಕ್ತಕಂಠದಿಂದ ಶ್ಲಾಘಿಸಿದರು.

'ಹೆಬ್ಬಾಳ ಕ್ಷೇತ್ರದಲ್ಲಿ ಇದೊಂದು ಉತ್ತಮ ಕಾರ್ಯವಾಗಿದೆ. ಇದನ್ನೇ ಮಾದರಿಯಾಗಿಟ್ಟುಕೊಂಡು ರಾಜ್ಯದ ಉಳಿದ ಶಾಸಕರೂ ಇಂತಹ ಆಸ್ಪತ್ರೆಯನ್ನು ರೂಪಿಸಲು ಮುಂದಾಗಬೇಕು' ಎಂದು ಸಚಿವದ್ವಯರು ಸಲಹೆ ನೀಡಿದರು.

'ಗುಣಕ್ಕೆ ಮತ್ಸರ ಇಲ್ಲ ಎನ್ನುತ್ತಾರೆ. ಅದರಂತೆ, ಕ್ಷೇತ್ರದಲ್ಲಿ ಕೋವಿಡ್ ನಿರ್ವಹಣೆಗೆ ಬೇಕಾದ ಎಲ್ಲ ಸಹಕಾರವನ್ನು ಬಸವರಾಜ ಬೊಮ್ಮಾಯಿ ಮತ್ತು ವಿ. ಸೋಮಣ್ಣ ಅವರು ನೀಡಿದ್ದಾರೆ' ಎಂದು ಸುರೇಶ್ ಕೃತಜ್ಞತೆ ಸಲ್ಲಿಸಿದರು.

ಎರಡನೇ ಅಲೆಯಲ್ಲೇ ಮಕ್ಕಳಲ್ಲಿ ಹೆಚ್ಚಿದ ಸೋಂಕು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊರೊನಾ ವೈರಸ್‌ನ ಮೂರನೇ ಅಲೆಯಲ್ಲಿ ಚಿಕ್ಕ ಮಕ್ಕಳಲ್ಲಿ ವ್ಯಾಪಕವಾಗಿ ಸೋಂಕು ಕಾಣಿಸಿ-ಕೊಳ್ಳಲಿದೆ ಎಂದು ತಜ್ಞರು ಎಚ್ಚರಿಕೆ ನೀಡಿದ್ದಾರೆ. ಆದರೆ, ಶಿಶುರೋಗ ತಜ್ಞರ ಪ್ರಕಾರ ಎರಡನೇ ಅಲೆಯಲ್ಲೇ ಮಕ್ಕಳಲ್ಲಿ ಸೋಂಕು ಕಾಣಿಸಿಕೊಳ್ಳುತ್ತಿರುವ ಪ್ರಮಾಣದಲ್ಲಿ ಭಾರಿ ಏರಿಕೆಯಾಗಿದೆ.

'ನಗರದಲ್ಲಿ ಅಪಘಾತಗಳು ಸಂಭವಿಸದಂತೆ ನೋಡಿಕೊಳ್ಳಲು ಪ್ರತಿಯೊಬ್ಬರು ಸಂಚಾರ ನಿಯಮಗಳನ್ನು ಪಾಲಿಸಬೇಕು' ಎಂದೂ ಅವರು ಕೋರಿದರು.

ನಿಧನ ವಾರ್ತೆ

ಕೆಂಪಣ್ಣ

ಹೆಸರಘಟ್ಟ: ದೊಡ್ಡ ಬ್ಯಾಲಕೆರೆ ಗ್ರಾಮದ ಬಿಜೆಪಿ ಮುಖಂಡ ಕೆಂಪಣ್ಣ (53) ಕೋವಿಡ್‌ನಿಂದ ಬುಧವಾರ ಮೃತಪಟ್ಟಿದ್ದಾರೆ. ಅವರಿಗೆ ಪತ್ನಿ ಮತ್ತು ಇಬ್ಬರು ಪುತ್ರರು ಇದ್ದಾರೆ.

2006ರಲ್ಲಿ ಕಸಘಟ್ಟ ಗ್ರಾಮ ಪಂಚಾಯಿತಿ ಉಪಾಧ್ಯಕ್ಷರಾಗಿದ್ದರು. ಎರಡು ಬಾರಿ ಗ್ರಾಮ ಪಂಚಾಯಿತಿ ಸದಸ್ಯರಾಗಿದ್ದರು. ಅಂತ್ಯಕ್ರಿಯೆಯು ದೊಡ್ಡಬ್ಯಾಲಕೆರೆ ಗ್ರಾಮದಲ್ಲಿ ಬುಧವಾರ ಸಂಜೆ ನಡೆಯಿತು.

ಕಪ್ಪು ಶಿಲೀಂಧ್ರ: 5 ಫಾರ್ಮಾ ಕಂಪನಿಗಳಿಗೆ ಅನುಮತಿ

ನವದೆಹಲಿ (ಪಿಟಿಐ): ಸಕ್ಕರೆ ಕಾಯಿಲೆ ಇರುವವರಿಗೆ ಹೆಚ್ಚು ಅಪಾಯಕಾರಿಯಾಗಿ ಪರಿಣಮಿಸಿರುವ ಮ್ಯೂಕರ್‌ಮೈಕೊಸಿಸ್ (ಕಪ್ಪು ಶಿಲೀಂಧ್ರ) ಸೋಂಕು ಚಿಕಿತ್ಸೆಗೆ 'ಆ್ಯಂಫೊಟೆರಿಸಿನ್–ಬಿ' ಔಷಧಿಯು ಅವಶ್ಯವಾಗಿದ್ದು, ಅದರ ಲಭ್ಯತೆ ಕೊರತೆಯು ಶೀಘ್ರದಲ್ಲೇ ನಿವಾರಣೆಯಾಗಲಿದೆ ಎಂದು ಕೇಂದ್ರ ಸಚಿವ ಮನ್ಸುಖ್ ಮಾಂಡವಿಯಾ ಹೇಳಿದ್ದಾರೆ.

'ಬ್ಲ್ಯಾಕ್ ಫಂಗಸ್ ಸೋಂಕು ಗುಣಪಡಿಸಲು ಬಳಸಲಾಗುತ್ತಿರುವ ಆ್ಯಂಫೊಟೆರಿಸಿನ್–ಬಿ ಔಷಧಿ ಕೊರತೆಯು ಆದಷ್ಟು ಬೇಗ ಪರಿಹಾರವಾಗಲಿದೆ! ಭಾರತದಲ್ಲಿಯೇ ಆ್ಯಂಫೊಟೆರಿಸಿನ್ ತಯಾರಿಸಲು 5 ಫಾರ್ಮಾ ಕಂಪನಿಗಳಿಗೆ ಮೂರು ದಿನಗಳಲ್ಲಿ ಅನುಮತಿ ದೊರೆತಿದೆ. ಈಗಾಗಲೇ ದೇಶದಲ್ಲಿ 6 ಫಾರ್ಮಾ ಕಂಪನಿಗಳು ಈ ಔಷಧಿಯನ್ನು ತಯಾರಿಸುತ್ತಿವೆ' ಎಂದು ಮಾಂಡವಿಯಾ ಟ್ವೀಟ್ ಮಾಡಿದ್ದಾರೆ.

'ಆರು ಕಂಪನಿಗಳು ಬ್ಲ್ಯಾಕ್ ಫಂಗಸ್ ಚಿಕಿತ್ಸೆಗೆ ಅಗತ್ಯವಿರುವ ಔಷಧಿ ತಯಾರಿಕೆಯನ್ನು ಹೆಚ್ಚಿಸಿವೆ. ಭಾರತದ ಕಂಪನಿಗಳು 6 ಲಕ್ಷ ಆ್ಯಂಫೊಟೆರಿಸಿನ್–ಬಿ ಚುಚ್ಚುಮದ್ದು ಸೀಸೆಗಳನ್ನು ಆಮದು ಮಾಡಿಕೊಳ್ಳಲು ಬೇಡಿಕೆ ಇಟ್ಟಿವೆ' ಎಂದು ರಾಸಾಯನಿಕ ಮತ್ತು ರಸಗೊಬ್ಬರ ಖಾತೆ ರಾಜ್ಯ ಸಚಿವ ಮಾಂಡವಿಯಾ ತಿಳಿಸಿದ್ದಾರೆ.

ಜನರ ದಾರಿ ತಪ್ಪಿಸಿದ ಕಾಂಗ್ರೆಸ್ ಅಪಪ್ರಚಾರ: ತೇಜಸ್ವಿ ಸೂರ್ಯ

ಬೆಂಗಳೂರು: 'ಕೋವಿಡ್ ಲಸಿಕೆ ವಿರುದ್ಧ ಕಾಂಗ್ರೆಸ್ ನಡೆಸಿದ ಅಪಪ್ರಚಾರ ಜನರ ದಾರಿ ತಪ್ಪಿಸಿದೆ' ಎಂದು ಸಂಸದ ತೇಜಸ್ವಿ ಸೂರ್ಯ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದ ಜನಪ್ರತಿನಿಧಿಗಳ ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 'ಕೋವಿಡ್ ಎರಡನೇ ಅಲೆ ಆರಂಭವಾಗುವ ವೇಳೆ ಎಲ್ಲರಿಗೂ ಲಸಿಕೆ ನೀಡಲು ಕೇಂದ್ರ ಸರ್ಕಾರ ತಯಾರಿ ಮಾಡುತ್ತಿದ್ದರೆ, ಕಾಂಗ್ರೆಸ್ ಅಪಪ್ರಚಾರದ ಮೂಲಕ ಜನರು ಲಸಿಕೆ ಪಡೆಯಲು ಮುಂದಾಗದಂತೆ ಪ್ರಯತ್ನ ನಡೆಸಿತು. ಇದರಿಂದ ದೊಡ್ಡ ಹಿನ್ನಡೆ ಆಯಿತು' ಎಂದರು.

'ಮಾರ್ಚ್ 17 ರಂದು ಪ್ರಧಾನಿ ಮೋದಿ ಎಲ್ಲರಿಗೂ ಎರಡನೇ ಅಲೆಯ ಸೂಚನೆ ನೀಡಿ ಅದಕ್ಕೆ ಸೂಕ್ತ ತಯಾರಿ ನಡೆಸಿಕೊಳ್ಳಲು ತಿಳಿಸಿದ್ದರು. ಆಗ ನಮ್ಮ ಬಳಿ ಇದ್ದ ಏಕೈಕ ಅಸ್ತ್ರವೆಂದರೆ ಕೋವಿಡ್ ಲಸಿಕೆ. ಆಗ ದೊಡ್ಡ ಪ್ರಮಾಣದಲ್ಲಿ ಲಸಿಕೆ ಇದ್ದದ್ದು ಭಾರತದ ಬಳಿ ಮಾತ್ರ, ಬೇರೆ ಯಾವ ದೇಶದ ಬಳಿಯೂ ಲಸಿಕೆ ಇರಲಿಲ್ಲ' ಎಂದರು.

'ಮೊದಲ ಅಲೆಯ ಆರಂಭದಲ್ಲಿ ವೈದ್ಯರು, ನರ್ಸ್‌ಗಳಿಗೆ ಲಸಿಕೆ ಇರಲಿಲ್ಲ. ಎರಡನೇ ಅಲೆ ಆರಂಭವಾಗುವ ವೇಳೆಗೆ ಲಸಿಕೆ ಸಿಕ್ಕಿತ್ತು. ಕೋವಿಡ್ ವಾರಿಯರ್‌ಗಳಿಗೆ, ಹಿರಿಯ ನಾಗರಿಕರಿಗೆ ಆದ್ಯತೆ ಮೇರೆಗೆ ಲಸಿಕೆ ನೀಡುವ ವ್ಯವಸ್ಥೆ ಮಾಡಲಾಗಿತ್ತು' ಎಂದರು.

'ಲಸಿಕೆ ಬಗ್ಗೆ ಕಾಂಗ್ರೆಸ್ ಆರಂಭದಲ್ಲೇ ಸಂಶಯದ ಬೀಜ ಬಿತ್ತಲು ವ್ಯವಸ್ಥಿತ ಹುನ್ನಾರ ನಡೆಸಿತು. ಲಸಿಕೆಯ ಸಾಮರ್ಥ್ಯದ ಬಗ್ಗೆ ಪ್ರಶ್ನೆ ಮಾಡಿದ್ದೂ ಅಲ್ಲದೆ, ಬಿಜೆಪಿ ಲಸಿಕೆ, ಮೋದಿ ಲಸಿಕೆ ಎಂದು ಹೆಸರಿಸಿ ಬೇಜವಾಬ್ದಾರಿಯಿಂದ ನಡೆದುಕೊಂಡಿತು. ಯು.ಟಿ.ಖಾದರ್ ಸೇರಿ ಹಲವು ನಾಯಕರು ಲಸಿಕೆ ಬಗ್ಗೆ ಟೀಕೆ ಮಾಡುತ್ತಲೇ, ಇನ್ನೊಂದು ಕಡೆ ಲಸಿಕೆ ಹಾಕಿಸಿಕೊಂಡರು. ಇವರು ಆಷಾಢಭೂತಿಗಳಲ್ಲದೇ ಇನ್ನೇನು' ಎಂದು ಪ್ರಶ್ನಿಸಿದರು.

ಗೋಕರ್ಣ ದೇವಾಲಯ: ಆಡಳಿತ ಹಸ್ತಾಂತರಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಿವೃತ್ತ ನ್ಯಾಯಮೂರ್ತಿ ಬಿ.ಎನ್. ಶ್ರೀಕೃಷ್ಣ ನೇತೃತ್ವದ ಸಮಿತಿಗೆ ಗೋಕರ್ಣದ ಮಹಾಬಲೇಶ್ವರ ದೇವಾಲಯದ ಆಡಳಿತವನ್ನು ರಾಮಚಂದ್ರಾಪುರ ಮಠದ ರಾಘವೇಶ್ವರಭಾರತಿ ಸ್ವಾಮೀಜಿ ಕೂಡಲೇ ಹಸ್ತಾಂತರಿಸಬೇಕು' ಎಂದು ಅಖಿಲ ಹವ್ಯಕ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ತಾರಾನಾಥ ಉಳ್ಳೂರ್ ಆಗ್ರಹಿಸಿದ್ದಾರೆ.

'ನೂತನ ಸಮಿತಿಯು ಆಡಳಿತ ವಹಿಸಿಕೊಂಡ ಬಳಿಕ, ಈ ಹಿಂದಿನ ಆಡಳಿತಾವಧಿಯ ಅವ್ಯವಹಾರಗಳನ್ನು ಬಯಲಿಗೆಳೆಯಬೇಕು. ಕ್ಷೇತ್ರದ ದೇವರಾದ ಮಹಾಬಲೇಶ್ವರನಿಗೆ ಸೇರಬೇಕಾಗಿರುವ ಹಣ, ಆಸ್ತಿಯನ್ನು ವಾಪಸ್ ಪಡೆಯಬೇಕು. ಹಾಗೆಯೇ, ಭಕ್ತಾದಿಗಳಿಗೆ ಭೋಜನ ವ್ಯವಸ್ಥೆಯನ್ನು ಮುಂದುವರಿಸಬೇಕು' ಎಂದು ಒತ್ತಾಯಿಸಿದ್ದಾರೆ.

ಆರ್‌ಎಸ್‌ಎಸ್: 13 ಕಡೆ ಕೋವಿಡ್ ಆರೈಕೆ ಕೇಂದ್ರ

ಬೆಂಗಳೂರು: ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್‌ಎಸ್‌ಎಸ್) ಮತ್ತು ಸೇವಾ ಭಾರತಿ ಕರ್ನಾಟಕವು ಕೋವಿಡ್ ಸಂಕಷ್ಟದ ಸಮಯದಲ್ಲಿ ಸಂಕಷ್ಟದಲ್ಲಿರುವವರಿಗೆ ನೆರವಾಗಿವೆ.

ರಾಜ್ಯದ ಒಟ್ಟು 169 ಕೇಂದ್ರಗಳಲ್ಲಿ ಸಹಾಯವಾಣಿ ತೆರೆದು ಅವುಗಳ ಮೂಲಕ ಜನರಿಗೆ ಅಗತ್ಯ ಸೇವೆಗಳನ್ನು ಒದಗಿಸುತ್ತಿವೆ. ಒಟ್ಟು 346 ಸ್ಥಾನಗಳಲ್ಲಿ 10,771 ಮಂದಿಗೆ ಲಸಿಕೆ ನೀಡಲು ಸಹಕರಿಸಲಾಗಿದ್ದು, 253 ಇತರ ಕೇಂದ್ರಗಳಲ್ಲಿ ಲಸಿಕೆ ನೀಡುವ ಪ್ರಕ್ರಿಯೆಗೆ ಸಹಭಾಗಿತ್ವ ವಹಿಸಿವೆ.

ಇತರ ಕಾರ್ಯಗಳು:

- 13 ನಗರಗಳಲ್ಲಿ ಕೋವಿಡ್ ಆರೈಕೆ ಕೇಂದ್ರಗಳನ್ನು ಪ್ರಾರಂಭಿಸಿ 1,121 ಹಾಸಿಗೆ ವ್ಯವಸ್ಥೆ ಮಾಡಲಾಗಿದೆ. ಇಲ್ಲಿ ದಾಖಲಾದವರ ಪೈಕಿ ಒಟ್ಟು 650 ಮಂದಿ ಕೋವಿಡ್‌ನಿಂದ ಗುಣಮುಖರಾಗಿದ್ದಾರೆ.
- ಎರಡು ನಗರಗಳಲ್ಲಿ ಕೋವಿಡ್ ಆರೈಕೆ ಕೇಂದ್ರಗಳನ್ನು ಆರಂಭಿಸಿ, ಆಮ್ಲಜನಕ ಸೌಲಭ್ಯವಿರುವ 50 ಹಾಗೂ ಇತರ 110 ಹಾಸಿಗೆಗಳ ವ್ಯವಸ್ಥೆ ಮಾಡಲಾಗಿದೆ. ಈ ಕೇಂದ್ರಗಳಿಗೆ ದಾಖಲಾಗಿದ್ದವರ ಪೈಕಿ 130 ಮಂದಿ ಕೋವಿಡ್‌ನಿಂದ ಚೇತರಿಸಿಕೊಂಡಿದ್ದಾರೆ.
- 66 ನಗರಗಳ ಸರ್ಕಾರಿ ಕೋವಿಡ್ ಆರೈಕೆ ಕೇಂದ್ರಗಳಲ್ಲಿ 319 ಕಾರ್ಯಕರ್ತರು ವಿವಿಧ ಸೇವಾ ಚಟುವಟಿಕೆಗಳಲ್ಲಿ ಪಾಲ್ಗೊಂಡು ಸಹಕಾರ ನೀಡಿದ್ದಾರೆ.
- ಆನ್‌ಲೈನ್ ವೈದ್ಯ ಸಹಾಯವಾಣಿಯ ಮೂಲಕ 134 ಸ್ಥಾನಗಳಲ್ಲಿ 2,817 ಮಂದಿಗೆ ಸಲಹೆ ಮತ್ತು ನೆರವು ನೀಡಲಾಗಿದೆ. ಈ ಕಾರ್ಯಕ್ಕೆ 378 ವೈದ್ಯರು ಕೈಜೋಡಿಸಿದ್ದಾರೆ.
- 64 ಕಡೆಗಳಲ್ಲಿ 26,576 ಮಂದಿಗೆ ಆಹಾರದ ಕಿಟ್ ವಿತರಣೆ.
- ರಾಜ್ಯದಾದ್ಯಂತ 105 ಕಡೆಗಳಲ್ಲಿ ರಕ್ತದಾನ ಶಿಬಿರ ಆಯೋಜಿಸಿ 9,388 ಯೂನಿಟ್ ರಕ್ತ ಸಂಗ್ರಹ.
- 27 ಕಡೆಗಳಲ್ಲಿ ಪ್ಲಾಸ್ಮಾ ದಾನದ ವ್ಯವಸ್ಥೆ ಮಾಡಲಾಗಿದೆ. 151 ಮಂದಿ ಇದರ ಪ್ರಯೋಜನ ಪಡೆದಿದ್ದಾರೆ.
- ರಾಜ್ಯದ 198 ಕಡೆ 6,895 ಮಂದಿಗೆ ಆಯುರ್ವೇದಿಕ್ ಕಷಾಯ ವಿತರಣೆ.
- ಮಾನಸಿಕ ಆರೋಗ್ಯ ಮತ್ತು ಆತ್ಮಸ್ಥೈರ್ಯ ಹೆಚ್ಚಿಸಲು 87 ಕಡೆ ಆಪ್ತ ಸಲಹಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. 3,325 ಮಂದಿ ಇದರ ಪ್ರಯೋಜನ ಪಡೆದಿದ್ದಾರೆ.
- ರಾಜ್ಯದಾದ್ಯಂತ 158 ಪ್ರದೇಶಗಳಲ್ಲಿ ಸಂಘದ ಸ್ವಯಂಸೇವಕರು ಕೋವಿಡ್‌ನಿಂದ ಮೃತಪಟ್ಟವರ ಅಂತ್ಯಕ್ರಿಯೆ ನಿರ್ವಹಿಸಿದ್ದಾರೆ.
- 93 ಸ್ಥಾನಗಳಲ್ಲಿ ಮೃತದೇಹ ಸಾಗಿಸಲು ಆಂಬುಲೆನ್ಸ್ ವ್ಯವಸ್ಥೆ.

ಹೆಚ್ಚಿನ ಮಾಹಿತಿಗೆ ಪ್ರವೀಣ್ ಪಟವರ್ಧನ್ 9845342972, ರಾಧಾಕೃಷ್ಣ ಹೊಳ್ಳ 9731264009.

ತಾಜಾ ಮಾಹಿತಿ ನೀಡುವ ಡ್ಯಾಷ್ ಬೋರ್ಡ್

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯ ಕೋವಿಡ್ ಆಸ್ಪತ್ರೆಗಳಲ್ಲಿ ಹಾಸಿಗೆ ಹಂಚಿಕೆ, ವಲಯವಾರು ರೋಗಿಗಳ ನೋಂದಣಿ, ಆಸ್ಪತ್ರೆಯಿಂದ ಬಿಡುಗಡೆ ಕುರಿತು ತಾಜಾ ಮಾಹಿತಿ ನೀಡುವ (ರಿಯಲ್ ಟೈಮ್) ಡ್ಯಾಷ್ ಬೋರ್ಡ್ ಆರಂಭಿಸಲಾಗಿದೆ.

ಈ ವ್ಯವಸ್ಥೆಯಿಂದ ಹಾಸಿಗೆ ಹಂಚಿಕೆ ಸೇರಿದಂತೆ ಎಲ್ಲ ವಿಷಯಗಳಲ್ಲೂ ಪಾರದರ್ಶಕತೆ ಕಾಣಬಹುದು. ಹಾಸಿಗೆ ಹಂಚಿಕೆಯಲ್ಲಿ ಸಮಸ್ಯೆಗಳಿಗೆ ಪರಿಹಾರ ಕಂಡು ಹಿಡಿಯುವ ನಿಟ್ಟಿನಲ್ಲಿ ಬಿಬಿಎಂಪಿ ಅಧಿಕಾರಿಗಳು ಮತ್ತು ತಾಂತ್ರಿಕ ತಂಡದ ಸಹಯೋಗದೊಂದಿಗೆ ಕೈಗೊಂಡ ಸುಧಾರಣಾ ಕ್ರಮದ ಭಾಗವಾಗಿ ಡ್ಯಾಷ್ ಬೋರ್ಡ್ ಅಭಿವೃದ್ಧಿಪಡಿಸಲಾಗಿದೆ ಎಂದು ಸಂಸದ ತೇಜಸ್ವಿ ಸೂರ್ಯ ತಿಳಿಸಿದ್ದಾರೆ.

ಈಗ ವೆಬ್‌ಸೈಟ್‌ನಲ್ಲಿ ಪ್ರತಿ ಆಸ್ಪತ್ರೆಯಲ್ಲಿರುವ ಹಾಸಿಗೆಗಳ ಸಂಖ್ಯೆ, ವಿವಿಧ ಆಸ್ಪತ್ರೆಗಳಲ್ಲಿರುವ ಹಾಸಿಗೆಗಳ ಲಭ್ಯತೆ ಪ್ರಮಾಣ, ಆಸ್ಪತ್ರೆಗೆ ಪ್ರವೇಶ ಪಡೆದಿರುವ ರೋಗಿಗಳ ವಿವರವನ್ನು ನೋಡಬಹುದು. ಡ್ಯಾಷ್ ಬೋರ್ಡ್‌ನಲ್ಲಿ ಏಳು ದಿನಗಳ ಅವಧಿಗೆ ಹಾಸಿಗೆ ಹಂಚಿಕೆಯಲ್ಲಿ ಆಗುವ ಬದಲಾವಣೆ ಕುರಿತು ಮಾಹಿತಿ ಪಡೆಯಬಹುದು ಎಂದಿದ್ದಾರೆ.

ಹೊಸ ಡ್ಯಾಷ್ ಬೋರ್ಡ್ ಅಭಿವೃದ್ಧಿಪಡಿಸಲು ಅಧಿಕಾರಿಗಳು ಮತ್ತು ತಾಂತ್ರಿಕ ತಂಡದ ಆರ್.ಕೆ.ಮಿಶ್ರಾ ಮತ್ತು ಶರದ್ ಶರ್ಮ ನೆರವಾಗಿದ್ದಾರೆ ಎಂದರು.

ಹಾಸಿಗೆ ಲಭ್ಯತೆ ನಂತರ ನೇರವಾಗಿ ರೋಗಿಗಳಿಗೆ ಎಸ್‌ಎಂಎಸ್ ರವಾನೆ, ಎರಡು ಹಂತದ ದೃಢೀಕೃತ ಲಾಗಿನ್ ವ್ಯವಸ್ಥೆ ಜಾರಿಗೊಳಿಸಲಾಗಿದೆ. ಡಿಜಿಟಲ್ ಸರದಿ ಪದ್ಧತಿಯನ್ನು ವಾರದಲ್ಲಿ ಜಾರಿಗೆ ತರಲಾಗುವುದು ಎಂದರು.

ಸಾರ್ವಜನಿಕರು https://apps.bbmpgov.in/covid19/index.html ಮೂಲಕ ಡ್ಯಾಷ್ ಬೋರ್ಡ್ ವೀಕ್ಷಿಸಬಹುದು.

ಚಿತ್ರಾವಳಿ

ಅಟ್ಟಿಕಾ ಗೋಲ್ಡ್ ಸಂಸ್ಥೆಯು ಕಾಂಗ್ರೆಸ್ ಪಕ್ಷದ ಮೂಲಕ ಕೊರೊನಾ ಸೋಂಕಿತರ ನೆರವಿಗೆ ₹ 25 ಲಕ್ಷ ಮೌಲ್ಯದ 30 ಆಮ್ಲಜನಕ ಸಾಂದ್ರಕ ವಿತರಿಸುವ ಕಾರ್ಯಕ್ರಮಕ್ಕೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮತ್ತು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಗುರುವಾರ ಚಾಲನೆ ನೀಡಿದರು. ಕಾಂಗ್ರೆಸ್ ಮುಖಂಡ ಕೆ.ಎಚ್. ಮುನಿಯಪ್ಪ, ಶಾಸಕರಾದ ಎನ್.ಎ. ಹ್ಯಾರಿಸ್, ಜಮೀರ್ ಅಹಮದ್ ಖಾನ್, ಸಂಸ್ಥೆ ಮಾಲೀಕ ಬಾಬು ಇದ್ದರು.

ಕೋವಿಡ್‌ನಿಂದ ಮೃತಪಟ್ಟವರ ಕುಟುಂಬಗಳಿಗೆ ಉಪೇಂದ್ರ ಚೆಕ್‌ಗಳನ್ನು ಹಸ್ತಾಂತರಿಸಿದರು. ಎಸ್.ಟಿ. ಸೋಮಶೇಖರ್, ಚಂದ್ರಶೇಖರನಾಥ ಸ್ವಾಮೀಜಿ ಇದ್ದರು.

'ಪುಸ್ತಕ ಮಳಿಗೆ ತೆರೆಯಲು ಅವಕಾಶ ನೀಡಿ'

ಬೆಂಗಳೂರು: 'ಪುಸ್ತಕ ಓದುವುದರಿಂದ ಆತ್ಮವಿಶ್ವಾಸ ವೃದ್ಧಿಸಲಿದೆ. ಹೀಗಾಗಿ ಇವುಗಳನ್ನು ಅಗತ್ಯ ಸೇವೆಗಳ ಪಟ್ಟಿಗೆ ಸೇರಿಸಬೇಕು. ಲಾಕ್‌ಡೌನ್ ಅವಧಿಯಲ್ಲಿ ಪುಸ್ತಕ ಮಳಿಗೆ ತೆರೆಯಲು ಅವಕಾಶ ನೀಡಲೇಬೇಕು' ಎಂದು ಪುಸ್ತಕ ಪ್ರಕಾಶಕರು, ಲೇಖಕರು ಹಾಗೂ ಸಾಹಿತಿಗಳು ರಾಜ್ಯ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಬಹುರೂಪಿ ಬುಕ್ ಹಬ್ ಬುಧವಾರ ಆಯೋಜಿಸಿದ್ದ 'ಪುಸ್ತಕವೇಕೆ ಅಗತ್ಯ ವಸ್ತುವಲ್ಲ? ಮದ್ಯದಂಗಡಿಯನ್ನು ಅಗತ್ಯ ಎಂದು ಪರಿಗಣಿಸಿರುವ ಸರ್ಕಾರ, ಪುಸ್ತಕದ ಅಂಗಡಿಗಳ ಬಾಗಿಲು ಮುಚ್ಚಿಸಿದ್ದು ಸರಿಯೇ?' ವಿಷಯದ ಕುರಿತ ಆನ್‌ಲೈನ್ ಸಂವಾದದಲ್ಲಿ ಒಕ್ಕೊರಲಿನ ಅಭಿಪ್ರಾಯ ವ್ಯಕ್ತವಾಯಿತು.

ನವಕರ್ನಾಟಕ ಬುಕ್ ಸ್ಟೋರ್‌ನ ರಮೇಶ್ ಉಡುಪ, 'ಮದ್ಯ ಮಾರಾಟದಿಂದ ರಾಜ್ಯ ಸರ್ಕಾರಕ್ಕೆ ಕೋಟ್ಯಂತರ ರೂಪಾಯಿ ಆದಾಯ ಬರುತ್ತದೆ. ಹೀಗಾಗಿ ಅನುಮತಿ ನೀಡಿದೆ. ಪುಸ್ತಕ ಮಳಿಗೆ ತೆರೆಯಲು ಅನುಮತಿ ನೀಡುವಂತೆ ಮನವಿ ಮಾಡಿದರೂ ಪ್ರಯೋಜನವಾಗಿಲ್ಲ' ಎಂದರು.

ಸಪ್ನಾ ಬುಕ್ ಹೌಸ್‌ನ ಆರ್.ದೊಡ್ಡೇಗೌಡ, 'ಲಾಕ್‌ಡೌನ್‌ನಿಂದಾಗಿ ಜನ ನಾಲ್ಕು ಗೋಡೆಗಳ ನಡುವೆ ಇರಬೇಕಾಗಿದೆ. ಇಂತಹ ಸಮಯದಲ್ಲಿ ಪುಸ್ತಕ ಖರೀದಿ ಹಾಗೂ ಗ್ರಂಥಾಲಯಗಳಿಂದ ಪುಸ್ತಕಗಳನ್ನು ಮನೆಗೆ ಒಯ್ಯಲು ಅವಕಾಶ ನೀಡಬೇಕು' ಎಂದು ಹೇಳಿದರು.

ಅಂಕಿತ ಪುಸ್ತಕ ಪ್ರಕಾಶನದ ಪ್ರಕಾಶ್ ಕಂಬತ್ತಳ್ಳಿ, 'ಪುಸ್ತಕಗಳ ಮಾರಾಟ ಸಂಪೂರ್ಣವಾಗಿ ಸ್ಥಗಿತಗೊಂಡಿದೆ. ಇದರಿಂದ ಪ್ರಕಾಶಕರು ಸಂಕಷ್ಟಕ್ಕೆ ಸಿಲುಕಿದ್ದಾರೆ. ದೆಹಲಿ ಸರ್ಕಾರ ಪುಸ್ತಕಗಳನ್ನು ಅಗತ್ಯ ಸೇವೆ ಎಂದು ಪರಿಗಣಿಸಿದೆ. ಈ ದಿಶೆಯಲ್ಲಿ ನಮ್ಮ ಸರ್ಕಾರವೂ ಚಿಂತಿಸಬೇಕು' ಎಂದರು.

ಆಕೃತಿ ಬುಕ್ ಸ್ಟೋರ್‌ನ ಡಿ.ಎನ್.ಗುರುಪ್ರಸಾದ್ 'ಕೋವಿಡ್‌ನಿಂದಾಗಿ ಮಕ್ಕಳು ಹೆಚ್ಚು ಒತ್ತಡಕ್ಕೊಳಗಾಗುತ್ತಿದ್ದಾರೆ. ಹೀಗಾಗಿ ಪೋಷಕರಿಂದ ಪುಸ್ತಕಗಳಿಗೆ ಬೇಡಿಕೆ ಹೆಚ್ಚಿದೆ. ಮಕ್ಕಳ ಹಿತವನ್ನು ಸರ್ಕಾರ ಗಮನದಲ್ಲಿಟ್ಟುಕೊಳ್ಳಬೇಕು' ಎಂದು ಹೇಳಿದರು.

ಮನೋವೈದ್ಯ ಸಿ.ಆರ್.ಚಂದ್ರಶೇಖರ್ 'ಲಾಕ್‌ಡೌನ್ ಅವಧಿಯಲ್ಲಿ ಮಕ್ಕಳಲ್ಲಿ ಒಂಟಿತನ ಕಾಡುತ್ತಿದೆ. ಮೊಬೈಲ್ ಬಳಕೆಯ ಗೀಳು ಹೆಚ್ಚಿದೆ. ಮಾನಸಿಕ ಸಮಸ್ಯೆಗಳಿಗೆ 'ಬುಕ್ ಥೆರಪಿ' ಅಗತ್ಯ' ಎಂದು ತಿಳಿಸಿದರು.

ಹಲವೆಡೆ ಜೋರು ಮಳೆ

ಬೆಂಗಳೂರು: ನಗರದಲ್ಲಿ ಗುರುವಾರವೂ ಹಲವೆಡೆ ಮಳೆ ಸುರಿಯಿತು.

ಬೆಳಿಗ್ಗೆಯಿಂದಲೂ ಮೋಡ ಕವಿದ ವಾತಾವರಣವಿತ್ತು. ಮಧ್ಯಾಹ್ನ ಕೆಲ ಭಾಗಗಳಲ್ಲಿ ಮಳೆ ಸುರಿಯಿತು. ಸಂಜೆಯಿಂದ ರಾತ್ರಿಯವರೆಗೂ ಬಹುತೇಕ ಪ್ರದೇಶಗಳಲ್ಲಿ ಮಳೆ ಇತ್ತು.

ರಾಜಾಜಿನಗರ, ಬಸವೇಶ್ವರನಗರ, ಮಲ್ಲೇಶ್ವರ, ವಿಜಯನಗರ, ಮೆಜೆಸ್ಟಿಕ್, ಗಾಂಧಿನಗರ, ಕಾರ್ಪೊರೇಷನ್ ವೃತ್ತ, ಚಾಮರಾಜಪೇಟೆ, ಮಹಾಲಕ್ಷ್ಮಿ ಲೇಔಟ್, ವಿದ್ಯಾರಣ್ಯಪುರ, ಯಶವಂತಪುರ, ಪೀಣ್ಯ, ಜಾಲಹಳ್ಳಿ, ಬನಶಂಕರಿ, ಕತ್ರಿಗುಪ್ಪೆ, ಹೆಣ್ಣೂರು, ನಾಗವಾರ, ಬಾಣಸವಾಡಿ, ಕೆಂಗೇರಿ, ರಾಜರಾಜೇಶ್ವರಿನಗರ ಹಾಗೂ ಸುತ್ತಮುತ್ತ ಪ್ರದೇಶಗಳಲ್ಲಿ ಮಳೆ ಅಬ್ಬರ ಜೋರಾಗಿತ್ತು.

ರಾಜಕಾಲುವೆ ಒತ್ತುವರಿ ತೆರವಿಗೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಮಳೆಗಾಲ ಪೂರ್ವ ಸಿದ್ಧತೆಗಳ ಕುರಿತು ಬಿಬಿಎಂಪಿ ಆಯುಕ್ತ ಗೌರವ್ ಗುಪ್ತ ಗುರುವಾರ ಪರಿಶೀಲನೆ ನಡೆಸಿದರು.

ಗಾಳಿ ಆಂಜನೇಯ ಸ್ವಾಮಿ ದೇವಸ್ಥಾನದ ಸಮೀಪ ರಾಜಕಾಲುವೆ, ನಾಯಂಡಹಳ್ಳಿ ಜಂಕ್ಷನ್ ಹಾಗೂ ದತ್ತಾತ್ರೇಯ ಬಡಾವಣೆ ಸೇರಿದಂತೆ ವಿವಿಧೆಡೆ ಭೇಟಿ ನೀಡಿದರು.

'ರಾಜಕಾಲುವೆಗಳ ಸ್ವಚ್ಛತೆಗೆ ಆದ್ಯತೆ ನೀಡಿ. ಹೂಳು ತೆಗೆಯಿರಿ' ಎಂದು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

'ಗಾಳಿ ಆಂಜನೇಯ ಸ್ವಾಮಿ ದೇವಸ್ಥಾನದ ಸಮೀಪದ ಮಳೆಯಿಂದ ನೀರು ನಿಲ್ಲದಂತೆ ಎಚ್ಚರಿಕೆ ವಹಿಸಬೇಕು' ಎಂದೂ ಹೇಳಿದರು.

ರಾಜಕಾಲುವೆಗಳ ಸ್ಥಿತಿಗತಿಯನ್ನು ಗೌರವ್ ಗುಪ್ತ ಪರಿಶೀಲಿಸಿದರು. ಬಿಬಿಎಂಪಿ ಅಧಿಕಾರಿಗಳು ಇದ್ದಾರೆ

ಪಾಲಿಕೆಯ ಎಂಜಿನಿಯರಿಂಗ್ ವಿಭಾಗದ ಮುಖ್ಯಸ್ಥ ಸಿದ್ದೇಗೌಡ, 'ದೇವಸ್ಥಾನದ ಬಳಿ ಎರಡು ಹಾಗೂ ದೇವಸ್ಥಾನದ ಹಿಂಭಾಗದಲ್ಲಿ ಒಂದು ಸೇರಿದಂತೆ ಈ ವ್ಯಾಪ್ತಿಯಲ್ಲಿ ಒಟ್ಟು ಮೂರು ರಾಜಕಾಲುವೆ ಮಾರ್ಗಗಳು ಇವೆ. ಈ ಕಾಲುವೆಗಳಲ್ಲಿ ನೀರು ನಿಲ್ಲದಂತೆ ಎಚ್ಚರಿಕೆ ವಹಿಸಲಾಗಿದೆ' ಎಂದು ಉತ್ತರಿಸಿದರು.

'ಈ ಭಾಗದಲ್ಲಿ ನೀರು ಸರಾಗವಾಗಿ ಹರಿದು ಹೋಗಲು, ಪ್ರತ್ಯೇಕ ಬಾಕ್ಸ್‌ಗಳನ್ನು ನಿರ್ಮಿಸಲಾಗಿದೆ. ರಾಜಕಾಲುವೆ ಸುತ್ತಲೂ ತಡೆಗೋಡೆ ನಿರ್ಮಿಸಲಾಗಿದೆ' ಎಂದು ಅವರು ತಿಳಿಸಿದರು.

ಅನಧಿಕೃತ ಕಟ್ಟಡ ತೆರವಿಗೆ ಸೂಚನೆ

ಗಾಳಿ ಆಂಜನೇಯ ಸ್ವಾಮಿ ದೇವಸ್ಥಾನ ವ್ಯಾಪ್ತಿಯಲ್ಲಿರುವ ಕವಿಕಾ ಕಂಪನಿ ಸಮೀಪದ ರಾಜಕಾಲುವೆ ತಡೆಗೋಡೆಗೆ ಹೊಂದಿಕೊಂಡಂತೆ ಕಟ್ಟಡ ನಿರ್ಮಾಣ ಮಾಡಲಾಗಿದ್ದು, ಈ ಅನಧಿಕೃತ ಕಟ್ಟಡವನ್ನು ಕೂಡಲೇ ತೆರವು ಮಾಡುವಂತೆ ಬಿಬಿಎಂಪಿ ಅಧಿಕಾರಿಗಳಿಗೆ ಗೌರವ್ ಗುಪ್ತ ಸೂಚಿಸಿದರು. ಅದೇ ರೀತಿ ಜೆ.ಸಿ. ರಸ್ತೆಯ ರಾಜಕಾಲುವೆಯ ಎರಡು ಬದಿಯಲ್ಲಿರುವ ಅನಧಿಕೃತ ಕಟ್ಟಡಗಳನ್ನು ತೆರವುಗೊಳಿಸುವಂತೆ ನಿರ್ದೇಶನ ನೀಡಿದರು.

ದಿನದ ಲಾಭ: ಸಾವಿರಾರು ಮಂದಿಗೆ ವಂಚನೆ

ಬೆಂಗಳೂರು: ದಿನದ ಲಾಭದ ಆಮಿಷವೊಡ್ಡಿ ಸಾವಿರಾರು ಜನರಿಂದ ಲಕ್ಷಾಂತರ ರೂಪಾಯಿ ಹಣ ಹೂಡಿಕೆ ಮಾಡಿಸಿಕೊಂಡು ವಂಚಿಸಲಾಗಿದ್ದು, ಈ ಸಂಬಂಧ ಉತ್ತರ ವಿಭಾಗ ಸೈಬರ್ ಕ್ರೈಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಬೆನ್ಸನ್ ಟೌನ್ ನಿವಾಸಿಯಾದ 47 ವರ್ಷದ ಮಹಿಳೆಯೊಬ್ಬರು ವಂಚನೆ ಬಗ್ಗೆ ದೂರು ನೀಡಿದ್ದಾರೆ. 'ಪವರ್ ಬ್ಯಾಂಕ್' ಆ್ಯಪ್ ನಿರ್ವಹಣೆ ಮಾಡುತ್ತಿದ್ದ ಯುಪಿಪಿಎಲ್‌ಎ ಟೆಕ್ನಾಲಜಿ ಕಂಪನಿ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ರಾಜ್ಯದಾದ್ಯಂತ ಸಾವಿರಾರು ಮಂದಿ ಹಣ ಹೂಡಿಕೆ ಮಾಡಿರುವ ಮಾಹಿತಿ ಇದೆ. ಮಹಿಳೆ ಮಾತ್ರ ಸದ್ಯ ದೂರು ನೀಡಿದ್ದು, ಉಳಿದಂತೆ ಬೇರೆ ಯಾವೆಲ್ಲ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ ಎಂಬುದನ್ನು ಪರಿಶೀಲಿಸಲಾಗುತ್ತಿದೆ' ಎಂದೂ ಮೂಲಗಳು ತಿಳಿಸಿವೆ.

'ಹಲವು ವರ್ಷಗಳ ಹಿಂದೆಯೇ ಪವರ್ ಬ್ಯಾಂಕ್ ಆ್ಯಪ್ ಬಿಡುಗಡೆ ಮಾಡಲಾಗಿದೆ. ಆ್ಯಪ್ ಮೂಲಕ ಹಣ ಸಂಗ್ರಹಿಸಿ ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡಿ ಲಾಭ ಗಳಿಸುವುದು ಕಂಪನಿಯ ಉದ್ದೇಶ. ಸಾರ್ವಜನಿಕರು ಆ್ಯಪ್ ಮೂಲಕ ಹೂಡಿಕೆ ಮಾಡಿದರೆ, ದಿನದ ಲಾಭದ ಲೆಕ್ಕದಲ್ಲಿ ಹಣ ವಾಪಸು ನೀಡುವುದಾಗಿ ಕಂಪನಿ ಭರವಸೆ ನೀಡಿತ್ತು' ಎಂದೂ ಮೂಲಗಳು ಹೇಳಿವೆ.

ಕೋವಿಡ್: ಮೃತರ ಕುಟುಂಬಕ್ಕೆ ₹ 1 ಲಕ್ಷ ಪರಿಹಾರ

ಬೆಂಗಳೂರು: 'ಕೋವಿಡ್ ಕಾಯಿಲೆಯಿಂದಾಗಿ ಜನರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಇಂತಹ ಸಂದರ್ಭದಲ್ಲಿ ಸಚಿವ ಎಸ್.ಟಿ. ಸೋಮಶೇಖರ್ ಅವರು ನೀಡುತ್ತಿರುವ ನೆರವು ಎಲ್ಲರಿಗೂ ಮಾದರಿಯಾಗಿದೆ' ಎಂದು ನಟ ಉಪೇಂದ್ರ ಮೆಚ್ಚುಗೆ ವ್ಯಕ್ತಪಡಿಸಿದರು.

ಕುಂಬಳಗೋಡು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕೋವಿಡ್‌ಗೆ ಮೃಪಪಟ್ಟ ಕುಟುಂಬಗಳಿಗೆ ಎಸ್.ಟಿ.ಸೋಮಶೇಖರ್ ಅವರು ವೈಯಕ್ತಿಕವಾಗಿ ಕೊಡಮಾಡುವ ತಲಾ ₹ 1 ಲಕ್ಷಗಳ ಪರಿಹಾರವನ್ನು ವಿತರಿಸಿ ಮಾತನಾಡಿದರು.

ಎಸ್.ಟಿ. ಸೋಮಶೇಖರ್ ಮಾತನಾಡಿ, 'ಕೋವಿಡ್ ಎರಡನೇ ಅಲೆಯಲ್ಲಿ ಸೋಂಕು ವೇಗವಾಗಿ ಹರಡುತ್ತಿದೆ. ಮೊದಲ ಅಲೆಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಸಾವು-ನೋವುಗಳಾಗುತ್ತಿವೆ. ನಮ್ಮ ಕ್ಷೇತ್ರದಲ್ಲಿ ಇತ್ತೀಚೆಗೆ ಮೂರ್ನಾಲ್ಕು ಕಡೆ ಟ್ರಯಾಜ್ ಸೆಂಟರ್ ಅನ್ನು ತೆರೆಯಲಾಗಿದೆ. ಆ ಕೇಂದ್ರಗಳಿಗೆ ಸೋಂಕಿತರು ಭೇಟಿ ನೀಡಿದರೆ ವೈದ್ಯರು ಯಾವ ರೀತಿಯ ಚಿಕಿತ್ಸೆಯ ಅವಶ್ಯಕತೆ ಇದೆ ಎಂಬುದನ್ನು ಸೂಚಿಸುತ್ತಾರೆ' ಎಂದರು.

ವಿಶ್ವ ಒಕ್ಕಲಿಗರ ಮಹಾಸಂಸ್ಥಾನದ ಚಂದ್ರಶೇಖರನಾಥ ಸ್ವಾಮೀಜಿ, ಜನಸೇವಾ ಕೇಂದ್ರದ ಅಧ್ಯಕ್ಷ ನಿರ್ಮಲ್ ಇದ್ದರು.

ರಾಜೀವ್ ಗಾಂಧಿ ಹತ್ಯೆ ಪ್ರಕರಣ: ಅಪರಾಧಿಗಳ ಬಿಡುಗಡೆಗೆ ಒತ್ತಾಯ

ಚೆನ್ನೈ: 2018ರಲ್ಲಿ ರಾಜ್ಯ ಸಚಿವ ಸಂಪುಟ ಮಾಡಿದ ಶಿಫಾರಸು ಪರಿಗಣಿಸಿ ರಾಜೀವ್ ಗಾಂಧಿ ಹತ್ಯೆ ಪ್ರಕರಣದ ಏಳು ಅಪರಾಧಿಗಳನ್ನು ಬಿಡುಗಡೆಗೊಳಿಸಬೇಕು ಎಂದು ಕೋರಿ ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ರಾಷ್ಟ್ರಪತಿಗಳಿಗೆ ಪತ್ರ ಬರೆದಿದ್ದಾರೆ. 2018ರ ಸೆಪ್ಟೆಂಬರ್ 9ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ಏಳು ಮಂದಿಯನ್ನು ಬಿಡುಗಡೆಗೊಳಿಸುವಂತೆ ರಾಜ್ಯಪಾಲರಿಗೆ ಶಿಫಾರಸು ಮಾಡಲಾಗಿತ್ತು. ಆದರೆ, ರಾಜ್ಯಪಾಲರು ಯಾವುದೇ ನಿರ್ಧಾರ ಕೈಗೊಳ್ಳಲಿಲ್ಲ. ಈ ಬಗ್ಗೆ ರಾಷ್ಟ್ರಪತಿ ಅವರೇ ನಿರ್ಧಾರ ಕೈಗೊಳ್ಳಬೇಕು ಎಂದು ರಾಜ್ಯಪಾಲರು ಹೇಳಿದ್ದಾರೆ ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಭಾರತ ಸರ್ಕಾರ
ಹೆಚ್ಚುವರಿ ನಿರ್ದೇಶಕರ ಕಚೇರಿ, ಕೇಂದ್ರ ಸರ್ಕಾರದ ಆರೋಗ್ಯ ಯೋಜನೆ
3ನೇ ಮಹಡಿ, ಇ-ವಿಂಗ್ ಕೇಂದ್ರೀಯ ಸದನ, ಕೋರಮಂಗಲ, ಬೆಂಗಳೂರು-34.

ಪ್ರಕಟಣೆ

ಸಿಜಿಹೆಚ್‌ಎಸ್, ಬೆಂಗಳೂರು ಇವರು, ಗುತ್ತಿಗೆ ಆಧಾರದ ಮೇಲೆ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಕೇಂದ್ರ/ರಾಜ್ಯ/ಪಿಎಸ್‌ಯು ಇಂದ ಅರ್ಹ ನಿವೃತ್ತರಾದ ತಜ್ಞರನ್ನು ಆಹ್ವಾನಿಸಿದ್ದಾರೆ. ಸಂಪೂರ್ಣ ವಿವರಗಳು ವೆಬ್‌ಸೈಟ್: **www.cghsbng.gov.in** ನಲ್ಲಿ ಲಭ್ಯವಿದೆ.

ಸಹಿ/- (ಡಾ. ಎಂ. ರೇವತಿ), ಹೆಚ್ಚುವರಿ ನಿರ್ದೇಶಕರು, ಸಿಜಿಹೆಚ್‌ಎಸ್, ಬೆಂಗಳೂರು

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ,
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ತುಮಕೂರು.
ದೂರವಾಣಿ:0816-2211105 Email:eemitmk@gmail.com
ಉಲ್ಲೇಖ ಸಂ.01/2021-22. ಕೆ.ಡಬ್ಲ್ಯೂ-1&4 (ಏಕ ಲಕೋಟೆ & ದ್ವಿ ಲಕೋಟೆ) ದಿ: 15.04.2021

ಅಲ್ಪಾವಧಿ ಟೆಂಡರ್ ಮುಂದೂಡಿಕೆ ಪ್ರಕಟಣೆ ದಿನಾಂಕ: 17.05.2021

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ ತುಮಕೂರು ವ್ಯಾಪ್ತಿಯಲ್ಲಿ 2021-22 ನೇ ಸಾಲಿನ ಪಟ್ಟಿಯಲ್ಲಿ ಲೆಕ್ಕ ಶೀರ್ಷಿಕೆ: 4702-ಕೆರೆಗಳ ಆಧುನೀಕರಣ ಪ್ರಧಾನ ಕಾಮಗಾರಿಗಳು ಅಡಿಯಲ್ಲಿ ಅನುಮೋದನೆಯಾಗಿರುವ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಇ-ಪ್ರೊಕ್ಯೂರ್‌ಮೆಂಟ್ ಅಡಿಯಲ್ಲಿ ಐಟಂವಾರು ಟೆಂಡರುಗಳನ್ನು ಈ ಕಛೇರಿ ಟೆಂಡರು ಪ್ರಕಟಣೆ ಸಂಖ್ಯೆ: 01/2021-22, ದಿ: 15.04.2021 ರಂದು ಆಹ್ವಾನಿಸಲಾಗಿದೆ. ಟೆಂಡರು ಪ್ರಕ್ರಿಯೆ ದಿನಾಂಕ ಮತ್ತು ವಿವರಗಳನ್ನು ಟೆಂಡರ್‌ನ ನಿಗಧಿತ ನಮೂನೆಯಲ್ಲಿ ವೆಬ್‌ಸೈಟ್ http//eproc.karnataka.gov.in ನಲ್ಲಿ ಅವಶ್ಯಕ ಮಾಹಿತಿಗಳೊಂದಿಗೆ, ಅರ್ಜಿ ಶುಲ್ಕ ಹಾಗೂ ಇ.ಎಂ.ಡಿ.ಯೊಂದಿಗೆ ಅಪ್‌ಲೋಡ್ ಮಾಡಬಹುದಾಗಿದೆ. ಟೆಂಡರು ಪ್ರಕ್ರಿಯೆಯ ದಿನಾಂಕಗಳು ಈ ಕೆಳಕಂಡಂತಿವೆ:
(1) ಟೆಂಡರ್ ಪ್ರಕಟಣೆಯನ್ನು ದಿನಾಂಕ: **21.05.2021** ರಂದು ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಪ್ರಕಟಿಸಲಾಗುವುದು. (2) ಪ್ರೀ-ಬಿಡ್ ಮೀಟಿಂಗ್ ದಿನಾಂಕ: **25.05.2021** ರಂದು ಬೆಳ್ಳಗ್ಗೆ 11.00 ಘಂಟೆಗೆ ನಿಗಧಿಪಡಿಸಲಾಗಿದೆ. (3) ಅವಶ್ಯ ಟೆಂಡರ್ ಮಾಹಿತಿ/ಸ್ಪಷ್ಟೀಕರಣವನ್ನು ಪಡೆಯಲು ದಿನಾಂಕ 28.05.2021 ಬೆಳ್ಳಗ್ಗೆ 11.00 ಗಂಟೆಯವರೆಗೆ ಸ್ವೀಕರಿಸಲಾಗುವುದು. (4) ಗುತ್ತಿಗೆದಾರರಿಂದ ಟೆಂಡರ್‌ನ್ನು"ಇ" ಪ್ರೊಕ್ಯೂರ್‌ಮೆಂಟ್ ಮೂಲಕ ದಿನಾಂಕ: **29.05.2021**ರ ಸಾಯಂಕಾಲ 4.00 ಗಂಟೆಯವರೆಗೆ ಸ್ವೀಕರಿಸಲಾಗುವುದು. (5) ತಾಂತ್ರಿಕ ಬಿಡ್ಡನ್ನು ದಿನಾಂಕ: **31.05.2021** ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು. (6) ಆರ್ಥಿಕ ಬಿಡ್ಡನ್ನು ದಿನಾಂಕ: **02.06.2021** ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು. ಹೆಚ್ಚಿನ ವಿವರಗಳನ್ನು ಸದರಿ ಕಛೇರಿಯಿಂದ ಅಥವಾ ಮೇಲೆ ತಿಳಿಸಿದ ವೆಬ್ ಸೈಟ್ ಮೂಲಕ ಪಡೆಯಬಹುದಾಗಿದೆ.

DIPR/TUM/54/MCA/2021-22 ಸಹಿ/- ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂ.ಅ ವಿಭಾಗ, ತುಮಕೂರು.

KARNATAKA NEERAVARI NIGAM LIMITED
(A Government of Karnataka Enterprise)
OFFICE OF THE, Executive Engineer, KNNL, HBC Divn, Athani-591 304. Tq: Athani Dist. Belgaum (Karnataka)
No. EE/KNNL/HBC/PB/Sil tender/2020-21/346 Date: 19-05-2021

TENDER NOTIFICATION CALL-2
(THROUGH "e-Procurement" ONLY)

Reference : No: EE/KNNL/HBC/PB/Tender/Man Power/2020-21/2460 Date: 08-02-2021.

In Continuation of tender notifications published vide ref above due to technical issues in tenderer. Hence Call-2 tender notification is published as below.

Percentage tender through e-procurement platform are invited by the Executive Engineer, HBC Division, Atahni on behalf of the Managing Director Karnataka Neeravari Nigam Limited, 4th Floor, Coffee Board Building No. 1 Dr. B.R. Ambedkar Veedhi, Bangalore-01 From PWD Class-II and III KNNL & above Registered contractors for the work of under **Hipparagi Project.** The contractors are expected to apply in Single Cover System (as per KITP ac 2000) The blank tender documents can be obtained through website **www.eproc.karnataka.gov.in** e-portal/index-seam (Total 05 work) under H.B.C. Division, Athani.

The Approximate estimated cost of work is Rs. 6.78 Lakhs and Rs. 17.52 Lakhs.

1	The Contractor can request for e-tendering documents	From 25-05-2021 @ 10:30 AM to 03-06-2021 upto 4:00 PM
2	Las date & time for tender queries	26-06-2021 upto 4:00 PM
3	Submission of completed e-tendering documents	From 25-05-2021 @ 10:30 AM to 03-06-2021 upto 4:00 PM
4	Opening of Financial Bid	05-06-2021 @ 11:00 AM

Any other information can be had from the undersigned during the office hours on telephone: 08289-251034 and H.P. company help line 080-22485867.

Sd/- xx K.K. Jaliberi, Executive Engineer, KNNL HBC Division, Athani
DIPO/RO No. 104/2021-22

ಮಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್
ವಿಳಾಸ: ಎಮ್.ಜಿ. ರಸ್ತೆ, ಲಾಲ್‌ಭಾಗ್, ಮಂಗಳೂರು-575003, ದಕ್ಷಿಣ ಕನ್ನಡ, ಕರ್ನಾಟಕ
CIN:U74999KA2017PLC102010, Phone: 0824-2986321,
Email id: smartcitymangaluru@gmail.com,
Website: www.mangalurusmartcity.net

ಇ-ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರದ ಇ-ಪೋರ್ಟಲ್ ಮೂಲಕ ಲಭ್ಯವಿರುವ ನಿಧಿಯ ಹೂಡಿಕೆಗಾಗಿ ಇ-ಹರಾಜು
UDD/2021-22/AUCTION2055, UDD/2021-22/AUCTION 2056, ADVT No.108/2021-22 DATE: 18/05/2021.

ಮಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್ ತನ್ನ ಯೋಜನಾ ನಿಧಿಯ ಅಲ್ಪಾವಧಿಯ ಲಭ್ಯವಿರುವ ಹಣವನ್ನು ಠೇವಣಿ ಮಾಡುವ ಮೂಲಕ ಹೂಡಿಕೆಗಾಗಿ ಅರ್ಹ ರಾಷ್ಟ್ರೀಯ ಹಾಗೂ ಖಾಸಗಿ ಬ್ಯಾಂಕುಗಳು ಭಾಗವಹಿಸಲು ಟೆಂಡರನ್ನು ಆಹ್ವಾನಿಸುತ್ತಿದೆ. ಸರ್ಕಾರದ ಮಾರ್ಗಸೂಚಿಯ ಅನ್ವಯ ಲಭ್ಯವಿರುವ ಹಣವನ್ನು ಶೇ. 70ರಷ್ಟು ಮೊತ್ತವನ್ನು ರಾಷ್ಟ್ರೀಯ ಬ್ಯಾಂಕ್ ಹಾಗೂ ಶೇಕಡಾ 30ರಷ್ಟನ್ನು ಖಾಸಗಿ ಬ್ಯಾಂಕ್‌ಗಳಿಗೆ ತೊಡಗಿಸಲಾಗುವುದು. ಅರ್ಹ ಬ್ಯಾಂಕುಗಳು ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ www.eproc.karnataka.gov.in ಮೂಲಕ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮ 2000 ಪ್ರಕಾರ ಅರ್ಜಿ ಸಲ್ಲಿಸಬಹುದು.

ಇ-ಹರಾಜಿಗೆ ವಿವಿಧ ಪ್ರಕ್ರಿಯೆಗಳ ವೇಳಾಪಟ್ಟಿ

ಕ್ರ.ಸಂಖ್ಯೆ	ವಿವರ	ದಿನಾಂಕ
1.	ಇ-ಹರಾಜು ಅಧಿಸೂಚನೆಯ ದಿನಾಂಕ	ದಿನಾಂಕ: 20.05.2021
2.	ಇ-ಪೋರ್ಟಲ್‌ನಲ್ಲಿ ಅನುಬಂಧ ಎ ಮತ್ತು ಅನುಬಂಧ ಬಿ ಘೋಷಣೆಯಲ್ಲಿನ ಅರ್ಹತಾ ಮಾನದಂಡ ಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ	ದಿನಾಂಕ: 27.05.2021 ರಂದು ಸಾಯಂಕಾಲ 4.00 ಗಂಟೆಗೆ ಮುಂಚಿತವಾಗಿ
3.	ಲೈವ್ ಬಿಡ್ಡಿಂಗ್	ದಿನಾಂಕ: 01.06.2021 ರಂದು ಬೆಳಿಗ್ಗೆ 11.00 ಘಂಟೆಗೆ ಪ್ರಾರಂಭವಾಗಿ ಸಾಯಂಕಾಲ 4.00 ಘಂಟೆಗೆ ಮುಕ್ತಾಯವಾಗುತ್ತದೆ.

ಆಸಕ್ತ ಬಿಡ್‌ದಾರರು ಆನ್‌ಲೈನ್ ಮೂಲಕ ಭಾಗವಹಿಸಬೇಕಾಗುತ್ತದೆ. ವೆಬ್‌ಸೈಟ್ ಮುಖಾಂತರ ಇ-ಹರಾಜು ದಾಖಲೆಗಳನ್ನು ನೋಡಬಹುದು ಮತ್ತು ಪಡೆಯಬಹುದು. www.eproc.karnataka.gov.in ಮತ್ತು ಹರಾಜು ದಾಖಲೆಗಳು ದಿನಾಂಕ: 20.05.2021 ರಿಂದ ಬಿಡ್ಡಿಂಗ್‌ಗೆ ಲಭ್ಯವಿರುತ್ತದೆ.

ಸಹಿ/- ವ್ಯವಸ್ಥಾಪಕ ನಿರ್ದೇಶಕರು, ಮಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್, ಮಂಗಳೂರು

ನಗರಸಭಾ ಕಾರ್ಯಾಲಯ, ಕಾರವಾರ
ಫೋನ್: 08382-227900 ಫ್ಯಾಕ್ಸ್: 08382-222170
ಇ-ಮೇಲ್: itstaff_ulb_karwar@yahoo.com ವೆಬ್‌ಸೈಟ್: www.karwarcity.mrc.gov.in
ಸಂ: ನಸಕಾ/ಕಾವಿ/ನ.ಸ.ನಿ/ಟೆಂಡರ್-01&02/2020-21 ದಿನಾಂಕ: 18.05.2021

ಟೆಂಡರ ತಿದ್ದುಪಡಿ ಪ್ರಕಟಣೆ

ಟೆಂಡರ್ ಪ್ರಕಟಣಾ ಸಂ/ನಸಕಾ/ಕಾವಿ/ಟೆಂಡರ್-01/2021-22, ದಿನಾಂಕ: 22.04.2021 ಹಾಗೂ ಸಂ/ನಸಕಾ/ಕಾವಿ/ಟೆಂಡರ್-02/2021-22, ದಿನಾಂಕ: 06.05.2021 ರಂದು ಪ್ರಕಟಿಸಲಾದ ಟೆಂಡರನ್ನು ಸಲ್ಲಿಸುವ ಕೊನೆಯ ದಿನಾಂಕ ಕ್ರಮವಾಗಿ 24.05.2021 ಮತ್ತು 22.05.2021 ಮತ್ತು ಟೆಂಡರ್ ತೆರೆಯುವ ದಿನಾಂಕವು ಕ್ರಮವಾಗಿ 25.05.2021 ಮತ್ತು 24.05.2021 ಇರುತ್ತದೆ. ತಾಂತ್ರಿಕ ಕಾರಣಗಳಿಂದಾಗಿ ಸದರಿ ಟೆಂಡರ್‌ಗಳನ್ನು ಸಲ್ಲಿಸುವ ದಿನಾಂಕವನ್ನು ಮುಂದೂಡಲಾಗಿದ್ದು, ಟೆಂಡರ್ ಸಂ.01 ಮತ್ತು ಟೆಂಡರ್ ಸಂ.02 ಗಳ ಸಲ್ಲಿಸುವ ಕೊನೆಯ ದಿನಾಂಕವು 07.06.2021 ಮತ್ತು ಟೆಂಡರ್ ಕರೆಯುವ ದಿನಾಂಕವನ್ನು 08.06.2021 ಗೆ ಮುಂದೂಡಲಾಗಿರುತ್ತದೆ.
ಹೆಚ್ಚಿನ ಮಾಹಿತಿಗಾಗಿ ಕಛೇರಿ ಸಮಯದಲ್ಲಿ ಕಾರ್ಯಾಲಯವನ್ನು ಸಂಪರ್ಕಿಸಬಹುದು. ಅಥವಾ ಈ ಕಾರ್ಯಾಲಯದ ಅಂತರಜಾಲ www.karwarcity.mrc.gov.in ನಲ್ಲಿ ಕಾಣಬಹುದು.

ಸಹಿ/- ಅಧ್ಯಕ್ಷರು, ನಗರಸಭೆ, ಕಾರವಾರ ಸಹಿ/- ಪೌರಾಯುಕ್ತರು, ನಗರಸಭೆ, ಕಾರವಾರ
DIPR/ADK/MCA/146/21-22 dt. 20.5.2021

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯ ಕೊಪ್ಪಳ
ಸಂಖ್ಯೆ: ಉಗ್ರಾಣ/KKRDB/10/2021-22 ದಿನಾಂಕ: 20.05.2021

ಅಲ್ಪಾವಧಿ ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಅಧಿಸೂಚನೆ

ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳ ಕಲಬುರಗಿ 2021-22ನೇ ಸಾಲಿನ ಮ್ಯಾಕ್ರೋ ಕ್ರಿಯಾ ಯೋಜನೆಯಲ್ಲಿ **ಕೊಪ್ಪಳ ಜಿಲ್ಲೆಯ ವಿವಿಧ ಆಸ್ಪತ್ರೆಗಳಿಗೆ ಕೋವಿಡ್-19 ನಿರ್ವಾಹಣೆಗಾಗಿ ಮತ್ತು ಚಿಕಿತ್ಸೆಗಾಗಿ LMO 10 KL, LMO 06 KL & LMO 01 KL** ನ್ನು ಸರಬರಾಜು ಮಾಡಲು ಅಲ್ಪಾವಧಿ ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಕರೆಯಲಾಗಿದೆ.
(1) ಭರ್ತಿ ಮಾಡಿದ ಟೆಂಡರ್‌ನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಅವಧಿ: **04.06.2021 ರಂದು ಸಾಯಂಕಾಲ 5:00 ಗಂಟೆಯೊಳಗೆ.** (2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **07.06.2021 ರಂದು ಬೆಳಗ್ಗೆ 11:00 ಗಂಟೆಗೆ.** (3) ಆರ್ಥಿಕ ಬಿಡ್ ತೆರೆಯುವ ದಿನಾಂಕ : **09.06.2021 ರಂದು ಬೆಳಗ್ಗೆ 11:00 ಗಂಟೆಗೆ.**
E – Mail : dhokoppal@gmail.com

ಸಹಿ/- ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ಕೊಪ್ಪಳ
ವಾಸಾಸಂಇ/ಕೊಪ್ಪಳ/75/ಅಲಕ್‌ನಂದ/2021-22

ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ಲೋಕೋಪಯೋಗಿ ಇಲಾಖೆ, ಚಿಕ್ಕಮಗಳೂರು ವಿಭಾಗ, ಚಿಕ್ಕಮಗಳೂರು.
ಟೆಂಡರ್ ಪ್ರಕಟಣೆ ಸಂಖ್ಯೆ: 08/2021-22 ದಿನಾಂಕ:17.05.2021

-: ಟೆಂಡರ್ ಪ್ರಕಟಣೆ::

ಮೇಲ್ಕಂಡ ಟೆಂಡರ್ ಪ್ರಕಟಣೆಯಲ್ಲಿ ಚಿಕ್ಕಮಗಳೂರು ಜಿಲ್ಲೆಯ ಚಿಕ್ಕಮಗಳೂರು ಉಪವಿಭಾಗಕ್ಕೆ ಒಳಪಡುವ ಕಾಮಗಾರಿಗಳಿಗೆ (Standard Tender Document-KW 4 ನಿಬಂಧನೆಗನುಸಾರ) ಅರ್ಹ ಗುತ್ತಿಗೆದಾರರಿಂದ ಇ-ಪ್ರೋಕ್ ಮೂಲಕ ಟೆಂಡರ್ ಕರೆಯಲಾಗಿರುತ್ತದೆ. ಅಂದಾಜು ಮೊತ್ತ ರೂ.600.00 ಲಕ್ಷಗಳು ಆಗಿರುತ್ತವೆ.
1) ಕ್ರಮ ಸಂಖ್ಯೆ 1 ರ ಕಾಮಗಾರಿಗಳಿಗೆ ಇ-ಪ್ರೋಕ್ಯೂರ್‌ಮೆಂಟ್ ಮೂಲಕ ಟೆಂಡರ್ ಕರೆಯಲಾಗಿದ್ದು, ದಿನಾಂಕ:- 03.06.2021 ರಂದು ಸಂಜೆ 4.00 ಗಂಟೆಯೊಳಗೆ ಟೆಂಡರ್ ಸಲ್ಲಿಸಬೇಕು. ಸದರಿ ಟೆಂಡರನ್ನು ದಿನಾಂಕ:- 04.06.2021 ರಂದು ಸಂಜೆ 4.15 ಗಂಟೆಯ ನಂತರ ಸಾಧ್ಯವಾದಲ್ಲಿ ತೆರೆಯಲಾಗುವುದು.
ಈ ದಿನಾಂಕಗಳಂದು ಆಕಸ್ಮಿಕ ರಜಾ ದಿನಗಳು ಬಂದಲ್ಲಿ ಮರುದಿನವನ್ನು ಪರಿಗಣಿಸಲಾಗುವುದು. ಹೆಚ್ಚಿನ ವಿವರಗಳಿಗೆ ಕಛೇರಿ ವೇಳೆಯಲ್ಲಿ ವಿಷಯ ನಿರ್ವಾಹಕರನ್ನು ಸಂಪರ್ಕಿಸಿ ತಿಳಿಯಬಹುದಾಗಿದೆ. ಪ್ರಕಟಣೆಯನ್ನು www.kpwd.gov.in.pwdwebsite ನಲ್ಲಿ ಓದಿಕೊಳ್ಳುವುದು.

ಸಹಿ/- ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಚಿಕ್ಕಮಗಳೂರು ವಿಭಾಗ, ಚಿಕ್ಕಮಗಳೂರು.

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ
4ನೇ ಟಿ ಬ್ಲಾಕ್, ಜಯನಗರ, ಬೆಂಗಳೂರು – 560 041
ದೂ: 080-26961928 ಫ್ಯಾಕ್ಸ್-080-26961929
ಸಂಖ್ಯೆ: ರಾಗಾವಿ/ಪ್ರೊಕ್/ಲಕೋಟೆ/212/2020-21 3ನೇ ಕರೆ ದಿನಾಂಕ: 19.05.2021

ಇ-ಟೆಂಡರ್ ಪ್ರಕಟಣೆ (ಆರ್‌ಎಫ್‌ಪಿ) 3ನೇ ಕರೆ

ಕುಲಸಚಿವರು, ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯವು ಆರ್‌ಜಿಯುಹೆಚ್‌ಎಸ್‌ಗೆ ಪದವಿ ಪ್ರದಾನ ಪ್ರಮಾಣ ಪತ್ರಗಳ ಫೋಲ್ಡರ್ ಮತ್ತು ಫೋಲ್ಡರ್ ಕವರ್‌ಗಳನ್ನು ಹಾಗೂ ಇತರೆ ಕವರ್‌ಗಳನ್ನು ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯಕ್ಕೆ ಸರಬರಾಜು ಮಾಡಲು ಟೆಂಡರನ್ನು ಆಹ್ವಾನಿಸಿದ್ದಾರೆ. ಸೇವೆಗಳ ಬಗ್ಗೆ ಹೆಚ್ಚಿನ ವಿವರಗಳನ್ನು ಲಗತ್ತಿಸಿರುವ ಉಲ್ಲೇಖಿತ ಷರತ್ತುಗಳಲ್ಲಿ ಒದಗಿಸಲಾಗಿದೆ.

ಟೆಂಡರ್ ದಾಖಲೆಗಳು ಡೌನ್‌ಲೋಡ್ ಮಾಡಲು ಲಭ್ಯತೆ	19.05.2021 ಸಂಜೆ 7:00 ಗಂಟೆಯಿಂದ
ಬಿಡ್ ಪೂರ್ವಭಾವಿ ಸಭೆಯ ದಿನಾಂಕ	24.05.2021 ಬೆಳಿಗ್ಗೆ 11:00 ಗಂಟೆಗೆ
ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ	27.05.2021 ಸಂಜೆ 5:00 ಗಂಟೆಯವರೆಗೆ
ತಾಂತ್ರಿಕ ಬಿಡ್ ತೆರೆಯುವ ದಿನಾಂಕ	28.05.2021 ಸಂಜೆ 5:30 ಗಂಟೆಯವರೆಗೆ
ಆರ್ಥಿಕ ಬಿಡ್ ತೆರೆಯುವ ದಿನಾಂಕ	31.05.2021 ಬೆಳಿಗ್ಗೆ 11:00 ಗಂಟೆಗೆ
ಟೆಂಡರ್ ತೆರೆಯುವ ಸ್ಥಳ	ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು

ಹೆಚ್ಚಿನ ಮಾಹಿತಿಗಳನ್ನು **https://eproc.karnataka.gov.in** ನಿಂದ ಪಡೆದುಕೊಳ್ಳಬಹುದು.

ವಾ.ಸಾ.ಸಂ.ಇ/391/2021-22 ಸಹಿ/- ಕುಲಸಚಿವರು

ಸಾರ್ವಜನಿಕ ಆಸ್ಪತ್ರೆ, ಕೆ.ಆರ್. ಪುರ
ಬೆಂಗಳೂರು ಪೂರ್ವ ತಾಲ್ಲೂಕು, ಬೆಂಗಳೂರು ನಗರಜಿಲ್ಲೆ.
ದೂರವಾಣಿ: 080-25612238, ಇ-ಮೇಲ್: amoghkrpuram@gmail.com
ಸಂ.: ಸಾಆಕ್ಕ/ಸಿ/ಹೊಗು/90/2020-21 ದಿನಾಂಕ: 18.05.2021

ಇ-ಟೆಂಡರ್ ಅಧಿಸೂಚನೆ

ಸಾರ್ವಜನಿಕ ಆಸ್ಪತ್ರೆ, ಕೆ.ಆರ್. ಪುರ, ಬೆಂಗಳೂರು ಇಲ್ಲಿ 2021-22ನೇ ಸಾಲಿಗೆ ಖಾಲಿ ಇರುವ ಗ್ರೂಪ್ 'ಡಿ' ಹುದ್ದೆಗಳಲ್ಲಿ ಶೇಖಡಾ 75%ರಷ್ಟು ಹುದ್ದೆಗಳನ್ನು ಹೊರಗುತ್ತಿಗೆ ಆಧಾರದ ಮೇಲೆ (30% ನಾನ್ ಕ್ಲಿನಿಕಲ್ ಮತ್ತು 45% ರಷ್ಟು ಗ್ರೂಪ್ 'ಡಿ') ಸಿಬ್ಬಂದಿಗಳನ್ನು ಒದಗಿಸಲು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಿದ್ದು, ವಿವರಗಳು ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್:**https://eproc.karnataka.gov.in** ನಲ್ಲಿ ಲಭ್ಯವಿರುತ್ತದೆ. ಹೆಲ್ಪ್‌ಲೈನ್ ನಂ. 080-25501216/227 ಟೆಂಡರ್‌ನ ಎಲ್ಲಾ ನಿಬಂಧನೆಗಳನ್ನು ಟೆಂಡರ್ ಬಿಡ್‌ನಲ್ಲಿ ನೀಡಲಾಗಿದೆ. ಹೆಚ್ಚಿನ ಮಾಹಿತಿಯನ್ನು ಎಲ್ಲಾ ಕೆಲಸದ ದಿನಗಳಲ್ಲಿ ಆಸ್ಪತ್ರೆಯ ಕಛೇರಿಯಿಂದ ಪಡೆದುಕೊಳ್ಳಬಹುದು.
ವಿಷಯದ ಷೆಡ್ಯೂಲ್‌ಗಳು: (1) ಟೆಂಡರ್ ಸಲ್ಲಿಕೆಗೆ ಕಡೇ ದಿನಾಂಕ ಮತ್ತು ಸಮಯ: **18.06.2021**ರಂದು **ಬೆಳಿಗ್ಗೆ 11:30 ಗಂಟೆಗೆ.** (2) ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ ಮತ್ತು ಸಮಯ: **21.06.2021**ರಂದು **ಮಧ್ಯಾಹ್ನ 02:30 ಗಂಟೆಗೆ.** (3) ಆರ್ಥಿಕ ಬಿಡ್ಡನ್ನು ತೆರೆಯುವ ದಿನಾಂಕ ಮತ್ತು ಸಮಯ: **ತಿಳಿಸಲಾಗುವುದು.**

ವಾಸಾಸಂಇ/ಉನಿನ/ಎಲ್‌ಸಿ/396/2021-22 ಸಹಿ/-, ಟೆಂಡರ್ ಸಮಿತಿ ಅಧ್ಯಕ್ಷರು / ಆಡಳಿತ ವೈದ್ಯಾಧಿಕಾರಿಗಳು, ಸಾರ್ವಜನಿಕ ಆಸ್ಪತ್ರೆ, ಕೆ.ಆರ್.ಪುರ, ಬೆಂಗಳೂರು

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಮೈಸೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ (ಪೂ), ಸಯ್ಯಾಜಿರಾವ್ ರಸ್ತೆ
ಮೈಸೂರು - 570024 ಇ-ಮೇಲ್: eeemccmys@gmail.com
ಸಂಖ್ಯೆ: ಮೈನಪಾ/ಕಾಇಂ(ಪೂ&ಪ)/ಟಿಎನ್-13/2021-22 ದಿನಾಂಕ: 20-05-2021

ಟೆಂಡರ್ ಪ್ರಕಟಣೆ
(ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಮೈಸೂರು ನಗರ ಪಾಲಿಕೆಯ ಅನುದಾನದ, 15ನೇ ಹಣಕಾಸು ಅನುದಾನ, 14ನೇ ಹಣಕಾಸು ಅನುದಾನದ ಮತ್ತು ಶೇ.24.10ರ ಒಟ್ಟು 20 ಕಾಮಗಾರಿಗಳಿಗೆ (ಒಟ್ಟು ಮೊತ್ತ ರೂ.300.44 ಲಕ್ಷಗಳು) ಮೇಲೆ ಕಾಣಿಸಿದ ಉಲ್ಲೇಖದನ್ವಯ ಟೆಂಡರ್ ಅನ್ನು ಆಹ್ವಾನಿಸಲಾಗಿದ್ದು, ಟೆಂಡರನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಸಲ್ಲಿಸಬಹುದಾಗಿರುತ್ತದೆ. ಮುಂದುವರೆದು ಕಾಮಗಾರಿಗಳ ಹೆಸರು, ಟೆಂಡರ್‌ಗಿಟ್ಟ ಮೊತ್ತ ಹಾಗೂ ಇನ್ನಿತರೆ ಷರತ್ತುಗಳ ಮಾಹಿತಿಯನ್ನು ಈ ಕೆಳಗೆ ಸಹಿ ಮಾಡಿರುವ ಅಧಿಕಾರಿಯವರ ಕಚೇರಿಯಿಂದ ಪಡೆಯಬಹುದಾಗಿರುತ್ತದೆ ಹಾಗೂ ದಿನಾಂಕ: **24-05-2021**ರ ನಂತರ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ **https://eproc.karnataka.gov.in** ನಲ್ಲಿ ಟೆಂಡರ್ ದಾಖಲಾತಿಗಳನ್ನು ಡೌನ್‌ಲೋಡ್ ಮಾಡಿಕೊಂಡು ತಮ್ಮ ಬಿಡ್ಡನ್ನು ಸಲ್ಲಿಸಬಹುದಾಗಿರುತ್ತದೆ. ಟೆಂಡರ್‌ಗಳಿಗೆ ಬಿಡ್ಡನ್ನು ಸಲ್ಲಿಸುವ ಕೊನೆಯ ದಿನಾಂಕ: **10-06-2021** ಹಾಗೂ ಬಿಡ್ಡನ್ನು ತೆರೆಯುವ ದಿನಾಂಕ: **11-06-2021** ಇನ್ನಿತರೆ ಹೆಚ್ಚಿನ ಮಾಹಿತಿಯನ್ನು ಕಾರ್ಯಪಾಲಕ ಅಭಿಯಂತರವರ (ಪೂರ್ವ ಮತ್ತು ಪಶ್ಚಿಮ) ಕಚೇರಿಯಿಂದ ಪಡೆಯಬಹುದಾಗಿದೆ.

ಸಹಿ/- ಕಾರ್ಯಪಾಲಕ ಅಭಿಯಂತರರು (ಪೂ), ಮೈಸೂರು ಮಹಾನಗರ ಪಾಲಿಕೆ, ಮೈಸೂರು
DIPR/MYS/YC/144/2021-22

ಮುಖ್ಯಮಂತ್ರಿ ತವರಿನಲ್ಲಿ ಹೀಗೊಂದು 'ಕ್ರಾಂತಿ'

ಹೆಡ್‌ಕಾನ್‌ಸ್ಟೆಬಲ್‌ಗೆ ನೋಂದಣಿ ಇಲಾಖೆಯ ಕಾಯಂ ಹುದ್ದೆ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಿವಮೊಗ್ಗದ ಸಶಸ್ತ್ರ ಮೀಸಲು ಪಡೆಯ ಹೆಡ್‌ಕಾನ್‌ಸ್ಟೆಬಲ್ ಎಸ್.ಕೆ.ನಂದೀಶ್ ಅವರನ್ನು ಶಾಶ್ವತ ವರ್ಗಾವಣೆ ಮೂಲಕ ನೋಂದಣಿ ಮತ್ತು ಮುದ್ರಾಂಕ ಇಲಾಖೆ ಪ್ರಥಮ ದರ್ಜೆ ಸಹಾಯಕ ಹುದ್ದೆಗೆ ವಿಲೀನಗೊಳಿಸಲಾಗಿದೆ.

ಇವರು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಗನ್ ಮನ್ ಆಗಿದ್ದು, ಶಿಕಾರಿಪುರದಲ್ಲಿ ಆಪ್ತ ಸಹಾಯಕರೂ ಆಗಿದ್ದಾರೆ ಎಂದು ಮೂಲಗಳು ತಿಳಿಸಿವೆ.

ನೇರ ನೇಮಕಾತಿ ಅಡಿ ಖಾಲಿ ಇರುವ ಪ್ರಥಮ ದರ್ಜೆ ಸಹಾಯಕ ಹುದ್ದೆಗೆ ವಿಲೀನಗೊಳಿಸಲು ಪ್ರಸ್ತಾವನೆ ಕಳುಹಿಸಲಾಗಿತ್ತು. ಕೇವಲ ಒಂದೂವರೆ ತಿಂಗಳಲ್ಲಿ ಪ್ರಕ್ರಿಯೆ ಪೂರ್ಣಗೊಳಿಸಿ ಆದೇಶ ಹೊರಡಿಸಲಾಗಿದೆ.

ಕರ್ನಾಟಕ ನಾಗರಿಕ ಸೇವೆ(ಸೇವೆಗಳು ಮತ್ತು ಕನ್ನಡ ಭಾಷಾ ಪರೀಕ್ಷೆ) ನಿಯಮಗಳು 1974 ರಂತೆ ಒಂದು ವರ್ಷದ ಅವಧಿಯಲ್ಲಿ ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಪ್ರಥಮ ದರ್ಜೆ ಸಹಾಯಕ ಹುದ್ದೆಗೆ ನಿಗದಿ ಮಾಡಿರುವ ಇಲಾಖಾ ಪರೀಕ್ಷೆಯಲ್ಲಿ ಇವರು ಉತ್ತೀರ್ಣ ಹೊಂದಬೇಕು.

ಅಲ್ಲದೆ, ಕರ್ನಾಟಕ ನಾಗರಿಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು 1977 ರ ಅನ್ವಯ ವರ್ಗಾವಣೆ ಮೂಲಕ ನೇಮಕಾತಿಯನ್ನು ನೌಕರರ ಸೇವಾವಧಿಯಲ್ಲಿ ಒಮ್ಮೆ ಮಾತ್ರ ಪರಿಗಣಿಸಬಹುದು ಎಂದು ಆದೇಶದಲ್ಲಿ ಉಲ್ಲೇಖಿಸಲಾಗಿದೆ.

ಒಂದು ಇಲಾಖೆಯಲ್ಲಿ ನೇಮಕಗೊಂಡವರನ್ನು ಮತ್ತೊಂದು ಇಲಾಖೆಗೆ ಶಾಶ್ವತ ವರ್ಗಾವಣೆ ಮಾಡಿ, ಹುದ್ದೆಯನ್ನೇ ವಿಲೀನಗೊಳಿಸುವುದು ಅಪರೂಪದ ಪ್ರಕರಣದಲ್ಲಿ ಮಾತ್ರ. ಇಲಾಖೆ ಬೇರೆಯಾಗಿದ್ದರೂ ಸಮಾನ ಕೆಲಸಗಳಿದ್ದಾಗ ಹೀಗೆ ಮಾಡಿದ ನಿದರ್ಶನಗಳಿವೆ. ಪೇದೆಯೊಬ್ಬರಿಗೆ ಪ್ರಥಮ ದರ್ಜೆ ಸಹಾಯಕ ಹುದ್ದೆ ನೀಡಿದ್ದು ಇದೇ ಮೊದಲು ಎಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಮೂಲಗಳು ಹೇಳಿವೆ.

ಈ ಆದೇಶ ಭವಿಷ್ಯದಲ್ಲಿ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸುವ ಸಾಧ್ಯತೆ ಇದೆ. ಇನ್ನಷ್ಟು ನೌಕರರು ತಮಗೆ ಬೇಕಾದ ಇಲಾಖೆಯ ಹುದ್ದೆಗೆ ವಿಲೀನಕ್ಕಾಗಿ ಮನವಿ ಸಲ್ಲಿಸಬಹುದು. ಇದನ್ನು ಮಾದರಿಯಾಗಿ ಪರಿಗಣಿಸಿ ಇನ್ನಷ್ಟು ಸಿಬ್ಬಂದಿ ಮನವಿ ಸಲ್ಲಿಸಬಹುದು, ಒಂದು ವೇಳೆ ನಿರಾಕರಿಸಿದರೆ ನ್ಯಾಯಾಲಯದ ಮೆಟ್ಟಿಲು ಹತ್ತುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

ಕೃಷಿ ಉತ್ಪನ್ನಗಳಿಗೆ ಬೆಂಬಲ ಬೆಲೆಗೆ ಆಗ್ರಹ

ಬೆಂಗಳೂರು: 'ಲಾಕ್‌ಡೌನ್ ಇರುವುದರಿಂದ ರೈತರ ಕೃಷಿ ಉತ್ಪನ್ನಗಳಿಗೆ ಸರ್ಕಾರ ಬೆಂಬಲ ಬೆಲೆ ಘೋಷಿಸಬೇಕು. ಸರ್ಕಾರವೇ ಉತ್ಪನ್ನಗಳನ್ನು ಖರೀದಿಸುವ ಮೂಲಕ ರೈತರ ನೆರವಿಗೆ ಧಾವಿಸಬೇಕು' ಎಂದು ರಾಜ್ಯ ಒಕ್ಕಲಿಗರ ಒಕ್ಕೂಟದ ಅಧ್ಯಕ್ಷ ಸಿ.ವಿ. ದೇವರಾಜ್ ಆಗ್ರಹಿಸಿದ್ದಾರೆ.

ಈ ಸಂಬಂಧ ಅವರು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರಿಗೆ ಪತ್ರ ಬರೆದಿದ್ದು, 'ಲಾಕ್‌ಡೌನ್ ಘೋಷಣೆಯಾಗಿರುವುದರಿಂದ ರೈತರು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದಾರೆ. ತಾವು ಬೆಳೆದ ಹಣ್ಣು, ತರಕಾರಿ, ಹೂವು, ಸೊಪ್ಪು ಹಾಗೂ ಇನ್ನಿತರ ಉತ್ಪನ್ನಗಳನ್ನು ಮಾರುಕಟ್ಟೆಗೆ ಸಾಗಿಸಲಾರದೆ, ರಸ್ತೆಗೆ ಸುರಿಯುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಕೃಷಿ ಉತ್ಪನ್ನಗಳ ಖರೀದಿಗೆ ಕೃಷಿ ಇಲಾಖೆ ಮೂಲಕ ಸಹಾಯವಾಣಿ ಆರಂಭಿಸಬೇಕು' ಎಂದು ಒತ್ತಾಯಿಸಿದ್ದಾರೆ.

'ರೈತರ ಕೃಷಿ ಭೂಮಿಗೆ ತೆರಳಿ, ಉತ್ಪನ್ನಗಳನ್ನು ಅಲ್ಲೇ ಖರೀದಿಸಬೇಕು. ಬೇಡಿಕೆ ಇರುವ ಸ್ಥಳಗಳಿಗೆ ಉತ್ಪನ್ನಗಳನ್ನು ಪೂರೈಸಬೇಕು. ಉತ್ಪನ್ನಗಳ ಸಂರಕ್ಷಣೆಗೆ ಜಿಲ್ಲಾವಾರು ಕೋಲ್ಡ್ ಸ್ಟೋರೇಜ್ ವ್ಯವಸ್ಥೆ ಹಾಗೂ ಗೋದಾಮುಗಳನ್ನು ನಿರ್ಮಿಸಬೇಕು' ಎಂದೂ ಆಗ್ರಹಿಸಿದ್ದಾರೆ.

ಕೇಂದ್ರ ಕಾರಾಗೃಹ, ಶಿವಮೊಗ್ಗ
ಕೇಂದ್ರ ಕಾರಾಗೃಹ ಮತ್ತು ಸುಧಾರಣಾ ಸೇವಾ ಕಛೇರಿ, ಸೋಗಾನೆ (ಗ್ರಾ), ನಿಧಿಗೆ ಅಂಚೆ, ಶಿವಮೊಗ್ಗ, ಪಿನ್ ಕೋಡ್: 577222.
ದೂರವಾಣಿ: 08182-295502 / 9480806465 / 9342629522

ಪ್ರಕಟಣೆ

ಟೆಂಡರ್ ಸಂಖ್ಯೆ: **CPS/E-Tender/2021-22/Call-2** ನಲ್ಲಿ ದಿನಾಂಕ: 17.05.2021 ರಂದು ಕರೆ-2 ಇ-ದರಖಾಸ್ತು ಕರೆಯಲಾಗಿ, ಕೊನೆಯ ದಿನಾಂಕ: 26.05.2021 ಅಗಿದ್ದು, ಭಾಗ-2,4,5,7,8,9,10,11ರಲ್ಲಿ ಬರುವ ಆಹಾರ ಪದಾರ್ಥಗಳು, ಇನ್ನಿತರ ವಸ್ತುಗಳ ಅಂದಾಜು ಮೊತ್ತ ರೂ. 4,22,39,940/- ಇದಕ್ಕೆ ಇ.ಎಂ.ಡಿ ಮೊತ್ತ ರಿಯಾಯಿತಿ ಇರುತ್ತದೆ. ಕೇಂದ್ರ ಕಾರಾಗೃಹ, ಶಿವಮೊಗ್ಗದಲ್ಲಿ ಇ-ದರಖಾಸ್ತು ಕರೆಯಲಾಗಿದ್ದು, ಸದರಿ ದರಖಾಸ್ತಿನಲ್ಲಿ ಭಾಗವಹಿಸಲು ಈ ದರಖಾಸ್ತಿನ ಕುರಿತು ಹೆಚ್ಚಿನ ಮಾಹಿತಿಯನ್ನು ಆನ್‌ಲೈನ್ **https://eproc.karnataka.gov.in** ನಲ್ಲಿ ಪಡೆಯಲು ತಿಳಿಸಿದೆ ಹಾಗೂ ಸದರಿ ದರಖಾಸ್ತಿನ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಈ ಕೆಳಕಂಡ ವಿಳಾಸದಲ್ಲಿ ಪಡೆಯಲು ಸೂಚಿಸಿದೆ.

ಸಹಿ/- ಮುಖ್ಯ ಅಧೀಕ್ಷಕರು, ಕೇಂದ್ರ ಕಾರಾಗೃಹ, ಶಿವಮೊಗ್ಗ
ವಾ.ಸಾ.ಸಂ.ಇ/ಶಿ/ನಂ:34-05/ಝೇಂಕಾರ್/2021-222

ರೋಟರಿ: ಶಿಕ್ಷಕರ ನೆರವಿಗೆ ಅರ್ಜಿ ಆಹ್ವಾನ

ಬೆಂಗಳೂರು:ಕೋವಿಡ್‌ಗೆ ತುತ್ತಾದ ಶಿಕ್ಷಕರು ಹಾಗೂ ಅವರ ಕುಟುಂಬಕ್ಕೆ ಆರ್ಥಿಕ ನೆರವು ಒದಗಿಸಲು ರೋಟರಿ ಸಂಸ್ಥೆಯು 'ಗುರುದಕ್ಷಿಣೆ' ಯೋಜನೆಯಡಿ ಶಿಕ್ಷಕರಿಗೆ ನೆರವು ನೀಡುವ ಕಾರ್ಯಕ್ರಮಕ್ಕೆ ಅರ್ಜಿಗಳನ್ನು ಆಹ್ವಾನಿಸಿದೆ.

ರಾಜ್ಯದಲ್ಲಿ ಪ್ರಸ್ತುತ ಕಾರ್ಯ-ನಿರ್ವಹಿಸುತ್ತಿರುವ ಹಾಗೂ ನಿವೃತ್ತಿ ಹೊಂದಿರುವ ಶಿಕ್ಷಕರೂ ನೆರವಿಗೆ ಅರ್ಜಿ ಸಲ್ಲಿಸಬಹುದು. ಶಿಕ್ಷಕರಿಗೆ ತಲಾ ₹50 ಸಾವಿರ ಆರ್ಥಿಕ ನೆರವು ಸಿಗಲಿದೆ. ವೈದ್ಯಕೀಯ ನೆರವಿನ ಸಂದರ್ಭದಲ್ಲಿ ನೇರವಾಗಿ ಆಸ್ಪತ್ರೆಗಳಿಗೆ ಆರ್ಥಿಕ ಸಹಾಯ ಮಾಡಲಾಗುವುದು.

ಅರ್ಜಿ ಸಲ್ಲಿಸುವವರು ಸೂಕ್ತ ದಾಖಲೆಗಳನ್ನು ಒದಗಿಸಬೇಕು. ಅವುಗಳನ್ನು ಗುರುದಕ್ಷಿಣೆ ತಂಡ ಪರಿಶೀಲಿಸಲಿದೆ. ಫಲಾನುಭ-ವಿಗಳನ್ನು ಸಮಿತಿಯೇ ಆಯ್ಕೆ ಮಾಡಲಿದೆ. ಅರ್ಜಿಗಳನ್ನು ಜೂನ್ 10ರ ಸಂಜೆ 6 ಗಂಟೆಯೊಳಗೆ ಸಲ್ಲಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಅರ್ಜಿ ಸಲ್ಲಿಸಲು https://www.rotarygurudakshine.org/foundation/#form ಅನ್ನು ಬಳಸಬಹುದು.

ಸಂಪರ್ಕ:9652982604, 9449750492, 9845683875

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ಕಲಬುರಗಿ ವಿಭಾಗ ಕಲಬುರಗಿ
ಸಂ.ಕಾನಿಅ/ಲೋಇ/ಕವಿ/ತಾಶಾ-2/.ಟೆಂಡರ್.ಅಧಿಸೂಚನೆ/2020-21/542 ದಿನಾಂಕ: 19-05-2021

ಅಲ್ಪಾವಧಿ ಟೆಂಡರ್ ಅಧಿಸೂಚನೆ

1) ಕಾಮಗಾರಿ ವಿವರ : ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ, ಇಲಾಖೆ, ಕಲಬುರಗಿ ವಿಭಾಗ ಕಾರ್ಯಾಲಯದಿಂದ ಕೆ.ಕೆ.ಆರ್.ಡಿ.ಬಿ, ಯೋಜನೆಯಡಿ 07 ಕಾಮಗಾರಿಗಳಿಗೆ ಟೆಂಡರ ಕರೆಯಲಾಗಿದೆ ಇಂಡೆಂಟ್ ಸಂಖ್ಯೆ: 136453, 135588, 137062, 136454, 136184, 135606, 137472. 2) ಕಾಮಗಾರಿ ಅಂದಾಜು ಮೊತ್ತ : ರೂ. ಕನಿಷ್ಠ 25.52 ಲಕ್ಷಗಳು ಗರಿಷ್ಠ 76.08 ಲಕ್ಷಗಳು, 3) ಗುತ್ತಿಗೆದಾರರ ಅರ್ಹತೆ ವಿವರ : ಈ ಕಾಮಗಾರಿಗೆ ಟೆಂಡರ ಸಲ್ಲಿಸುವವರು, ಲೋಕೋಪಯೋಗಿ ಇಲಾಖೆಯಲ್ಲಿ ಒಂದನೇ ದರ್ಜೆ ಹಾಗೂ ಮೇಲ್ಪಟ್ಟು ಗುತ್ತಿಗೆದಾರರಾಗಿರಬೇಕು, 4) ಟೆಂಡರ ಬಗ್ಗೆ ಮಾಹಿತಿ ಹಾಗೂ ಸ್ಪಷ್ಟೀಕರಣ ಕೋರುವ ಕೊನೆಯ ದಿನಾಂಕ : **08.06.2021 (17.30 ಗಂಟೆ),** 5) ಟೆಂಡರ ಸಲ್ಲಿಸುವ ಕೊನೆಯ ದಿನಾಂಕ : **09.06.2021 (16.00 ಗಂಟೆ),** 6) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **10.06.2021 (16.30 ಗಂಟೆ),** 7) ಆರ್ಥಿಕ ಬಿಡ್ ತೆರೆಯುವ ದಿನಾಂಕ : **14.06.2021 (11.30 ಗಂಟೆ),** 8) ಇ-ಪೋರ್ಟಲ್‌ನಿಂದ ಡೌನ್‌ಲೋಡ್ ಮಾಡುವ ದಿನಾಂಕ : **29.05.2021 ರಿಂದ,** 9) ಹೆಚ್ಚಿನ ವಿವರಗಳಿಗೆ : ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ, ಇಲಾಖೆ, ವಿಭಾಗ ಕಲಬುರಗಿ ಕಚೇರಿ, 10) ಸೂಚನೆ : ಜಿ.ಎಸ್.ಟಿ. ಪ್ರತ್ಯೇಕವಾಗಿ ನೀಡಲಾಗುವುದು, 11)ಅಂತರ್ಜಾಲ ತಾಣದ ವಿಳಾಸ: **www.e-proc.Karnataka.gov.in**

ಸಹಿ/- ಕಾರ್ಯನಿರ್ವಾಹಕ ಇಂಜಿನಿಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಕಲಬುರಗಿ
ವಾ.ಸಾ.ಸಂ.ಇ/ಕಲಬುರಗಿ/169/ಎಂ.ಸಿ&ಎ/2021-22

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬೀದರ
ಸಂ.: ಕಾನಿಅ/ಗ್ರಾಕುನೀನೈವಿ/ಬೀದರ/ತಾಶಾ-04/2021-22/103 ದಿನಾಂಕ:15.05.2021

ಅಲ್ಪಾವಧಿ ಟೆಂಡರ್ ಪ್ರಕಟಣೆ ಏಕಲಕೋಟಿ/ದ್ವಿಲಕೋಟೆ ಪದ್ಧತಿ (ಇ-ಪ್ರೊಕ್ಯೂರ್ಮೆಂಟ್ ಮೂಲಕ)

ಕರ್ನಾಟಕ ರಾಜ್ಯದ ಮಾನ್ಯ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬೀದರ ರವರು ಬೀದರ ಇವರ KW-4 (Standard Bid Document) ನಿಬಂಧನೆಗಳೊಪಟ್ಟಂತೆ. 2020-21ನೇ ಸಾಲಿನ JJM ಯೋಜನೆಯಡಿಯಲ್ಲಿನ ಕನಿಷ್ಠ ರೂ. 102.55 ಲಕ್ಷ ಮತ್ತು ಗರಿಷ್ಠ ರೂ.154.75 ಲಕ್ಷ ಮೊತ್ತದೊಳಗಿನ ಒಟ್ಟು 2 ಕಾಮಗಾರಿಗಳಿಗೆ ಅರ್ಹ ನೊಂದಾಯಿತ 1ನೇ ದರ್ಜೆ ಮೇಲ್ಪಟ್ಟ ಸಿವಿಲ್ ಗುತ್ತಿಗೆದಾರರು / ನೊಂದಾಯಿತ ಸಂಸ್ಥೆಗಳು ಹಾಗೂ ಸಾಮಾನ್ಯ ಗುತ್ತಿಗೆದಾರರು ಭಾಗವಹಿಸಬಹುದಾದ ಕಾಮಗಾರಿಗಳಿಗೆ ಐಟಂವಾರು ಇ-ಟೆಂಡರ್ ಆಹ್ವಾನಿಸಲಾಗಿದೆ.

ಸದರಿ ಕಾಮಗಾರಿಗಳ ಹೆಚ್ಚಿನ ವಿವರ, ಷರತ್ತು ಹಾಗೂ ನಿಬಂಧನೆಗಳಿಗಾಗಿ ಈ ಕೆಳಗೆ ಸಹಿ ಮಾಡಿರುವ ಕಛೇರಿಯಲ್ಲಿ, ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಹಾಗೂ ವೆಬ್ಸೈಟ್ http://eproc.karnataka.gov.in ಸಂಪರ್ಕಿಸಬಹುದಾಗಿದೆ.

1) ಟೆಂಡರ ದಸ್ತಾವೇಜುಗಳನ್ನು ವೆಬ್ ಸೈಟಿನಿಂದ ಡೌನಲೋಡ ಮಾಡಿಕೊಳ್ಳಲ್ಲು ಪ್ರಾರಂಭವಾಗುವ ದಿನಾಂಕ : **17.05.2021 ರಿಂದ 27.05.2021 ವರೆಗೆ,** 2) ಭರ್ತಿ ಮಾಡಿದ ಟೆಂಡರ ಸಲ್ಲಿಸಲು ಕೊನೆಯ ದಿನಾಂಕ : **27.05.2021 ರಂದು 17:00 ಗಂಟೆಯವರೆಗೆ,** 3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **29.05.2021 ರಂದು 11.00 ಗಂಟೆಯ ನಂತರ,** 4) ಆರ್ಥಿಕ ಬಿಡ್ ತೆರೆಯುವ ದಿನಾಂಕ : ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು, ಗ್ರಾ.ಕು.ನೀ & ನೈ ವಿಭಾಗ-ಬೀದರ
ವಾ.ಸಾ.ಸಂ.ಇ/ಬೀದರ/16/ಎಂಸಿ&ಎ/2021-22

ಮೈಸೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಸಯ್ಯಾಜಿರಾವ್ ರಸ್ತೆ, ಮೈಸೂರು-570024.
ಫೋನ್/ಫ್ಯಾಕ್ಸ್: 0821-2418828
ಟೆಂಡರ್ ಪ್ರಕಟಣೆ ಸಂಖ್ಯೆ: ಮೈನಪಾ/ಕಾಇಂ/ಟಿಎನ್/12/21-22 ದಿನಾಂಕ: 18-05-2021

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ 1999-2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್‌ನ ಕೆ/ಡಬ್ಲ್ಯೂ-4ರ ನಿಯಮದನ್ವಯ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಿರುವ ಅರ್ಹ ಸಿವಿಲ್ ಗುತ್ತಿಗೆದಾರರು / ಟೆಂಡರ್‌ನ್ನು ದ್ವಿ-ಲಕೋಟೆ ಪದ್ಧತಿಯಲ್ಲಿ ಈ ಕೆಳಗಡೆ ಸಹಿ ಮಾಡಿರುವವರು ಆಹ್ವಾನಿಸಿರುತ್ತಾರೆ. ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://eproc.karnataka.gov.in** ಮುಖಾಂತರ ಕರೆದಿರುವ ಈ ಕೆಳಕಂಡ ಕಾಮಗಾರಿಗೆ ಟೆಂಡರ್‌ನಲ್ಲಿ ಭಾಗವಹಿಸಬಹುದು. ಟೆಂಡರ್ ದಾಖಲೆಯಲ್ಲಿ ತಿಳಿಸಿರುವಂತೆ (Technical qualification criteria)ದ ಎಲ್ಲಾ ಅಗತ್ಯ ದಾಖಲೆಗಳನ್ನು ಸಲ್ಲಿಸುವುದು. ಹೆಚ್ಚಿನ ವಿವರಗಳಿಗೆ ಈ ಕಛೇರಿಯಿಂದ ಹಾಗೂ ದೂರವಾಣಿ ಸಂಖ್ಯೆ: 0821-2418828 ರಿಂದ ಮಾಹಿತಿ ಪಡೆಯಬಹುದು.

ವಿಶೇಷ ಸೂಚನೆ: (1) ಟೆಂಡರ್ ಸಲ್ಲಿಸುವ ಗುತ್ತಿಗೆದಾರರುಗಳು ತಮ್ಮ ಗುತ್ತಿಗೆ ರಹದಾರಿ ಪ್ರತಿಯನ್ನು ಹಾಗೂ ತಮ್ಮ ಅಂಚೆ ವಿಳಾಸ ಮತ್ತು ಮೊಬೈಲ್ ಹಾಗೂ ಸ್ಥಿರ ದೂರವಾಣಿಯನ್ನು ಇ-ಪೋರ್ಟಲ್‌ನಲ್ಲಿ ನಮೂದಿಸಲು ಸೂಚಿಸಿದೆ. (2) ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟೇಷನ್‌ನಲ್ಲಿ ತಿಳಿಸಿರುವಂತೆ ಟೆಂಡರ್ ಅನುಮೋದಿತ ಮೊಬಲಗಿಗೆ 3% ರಷ್ಟು ಭದ್ರತಾ ಠೇವಣಿಯನ್ನು (Security Deposit) ಕೆಲಸದ ಆದೇಶವನ್ನು ಪಡೆಯುವ ಮೊದಲು ಸಲ್ಲಿಸತಕ್ಕದ್ದು ಹಾಗೂ ಗುತ್ತಿಗೆದಾರರು ಟೆಂಡರ್‌ಗಿಟ್ಟ ಮೊತ್ತಕ್ಕಿಂತ ಕಡಿಮೆ ದರ ನಮೂದಿಸಿದ್ದಲ್ಲಿ ವ್ಯತ್ಯಾಸದ ಮೊತ್ತಕ್ಕೆ ರಾಷ್ಟ್ರೀಕೃತ ಬ್ಯಾಂಕಿನಿಂದ Performance Bank Guarantee ಯನ್ನು ಕರಾರು ಸಮಯದಲ್ಲಿ ಸಲ್ಲಿಸುವುದು ತಪ್ಪಿದಲ್ಲಿ ಟೆಂಡರ್ ನಿಯಮಾನುಸಾರ ಕ್ರಮಕೈಗೊಳ್ಳಲಾಗುವುದು.

ಇ-ಪ್ರೊಕ್ಯೂರ್‌ಮೆಂಟ್ ವ್ಯವಸ್ಥೆಯಡಿ ಟೆಂಡರ್ ಶೆಡ್ಯೂಲ್ ದಿನಾಂಕಗಳು ಈ ಕೆಳಕಂಡಂತಿವೆ.

1	ಇ-ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳು ಚಾಲ್ತಿಗೆ ಬರುವ ದಿನಾಂಕ	24-05-2021	ಬೆಳಿಗ್ಗೆ 11.00 ಗಂಟೆ ನಂತರ
2	ಪ್ರೀ ಬಿಡ್ ಮೀಟಿಂಗ್	15-06-2021	ಬೆಳಿಗ್ಗೆ 11.30 ಗಂಟೆಗೆ
3	ಟೆಂಡರ್ ಸಲ್ಲಿಸುವ ಕೊನೆ ದಿನಾಂಕ ಮತ್ತು ಕಾಲ	23-06-2021	ಸಂಜೆ 05.30 ಗಂಟೆವರೆಗೆ
4	ಟೆಂಡರ್‌ನ ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ ಮತ್ತು ಕಾಲ	24-06-2021	ಸಂಜೆ 05.30 ಗಂಟೆಯ ನಂತರ
5	ಆರ್ಥಿಕ ಟೆಂಡರ್ ಅನ್ನು ತೆರೆಯುವ ದಿನಾಂಕ ಮತ್ತು ಕಾಲ	ತಾಂತ್ರಿಕ ಬಿಡ್‌ನಲ್ಲಿ ಆಯ್ಕೆಯಾದ ಗುತ್ತಿಗೆದಾರರಿಗೆ ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಕಾಲವನ್ನು ತಿಳಿಸಲಾಗುವುದು.	

2020-21ನೇ ಸಾಲಿನ 15ನೇ ಹಣಕಾಸು ಅನುದಾನ

ಕ್ರ.ಸಂ.	ಕಾಮಗಾರಿಯ ಹೆಸರು	ಅಂದಾಜು ಮೊತ್ತ (ಲಕ್ಷ ರೂ.ಗಳಲ್ಲಿ)
1	ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಸಮಗ್ರ ಘನತ್ಯಾಜ್ಯ ನಿರ್ವಹಣೆಗೆ ಉಪಯೋಗಿಸುವ ವಾಹನಗಳಿಗೆ ಸ್ಮಾರ್ಟ್ ಪಾರ್ಕಿಂಗ್ ಹಾಗೂ ಆಧುನಿಕ ಆಟಪಫಮೇಟೆಡ್ ಸರ್ವೀಸ್ ಸ್ಟೇಷನ್ ಸ್ಥಾಪನೆ ಕಾಮಗಾರಿ.	350.00

ಸಹಿ/- ಕಾರ್ಯಪಾಲಕ ಅಭಿಯಂತರರು(ಪೂ), ಮೈಸೂರು ಮಹಾನಗರ ಪಾಲಿಕೆ, ಮೈಸೂರು.
DIPR/MYS/YC/143/2021-22

ವಾರ್ಡ್ ಸಮಿತಿಯಲ್ಲಿ ಸ್ಥಳೀಯರ ಕಡೆಗಣನೆ: ಖಂಡನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೋವಿಡ್ ನಿರ್ವಹಣೆಗಾಗಿ ಬೆಳ್ಳಂದೂರು ವಾರ್ಡ್ ಮಟ್ಟದ ಸಮಿತಿ (ಡಬ್ಲ್ಯುಡಿಸಿ) ರಚನೆ ವೇಳೆ ಸ್ಥಳೀಯರನ್ನು ಸಂಪೂರ್ಣವಾಗಿ ಕಡೆಗಣಿಸಲಾಗಿದೆ. ಇದರಲ್ಲಿ ರಾಜಕೀಯ ಪಕ್ಷವೊಂದರ ಪ್ರತಿನಿಧಿಗಳೇ ಹೆಚ್ಚಿದ್ದಾರೆ' ಎಂದು ಬೆಂಗಳೂರು ನವನಿರ್ಮಾಣ ಪಕ್ಷ ಆರೋಪಿಸಿದೆ.

'ಡಬ್ಲ್ಯುಡಿಸಿ ರಚನೆ ಉದ್ದೇಶದಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಇತ್ತೀಚೆಗೆ ನಾಗರಿಕರ ಸಭೆ ಕರೆದಿತ್ತು. ಇದರಲ್ಲಿ ಕೆಲಸ ಮಾಡಲು ಆಸಕ್ತಿ ತೋರಿದ್ದ ಅನೇಕರು ತಮ್ಮ ಹೆಸರುಗಳನ್ನೂ ನೋಂದಾಯಿಸಿಕೊಂಡಿದ್ದರು. ಇಷ್ಟಾದ ಮೇಲೂ ಬಿಬಿಎಂಪಿಯು ಜನಪ್ರತಿನಿ-ಧಿಗಳ ಒತ್ತಡಕ್ಕೆ ಮಣಿದು ಇತ್ತೀಚೆಗೆ ಸಭೆಯೊಂದನ್ನು ಆಯೋಜಿಸಿತ್ತು. ಅದರಲ್ಲಿ ಒಂದೇ ಪಕ್ಷದ ಅನೇಕ ಮುಖಂಡರು ಭಾಗಿಯಾಗಿದ್ದರು. ಅವರೆಲ್ಲಾ ಏಕಪಕ್ಷೀಯವಾಗಿ ತೀರ್ಮಾನ ಕೈಗೊಂಡಿದ್ದಾರೆ. ಭಿತ್ತಿಪ-ತ್ರವೊಂದರಿಂದ ಈ ವಿಷಯ ಎಲ್ಲರ ಗಮನಕ್ಕೆ ಬಂದಿದೆ. ಈ ವಿಚಾರ ತಿಳಿದು ಸ್ಥಳೀಯರು ಬೇಸರಗೊಂಡಿದ್ದಾರೆ' ಎಂದು ಪ್ರಕಟಣೆ ತಿಳಿಸಿದೆ.

'ಕಲಾವಿದರಿಗೆ ಪರಿಹಾರ ಹಂಚಿಕೆ ಪಾರದರ್ಶಕವಾಗಿರಲಿ'

ಪ್ರಜಾವಾಣಿ ವಾರ್ತೆ


ಮುದ್ದುಕೃಷ್ಣ

ಬೆಂಗಳೂರು: 'ಕೋವಿಡ್‌ನಿಂದ ಕಲಾವಿದರು ಹಾಗೂ ಸಾಂಸ್ಕೃತಿಕ ಸಂಘ-ಸಂಸ್ಥೆಗಳು ಸಂಕಷ್ಟದ ಪರಿಸ್ಥಿತಿ ಎದುರಿಸುತ್ತಿವೆ. ಸರ್ಕಾರವು ಘೋಷಿಸಿರುವ ಪರಿಹಾರವು ಈ ಬಾರಿಯಾದರೂ ಪಾರದರ್ಶಕವಾಗಿ ಹಂಚಿಕೆಯಾಗಬೇಕು' ಎಂದು ಸುಗಮ ಸಂಗೀತ ಪರಿಷತ್ತಿನ ಅಧ್ಯಕ್ಷ ವೈ.ಕೆ.ಮುದ್ದುಕೃಷ್ಣ ತಿಳಿಸಿದ್ದಾರೆ.

'ವಿವಿಧ ಕಲಾ ಪ್ರಕಾರಗಳ ಜತೆಗೆ ಸುಗಮ ಸಂಗೀತ ಕ್ಷೇತ್ರ ಕೂಡ ಕೋವಿಡ್‌ನಿಂದ ಸಮಸ್ಯೆ ಎದುರಿಸುತ್ತಿದೆ. ಕಲಾವಿದರು, ವಾದ್ಯಗಾರರು, ತಂತ್ರಜ್ಞರು, ಧ್ವನಿ ವರ್ಧಕರಿಗೆ ಜೀವನ ನಿರ್ವಹಣೆ ಸವಾಲಾಗಿದೆ. ಒಂದು ಹೊತ್ತಿನ ಊಟಕ್ಕೆ ಕೂಡ ಕೆಲವರು ಪರದಾಟ ನಡೆಸಬೇಕಾದ ಪರಿಸ್ಥಿತಿಯಿದೆ. ಹಾಗಾಗಿ, ಈ ಪರಿಹಾರಕ್ಕೆ ಯಾರು ಅರ್ಹರು ಎನ್ನುವುದನ್ನು ಜಿಲ್ಲಾ ಮಟ್ಟದಲ್ಲಿಯೇ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರು ಪಟ್ಟಿ ಸಿದ್ಧಪಡಿಸಿ, ತಲಾ ₹ 3 ಸಾವಿರವನ್ನು ಬ್ಯಾಂಕ್ ಖಾತೆಗೆ ಜಮಾ ಮಾಡಬೇಕು' ಎಂದು ಆಗ್ರಹಿಸಿದ್ದಾರೆ.

'ಕಳೆದ ಬಾರಿ ಸಿದ್ಧಪಡಿಸಲಾಗಿದ್ದ ಕಲಾವಿದರ ಪಟ್ಟಿ ಆಧರಿಸಿ ಫಲಾನು-ಭವಿಗಳನ್ನು ಗುರುತಿಸುವುದು ಸೂಕ್ತ ಕ್ರಮವಲ್ಲ. 16 ಸಾವಿರಕ್ಕೂ ಅಧಿಕ ಕಲಾ ತಂಡಗಳಿವೆ. ತುರ್ತಾಗಿ ಸಮೀಕ್ಷೆ ನಡೆಸಿ, ಸಂಕಷ್ಟದಲ್ಲಿರುವ ಕಲಾತಂಡಗಳು ಮತ್ತು ಕಲಾವಿದರನ್ನು ಪಟ್ಟಿಮಾಡಿ, ಆರ್ಥಿಕ ನೆರವು ನೀಡಬೇಕು' ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಿಜಜೀವನದಲ್ಲೂ ಹಸೆಮಣೆ ಏರಿದ ಚಂದನ್ ಕುಮಾರ್ ಹಾಗೂ ಕವಿತಾ ಗೌಡ

ನಿಧಿಗೆ ಆತ್ಮಕಥೆ ಚಿತ್ರದಲ್ಲಿ ನಟಿಸುವಾಸೆ

ಬಿಗ್‌ಬಾಸ್ ಅರ್ಧಕ್ಕೇ ಸ್ಥಗಿತವಾದ ಕಾರಣ ನಟ ನಿಧಿ ಸುಬ್ಬಯ್ಯ ಮೈಸೂರಿಗೆ ಮರಳಿದ್ದಾರೆ. ಇದೀಗ ಮತ್ತೆ ಸಿನಿಮಾದತ್ತ ಹೆಜ್ಜೆ ಇಡಲು ಸಜ್ಜಾಗಿರುವ ನಿಧಿ, ಹಾರರ್ ಥ್ರಿಲ್ಲರ್ ಸಿನಿಮಾವೊಂದರಲ್ಲಿ ಬಣ್ಣ ಹಚ್ಚಲಿದ್ದಾರೆ. ಚಂದನವನಕ್ಕೆ ಇನ್ನಷ್ಟು ಹತ್ತಿರವಾಗಲು ಬೆಂಗಳೂರಿನಲ್ಲೇ ನೆಲೆಸಲು ನಿರ್ಧರಿಸಿರುವ ಅವರು, ಮುಂದಿನ ಸಿನಿ ಜರ್ನಿಯ ಬಗ್ಗೆ 'ಸಿನಿಮಾ ಪುರವಣಿ' ಜೊತೆ ಮಾತಿಗಿಳಿದರು.

ನಿಧಿ ಸುಬ್ಬಯ್ಯ

ಅಭಿಲಾಷ್ ಪಿ.ಎಸ್.

• ಬಿಗ್‌ಬಾಸ್‌ಗೆ ಕರೆಯಬಹುದು ಎನ್ನುವ ಮುನ್ಸೂಚನೆ ಇತ್ತೇ?

ಆ ಸಂದರ್ಭದಲ್ಲಿ ನಾನು ಮುಂಬೈನಲ್ಲಿದ್ದೆ. ಮೊದಲು ನಾನು ಬರುವುದಿಲ್ಲ ಎಂದೇ ಹೇಳಿದ್ದೆ. ಬಿಗ್‌ಬಾಸ್ ಹೇಗಿರುತ್ತದೆ ಎನ್ನುವುದೂ ತಿಳಿದಿರಲಿಲ್ಲ. ಯಾವ ಭಾಷೆಯಲ್ಲೂ ನಾನು ಬಿಗ್‌ಬಾಸ್ ನೋಡಿರಲಿಲ್ಲ. ನಂತರದಲ್ಲಿ ನನ್ನಲ್ಲಿದ್ದ ಒಂದಿಷ್ಟು ಗೊಂದಲ, ಭಯವನ್ನು ಬಿಗ್‌ಬಾಸ್ ತಂಡ ದೂರ ಮಾಡಿತು. ಕೊನೆಯದಾಗಿ ಒಪ್ಪಿಕೊಂಡ ಸ್ಪರ್ಧಿ ನಾನೇ ಆಗಿದ್ದೆ. ತುಂಬಾ ಯೋಚಿಸಿದ ಬಳಿಕ, ಫೆ.18ಕ್ಕೆ ಒಪ್ಪಿಗೆ ನೀಡಿದೆ. ಒಪ್ಪಿಗೆ ನೀಡಿದ ಬಳಿಕ ಅಮ್ಮನಿಗೆ ಈ ವಿಷಯ ಹೇಳಿ ಅತ್ತಿದ್ದೆ. ಜನರು ದಿನವೂ ನಮ್ಮನ್ನು ನೋಡುತ್ತಾರೆ. ನನಗೆ ಒಳಗೊಂದು, ಹೊರಗೊಂದು ಇರಲು ಸಾಧ್ಯವಿಲ್ಲ. ಹೇಗಾಗುತ್ತದೆಯೋ ಎನ್ನುವ ಭಯವಿತ್ತು. ಆದರೆ, ಬಿಗ್‌ಬಾಸ್ ಮನೆಯಲ್ಲೇ ಹಲವರು ಸ್ನೇಹಿತರು ಸಿಕ್ಕಿದರು. ಅದರ ಗುಂಗಿನಿಂದ ನಾನು ಇನ್ನೂ ಹೊರಬಂದಿಲ್ಲ. ಯಾರಿಗಾದರೂ ಬಿಗ್‌ಬಾಸ್ ಆಫರ್ ಬಂದರೆ ಖಂಡಿತ ಯೋಚನೆ ಮಾಡಬೇಡಿ, 'ಬರುತ್ತೇನೆ ಎನ್ನಿ' ಎಂದು ಈಗ ಹೇಳುತ್ತೇನೆ. ಇದೊಂದು ಅದ್ಭುತ ಅನುಭವ.

• ಬಿಗ್‌ಬಾಸ್‌ನಿಂದ ನೀವು ಕಲಿತ ಪಾಠ?

ಬೆಳಗ್ಗೆ ಏಳಲು ಹಾಡಿಲ್ಲ, ಊಟ ಸೇರುತ್ತಿಲ್ಲ. ಮನೆಯೊಳಗೆ ಜ್ಯೂಸ್, ಸೇಬಿಗೆ ಕಿತ್ತಾಡುತ್ತಿದ್ದೆವು. ಈಗ ಎಲ್ಲವೂ ಇದೆ. ಆದರೆ ಏನೂ ಸೇರುತ್ತಿಲ್ಲ. ಬಿಗ್‌ಬಾಸ್ ಅರ್ಧಕ್ಕೇ ನಿಲ್ಲಲಿದೆ ಎನ್ನುವುದು ನಮಗೆಲ್ಲರಿಗೂ ಒಂದು ಕ್ಷಣ ಆಘಾತದ ವಿಷಯವಾಗಿತ್ತು. ಮನೆಯೊಳಗೂ ನಾನು ನಾನಾಗಿಯೇ ಇದ್ದೆ. 15 ಜನರು ಒಟ್ಟಿಗೆ ಇರುವಾಗ ಜಗಳ ಸಹಜ. ನನ್ನ ಅಪ್ಪ–ಅಮ್ಮನಿಗೆ ನಾನೊಬ್ಬಳೇ ಮಗಳು. ಹೀಗಾಗಿ ನಾನು ಯಾರೊಂದಿಗೂ ಹೆಚ್ಚು ಬೆರೆಯುತ್ತಿರಲಿಲ್ಲ. ಬಿಗ್‌ಬಾಸ್ ಮನೆ ಒಳಗೆ ಪ್ರವೇಶಿಸಿದ ನಂತರ ಈ ವಿಷಯದಲ್ಲಿ ನಾನು ಬದಲಾಗಿದ್ದೇನೆ. 17 ಜನರಿಗೆ ಅಡುಗೆ ಮಾಡಿದ್ದು ಮೊದಲ ಬಾರಿಯಾಗಿತ್ತು. ಕೋಳಿ ಜಗಳ ಆದ ಮೇಲೆ ಮತ್ತೆ ಸ್ನೇಹಿತರಾಗುವುದು ಹೀಗೆ ತುಂಬಾ ಖುಷಿಯಾಗಿದ್ದೆ. ಈಗ ಖಾಲಿ ಖಾಲಿ ಎನಿಸುತ್ತಿದೆ.

• ಪಂಚರಂಗಿ, ಅಣ್ಣಾಬಾಂಡ್ ಬಳಿಕ ಬಾಲಿವುಡ್ ಪಯಣ. ಒಳ್ಳೆಯ ಅವಕಾಶಕ್ಕಾಗಿ ನಿಧಿ ಕಾದಿದ್ದರೇ?

ಇಂದಿಗೂ ನಾನು 'ಪಂಚರಂಗಿ ಹುಡ್ಗಿ' ಆಗಿಯೇ ಗುರುತಿಸಿಕೊಳ್ಳುತ್ತಿದ್ದೇನೆ. 'ಪಂಚರಂಗಿ' ದೊಡ್ಡ ಹಿಟ್ ಆದ ಚಿತ್ರ. ನನ್ನ ಸಿನಿ ಪಯಣದಲ್ಲಿ ಅಷ್ಟು ಬೇಗ ಯಶಸ್ಸು ಸಿಗುತ್ತದೆ ಎಂದುಕೊಂಡಿರಲಿಲ್ಲ. ಆಗಷ್ಟೇ ನಾನು ನಟನೆ ಕಲಿಯುತ್ತಿದ್ದೆ. ಅದಾದ ಬಳಿಕ 'ಕೃಷ್ಣನ ಮ್ಯಾರೇಜ್ ಸ್ಟೋರಿ', 'ಅಣ್ಣಾಬಾಂಡ್', 'ಆಯುಷ್ಮಾನ್‌ಭವ' ಚಿತ್ರದಲ್ಲಿ ನಾನು ನಟಿಸಿದ್ದೆ. ಈ ಸಂದರ್ಭದಲ್ಲೂ ಹಲವು ಕಥೆಗಳನ್ನು ನಾನು ಕೇಳಿದ್ದೆ. ಆದರೆ ಎಲ್ಲ ಕಥೆಗಳಲ್ಲೂ ನನ್ನ ಪಾತ್ರ 'ಪಂಚರಂಗಿ' ಚಿತ್ರದಲ್ಲಿನ ಪಾತ್ರದಂತೆ ಬಬ್ಲಿಬಬ್ಲಿಯಾಗೇ ಇತ್ತು. ಈ ರೀತಿ ಪಾತ್ರಗಳನ್ನೇ ಮಾಡಿದರೆ ಜನರಿಗೂ, ನನಗೂ ಹಿಡಿಸುವುದಿಲ್ಲ. ಇದು ಒಂದು ರೀತಿ 9–5 ಕಚೇರಿ ಕೆಲಸದ ಹಾಗಾಗುತ್ತಿತ್ತು. ಹೀಗಾಗಿ ಬೇರೆ ರೀತಿಯ ಪಾತ್ರಕ್ಕಾಗಿ ಕಾಯುತ್ತಿದ್ದೆ. ಕಥೆ ಆಯ್ಕೆಗೆ ಹೆಚ್ಚಿನ ಒತ್ತು ನೀಡಿದ್ದೆ. 'ಅಣ್ಣಾಬಾಂಡ್' ಚಿತ್ರದ ಚಿತ್ರೀಕರಣದ ಸಂದರ್ಭದಲ್ಲಿ ಎರಡು ಬಾಲಿವುಡ್ ಸಿನಿಮಾಗಳ ಆಫರ್ ಬಂದಿತ್ತು. ಇದಕ್ಕಾಗಿ ನಾನು ಮುಂಬೈಗೆ ತೆರಳಿದೆ.

• ಈ ರೀತಿಯ ಪಾತ್ರ ಮಾಡಬೇಕು ಎನ್ನುವ ಆಸೆ ನಿಮಗೆ ಇದೆಯೇ?

ಒಂದು ಪಾತ್ರದ ಬಗ್ಗೆ ನಾನೇ ಆಶ್ಚರ್ಯಪಡಬೇಕು. ಇಂತಹ ಅವಕಾಶವನ್ನು ನಾನೆಂದೂ ಬಿಟ್ಟುಕೊಡುವುದಿಲ್ಲ. ಪಂಚರಂಗಿ ಸಿನಿಮಾದಲ್ಲಿ ನನಗೆ ನೀಡಿದ್ದ ಪಾತ್ರಕ್ಕೆ ನಾನು ನ್ಯಾಯ ಒದಗಿಸಿದ್ದೆ. ಆತ್ಮಕಥೆಯಿರುವ ಚಿತ್ರಗಳಲ್ಲಿ ಪಾತ್ರ ಮಾಡಬೇಕು ಎನ್ನುವ ಆಸೆ ಇದೆ. ಏಕೆಂದರೆ ಇಂತಹ ಪಾತ್ರಗಳು ಬಹಳಷ್ಟು ಸವಾಲಿನದ್ದಾಗಿರುತ್ತದೆ. ಇಂತಹ ಪಾತ್ರಗಳನ್ನು ಮಾಡಿ, ಈ ಪಾತ್ರವನ್ನು ಮುಂದೆ ಹಲವು ವರ್ಷ ಜನರು ನನ್ನನ್ನು ನೆನಪಿಸಿಕೊಳ್ಳುವಂತೆ ಮಾಡಬೇಕು ಎಂಬ ಅಭಿಲಾಷೆ.

• ಲೋಹಿತ್ ನಿರ್ದೇಶನದ ಚಿತ್ರದಲ್ಲಿ ನಿಮ್ಮ ಪಾತ್ರ ಹೇಗಿರುತ್ತದೆ?

ಈ ಚಿತ್ರದಲ್ಲಿ ಹೀರೋ ಇಲ್ಲ. ಹೀರೋಯಿನ್ ಆಧಾರಿತ ಹಾರರ್ ಥ್ರಿಲ್ಲರ್ ಚಿತ್ರವಿದು. ಹೀಗಾಗಿ ಸವಾಲು ಬಹಳಷ್ಟಿದೆ. ಯೂಟ್ಯೂಬ್ ಬ್ಲಾಗರ್ ಆಗಿರುವ ಹುಡುಗಿಯೊಬ್ಬಳು ಕಾಡೊಂದರಲ್ಲಿ ದೆವ್ವ ಇಲ್ಲವೆಂದು ಸಾಬೀತುಪಡಿಸಲು ಗೊಪ್ರೊ ಕ್ಯಾಮೆರಾದೊಂದಿಗೆ ಹೋಗುತ್ತಾಳೆ. ನಂತರ ನಡೆಯುವ ಘಟನೆಗಳು ಏನು ಎನ್ನುವುದು ಚಿತ್ರದ ಕಥೆ. ನನ್ನ ಪಾತ್ರದ ಅವಧಿಯಲ್ಲಿ ಶೇ 90ರಷ್ಟು ಭಾಗ ನಾನು ಒಬ್ಬಂಟಿಯಾಗಿ ಇರುತ್ತೇನೆ. ಬಿಗ್‌ಬಾಸ್ ಪ್ರಾರಂಭವಾಗುವುದಕ್ಕಿಂತಲೂ ಮೊದಲೇ ಈ ಚಿತ್ರ ಒಪ್ಪಿಕೊಂಡಿದ್ದೆ. ಮಾರ್ಚ್‌ನಿಂದ ಚಿತ್ರೀಕರಣ ಆರಂಭಕ್ಕೆ ಚಿತ್ರತಂಡ ನಿರ್ಧರಿಸಿತ್ತು. ಆದರೆ ಬಿಗ್‌ಬಾಸ್ ಮುಗಿದ ನಂತರ ಚಿತ್ರೀಕರಣ ಆರಂಭಿಸುವುದಕ್ಕೆ ಚಿತ್ರತಂಡ ಒಪ್ಪಿಕೊಂಡಿತು. ಇದೀಗ ಲಾಕ್‌ಡೌನ್ ಆದ ಕಾರಣ ಚಿತ್ರೀಕರಣ ಮತ್ತೆ ಮುಂದಕ್ಕೆ ಹೋಗಿದೆ.

• ಬಿಗ್‌ಬಾಸ್ ಬಳಿಕ ಮತ್ತಷ್ಟು ಅವಕಾಶಗಳು ಅರಸಿಬಂದಿವೆಯೇ?

ನಟನೆ ಬಿಡಲು ಸಾಧ್ಯವಿಲ್ಲ. ಒಮ್ಮೆ ಬಣ್ಣಹಚ್ಚಿದ ಬಳಿಕ ತೆಗೆಯಲು ಸಾಧ್ಯವಿಲ್ಲ. ಹೀಗಾಗಿ ಸಿನಿಮಾ ಪಯಣ ಹೀಗೆಯೇ ಸಾಗಲಿದೆ. ಬಿಗ್‌ಬಾಸ್ ಮನೆಯಲ್ಲಿ ನನ್ನ ವ್ಯಕ್ತಿತ್ವ ಗುರುತಿಸಿದ ಹಲವು ನಿರ್ದೇಶಕರು, ಸಹ ನಟರು ನನಗೆ ಕರೆ ಮಾಡಿ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಸಿನಿಮಾ ಪಯಣ ಮುಂದುವರಿಸಲು ಲಾಕ್‌ಡೌನ್ ಬಳಿಕ ನಾನು ಬೆಂಗಳೂರಿನ ಜೆ.ಪಿ. ನಗರಕ್ಕೆ ಸ್ಥಳಾಂತರವಾಗುತ್ತಿದ್ದೇನೆ. ಈ ಹಿಂದೆ ಬೆಂಗಳೂರಿನಲ್ಲಿ ಚಿತ್ರೀಕರಣ ಮುಗಿಸಿಕೊಂಡು ಮೈಸೂರಿಗೆ ಮರಳುತ್ತಿದ್ದೆ. ಬಿಗ್‌ಬಾಸ್‌ನಲ್ಲಿ ಸ್ಪರ್ಧಿಸಿದ್ದ ಹಲವರು ಜೆ.ಪಿ.ನಗರದಲ್ಲಿದ್ದಾರೆ. 'ನಾವೇ ಮನೆ ಹುಡುಕುತ್ತೇವೆ ಬಾ' ಎಂದು ಅವರೂ ಹೇಳಿದ್ದಾರೆ. ಬಿಗ್‌ಬಾಸ್ 8ನೇ ಆವೃತ್ತಿಗೆ ಅಂತ್ಯ ಸಿಗದೇ ಇದ್ದರೆ, ಬೆಂಗಳೂರಿನಲ್ಲಿ ನಾನು ವಾಸಿಸಲಿರುವ ನನ್ನ ಮನೆಯಲ್ಲೇ ಬಿಗ್‌ಬಾಸ್ ನಡೆಯಲಿದೆ. ❖

ಭುವಿಯ ತಂಗಿ ಬಿಂದು

ರೇಷ್ಮಾ

ಮುದ್ದು ಮುಖದ, ಅರಳು ಹುರಿದಂತೆ ಪಟ ಪಟನೆ ಮಾತನಾಡುತ್ತಾ, ಅಕ್ಕನ ಕಾಲೆಳೆಯುವ ತುಂಟ ಹುಡುಗಿ ಬಿಂದು. ಈಕೆ ಕಲರ್ಸ್ ಕನ್ನಡ ವಾಹಿನಿಯ 'ಕನ್ನಡತಿ' ಧಾರಾವಾಹಿಯ ನಾಯಕಿ ಭುವನೇಶ್ವರಿ(ಭುವಿ) ಯ ತಂಗಿ. ಈ ಧಾರಾವಾಹಿಯ ಪ್ರತಿ ಪಾತ್ರವೂ ಕರ್ನಾಟಕದಾದ್ಯಂತ ಮನೆಮಾತಾಗಿದೆ. ಬಿಂದು ಪಾತ್ರವೂ ಹಾಗೆ, ಕನ್ನಡರಿಗೆ ಈಗ ಅಚ್ಚುಮೆಚ್ಚು. ಸಿಕ್ಕ ಪಾತ್ರಕ್ಕೆ ನ್ಯಾಯ ಒದಗಿಸಿರುವ ಬಿಂದು ಪಾತ್ರದಾರಿಯ ಹೆಸರು ಮೋಹಿರಾ ಆಚಾರ್ಯ. ಶಿವಮೊಗ್ಗ ಮೂಲದ ಇವರು ಹುಟ್ಟಿ ಬೆಳೆದಿದ್ದೆಲ್ಲಾ ಬೆಂಗಳೂರಿನಲ್ಲಿ. ಈಕೆ ತಮ್ಮ ನಟನಾ ಪಯಣದ ಬಗ್ಗೆ 'ಸಿನಿಮಾ ಪುರವಣಿ' ಜೊತೆ ಮಾತನಾಡಿದ್ದಾರೆ.

ನಟನಾ ಪಯಣದ ಬಗ್ಗೆ

ನನಗೆ ಬಾಲ್ಯದಿಂದಲೂ ನೃತ್ಯದ ಮೇಲೆ ಒಲವಿತ್ತು. ಆದರೆ ನಟಿಯಾಗಬೇಕು ಎಂದುಕೊಂಡವಳಲ್ಲ. ಎಂಜಿನಿಯರಿಂಗ್ ಕೊನೆಯ ವರ್ಷದಲ್ಲಿ ಓದುತ್ತಿದ್ದಾಗ ಆಕಸ್ಮಿಕವಾಗಿ ನಟನೆಯ ಅವಕಾಶ ಸಿಕ್ಕಿತ್ತು. ಮೊದಲ ಬಾರಿ ನಟಿಸಿದ್ದು 'ಪ್ರೇಮಲೋಕ' ಧಾರಾವಾಹಿಯಲ್ಲಿ. ಅದರಲ್ಲಿ ನನ್ನದು ನೆಗೆಟಿವ್ ಪಾತ್ರ. ಕನ್ನಡತಿಯಲ್ಲಿ ಬೇರೆಯವರು ಮಾಡುತ್ತಿದ್ದ ಪಾತ್ರವನ್ನು ನಾನು ಮಾಡಬೇಕಾಯ್ತು. ಅವಕಾಶ ಸಿಕ್ಕಾಗ ಬೇಡ ಎನ್ನದೇ ಒಪ್ಪಿಕೊಂಡೆ. ಮೊದಲಿಗೆ ಸವಾಲು ಎನ್ನಿಸಿತ್ತು. ಆದರೆ ಈಗ ಧಾರಾವಾಹಿ ನನಗೆ ಸಾಕಷ್ಟು ಹೆಸರು ತಂದುಕೊಟ್ಟಿದೆ.

ಕನ್ನಡತಿ ಧಾರಾವಾಹಿ ಹಾಗೂ ನಿಮ್ಮ ಪಾತ್ರ

ಕನ್ನಡತಿ ಧಾರಾವಾಹಿಯ ಕಥೆ, ಚಿತ್ರಕಥೆ, ನಿರ್ದೇಶನ ಹಾಗೂ ಪಾತ್ರವರ್ಗ ಈ ಎಲ್ಲವೂ ಧಾರಾವಾಹಿಯ ಯಶಸ್ಸಿಗೆ ಕಾರಣ. ನಮ್ಮ ಧಾರಾವಾಹಿ ಕರ್ನಾಟಕದಾದ್ಯಂತ ಅಚ್ಚುಮೆಚ್ಚಾಗಿದೆ. ಪ್ರತಿಯೊಂದು ಡೈಲಾಗ್‌ಗಳನ್ನು ಜನ ಮೆಚ್ಚುತ್ತಿದ್ದಾರೆ. ಇದರೊಂದಿಗೆ ಬಿಂದು ಹಾಗೂ ಭುವಿಯಂತಹ ಅಕ್ಕ–ತಂಗಿ ಕರ್ನಾಟಕದ ಪ್ರತಿ ಮನೆಯಲ್ಲೂ ಇರುತ್ತಾರೆ. ಇದರಲ್ಲಿ ಅಕ್ಕ–ತಂಗಿಯರ ನಡುವಿನ ಮಧುರ ಬಾಂಧವ್ಯವನ್ನು ತುಂಬಾ ಚೆನ್ನಾಗಿ ತೋರಿಸಲಾಗಿದೆ. ಬಿಂದು ಪಾತ್ರದಲ್ಲಿ ನಟಿಸಲು ಅವಕಾಶ ನೀಡಿದ್ದು ನಮ್ಮ ನಿರ್ದೇಶಕರು. ಅವರ ಕಾರಣದಿಂದಲೇ ನಾನು ಇಂದು ಈ ಪಾತ್ರವನ್ನು ಇಷ್ಟು ಯಶಸ್ವಿಯಾಗಿ ನಿಭಾಯಿಸಲು ಸಾಧ್ಯವಾಗಿದೆ.

ಸಿನಿಮಾದಲ್ಲಿ ಅವಕಾಶಗಳು ಸಿಕ್ಕಿವೆಯೇ?

ಕನ್ನಡತಿಯಲ್ಲಿ ಇವರ ನಟನೆಯನ್ನು ನೋಡಿದ ತೆಲುಗಿನ ನಿರ್ದೇಶಕರೊಬ್ಬರು ಸಿನಿಮಾದಲ್ಲಿ ನಟಿಸಲು ಅವಕಾಶ ನೀಡಿದ್ದಾರೆ. ಕೌಟುಂಬಿಕ ಹಿನ್ನೆಲೆಯುಳ್ಳ ತೆಲುಗು ಚಿತ್ರದಲ್ಲಿ ಇವರದ್ದು ನಾಯಕಿಯ ಪಾತ್ರ. ಈ ಸಿನಿಮಾದ ಶೂಟಿಂಗ್ ನಡೆಯುತ್ತಿದೆ. ಅಪ್ಪಟ ಕನ್ನಡತಿಯಾಗಿರುವ ಮೋಹಿರಾಗೆ ಕನ್ನಡ ಸಿನಿಮಾಗಳಲ್ಲಿ ನಟಿಸುವ ಆಸೆ ಇದೆ. ಒಳ್ಳೆಯ ಕಥೆ ಸಿಕ್ಕಿ ನಟಿಸುವ ಅವಕಾಶ ಸಿಕ್ಕರೆ ಮುಂದಿನ ದಿನಗಳಲ್ಲಿ ಖಂಡಿತ ನಟಿಸುತ್ತೇನೆ.

ತಂಡದ ಸಹಕಾರ ಹೇಗಿದೆ?

ಕನ್ನಡತಿ ಧಾರಾವಾಹಿ ತಂಡದ ಬಗ್ಗೆ ಹೆಮ್ಮೆ ಹಾಗೂ ಖುಷಿಯಿಂದ ಮಾತನಾಡುವ ಇವರು ನಮ್ಮ ತಂಡದಲ್ಲಿ ಪ್ರತಿಯೊಬ್ಬರು ಸಹಕಾರ ನೀಡುತ್ತಾರೆ. ನನ್ನ ಪಾತ್ರ ಹೆಚ್ಚಾಗಿ ಬರುವುದು ಭುವಿ (ರಂಜನಿ) ಅವರ ಜೊತೆ. ಅವರು ನನಗೆ ನಟನೆಯ ವೇಳೆ ಧೈರ್ಯ ತುಂಬುತ್ತಾರೆ. ಒಟ್ಟಾರೆ ಹೇಳಬೇಕು ಎಂದರೆ ಇಂದು ನಾನು ಏನಾಗಿದ್ದೇನೆ ಅದಕ್ಕೆ ನಮ್ಮ ತಂಡವೇ ಕಾರಣ.

ಯಾವ ರೀತಿಯ ಪಾತ್ರ ನಿಮಗೆ ಇಷ್ಟ?

ಒಬ್ಬ ನಟಿಯಾಗಿ ನನಗೆ ಎಲ್ಲಾ ರೀತಿಯ ಪಾತ್ರಗಳಲ್ಲಿ ಅಭಿನಯಿಸಬೇಕು, ಎಲ್ಲಾ ಪಾತ್ರಗಳನ್ನು ಸಂಭಾಳಿಸುವ ಸಾಮರ್ಥ್ಯ ನನ್ನಲ್ಲಿ ಇದೆ ಎಂಬುದನ್ನು ತೋರಿಸಬೇಕು. ನನ್ನ ಪ್ರತಿಭೆಯನ್ನು ಒರೆಗೆ ಹಚ್ಚಲು ಒಬ್ಬ ಉತ್ತಮ ನಿರ್ದೇಶಕ ಸಿಗಬೇಕು. ಒಳ್ಳೆಯ ಕಥೆ ಹಾಗೂ ನಿರ್ದೇಶಕರ ಜೊತೆ ಕೆಲಸ ಮಾಡುವ ಕನಸೂ ಇದೆ. ❖

ಕಿರುತೆರೆ

ಲಾಕ್‌ಡೌನ್‌ನಲ್ಲೂ ಪುಟಿದೆದ್ದ ಉತ್ಸಾಹ

ಶರತ್ ಹೆಗ್ಡೆ

ಸಿನಿಮಾ ಚಟುವಟಿಕೆಗಳು ಸ್ಥಗಿತಗೊಂಡು ಸುಮಾರು 10 ದಿನಗಳಾಗಿವೆ. ಈ ಅವಧಿಯಲ್ಲಿ ಚಂದನವನದ ಅನೇಕರು ಅಲ್ಲಲ್ಲಿ ಆಹಾರ ಕಿಟ್ ವಿತರಿಸುವುದು, ಅಂಬುಲೆನ್ಸ್, ಆಮ್ಲಜನಕ ಒದಗಿಸುವುದು, ಆಕ್ಸಿಜನ್ ಬಸ್ ವ್ಯವಸ್ಥೆ ಕಲ್ಪಿಸಿರುವುದು ನಡೆದೇ ಇದೆ. ಈ ನಡುವೆ ಇನ್ನೂ ಕೆಲವರು ಏನು ಮಾಡುತ್ತಿದ್ದಾರೆ ಎಂಬ ಕುತೂಹಲ ಸಿನಿ ಅಭಿಮಾನಿಗಳಲ್ಲಿ ಸಹಜವಾಗಿಯೇ ಇದೆ.

'ಚಂದು–ಚಿನ್ನು' ಮದುವೆ: ಕಿರುತೆರೆ ಧಾರಾವಾಹಿ 'ಲಕ್ಷ್ಮಿ ಬಾರಮ್ಮ' ಖ್ಯಾತಿಯ ಕಲಾವಿದರಾದ ಚಂದನ್‌ಕುಮಾರ್–ಕವಿತಾಗೌಡ ಜೋಡಿ ಮೇ 14ರಂದು ಮದುವೆಯಾಗಿದೆ. ಮಾಸ್ಕ್ ಧರಿಸಿಕೊಂಡೇ ಮದುವೆಯಾದ ಈ ಜೋಡಿ ಮಾಧ್ಯಮಗಳಲ್ಲಿ ಗಮನ ಸೆಳೆದಿತ್ತು.

ತೋಟದ ಮನೆಯಲ್ಲಿ ನಿಖಿಲ್: ನಟ ನಿಖಿಲ್ ಕುಮಾರಸ್ವಾಮಿ ಅವರು ಬಿಡದಿಯ ತೋಟದ ಮನೆಯಲ್ಲಿ ಕುಟುಂಬ ಸಮೇತ ಇದ್ದಾರೆ. ಇತ್ತೀಚೆಗೆ ತಮ್ಮ ತೋಟದ ಮನೆಗೆ ಗಿರ್ ತಳಿಯ ನಾಲ್ಕು ಹಸುಗಳನ್ನು ತರಿಸಿದ್ದರು. ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಅವರು ಈ ವಿಚಾರವನ್ನು ಟ್ವಿಟರ್‌ನಲ್ಲಿ ಹಂಚಿಕೊಂಡಿದ್ದರು.

ಹುಟ್ಟೂರಿನಲ್ಲಿ ಧನಂಜಯ: ನಟ ಧನಂಜಯ ಅವರು ತಮ್ಮ ಹುಟ್ಟೂರು ಅರಸಿಕೆರೆ ಸಮೀಪದ ಕಾಳೇನಹಳ್ಳಿಯಲ್ಲಿ ನೆಲೆಯಾಗಿದ್ದಾರೆ. ಕೋವಿಡ್ ಲಾಕ್‌ಡೌನ್‌ನ ಅವಧಿಯಲ್ಲಿ ಕುಟುಂಬದೊಡನೆ ಕಾಲಕಳೆಯುವುದು ಬಹಳ ಮುಖ್ಯ. ನಮ್ಮ ಉಪಸ್ಥಿತಿ ಜೊತೆಗೆ ಭಾವನಾತ್ಮಕ ಬೆಸುಗೆ ಹೊಂದುವುದು ಈಗಿನ ಅಗತ್ಯ ಎಂದಿದ್ದಾರೆ ಧನಂಜಯ್. ಕೋವಿಡ್ ಸಂದರ್ಭದ ಅಸಹಾಯಕರಿಗೆ ಧನಂಜಯ್ ಹಾಗೂ ಅವರ ಕುಟುಂಬ ಅಲ್ಲಿಯೂ ನೆರವಾಗುತ್ತಿದೆ.

ಚಿತ್ರಕಥೆ ಬರೆಯುತ್ತಿದ್ದಾರೆ ಪೃಥ್ವಿ ಅಂಬರ್: 'ದಿಯಾ' ಖ್ಯಾತಿಯ ನಟ ಪೃಥ್ವಿ ಅಂಬರ್ ಅವರು ಹುಟ್ಟೂರು ಕಾಸರಗೋಡಿಗೆ ತೆರಳಿದ್ದಾರೆ. ಅಲ್ಲಿ ಚಿತ್ರಕತೆ ಬರೆಯುತ್ತಿದ್ದಾರೆ. ಜೊತೆಗೆ ಮಲ್ಲಿಗೆ ತೋಟದಲ್ಲಿ ಕೆಲಸ ಮಾಡುತ್ತಿದ್ದಾರೆ. ತರಕಾರಿ ಬೆಳೆಯುತ್ತಿದ್ದಾರೆ. 'ಚಿಕ್ಕವನಿದ್ದಾಗ ಕೃಷಿ ಮಾಡುತ್ತಿದ್ದೆ. ಹೀಗಾಗಿ, ಅದನ್ನು ಮರೆತಿಲ್ಲ' ಎನ್ನುತ್ತಾರೆ ಪೃಥ್ವಿ.

ಶಿವರಾಜ್ ಕುಮಾರ್ 'ಆಸರೆ': ನಟ ಶಿವರಾಜ್ ಕುಮಾರ್-ಗೀತಾ ದಂಪತಿ 'ಆಸರೆ' ಯೋಜನೆ ಆರಂಭಿಸಿದ್ದಾರೆ. ಕೋವಿಡ್ ಲಾಕ್‌ಡೌನ್‌ನಿಂದ ಸಂಕಷ್ಟಕ್ಕೊಳಗಾದ ಸುಮಾರು 500 ಮಂದಿಗೆ ನಿತ್ಯ ಊಟ, ಉಪಾಹಾರ ಒದಗಿಸುತ್ತಿದ್ದಾರೆ. ನಾಗವಾರ ಪ್ರದೇಶದಲ್ಲಿ ಈ ಯೋಜನೆ ಚಾಲನೆಯಲ್ಲಿದೆ. ಆಹಾರ ವಿತರಣೆಗಾಗಿಯೇ ಪ್ರತ್ಯೇಕ ವಾಹನ ವ್ಯವಸ್ಥೆ ಮಾಡಿಕೊಂಡಿದ್ದಾರೆ. ಲಾಕ್ ಡೌನ್ ಮುಗಿಯುವವರೆಗೂ ಈ ಯೋಜನೆ ಜಾರಿಯಲ್ಲಿರಲಿದೆ ಎಂದು ಶಿವರಾಜ್ ಕುಮಾರ್ ಅವರ ಆಪ್ತರು ಹೇಳಿದ್ದಾರೆ.

ಉಪೇಂದ್ರ ನೆರವಿನಲ್ಲಿ ಮಗ್ನ: ಉಪೇಂದ್ರ ಅವರು ಈಗಾಗಲೇ ಘೋಷಿಸಿರುವಂತೆ ಆಹಾರ ಧಾನ್ಯ, ತರಕಾರಿ ವಿತರಿಸುವ ಕೆಲಸ ಆರಂಭಿಸಿದ್ದಾರೆ. ರೈತರಿಂದಲೇ ಧಾನ್ಯ, ತರಕಾರಿಗಳನ್ನು ಮಾರುಕಟ್ಟೆ ಬೆಲೆಯಲ್ಲೇ ಖರೀದಿಸಿ ಹಂಚುತ್ತಿರುವುದು ವಿಶೇಷ.

ದರ್ಶನ್, ಯಶ್ ಜಾಗೃತಿ: ದರ್ಶನ್ ಮತ್ತು ಯಶ್ ಅವರ ಅಭಿಮಾನಿಗಳ ತಂಡಗಳೂ ಅಲ್ಲಲ್ಲಿ ಅಸಹಾಯಕರಿಗೆ ನೆರವಾಗುತ್ತಿವೆ. ಮಾತ್ರವಲ್ಲ ಉಭಯ ನಟರೂ ಕೂಡಾ ಸಾಮಾಜಿಕ ಜಾಲ ತಾಣಗಳ ಮೂಲಕ ಆರೋಗ್ಯ ಇಲಾಖೆಯ ಪರವಾಗಿ ಕೋವಿಡ್ ಸಂಬಂಧಿಸಿದ ಜಾಗೃತಿ ವಿಡಿಯೊ ತುಣುಕುಗಳನ್ನು ಹರಿಯಬಿಟ್ಟಿದ್ದಾರೆ. ದರ್ಶನ್ ಅವರು ಇತ್ತೀಚೆಗೆ ಕೃಷಿ ಇಲಾಖೆಯ ರಾಯಭಾರಿಯಾಗಿ ನೇಮಕಗೊಂಡಿದ್ದಾರೆ. ಹಿರಿಯ ಕಲಾವಿದರಿಗೆ ನೆರವು ನೀಡುವಲ್ಲಿ ನಟ ಸುದೀಪ್ ಕೂಡಾ ಮುಂಚೂಣಿಯಲ್ಲಿದ್ದಾರೆ.



ಶಿವರಾಜ್‌ಕುಮಾರ್



ಧನಂಜಯ್



ನಿಖಿಲ್ ಕುಮಾರಸ್ವಾಮಿ



ಪೃಥ್ವಿ ಅಂಬರ್

ಲಾಕ್‌ಡೌನ್ ಬಳಿಕ 'ರೌಡಿ ಬೇಬಿ' ತೆರೆಗೆ

ಬಿಗ್‌ಬಾಸ್ ರಿಯಾಲಿಟಿ ಶೋನಲ್ಲಿ ಪಾಲ್ಗೊಂಡು, ಜನಪ್ರಿಯರಾಗಿರುವ ದಿವ್ಯಾ ಸುರೇಶ್ ಅಭಿನಯದ 'ರೌಡಿ ಬೇಬಿ' ಚಿತ್ರದ ಚಿತ್ರೀಕರಣ ಪೂರ್ಣಗೊಂಡಿದ್ದು, ಚಿತ್ರದ ಮೊದಲ ಲಿರಿಕಲ್ ವಿಡಿಯೊ ಹಾಡನ್ನು ಬುಧವಾರ A2 ಮ್ಯೂಸಿಕ್ ಮೂಲಕ ಬಿಡುಗಡೆಗೊಳಿಸಲಾಗಿದೆ.

ವಿಭಿನ್ನ ಕಥಾಹಂದರ ಹೊಂದಿರುವ ಈ ಚಿತ್ರವನ್ನು ರೆಡ್ಡಿ ಕೃಷ್ಣ ನಿರ್ದೇಶಿಸಿದ್ದಾರೆ. ಹಿರಿತೆರೆ ಹಾಗೂ ಕಿರುತೆರೆಯಲ್ಲಿ ಕಾರ್ಯ ನಿರ್ವಹಿಸಿ ಅನುಭವವಿರುವ ರೆಡ್ಡಿ ಕೃಷ್ಣ ಅವರ ಚೊಚ್ಚಲ ನಿರ್ದೇಶನದ ಚಿತ್ರ ಇದಾಗಿದೆ. ಲಾಕ್‌ಡೌನ್ ಮುಕ್ತಾಯದ ಬಳಿಕ ಚಿತ್ರದ ಬಿಡುಗಡೆಗೆ ಚಿತ್ರತಂಡ ಸಿದ್ಧತೆ ನಡೆಸಿದೆ. 32 ದಿನ ಬೆಂಗಳೂರು, ಕೇರಳ ಹಾಗೂ ಮಂಗಳೂರಿನಲ್ಲಿ ಚಿತ್ರದ ಚಿತ್ರೀಕರಣ ನಡೆದಿದೆ. ವಾರ್‌ಪುಟ್ ಸ್ಟುಡಿಯೋ ಹಾಗೂ ಸುಮುಖ ಎಂಟರ್‌ಟೈನರ್ ಲಾಂಛನದಲ್ಲಿ ಈ ಚಿತ್ರ ನಿರ್ಮಾಣವಾಗಿದೆ.

ಅರಮಾನ್ ಹಾಗೂ ಅಭಿಷೇಕ್ ರಫಸ್ ಸಂಗೀತ ನಿರ್ದೇಶನ, ಸಾಮ್ರಾಟ್ ಛಾಯಾಗ್ರಹಣವಿದೆ. ಎಸ್.ಎಸ್.ರವಿಗೌಡ ನಾಯಕರಾಗಿ ನಟಿಸಿರುವ ಈ ಚಿತ್ರದ ನಾಯಕಿಯರು ದಿವ್ಯಾ ಸುರೇಶ್ ಹಾಗೂ ಹೀರ್‌ಕೌರ್. ❖

ಸನ್ ಚಿತ್ರೋತ್ಸವಕ್ಕೆ 'ಅಮೃತಮತಿ'



ಬರಗೂರು ರಾಮಚಂದ್ರಪ್ಪ ನಿರ್ದೇಶನದ 'ಅಮೃತಮತಿ' ಚಿತ್ರವು ಲಾಸ್ ಏಂಜಲಿಸ್ ಸನ್ ಅಂತರರಾಷ್ಟ್ರೀಯ ಚಿತ್ರೋತ್ಸವಕ್ಕೆ ಆಯ್ಕೆ ಆಗಿದೆ. ಕಳೆದ ವಾರವಷ್ಟೇ 'ಅಮೃತಮತಿ' ಚಿತ್ರವು ಇದೇ ಲಾಸ್ ಏಂಜಲಿಸ್‌ನ ಇಂಡಿಪೆಂಡೆಂಟ್ ಚಿತ್ರೋತ್ಸವಕ್ಕೆ ಆಯ್ಕೆ ಆಗಿತ್ತು. ಈ ಮೂಲಕ ಇಲ್ಲಿಯವರೆಗೆ ಹತ್ತು ಅಂತರರಾಷ್ಟ್ರೀಯ ಚಿತ್ರೋತ್ಸವಗಳಿಗೆ ಈ ಚಿತ್ರವು ಆಯ್ಕೆ ಆಗಿದ್ದು, ಎರಡು ಚಿತ್ರೋತ್ಸವಗಳಲ್ಲಿ ನಟಿ ಹರಿಪ್ರಿಯಾ ಅವರಿಗೆ ಶ್ರೇಷ್ಠ ನಟಿ ಪ್ರಶಸ್ತಿ ಬಂದಿದೆ.

ಅಮೆರಿಕದ ಅಟ್ಲಾಂಟ ಅಂತರರಾಷ್ಟ್ರೀಯ ಚಿತ್ರೋತ್ಸವದಲ್ಲಿ ಶ್ರೇಷ್ಠ ವಿದೇಶಿ ಭಾಷಾ ಚಿತ್ರ ಪ್ರಶಸ್ತಿಯನ್ನು ಈ ಚಿತ್ರವು ಪಡೆದಿತ್ತು. ಕವಿ ಜನ್ನನಿಂದ ರಚಿತವಾದ 'ಯಶೋಧರ ಚರಿತೆ' ಕಾವ್ಯವನ್ನು ಆಧರಿಸಿ ರಚಿಸಿದ ಈ ಚಿತ್ರವು 11ನೇ ದಾದಾ ಸಾಹೇಬ್ ಫಾಲ್ಕೆ ಚಿತ್ರೋತ್ಸವದಲ್ಲಿ 'ವಿಶೇಷ ಚಿತ್ರ' ಎಂಬ ಮನ್ನಣೆಯನ್ನೂ ಪಡೆದಿದೆ. 'ಈ ಎಲ್ಲ ಮನ್ನಣೆಗಳು ಕನ್ನಡ ಸಿನಿಮಾ ಮತ್ತು ಸಾಹಿತ್ಯ ಎರಡಕ್ಕೂ ಸಂದ ಗೌರವವೆಂದು ಭಾವಿಸುತ್ತೇನೆ' ಎಂದು ಬರಗೂರು ರಾಮಚಂದ್ರಪ್ಪ ಹೇಳುತ್ತಾರೆ. ❖

ರವಿಚಂದ್ರನ್ ಅಭಿಮಾನಿ ನಿಶ್ವಿಕಾ

ನಟ ಶರಣ್ ಅಭಿನಯದ 'ಗುರು ಶಿಷ್ಯರು' ಚಿತ್ರದ ನಾಯಕಿಯ ಫಸ್ಟ್‌ಲುಕ್ ಪೋಸ್ಟರ್ ಅನ್ನು ಚಿತ್ರತಂಡವು ಬಿಡುಗಡೆ ಮಾಡಿದ್ದು, ರವಿಚಂದ್ರನ್ ಅಭಿಮಾನಿಯಾಗಿ, ಹಾಲಿನ ಡೈರಿ ನಡೆಸುವ 'ಸೂಜಿ' ಹೆಸರಿನ ಪಾತ್ರಕ್ಕೆ ನಿಶ್ವಿಕಾ ನಾಯ್ಡು ಬಣ್ಣ ಹಚ್ಚಿದ್ದಾರೆ.

'ಅಮ್ಮ ಐ ಲವ್ ಯು', 'ಪಡ್ಡೆ ಹುಲಿ', 'ಜಂಟಲ್ಮನ್' ಮುಂತಾದ ಚಿತ್ರಗಳಲ್ಲಿ ನಟಿಸಿರುವ ನಿಶ್ವಿಕಾ ನಾಯ್ಡು ಇದೀಗ ಶರಣ್‌ಗೆ ಜೋಡಿಯಾಗಿದ್ದಾರೆ. ನಿಶ್ವಿಕಾ ಅವರ ಜನ್ಮದಿನದ ಸಂದರ್ಭದಲ್ಲೇ ನಾಯಕಿಯನ್ನು ಪರಿಚಯಿಸುವ ಪೋಸ್ಟರ್ ಬಿಡುಗಡೆಯಾಗಿದೆ. 'ಶರಣ್ ಈ ಚಿತ್ರದಲ್ಲಿ ಒಬ್ಬ ದೈಹಿಕ ಶಿಕ್ಷಕನ ಪಾತ್ರವಹಿಸುತ್ತಿದ್ದಾರೆ. ಅವರ ಜೊತೆ ನಾಯಕಿಯಾಗಿ ನಿಶ್ವಿಕಾ ನಾಯ್ಡು ಅಪ್ಪಟ ಹಳ್ಳಿ ಹುಡುಗಿಯಾಗಿ, ರವಿಚಂದ್ರನ್ ಅಭಿಮಾನಿಯಾಗಿ, ಹಾಲಿನ ಡೈರಿ ನಡೆಸುವ ಸ್ವಯಂಕೃಷಿ ಉದ್ಯಮಿಯಾಗಿ 'ಸೂಜಿ' ಹೆಸರಿನ ಪಾತ್ರ ಮಾಡಿದ್ದಾರೆ. ಗುರುಶಿಷ್ಯರು ಚಿತ್ರದ ಕಥೆ 1995ರಲ್ಲಿ ನಡೆಯುವಂಥದ್ದು. ಈಗಾಗಲೇ ಚಿತ್ರದ ಶೇ 60 ಚಿತ್ರೀಕರಣ ಮುಗಿದಿದ್ದು, ಉಳಿದ ಭಾಗದ ಚಿತ್ರೀಕರಣ ಸದ್ಯದ ಲಾಕ್‌ಡೌನ್ ಮುಗಿದ ನಂತರ ಮಾಡಲು ನಿರ್ಧರಿಸಲಾಗಿದೆ' ಎಂದು ನಿರ್ದೇಶಕ ಜಡೇಶ್ ಕುಮಾರ್ ತಿಳಿಸಿದ್ದಾರೆ.

'ನಾಯಕಿಯನ್ನು ಆಯ್ಕೆ ಮಾಡುವ ಸ್ಕಿಟ್ ತಯಾರು ಮಾಡುವುದೂ ಕೂಡ ಬಹಳ ಮಜವಾದ ಕೆಲಸವಾಗಿತ್ತು. ನಿಶ್ವಿಕಾ ಅವರು ತುಂಬಾ ಒಳ್ಳೆಯ ನಟಿ. ನಮ್ಮಿಬ್ಬರ ಕಾಂಬಿನೇಷನ್ ಚಿತ್ರದಲ್ಲಿ ಪ್ರೇಕ್ಷಕರಿಗೆ ಇಷ್ಟವಾಗುವುದರಲ್ಲಿ ಸಂದೇಹವೇ ಇಲ್ಲ' ಎಂದು ಶರಣ್ ಹೇಳಿದ್ದಾರೆ. ❖

ಸಿನಿ ಸಂಕ್ಷಿಪ್ತ

'ನಮ್ಮ ಊರಿನ ರಸಿಕರು' ನಿಮ್ಮ ಮನೆಯ ಬಾಗಿಲಿಗೆ

ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರ ಪ್ರಸಿದ್ಧ ಕೃತಿ 'ನಮ್ಮ ಊರಿನ ರಸಿಕರು' ವೆಬ್‌ಸರಣಿಯಾಗಿ 'ಕಟ್ಟೆ' ಆ್ಯಪ್‌ನಲ್ಲಿ ತೆರೆಗೆ ಬರುತ್ತಿದೆ. ಸ್ವಾತಂತ್ರ್ಯ ಪೂರ್ವದಲ್ಲಿ, ಬ್ರಿಟಿಷ್ ರಾಜ್ ಮತ್ತು ಕ್ವಿಟ್ ಇಂಡಿಯಾ ಚಳವಳಿಯ ಮಧ್ಯದ ಈ ಕಥೆ ತನ್ನದೇ ಆದ ಕಥಾಹಂದರವನ್ನು ಹೊಂದಿದೆ. ಈ ಕಥೆಯು ಸಂತೋಷ, ದುಃಖ, ನವಿರಾದ ಹಾಸ್ಯ, ನಾಟಕ, ಶೋಷಣೆ, ರಾಜಕೀಯ, ನಿರೀಕ್ಷೆಗಳು, ನಿರ್ಧಾರಗಳು, ಸಂಕೀರ್ಣತೆಗಳು, ಜಾತಿವಾದ, ಅಭಿಪ್ರಾಯಗಳು, ಸ್ನೇಹ, ಸಂಬಂಧಗಳು ಮತ್ತು ಇನ್ನೂ ಅನೇಕ ವಿಷಯಗಳನ್ನು ಹೊಂದಿದೆ.

ಪ್ರೀತಿಯಿಂದ ಶಾಮಣ್ಣ ಎಂದು ಕರೆಯಲ್ಪಡುವ ಶಾಮ ಅಯ್ಯಂಗಾರ್ ಅವರು ಕೊಟ್ಟ ಮಾತಿಗೆ ತಪ್ಪದ ಗೊರುರು ಗ್ರಾಮದ ಪ್ರಾಮಾಣಿಕ ವ್ಯಕ್ತಿ. ಶಾಮಣ್ಣ ಅತ್ಯಂತ ಸುಶಿಕ್ಷಿತ, ಉದಾರ ವ್ಯಕ್ತಿ. ದೈಹಿಕವಾಗಿ ಮತ್ತು ಮಾನಸಿಕವಾಗಿ ಸದೃಢನಾದ ಶಾಮಣ್ಣ ಇಡೀ ಗ್ರಾಮವನ್ನು ನಿರ್ವಿವಾದದ ತೀರ್ಪಿನಿಂದ ಅತ್ಯಂತ ಸಮರ್ಥವಾಗಿ ನಿರ್ವಹಿಸುತ್ತಾನೆ. ಸರಸ್ವತಿ, ಶಾಮಣ್ಣನ ಪತ್ನಿ. ಸೌಂದರ್ಯ ಮತ್ತು ಬುದ್ಧಿವಂತಿಕೆ ಎರಡೂ ಇರುವ ಅಪರೂಪದ ಮಹಿಳೆ. ತನ್ನ ಬುದ್ಧಿವಂತಿಕೆ ಮತ್ತು ವಿಶೇಷ ಕಾಳಜಿಯಿಂದ ಎಲ್ಲಾ ಸಮಸ್ಯೆಗಳನ್ನು ಪರಿಹರಿಸುವ ಚತುರೆ. ಇವರಿಬ್ಬರೂ 'ನಮ್ಮ ಊರಿನ ರಸಿಕರು' ಕಥೆಯ ಆಧಾರ.

ಒಟಿಟಿ 'ಕಟ್ಟೆ' ಆ್ಯಪ್‌ನಲ್ಲಿ ಈ ಚಿತ್ರವು ಬಿಡುಗಡೆಯಾಗಲಿದೆ. ವೆಬ್ ಸರಣಿಯಾಗಿರುವ ಇದು ಒಟ್ಟು 16 ಸಂಚಿಕೆಯನ್ನು ಹೊಂದಿದ್ದು, ಮೊದಲ ಸೀಸನ್‌ನಲ್ಲಿ 8 ಸಂಚಿಕೆಯನ್ನು ಹೊಂದಿದೆ. ಕಟ್ಟೆ ಆ್ಯಪ್ ಮುಂದಿನ ತಿಂಗಳು ಬಿಡುಗಡೆಯಾಗಲಿದ್ದು, ಈ ಸರಣಿಯು ಅದರಲ್ಲಿ ವೀಕ್ಷಣೆಗೆ ಲಭ್ಯವಾಗಲಿದೆ.

ಪ್ರತಿ ಸಂಚಿಕೆಯು ವಿವಿಧ ಭಾವನೆಗಳು, ಮೂರ್ಖ ನಡವಳಿಕೆ, ಅಹಂನ ಘರ್ಷಣೆಗಳು, ಪ್ರೀತಿ, ದ್ವೇಷ, ಸೇಡು, ತಪ್ಪುಗ್ರಹಿಕೆ ಮತ್ತು ಸಾಕಷ್ಟು ಹಾಸ್ಯಮಯ ಘಟನೆಗಳಿಂದ ಕೂಡಿದೆ. ಪ್ರತಿಯೊಂದು ಸಂಚಿಕೆಯು ಒಂದು ಸಮಸ್ಯೆಯೊಂದಿಗೆ ಪ್ರಾರಂಭವಾಗುತ್ತದೆ, ಅಲ್ಲಿ ಸಾಕಷ್ಟು ಗೊಂದಲ ಮತ್ತು ತಪ್ಪುಗ್ರಹಿಕೆಗಳಿರುತ್ತವೆ, ಆದರೆ ಸಂಚಿಕೆಯ ಅಂತ್ಯದ ವೇಳೆಗೆ ಗ್ರಾಮಸ್ಥರು ಸಮಸ್ಯೆಗಳನ್ನು ಚಾಣಾಕ್ಷತನದಿಂದ ಪರಿಹರಿಸುತ್ತಾರೆ.

'ನಮ್ಮ ಊರಿನ ರಸಿಕರು' ಚಿತ್ರಕ್ಕೆ ಲೇಖಕಿ ನಂದಿತಾ ಯಾದವ್ ಆ್ಯಕ್ಷನ್ ಕಟ್ ಹೇಳಿದ್ದಾರೆ. ಅವರು 'ರಾಜಸ್ಥಾನ್ ಡೈರೀಸ್' (ಕನ್ನಡ ಮತ್ತು ಮರಾಠಿ ಭಾಷೆಯಲ್ಲಿ ತೆರೆಕಂಡ ಚಿತ್ರ) ಚಿತ್ರವನ್ನು ನಿರ್ದೇಶಿಸಿದ್ದರು. ಹಾಗೆಯೇ ರಾಜ್ಯ ಪ್ರಶಸ್ತಿ ಗೆದ್ದ 'ರಾಜು' ಎನ್ನುವ ಸಿನಿಮಾದಲ್ಲಿ ಸಹ ನಿರ್ದೇಶಕಿಯಾಗಿ ಕಾರ್ಯನಿರ್ವಹಿಸಿದ್ದರು. 5 ವರ್ಷಗಳ ಕಾಲ ಕ್ರಿಯೇಟಿವ್ ಹೆಡ್ ಆಗಿ ಜೀ ಥಿಯೇಟರ್‌ನಲ್ಲಿ ಕೆಲಸ ಮಾಡಿದ್ದ ನಂದಿತಾ ಅವರು, ಭಾರತದಾದ್ಯಂತ 70 ಕ್ಕೂ ಹೆಚ್ಚು ನಾಟಕಗಳನ್ನು ರಚಿಸಿ, ಚಿತ್ರೀಕರಿಸಿದ್ದಾರೆ.

ರಾಜೇಶ್ ನಟರಂಗ, ಲಕ್ಷ್ಮೀ ಗೋಪಾಲಸ್ವಾಮಿ, ಮಂಡ್ಯ ರಮೇಶ್, ಪಿ. ಶೇಷಾದ್ರಿ, ಶೃಂಗ, ಬಿ. ಸುರೇಶ, ಸುನೇತ್ರಾ ಪಂಡಿತ್, ರಮೇಶ್ ಪಂಡಿತ್, ಸುಜಯ್ ಶಾಸ್ತ್ರಿ, ಸುಂದರ್ ವೀಣಾ ಸೇರಿದಂತೆ ಅನೇಕ ಪ್ರತಿಭಾವಂತ ಕಲಾವಿದರ ತಂಡ ಚಿತ್ರದಲ್ಲಿದೆ. ಚಿತ್ರಕ್ಕೆ ಅಶೋಕ್ ಕಶ್ಯಪ್ ಛಾಯಾಗ್ರಹಣವಿದ್ದು, ಪ್ರಕಾಶ ಸೊಂಟಕ್ಕೆ ಸಂಗೀತವಿದೆ. ಶಿವಮೊಗ್ಗ ಜಿಲ್ಲೆಯ ಸುತ್ತಮುತ್ತಲಿನ ಮಲೆನಾಡ ಪರಿಸರದಲ್ಲಿ ಇದನ್ನು ಚಿತ್ರೀಕರಿಸಲಾಗಿದೆ. ❖

ನಮ್ಮ ಊರಿನ ರಸಿಕರು ವೆಬ್ ಸರಣಿಯ ಪೋಸ್ಟರ್

ಸುಭಾಷಿತ

ವಿಸ್ಮಯಕಾರಿ ಸಂಗತಿಯೆಂದರೆ, ನೀವು ಹಣ ತೋರಿಸಿದ ಕ್ಷಣದಿಂದಲೇ ಪ್ರತಿಯೊಬ್ಬರಿಗೂ ನಿಮ್ಮ ಭಾಷೆ ಅರ್ಥವಾಗತೊಡಗುತ್ತದೆ!

– ಅರವಿಂದ ಅಡಿಗ

ಅಲ್ಪ ಮೊತ್ತದ ಪರಿಹಾರ ಅರ್ಹರಿಗೆ ಬೇಗ ತಲುಪಲಿ

ಕೋವಿಡ್‌ನ ಎರಡನೇ ಅಲೆಯಿಂದ ಸಂಕಷ್ಟಕ್ಕೆ ಸಿಲುಕಿರುವ ಸಮುದಾಯಗಳಿಗೆ ರಾಜ್ಯ ಸರ್ಕಾರವು ₹ 1,250 ಕೋಟಿ ಮೊತ್ತದ ಪರಿಹಾರವನ್ನು ಘೋಷಿಸಿದೆ. ಕೃಷಿಕರು, ಕಟ್ಟಡ ಕಾರ್ಮಿಕರು, ಆಟೊ-ಟ್ಯಾಕ್ಸಿ ಚಾಲಕರು, ಬೀದಿ ಬದಿಯ ವ್ಯಾಪಾರಿಗಳು, ಶ್ರಮಿಕರು ಹಾಗೂ ಕಲಾವಿದರಿಗೆ ಇದರಿಂದ ನೆರವಾಗಲಿದೆ ಎಂದು ಮುಖ್ಯಮಂತ್ರಿ ಹೇಳಿದ್ದಾರೆ. ಲಾಕ್‌ಡೌನ್‌ನಿಂದ ಲಕ್ಷಾಂತರ ಕುಟುಂಬಗಳ ಬದುಕೇ ಮೂರಾಬಟ್ಟೆ ಆಗಿರುವ ಈ ಸನ್ನಿವೇಶದಲ್ಲಿ ಘೋಷಿಸಿರುವ ಪರಿಹಾರ ಅಲ್ಪವಾದರೂ ಕೆಲವರಿಗೆ ತಕ್ಷಣಕ್ಕೆ ಒಂದಿಷ್ಟು ಸಮಾಧಾನ ತರಬಹುದು. ಆದರೆ, ಯಾವುದೇ ತಾಂತ್ರಿಕ ನೆಪ ಹೇಳದೆ ಎಷ್ಟು ಸಾಧ್ಯವೋ ಅಷ್ಟು ಬೇಗ ಅರ್ಹ ಫಲಾನುಭವಿಗಳಿಗೆ ಪರಿಹಾರದ ಮೊತ್ತ ಸಿಗುವಂತೆ ನೋಡಿಕೊಳ್ಳಬೇಕು. ಆರ್ಥಿಕ ಇಲಾಖೆಯ ಹೊಣೆಯನ್ನೂ ಹೊತ್ತಿರುವ ಮುಖ್ಯಮಂತ್ರಿ ಈ ದಿಸೆಯಲ್ಲಿ ಆಡಳಿತ ಯಂತ್ರವನ್ನು ಚುರುಕುಗೊಳಿಸಬೇಕು. ಕಟ್ಟಕಡೆಯ ಫಲಾನುಭವಿಗೂ ಪರಿಹಾರ ತಲುಪಿದೆ ಎಂಬುದನ್ನು ಖಚಿತಪಡಿಸಿಕೊಳ್ಳುವುದು ಈ ಹೊತ್ತಿನ ಅವರ ಆದ್ಯತೆ ಆಗಬೇಕು. ರಾಜ್ಯ ಸರ್ಕಾರದ ಹಣಕಾಸಿನ ಸ್ಥಿತಿ ಕೆಟ್ಟದಾಗಿದೆ ಎಂದೂ ಮುಖ್ಯಮಂತ್ರಿ ಹೇಳಿದ್ದಾರೆ. ಆದರೆ, ಬಡವರ ಕಣ್ಣೀರು ಒರೆಸಲು ಬೇಕಾಗಿರುವ ಹಣವನ್ನು, ಸಾಲ ಮಾಡಿಯಾದರೂ ಸರಿಯೇ ಹೊಂದಿಸಿಕೊಳ್ಳಲೇಬೇಕು. ಕಳೆದ ವರ್ಷ ಲಾಕ್‌ಡೌನ್ ಜಾರಿಯಾದಾಗಲೂ ರಾಜ್ಯ ಸರ್ಕಾರ ಪರಿಹಾರವನ್ನು ಘೋಷಿಸಿತ್ತು. ಆಗ ಎಷ್ಟೋ ಜನ ಅರ್ಹರು ಪರಿಹಾರದಿಂದ ವಂಚಿತರಾದರು ಎಂಬ ದೂರುಗಳು ಕೇಳಿಬಂದಿದ್ದವು. ಈ ಸಲ ಅಂತಹ ಆಕ್ಷೇಪಗಳಿಗೆ ಆಸ್ಪದ ಇಲ್ಲದಂತೆ ಎಚ್ಚರಿಕೆ ವಹಿಸಬೇಕು. ವಿಳಂಬಕ್ಕೂ ಎಡೆಮಾಡಿಕೊಡಬಾರದು.

ಶ್ರಮಿಕ ವರ್ಗದ ಸಂಕಷ್ಟ ನಿವಾರಣೆಗೆ ವ್ಯಯಿಸುವ ಹಣವನ್ನು 'ಆರ್ಥಿಕ ಹೊರೆ'ಯ ಪರಿಭಾಷೆಯಲ್ಲಿ ನೋಡದೆ, ತನ್ನ ಹೊಣೆ ಎಂಬುದನ್ನು ಸರ್ಕಾರ ಅರಿತುಕೊಳ್ಳಬೇಕು

ಸರ್ಕಾರವೇ ಕೊಟ್ಟಿರುವ ಅಂಕಿ ಅಂಶಗಳ ಪ್ರಕಾರ, ಒಟ್ಟು ಪರಿಹಾರದ ಮೊತ್ತವು 4.34 ಕೋಟಿ ಫಲಾನುಭವಿಗಳಲ್ಲಿ ಊಟ, ಪಡಿತರ ಇಲ್ಲವೆ ನಗದು ರೂಪದಲ್ಲಿ ಹರಿದು ಹಂಚಿಹೋಗಲಿದೆ. ಅಂದರೆ ತಲಾ ₹ 290 ನೆರವು. ಆನೆಯ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆ ಎನ್ನುವಂತೆ ಇಷ್ಟು ಸಣ್ಣ ನೆರವಿನಿಂದ ಯಾರ ಸಂಕಟವನ್ನೂ ಕಡಿಮೆ ಮಾಡಲು ಸಾಧ್ಯವಿಲ್ಲ. ಕಳೆದ ವರ್ಷಕ್ಕೆ ಹೋಲಿಸಿದರೆ ಈ ಸಲದ ತಲಾ ಪರಿಹಾರ ಮೊತ್ತದಲ್ಲೂ ಗಣನೀಯವಾಗಿ ಇಳಿಕೆಯಾಗಿದೆ. ಕೋವಿಡ್‌ನಿಂದ ಕಂಗೆಟ್ಟ ಯಾವುದೇ ಬಡ ಕುಟುಂಬ ಕೇವಲ ₹ 3,000 ಪರಿಹಾರದಿಂದ ಹೇಗೆ ಚೇತರಿಸಿಕೊಳ್ಳಲು ಸಾಧ್ಯ? ರಾಜ್ಯ ಸರ್ಕಾರ ಸದ್ಯ ಘೋಷಿಸಿರುವ ಪರಿಹಾರವನ್ನು ಒಂದು ಹಂತದ ಕ್ರಮವಾಗಿಯಷ್ಟೇ ಪರಿಭಾವಿಸಬೇಕು. ಶ್ರಮಿಕ ಸಮುದಾಯಗಳು ಮತ್ತೆ ಬದುಕು ಕಟ್ಟಿಕೊಳ್ಳಲು ಏನೇನು ಮಾಡಬೇಕು ಎಂಬ ವಿಷಯವಾಗಿ ವಿಸ್ತೃತವಾಗಿ ಸಮಾಲೋಚನೆ ನಡೆಸಿ, ಆ ನಿಟ್ಟಿನಲ್ಲಿ ಕಾಲಮಿತಿಯಲ್ಲಿ ಯೋಜನೆಗಳನ್ನು ಹಾಕಿಕೊಳ್ಳಬೇಕು. [illegible] 'ಬಡ ಕುಟುಂಬಕ್ಕೂ ತಿಂಗಳಿಗೆ ಹತ್ತು ಕೆ.ಜಿ. ಅಕ್ಕಿ ವಿತರಣೆ ಮಾಡಬೇಕು ಮತ್ತು ಪ್ರತಿ ಕುಟುಂಬಕ್ಕೆ ತಿಂಗಳಿಗೆ ತಲಾ ₹ 10 ಸಾವಿರ ಪರಿಹಾರ ನೀಡಬೇಕು' ಎಂಬ ಒತ್ತಾಯ ಕೂಡ ಇದೆ. ನ್ಯಾಯಯುತವಾಗಿರುವ ಈ ಬೇಡಿಕೆಯನ್ನು ಈಡೇರಿಸುವ ದಿಸೆಯಲ್ಲಿ ಸರ್ಕಾರ ಮುಕ್ತಮನಸ್ಸಿನಿಂದ ಯೋಚಿಸಬೇಕು. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿಯಂತಹ ಯೋಜನೆ ಮೂಲಕ ದುಡಿಯುವ ಕೈಗಳಿಗೆ ಕೆಲಸವನ್ನೂ ನೀಡಬೇಕು. ಹಸಿದ ಹೊಟ್ಟೆಯನ್ನು ತುಂಬಿಸುವುದು ಎಲ್ಲಕ್ಕಿಂತಲೂ ಮೊದಲು ಆಗಬೇಕಿರುವ ತುರ್ತಿನ ಕೆಲಸ. ಶ್ರಮಿಕ ವರ್ಗದ ಸಂಕಷ್ಟ ನಿವಾರಣೆಗೆ ವ್ಯಯಿಸುವ ಹಣವನ್ನು 'ಆರ್ಥಿಕ ಹೊರೆ'ಯ ಪರಿಭಾಷೆಯಲ್ಲಿ ನೋಡದೆ, ತನ್ನ ಹೊಣೆ ಎಂಬುದನ್ನು ಸರ್ಕಾರ ಅರಿತುಕೊಳ್ಳಬೇಕು. ಏಕೆಂದರೆ, ಕೋವಿಡ್ ಪ್ರಕರಣಗಳು ಕ್ಷಿಪ್ರಗತಿಯಲ್ಲಿ ಏರುತ್ತಿದ್ದಾಗಲೂ ಕೈಕಟ್ಟಿ ಕುಳಿತು, ಪರಿಸ್ಥಿತಿ ಕೈಮೀರಿದಾಗ ಲಾಕ್‌ಡೌನ್ ವಿಧಿಸಿದ್ದು ಇದೇ ಸರ್ಕಾರ. ಶ್ರಮಿಕರ ಬದುಕನ್ನು ಪರೋಕ್ಷವಾಗಿ ಸಂಕಷ್ಟಕ್ಕೆ ನೂಕಿದ ಮೇಲೆ ಅವರ ನೆರವಿಗೆ ಧಾವಿಸಬೇಕಾದದ್ದು ಆಡಳಿತ ವ್ಯವಸ್ಥೆಯ ನೈತಿಕ ಕರ್ತವ್ಯ ಕೂಡ.

ದಿನದ ಟ್ವೀಟ್

ಲಸಿಕೆಗೆ ಬೇಕು ಆದ್ಯತೆ

ಭಾರತದಲ್ಲಿ ಕೊರೊನಾ ಸೋಂಕು ಅಥವಾ ಮರಣಪ್ರಮಾಣ ಇಳಿಕೆಗಿಂತ ಹೆಚ್ಚು ವೇಗವಾಗಿ ಲಸಿಕೆ ನೀಡಿಕೆ ಪ್ರಮಾಣ ಕಡಿಮೆಯಾಗುತ್ತಿದೆ. ಮೊದಲಿಗೆ ಈ ಅಂಕಿಅಂಶಗಳನ್ನು ನೋಡಿದಾಗ ನನಗೆ ನಂಬುವುದಕ್ಕೇ ಆಗಲಿಲ್ಲ. ಈ ಸೋಂಕು ಪ್ರಸರಣದ ತಡೆಗೆ ಲಸಿಕೆ ನೀಡಿಕೆಯೇ ನಿರ್ಣಾಯಕ. ಲಸಿಕೆಗಳನ್ನು ತ್ವರಿತವಾಗಿ ನಾವೇ ತಯಾರಿಸಿ, ಸಂಗ್ರಹಿಸಿ, ವಿತರಿಸಬಲ್ಲೆವು ಎಂಬ ವಿಶ್ವಾಸ ನನಗಿದೆ.

ಭ್ರಮರ್ ಮುಖರ್ಜಿ, ಪ್ರಾಧ್ಯಾಪಕಿ, ಸಾಂಕ್ರಾಮಿಕ ರೋಗಶಾಸ್ತ್ರ

25 ವರ್ಷಗಳ ಹಿಂದೆ

ಮಂಗಳವಾರ, 21-5-1996

• 'ಪರಿಶಿಷ್ಟರ 17,000 ಹೆಕ್ಟೇರ್ ಒತ್ತುವರಿ ಭೂಮಿ ಸಕ್ರಮ'

ಬೆಂಗಳೂರು, ಮೇ 20– ರಾಜ್ಯದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗ ಹಾಗೂ ಇತರೆ ಬುಡಕಟ್ಟು ಜನಾಂಗದವರು ಒತ್ತುವರಿ ಮಾಡಿಕೊಂಡಿರುವ 17,000 ಹೆಕ್ಟೇರ್ ಅರಣ್ಯ ಭೂಮಿಯನ್ನು ಸಕ್ರಮಗೊಳಿಸಲು ಕೋರಿ ರಾಜ್ಯ ಸರ್ಕಾರ ಕಳುಹಿಸಿದ್ದ ಉದ್ದೇಶಿತ ಸೂಚನೆಗೆ ಕೇಂದ್ರ ಸರ್ಕಾರ ಮಂಜೂರಾತಿ ನೀಡಿದೆ.

ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಖಾತೆ ಸಚಿವ ಎಂ.ಸಿ. ನಾಣಯ್ಯ ಅವರು ಸಚಿವ ಸಂಪುಟ ಸಭೆಯ ನಂತರ ಈ ವಿಷಯವನ್ನು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ಈ ಒತ್ತುವರಿ 1978ರ ಅವಧಿಗೂ ಮುಂಚಿನ ಒತ್ತುವರಿ; ಸಕ್ರಮದ ವ್ಯಾಪ್ತಿಗೆ ಬರುತ್ತದೆ. ಇದರಿಂದ 20,000 ಬಡ ಕುಟುಂಬಗಳು ಪ್ರಯೋಜನ ಪಡೆಯಲಿವೆ' ಎಂದು ಅವರು ಹೇಳಿದರು.

• ಪ್ರಧಾನಿ 'ವಿವಾದಾತ್ಮಕ' ಭಾಷಣಕ್ಕೆ ವ್ಯಾಪಕ ಟೀಕೆ

ನವದೆಹಲಿ, ಮೇ 20 (ಪಿಟಿಐ, ಯುಎನ್‌ಐ)– ದೇಶದಲ್ಲಿ ಕೆಲವು ರಾಜಕೀಯ ಪಕ್ಷಗಳು ತತ್ವರಹಿತ ರಾಜಕೀಯ ನಡೆಸಿವೆ ಎಂದು ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರು ಮಾಡಿರುವ ಆರೋಪವನ್ನು ತೃತೀಯ ರಂಗದ ನಾಯಕರು ಇಂದು ಕಟುವಾಗಿ ಟೀಕಿಸಿದ್ದಾರೆ. ದೇಶವನ್ನು ಉದ್ದೇಶಿಸಿ ಭಾಷಣ ಮಾಡುವ ಅವಕಾಶವನ್ನು ವಿರೋಧ ಪಕ್ಷಗಳನ್ನು ಟೀಕಿಸಲು ವಾಜಪೇಯಿ ಬಳಸಿಕೊಂಡಿದ್ದಾರೆ ಎಂದು ಕಾಂಗ್ರೆಸ್ ದೂರಿದೆ.

ವಾಜಪೇಯಿ ಅವರು ನಿನ್ನೆ ದೂರದರ್ಶನ ಮತ್ತು ಆಕಾಶವಾಣಿಗಳ ಮೂಲಕ ದೇಶವನ್ನು ಉದ್ದೇಶಿಸಿ ಮಾಡಿದ ಭಾಷಣವನ್ನು 'ವಿಭಜನಾತ್ಮಕ, ವಿವಾದಾತ್ಮಕ' ಎಂದು ತೃತೀಯ ರಂಗದ ನಾಯಕರು ವರ್ಣಿಸಿದ್ದಾರೆ.

50 ವರ್ಷಗಳ ಹಿಂದೆ

ಶುಕ್ರವಾರ, 21-5-1971

• ಮಕ್ಕಳ ಕಲ್ಯಾಣಕ್ಕಾಗಿ ಸಮಗ್ರ ರಾಷ್ಟ್ರೀಯ ನೀತಿಗೆ ನಿರ್ಧಾರ

ನವದೆಹಲಿ, ಮೇ 20– ಮಕ್ಕಳ ಕಲ್ಯಾಣಕ್ಕಾಗಿ ರಾಷ್ಟ್ರೀಯ ನೀತಿ ಕುರಿತು ಸಮಗ್ರ ನಿರ್ಣಯವೊಂದನ್ನು ಸ್ವೀಕರಿಸಲು ಸರ್ಕಾರ ನಿರ್ಧರಿಸಿರುವುದೆಂದು ಕೇಂದ್ರದ ಶಿಕ್ಷಣ ಮತ್ತು ಸಮಾಜಕಲ್ಯಾಣ ಸಚಿವ ಸಿದ್ಧಾರ್ಥ ಶಂಕರರಾಯ್ ಅವರು ಇಂದು ಇಲ್ಲಿ ಪ್ರಕಟಿಸಿದರು.

• ಜೈಪ್ರಕಾಶರ ಯುಎಆರ್ ಭೇಟಿ ಸಂಪೂರ್ಣ ವಿಫಲ

ಕೈರೋ, ಮೇ 20– ಅಧ್ಯಕ್ಷ ಅನ್ವರ್ ಸಾದತ್ ಅವರನ್ನು ಭೇಟಿ ಮಾಡಲು ಎರಡು ದಿನಗಳ ಕಾಲ ಕಾದು ವಿಫಲಗೊಂಡ ನಂತರ ಸರ್ವೋದಯ ನಾಯಕ ಶ್ರೀ ಜೈಪ್ರಕಾಶ ನಾರಾಯಣ್ ಅವರು ನಿನ್ನೆ ಇಲ್ಲಿಂದ ಇಟಲಿಗೆ ತೆರಳಿದರು.

ಪೂರ್ವ ಪಾಕಿಸ್ತಾನದಲ್ಲಿನ ವಿಷಮ ಪರಿಸ್ಥಿತಿಯನ್ನು ಸಾದತ್‌ರಿಗೆ ವಿವರಿಸಿ, ಪರಿಸ್ಥಿತಿ ಮತ್ತಷ್ಟು ಹದಗೆಡದಂತೆ ಪ್ರಭಾವ ಬೀರಬೇಕೆಂದು ಅವರನ್ನು ಕೋರಲು ಶ್ರೀ ಜೈಪ್ರಕಾಶ್ ಇಚ್ಛಿಸಿದ್ದರು.

ಅವರು ತಮಗುಂಟಾದ ನಿರಾಶೆಯನ್ನು ವರದಿಗಾರರ ಜೊತೆ ಮಾತನಾಡುತ್ತಾ ಸ್ಪಷ್ಟಪಡಿಸಿದ್ದಾರೆ. ಪೂರ್ವ ಪಾಕಿಸ್ತಾನದಲ್ಲಿನ ವಿಷಮ ಪರಿಸ್ಥಿತಿ ಹಾಗೂ ಅಲ್ಲಿನ ಜನರ ವೇದನೆ ಬಗ್ಗೆ ಈಜಿಪ್ಟಿನ ವಲಯಗಳಲ್ಲಿ ಅರಿವುಂಟು ಮಾಡಲು ಶ್ರೀ ಜೈಪ್ರಕಾಶರಿಗೆ ಸಾಧ್ಯವಾಯಿತೇ ಎಂಬುದನ್ನು ಕಾದು ನೋಡಬೇಕಾಗಿದೆ. ಅವರು ಈಜಿಪ್ಟಿನ ಪತ್ರಿಕೋದ್ಯಮಿಗಳು ಮತ್ತು ಬುದ್ಧಿಜೀವಿಗಳ ಜೊತೆ ಮಾತನಾಡಿ ಪೂರ್ವ ಪಾಕಿಸ್ತಾನದ ಬಿಕ್ಕಟ್ಟನ್ನು ವಿವರಿಸಿದರು. ಆದರೆ, ಪೂರ್ವ ಪಾಕಿಸ್ತಾನದ ಪರಿಸ್ಥಿತಿಯನ್ನು ಜನತೆಗೆ ತಿಳಿಸಲು ಈಜಿಪ್ಟಿನ ವರದಿಗಾರರು ಇಚ್ಛಿಸಿಲ್ಲ.

ತಾಲಿಬಾನ್ ಪಡೆಯನ್ನು ಎದುರಿಸಲು ಅಮೆರಿಕಕ್ಕೆ ಸಾಧ್ಯವಾಗಲಿಲ್ಲವೇ ಎಂಬ ಪ್ರಶ್ನೆ ಈಗ ಚರ್ಚೆಯಲ್ಲಿದೆ

ಅಫ್ಘಾನಿಸ್ತಾನ: ಕೈಚೆಲ್ಲಿತೇ ಅಮೆರಿಕ?

ಸೀಮೋಲ್ಲಂಘನ

ಸುಧೀಂದ್ರ ಬುಧ್ಯ

ಅಮೆರಿಕದ ಅಂದಿನ ಅಧ್ಯಕ್ಷ ಜಾರ್ಜ್ ಡಬ್ಲ್ಯು. ಬುಷ್ ಅವರು 2001ರ ಅಕ್ಟೋಬರ್ 7ರಂದು ಶ್ವೇತಭವನದ ರೂಸ್‌ವೆಲ್ಟ್ ಕೊಠಡಿಯಲ್ಲಿ ಕೂತು, 'ಅಫ್ಘಾನಿಸ್ತಾನದ ಅಲ್‌ಕೈದಾ ಉಗ್ರರ ತರಬೇತಿ ಕೇಂದ್ರಗಳ ಮೇಲೆ ಅಮೆರಿಕದ ಸೇನೆಯು ದಾಳಿ ಆರಂಭಿಸಿದೆ. ತಾಲಿಬಾನ್ ಪಡೆಯ ಸಾಮರಿಕ ಸಾಮರ್ಥ್ಯವನ್ನು ಕುಗ್ಗಿಸುವುದು, ಅಮೆರಿಕದ ಮೇಲಿನ ದಾಳಿಗೆ ಪ್ರತೀಕಾರ ತೆಗೆದುಕೊಳ್ಳುವುದು ನಮ್ಮ ಉದ್ದೇಶ' ಎಂದಿದ್ದರು. 2021ರ ಏಪ್ರಿಲ್ 14ರಂದು ಅದೇ ಕೊಠಡಿಯಿಂದ ಮಾತನಾಡಿದ ಇಂದಿನ ಅಧ್ಯಕ್ಷ ಜೋ ಬೈಡನ್, 'ನರಕದ ಬಾಗಿಲಿನವರೆಗೂ ಲಾಡೆನ್‌ನ ಬೆನ್ನುಹತ್ತದೇ ಬಿಡುವುದಿಲ್ಲ ಎಂದು ನಾವು ಅಂದು ಹೇಳಿದ್ದೆವು. ಅದನ್ನೇ ಮಾಡಿದೆವು. ಲಾಡೆನ್ ಹತ್ಯೆ ನಡೆದು ಇದೀಗ ಹತ್ತು ವರ್ಷ ಕಳೆದಿದೆ. ಅಫ್ಘಾನಿಸ್ತಾನದಲ್ಲಿ ಉಳಿಯಲು ನಮಗೆ ಸ್ಪಷ್ಟ ಕಾರಣಗಳು ಉಳಿದಿಲ್ಲ. ಆ ಯುದ್ಧಕ್ಕೆ ಅಂತ್ಯ ಹಾಡುತ್ತಿದ್ದೇವೆ' ಎಂದು ಘೋಷಿಸಿದ್ದಾರೆ.

2001ರ ಸೆಪ್ಟೆಂಬರ್ 11ರಂದು ಅಮೆರಿಕದ ಮೇಲೆ ಉಗ್ರರ ದಾಳಿ ನಡೆದ ಬಳಿಕ ಅಮೆರಿಕವು ಭಯೋತ್ಪಾದನೆಯ ವಿರುದ್ಧ ಯುದ್ಧ ಘೋಷಿಸಿ ಅಫ್ಘಾನಿಸ್ತಾನಕ್ಕೆ ತನ್ನ ಸೇನೆಯನ್ನು ನುಗ್ಗಿಸಿತ್ತು. ನ್ಯಾಟೊ ಸದಸ್ಯ ರಾಷ್ಟ್ರಗಳು ಜೊತೆಗೂಡಿದ್ದವು. ಆ ಯುದ್ಧ ಘೋಷಣೆಯಾದ ಬಳಿಕ ಶ್ವೇತಭವನ ನಾಲ್ವರು ಅಧ್ಯಕ್ಷರನ್ನು ಕಂಡಿತು. ಈ ಹಿಂದಿನ ಅಧ್ಯಕ್ಷ ಡೊನಾಲ್ಡ್ ಟ್ರಂಪ್ 'ಅಮೆರಿಕ ಮೊದಲು' ಧ್ಯೇಯಕ್ಕೆ ಪ್ರಾಶಸ್ತ್ಯ ನೀಡಿ, ಅಫ್ಘಾನಿಸ್ತಾನದಿಂದ ಸೇನೆಯನ್ನು ವಾಪಸ್ ಕರೆಸಿಕೊಳ್ಳುವ ಪ್ರಕ್ರಿಯೆಗೆ ಸಿದ್ಧತೆ ಆರಂಭಿಸಿದರು. ಟ್ರಂಪ್ ನಡೆಯನ್ನು ಮೊದಲು ಬೈಡನ್ ಟೀಕಿಸಿದ್ದರಾದರೂ ಇದೀಗ ಅಫ್ಘಾನಿಸ್ತಾನದಿಂದ ಹೊರಬರುವ ಅಧಿಕೃತ ಘೋಷಣೆ ಮಾಡಿದ್ದಾರೆ. 9/11 ಘಟನೆಗೆ ಈ ವರ್ಷ 20 ತುಂಬುವುದರಿಂದ ಆ ಹೊತ್ತಿಗೆ ಅಮೆರಿಕದ ಸೇನೆ ಅಫ್ಘಾನಿಸ್ತಾನದಿಂದ ಹೊರಬೀಳಲಿದೆ ಎಂದಿದ್ದಾರೆ.

ಅಫ್ಘಾನಿಸ್ತಾನದ ವಿಷಯ ನೋಡುವುದಾದರೆ, ಅರಾಜಕತೆ, ಅಸ್ಥಿರತೆ ಆ ದೇಶಕ್ಕೆ ಹೊಸ ವಿದ್ಯಮಾನವಲ್ಲ. ಐದು ದಶಕಗಳ ಹಿಂದೆ ಅಂದಿನ ಸೋವಿಯತ್ ಒಕ್ಕೂಟವನ್ನು ಮಣಿಸಲು ಅಮೆರಿಕ, ಪಾಕಿಸ್ತಾನ ಮತ್ತು ಸೌದಿ ಅರೇಬಿಯಾ ಡಾಲರ್ ಗಂಟಿನ ಜೊತೆ ಶಸ್ತ್ರಗಳ ಮೂಟೆ ಹೊತ್ತು ಅಫ್ಘಾನಿಸ್ತಾನಕ್ಕೆ ಕಾಲಿಟ್ಟಿದ್ದವು. ಸೋವಿಯತ್ ಪಡೆಯ ವಿರುದ್ಧ ಹೋರಾಡಲು ಯುವಕರ ಕೈಗೆ ಬಂದೂಕನ್ನು ಕೊಟ್ಟು ಗೆರಿಲ್ಲಾ ಪಡೆಯನ್ನು ಅಮೆರಿಕ ಹುಟ್ಟುಹಾಕಿತು. ಸೋವಿಯತ್ ಅಲ್ಲಿಂದ ಕಾಲ್ತೆಗೆದ ಮೇಲೆ ಮತೀಯವಾದಿಗಳು ಆಡಳಿತದ ಚುಕ್ಕಾಣಿ ಹಿಡಿದರು. ಅಮೆರಿಕದಿಂದ ಶಸ್ತ್ರಾಸ್ತ್ರ ಪಡೆದು ತರಬೇತಿ ಪಡೆದವರು ಅಮೆರಿಕದ ವಿರುದ್ಧವೇ ತಿರುಗಿಬಿದ್ದರು.

9/11 ಘಟನೆ ನಡೆಯುವವರೆಗೆ, ಅಫ್ಘಾನಿಸ್ತಾನವನ್ನು ಅಮೆರಿಕ ದೂರದಿಂದ ನೋಡುತ್ತಿತ್ತು. ಆದರೆ ಲಾಡೆನ್ ಪಡೆ ತನ್ನ ಮೇಲೆರಗಿದಾಗ ನೇರ ಯುದ್ಧಕ್ಕೆ ಇಳಿಯಿತು. ಕೆಲವು ವಾರಗಳಲ್ಲೇ ತಾಲಿಬಾನ್ ಆಡಳಿತವು ಶರಣಾಗುವಂತೆ ಮಾಡುವಲ್ಲಿ ಅಮೆರಿಕ ಯಶಸ್ವಿಯಾಯಿತು. ಅಲ್‌ಕೈದಾ ಭೂಗತಗೊಂಡಿತು. ತನ್ನ ಕೇಂದ್ರವನ್ನು ಪಾಕಿಸ್ತಾನಕ್ಕೆ ಬದಲಿಸಿಕೊಂಡಿತು. ಲಾಡೆನ್‌ಗಾಗಿ ಹುಡುಕಾಟ 10 ವರ್ಷಗಳವರೆಗೆ ನಡೆಯಿತು. ಕೊನೆಗೂ ಪಾಕಿಸ್ತಾನದಲ್ಲಿ ಆತ ಇದ್ದಾನೆ ಎಂಬ ಸುಳಿವನ್ನು ಪಡೆದು ಹತ್ಯೆ ಮಾಡಿತು. ಆದರೆ ನಂತರ ದಂಗೆಗಳು ಆರಂಭವಾದವು. ತಾಲಿಬಾನ್ ದಂಗೆಕೋರರನ್ನು ಮಟ್ಟಹಾಕಿ ಸ್ಥಿರ ರಾಜಕೀಯ ವ್ಯವಸ್ಥೆಯನ್ನು ಅಫ್ಘಾನಿಸ್ತಾನದಲ್ಲಿ ಹುಟ್ಟುಹಾಕುವುದು ನಮ್ಮ ಗುರಿ ಎಂದು ಅಮೆರಿಕ ಹೇಳಿತು. ಅಫ್ಘನ್ ಸರ್ಕಾರಕ್ಕೆ ಆರ್ಥಿಕ ಶಕ್ತಿ ತುಂಬಿ, ಸೈನಿಕರನ್ನು ನೀಡಿ ತಾಲಿಬಾನ್ ದಂಗೆಕೋರರ ವಿರುದ್ಧ ಕಾರ್ಯಾಚರಣೆಗೆ ಪ್ರಚೋದಿಸಿತು. ಆದರೆ ಅಮೆರಿಕದಿಂದ ಹೆಚ್ಚಿನ ಹಣ ಬರುತ್ತಿದ್ದಂತೆ ಅಫ್ಘನ್ ಆಡಳಿತದಲ್ಲಿ ಭ್ರಷ್ಟಾಚಾರ ಹೆಚ್ಚಿತು. ತಳವಿಲ್ಲದ ಪಾತ್ರೆಗೆ ಮೊಗೆಮೊಗೆದು ಅಮೆರಿಕ ಹಣವನ್ನು ಸುರಿಯುತ್ತಾ ನಿಡುಸುಯ್ದಿತು. ಉಗ್ರ ಸಂಘಟನೆಗಳು ಪಾಕಿಸ್ತಾನದ ಐಎಸ್‌ಐ ತಾಳಕ್ಕೆ ಹೆಜ್ಜೆ ಹಾಕಿದವು.

ಅಫ್ಘಾನಿಸ್ತಾನದಲ್ಲಿ ಅಮೆರಿಕ ಸೇನೆಯ ನೇತೃತ್ವ ವಹಿಸಿದ್ದ ಜನರಲ್ ಜಾನ್ ನಿಕೋಲ್ಸನ್, 'ಭಯೋತ್ಪಾದನೆಯ ವಿರುದ್ಧದ ಸಮರ ಇಷ್ಟು ವರ್ಷಗಳ ಮೇಲೂ ತಾರ್ಕಿಕ ಅಂತ್ಯ ಕಾಣದಿರುವುದಕ್ಕೆ ಪಾಕಿಸ್ತಾನದ ಕಪಟ ನೀತಿಯೇ ಕಾರಣ' ಎಂದು ನೇರವಾಗಿಯೇ ಹೇಳಿದ್ದರು. ಟ್ರಂಪ್ ಶ್ವೇತಭವನ ಪ್ರವೇಶಿಸಿದ ನಂತರ, ಇನ್ನು ಅಫ್ಘಾನಿಸ್ತಾನದಲ್ಲಿರಲು ಯಾವುದೇ ಕಾರಣಗಳಿಲ್ಲ ಎಂದು ಘೋಷಿಸಿ, ಅಲ್ಲಿಂದ ಹೊರಬರುವ ಮಾರ್ಗ ಹುಡುಕಿದರು. 2018ರಲ್ಲಿ ತಾಲಿಬಾನ್ ಜೊತೆಗಿನ ಮಾತುಕತೆಗೆ ಚಾಲನೆ ಕೊಟ್ಟರು. 2020ರ ಫೆಬ್ರುವರಿಯಲ್ಲಿ ಅಮೆರಿಕವು ತಾಲಿಬಾನ್ ಜೊತೆ ಒಪ್ಪಂದ ಮಾಡಿಕೊಂಡಿತು. 'ಅಮೆರಿಕವನ್ನು ಗುರಿಯಾಗಿಸಿಕೊಂಡ ಯಾವುದೇ ಬಗೆಯ ಭಯೋತ್ಪಾದಕ ಚಟುವಟಿಕೆಗೆ ತಾಲಿಬಾನ್ ಬೆಂಬಲ ನೀಡದಿದ್ದರೆ ಅಮೆರಿಕವು ಅಫ್ಘಾನಿಸ್ತಾನವನ್ನು 2021ರ ಮೇ 1ರ ವೇಳೆಗೆ ಸಂಪೂರ್ಣವಾಗಿ ತೊರೆಯಲಿದೆ' ಎಂಬುದು ಆ ಒಪ್ಪಂದದ ಸಾರಾಂಶ. ಕೊನೆಗೂ ಅಮೆರಿಕ ಯಾರೊಂದಿಗೆ ಕದನಕ್ಕೆ ಇಳಿದಿತ್ತೋ ಅವರೊಂದಿಗೆ ಕೈಕುಲುಕಬೇಕಾದ ಪರಿಸ್ಥಿತಿ ನಿರ್ಮಾಣವಾಗಿತ್ತು.

ಜಗತ್ತಿನ ಅತ್ಯಂತ ಬಲಿಷ್ಠ ಸೇನೆ, ಅತ್ಯುನ್ನತ ಯುದ್ಧೋಪಕರಣಗಳು ಮತ್ತು ಗುಪ್ತಚರ ಜಾಲವನ್ನು ಹೊಂದಿರುವ ಅಮೆರಿಕಕ್ಕೆ, ತನಗೆ ಸಮಾನವಲ್ಲದ ತಾಲಿಬಾನ್ ಪಡೆಯನ್ನು ಎದುರಿಸಲು ಸಾಧ್ಯವಾಗಲಿಲ್ಲವೇ ಎಂಬ ಪ್ರಶ್ನೆ ಇದೀಗ ಚರ್ಚೆಯಲ್ಲಿದೆ. ಗೆರಿಲ್ಲಾ ಪಡೆಗಳ ವಿರುದ್ಧದ ಯುದ್ಧ, ರೂಢಿಗತ ಯುದ್ಧದಷ್ಟು ನೇರವಾಗಿ ಇರುವುದಿಲ್ಲ ಮತ್ತು ಸೋಲು ಗೆಲುವುಗಳ ಲೆಕ್ಕಾಚಾರ ಸುಲಭವೂ ಅಲ್ಲ. ಸ್ಥಳೀಯರ ಮನಗೆಲ್ಲದೇ ತಾಲಿಬಾನ್‌ನಂತಹ ಸಂಘಟನೆಯನ್ನು ಎದುರಿಸಲು ಸಾಧ್ಯವಿಲ್ಲ. ಅಲ್ಲಿನ ಜನ ತಾಲಿಬಾನ್ ಧೋರಣೆ, ಕಾರ್ಯವೈಖರಿಯ ಬಗ್ಗೆ ಅಸಮಾಧಾನ ಹೊಂದಿದ್ದರೂ ಅಮೆರಿಕ ಮತ್ತು ಮಿತ್ರಪಡೆಗಳನ್ನು 'ಹೊರಗಿನವರು' ಎಂದೇ ನೋಡಿದರು ಮತ್ತು ತಾಲಿಬಾನಿಗೆ ಬೆಂಬಲವಾಗಿ ನಿಂತರು. ಇದು ಅಮೆರಿಕಕ್ಕೆ ಮನವರಿಕೆಯಾಗಲು ಬಹಳ ಸಮಯ ಹಿಡಿಯಿತು. ಜೊತೆಗೆ ತಾಲಿಬಾನಿಗೆ ಪಾಕಿಸ್ತಾನ ಬೆಂಬಲವಾಗಿ ನಿಂತಿದ್ದು, ಅಡಗುತಾಣ ಕಲ್ಪಿಸಿಕೊಟ್ಟಿದ್ದು ಮತ್ತು ಐಎಸ್‌ಐ ಮೂಲಕ ತಾಲಿಬಾನ್ ಅಗತ್ಯಗಳನ್ನು ಪೂರೈಸಿದ್ದು ಅಮೆರಿಕದ ಮೀಸೆ ಮಣ್ಣಾಗಲು ಕಾರಣವಾಯಿತು.

ಹಾಗಾದರೆ ಅಮೆರಿಕ ಮತ್ತು ಮಿತ್ರಪಡೆಗಳು ಅಫ್ಘಾನಿಸ್ತಾನದಿಂದ ಹೊರಬಂದ ಮೇಲೆ ಏನಾಗಬಹುದು? ಆ ಆತಂಕ ಅಲ್ಲಿನ ಸ್ಥಳೀಯರನ್ನು ಮತ್ತು ಭಾರತ ಸೇರಿದಂತೆ ನೆರೆಯ ರಾಷ್ಟ್ರಗಳನ್ನು ಕಾಡುತ್ತಿದೆ. ಆರೋಗ್ಯ, ಶಿಕ್ಷಣ ಮತ್ತು ಮಹಿಳಾ ಹಕ್ಕುಗಳ ವಿಷಯದಲ್ಲಿ ಅಫ್ಘಾನಿಸ್ತಾನ ಕಳೆದ ಹತ್ತು ವರ್ಷಗಳಲ್ಲಿ ಬಹಳಷ್ಟು ಮುಂದಡಿ ಇಟ್ಟಿದೆ. ಮತೀಯವಾದಿಗಳು ಮತ್ತೊಮ್ಮೆ ಆಡಳಿತದ ಚುಕ್ಕಾಣಿ ಹಿಡಿದರೆ ಅಫ್ಘಾನಿಸ್ತಾನ ಪುನಃ ಹಿಂದಿನ ಸ್ಥಿತಿಗೆ ಮರಳಬಹುದು. ರಾಜಕೀಯ ಅಸ್ಥಿರತೆ, ದಂಗೆಗಳಿಗೆ ದಾರಿ ಮಾಡಿಕೊಡಬಹುದು.

ಭಾರತದ ಆತಂಕ ಆ ದಿಸೆಯಲ್ಲಿಯೇ ಇದೆ. ಭಾರತದ ರಕ್ಷಣಾ ಪಡೆಗಳ ಮುಖ್ಯಸ್ಥ ಜನರಲ್ ಬಿಪಿನ್ ರಾವತ್ 'ಅಮೆರಿಕದ ಸೇನಾಪಡೆಗಳ ನಿರ್ಗಮನದ ಬಳಿಕ ಉಂಟಾಗುವ ನಿರ್ವಾತವು ಅರಾಜಕತೆ ಸೃಷ್ಟಿಸುವ ಇತರ ಶಕ್ತಿಗಳಿಗೆ ಜಾಗ ಮಾಡಿಕೊಡಬಹುದು' ಎಂದು ಪ್ರತಿಕ್ರಿಯಿಸಿದ್ದಾರೆ. 'ಭಾರತವನ್ನು ಎದುರಿಸುವ ಸಲುವಾಗಿಯೇ ತಾಲಿಬಾನನ್ನು ಐಎಸ್‌ಐ ಪೋಷಿಸುತ್ತಿದೆ' ಎಂದು ಈ ಹಿಂದೆ ಪಾಕಿಸ್ತಾನದ ಮಾಜಿ ಅಧ್ಯಕ್ಷ ಪರ್ವೇಜ್ ಮುಷರಫ್ ಹೇಳಿದ್ದರು. ಪಾಕಿಸ್ತಾನದ ಜೊತೆ ಚೀನಾ ಕೂಡ ಅಫ್ಘಾನಿಸ್ತಾನದಲ್ಲಿ ತನ್ನ ಪ್ರಭಾವ ಹೆಚ್ಚಿಸಿಕೊಳ್ಳಲು ಪ್ರಯತ್ನಿಸಿದರೆ ಅಚ್ಚರಿಯಿಲ್ಲ. ಹಾಗಾಗಿ ಭಾರತ ಎಚ್ಚರಿಕೆಯಿಂದ ಇರಬೇಕು.

ಒಟ್ಟಿನಲ್ಲಿ, 'ಅಫ್ಘಾನಿಸ್ತಾನವನ್ನೂ ಮೀರಿ ಬೆಳೆದಿರುವ ಭಯೋತ್ಪಾದಕ ಜಾಲದ ಬಗ್ಗೆ ನಾವು ಗಮನ ಹರಿಸಬೇಕಿದೆ. ಅಫ್ಘಾನಿಸ್ತಾನಕ್ಕೆ ನಾವು ಬಂದ ಉದ್ದೇಶ ಈಡೇರಿದೆ. ಹಾಗಾಗಿ ಹಿಂದಿರುಗುತ್ತೇವೆ' ಎಂದು ಜಗತ್ತಿಗೆ ಅಮೆರಿಕ ಸಬೂಬು ಹೇಳಿದರೂ ವಿಯೆಟ್ನಾಂ ಯುದ್ಧವು ಅಮೆರಿಕಕ್ಕೆ ಬಿದ್ದ ಮೊದಲ ಬರೆಯಾದರೆ, ಅಫ್ಘಾನಿಸ್ತಾನದ ಕದನ ಆ ಸಾಲಿನಲ್ಲಿ ಎರಡನೆಯದು ಮತ್ತು ದೀರ್ಘ ಅವಧಿಯದ್ದು ಎಂಬುದು ಜಾಹೀರಾಗಿದೆ.

ಚುರುಮುರಿ

ಹೀಗೂ ಉಂಟೆ!

• ಬಿ.ಎನ್.ಮಲ್ಲೇಶ್

ಪರಿಚಯದ ಕಾನ್‌ಸ್ಟೆಬಲ್ ಒಬ್ಬ ಹೋಟೆಲ್‌ನಲ್ಲಿ ಬಿರಿಯಾನಿ ಪಾರ್ಸೆಲ್ ಕಟ್ಟಿಸಿಕೊಳ್ಳುತ್ತಿದ್ದುದನ್ನು ನೋಡಿದ ಪತ್ರಕರ್ತ ತೆಪರೇಸಿ, 'ಏನ್ರಿ ಇದೂ... ಬಿರಿಯಾನಿ, ಯಾರಿಗೆ?' ಎಂದು ವಿಚಾರಿಸಿದ.

'ಅಯ್ಯೋ ನಮಗಲ್ಲ ಸಾ, ಅದ್ಯಾರೋ ಡೂಪ್ಲಿಕೇಟ್ ಔಷಧಿ ಮಾಡಿ ಸಿಕ್ಕು ಬಿದ್ದಾರಲ್ಲ, ಅವರಿಗೆ...' ಎಂದ ಕಾನ್‌ಸ್ಟೆಬಲ್ಲು.

ತೆಪರೇಸಿಗೆ ಆಶ್ಚರ್ಯ 'ಏನು? ವಂಚಕರಿಗೆಲ್ಲ ಬಿರಿಯಾನಿ ತಿನ್ನಿಸ್ತೀರಾ ನಿಮ್ ಸ್ಟೇಶನ್ನಲ್ಲಿ?'

'ಅಯ್ಯೋ ಬಿರಿಯಾನಿ ಒಂದೇ ಅಲ್ಲ ಸಾ, ನಮ್ಮ ಸಾಹೇಬ್ರು ಅವರಿಗೆ ಒಳ್ಳೆ ಊಟ, ಡ್ರಿಂಕ್ಸು, ಲಾಕಪ್‌ನಲ್ಲೇ ಮಲಗೋಕೆ ಹಾಸಿಗೆ, ಫ್ಯಾನು ಎಲ್ಲ ಮಾಡಿಕೊಟ್ಟಿದಾರೆ. ಲಾಠಿ ಎತ್ತಿ ಒಂದೂ ಏಟು ಹೊಡೆದಿಲ್ಲ'.

'ಹೌದಾ? ಏನ್ರೀ ಇದು ವಿಚಿತ್ರ?'

'ಏನೋ ಗೊತ್ತಿಲ್ಲ ಸಾ, ನಮ್ ಸಾಹೇಬ್ರು ಆ ವಂಚಕರಿಗೆ 'ನಿಮ್ ಕೈ ಮುಗೀತೀನಿ, ದಯವಿಟ್ಟು ಸತ್ಯ ಹೇಳಿ' ಅಂತ ರಿಕ್ವೆಸ್ಟ್ ಮಾಡ್ಕೋತಿದ್ರು ಸಾ...'

ಇದ್ರಲ್ಲಿ ಏನೋ ಇದೆ ಎಂದುಕೊಂಡ ತೆಪರೇಸಿ ನೇರ ಪೊಲೀಸ್ ಠಾಣೆಗೇ ನಡೆದ. ಅಲ್ಲಿ ಇನ್‌ಸ್ಪೆಕ್ಟರು ನಕಲಿ ಔಷಧಿ ವಂಚಕರಿಗೆ 'ನಿಮಗೆ ಏನೂ ಮಾಡಲ್ಲ ಕಣ್ರಯ್ಯ, ಅದ್ರಲ್ಲಿ ಏನು ಹಾಕಿದ್ರಿ ಹೇಳಿಬಿಡಿ ಸಾಕು, ನಿಮ್ಮ ಮೇಲೆ ಕೇಸೇ ಹಾಕಲ್ಲ, ಬಿಟ್ಟು ಕಳಿಸ್ತೀನಿ' ಎಂದು ಮನವಿ ಮಾಡಿಕೊಳ್ಳುತ್ತಿದ್ದರು.

'ಏನ್ಸಾ ಇದೂ, ಈ ವಂಚಕರಿಗೆ ಬೆಂಡ್ ಎತ್ತಿ ಬಾಯಿ ಬಿಡಿಸೋದು ಬಿಟ್ಟು ಬಿರಿಯಾನಿ ತಿನ್ನಿಸ್ತಿದೀರಂತೆ?' ವಿಚಾರಿಸಿದ ತೆಪರೇಸಿ.

'ಹೌದು ಕಣ್ರಿ, ಇವರು ಕೊರೊನಾಕ್ಕೆ ಕೊಡೋ ಔಷಧಾನ ನಕಲಿ ಮಾಡಿ ಮಾರಾಟ ಮಾಡ್ತಿದ್ರು. ನಕಲಿ ಮಾಡಿದೀರಲ್ಲ, ಅದ್ರಲ್ಲಿ ಏನು ಹಾಕಿದ್ರಿ ಹೇಳ್ರಿ ಅಂದ್ರೆ ಬಾಯಿ ಬಿಡ್ತಿಲ್ಲ, ಮರೆತೋಗಿದೆ ಅಂತಾರೆ' ಇನ್‌ಸ್ಪೆಕ್ಟರು ಪೇಚಾಡಿದರು.

'ನಕಲಿ ಔಷಧಿಗೆ ಏನು ಹಾಕಿದ್ರು ಅನ್ನೋದು ನಿಮಗ್ಯಾಕೆ ಬೇಕು?'

'ಅಯ್ಯೋ ನನಗಲ್ಲಪ್ಪಾ, ಸರ್ಕಾರಕ್ಕೆ. ಇವರು ತಯಾರು ಮಾಡಿದ ಆ ನಕಲಿ ಔಷಧಿ ತಗಂಡೋರೆಲ್ಲ ಎರಡೇ ದಿನದಲ್ಲಿ ಗುಣ ಆಗಿದಾರಂತೆ!'

ಇನ್‌ಸ್ಪೆಕ್ಟರ್ ಹೇಳಿದ್ದು ಕೇಳಿ ತೆಪರೇಸಿಗೆ ಮಾತೇ ಹೊರಡಲಿಲ್ಲ.

ಸಂಗತ

ಸುಳ್ಳು ಸುದ್ದಿ ಮತ್ತು ಸಿಂಗಪುರದ ಸೂತ್ರ

ರೂಪಾಂತರಿ ಕೊರೊನಾ ಕುರಿತ ಕೇಜ್ರಿವಾಲ್ ಹೇಳಿಕೆಯನ್ನು ಸಿಂಗಪುರ ಗಂಭೀರವಾಗಿ ಪರಿಗಣಿಸಿದೆ

• ಸುಕ್ಷೀರಸಾಗರ

ವಿವಾದಗಳಿಗೂ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರಿಗೂ ಸದಾ ಹತ್ತಿರದ ನಂಟು. ಬುಧವಾರ ಅವರು ಮಾಡಿದ ಒಂದು ಟ್ವೀಟ್ ವಿದೇಶಾಂಗ ಸಚಿವಾಲಯವನ್ನು ಮುಜುಗರಕ್ಕೆ ಈಡು ಮಾಡಿದೆ.

'ಸಿಂಗಪುರದಲ್ಲಿ ಉದ್ಭವವಾಗಿರುವ ಕೊರೊನಾ-19ರ ಹೊಸ ರೂಪಾಂತರಿಯು ಚಿಕ್ಕ ಮಕ್ಕಳಿಗೆ ಅತ್ಯಂತ ಅಪಾಯಕಾರಿಯೆಂದು ಗೊತ್ತಾಗಿದೆ. ಮೂರನೆಯ ಅಲೆಯ ರೂಪದಲ್ಲಿ ಅದು ದೆಹಲಿಯನ್ನು ಸೇರಬಹುದು. ಕೇಂದ್ರ ಸರ್ಕಾರಕ್ಕೆ ನನ್ನ ಕೋರಿಕೆಯೇನೆಂದರೆ, ಸಿಂಗಪುರದೊಂದಿಗಿನ ಎಲ್ಲ ವಿಮಾನ ಸಂಪರ್ಕ ಸೇವೆಗಳನ್ನು ತಕ್ಷಣವೇ ರದ್ದು ಮಾಡಬೇಕು. ಹಾಗೆಯೇ ಆದ್ಯತೆಯ ಮೇರೆಗೆ ಮಕ್ಕಳಿಗೊಂದು ಬದಲಿ ವ್ಯಾಕ್ಸಿನ್ ಅಭಿವೃದ್ಧಿಯತ್ತ ಕೆಲಸ ಮಾಡಬೇಕು'.

ಇದು ಪ್ರಕಟವಾದ ಕೆಲವೇ ಹೊತ್ತಿನಲ್ಲಿ ಜೇನುಗೂಡಿಗೆ ಕಲ್ಲೆಸೆದಂತಾಯಿತು. ಮುಖ್ಯಮಂತ್ರಿಯೊಬ್ಬರ ಹೇಳಿಕೆಯು ಕೇಂದ್ರ ಸರ್ಕಾರದ ಅಧಿಕೃತ ಅಭಿಪ್ರಾಯವಲ್ಲ ಎಂಬ ಸ್ಪಷ್ಟನೆಯನ್ನು ವಿದೇಶಾಂಗ ಸಚಿವರು ಸಿಂಗಪುರ ಸರ್ಕಾರಕ್ಕೆ ನೀಡಬೇಕಾಯಿತು.

ಸಿಂಗಪುರ ಸರ್ಕಾರವು ಕೇಜ್ರಿವಾಲರ ಹೇಳಿಕೆಯನ್ನು ಗಂಭೀರವಾಗಿ ಪರಿಗಣಿಸಿ, ಈ ಹಿಂದೆಯೇ ಅಲ್ಲಿ ಅಂಗೀಕೃತವಾಗಿದ್ದ 'ಪ್ರೊಟೆಕ್ಷನ್ ಫ್ರಮ್ ಆನ್‌ಲೈನ್ ಫಾಲ್ಸ್‌ಹುಡ್ಸ್ ಆ್ಯಂಡ್ ಮ್ಯಾನಿಪ್ಯುಲೇಶನ್ ಆ್ಯಕ್ಟ್' (ಪಿಒಎಫ್‌ಎಂಎ) ಅಡಿಯಲ್ಲಿನ 'ತಪ್ಪುಮಾಹಿತಿ ಪ್ರಸರಣಾ ವಿರೋಧಿ ಕಾನೂನನ್ನು' ಗುರುವಾರದಿಂದ ಜಾರಿಗೆ ತಂದಿದೆ. ಅಲ್ಲಿನ ಸ್ವಾಸ್ಥ್ಯ ಸಚಿವಾಲಯವು ಪಿಒಎಫ್‌ಎಂಎ ಕಚೇರಿಯ ಮೂಲಕ ಫೇಸ್‌ಬುಕ್, ಟ್ವಿಟರ್‌ನಂಥ ಸಾಮಾಜಿಕ ಜಾಲತಾಣಗಳಿಗೆ 'ಸಾಮಾನ್ಯ ತಿದ್ದುಪಡಿ ಮಾರ್ಗದರ್ಶಿ'ಗಳನ್ನು ಆದೇಶಿಸಿದೆ. ಅದರ ಅನ್ವಯ, ಸಿಂಗಪುರದಲ್ಲಿನ ಸಾಮಾಜಿಕ ಜಾಲತಾಣದ ಬಳಕೆದಾರರು ಕಳುಹಿಸುವ ಸಂದೇಶಗಳ ಜತೆಯಲ್ಲಿ 'ಕೋವಿಡ್-19ರ ಸಿಂಗಪುರ ರೂಪಾಂತರಿಗಳು ಯಾವುವೂ ಇಲ್ಲ. ಮಕ್ಕಳಿಗೆ ತೀವ್ರ ಅಪಾಯಕಾರಿಯಾಗುವಂಥ ಕೋವಿಡ್-19 ರೂಪಾಂತರಿ ಇದೆ ಎನ್ನುವುದಕ್ಕೆ ಯಾವುದೇ ಆಧಾರಗಳಿಲ್ಲ' ಎಂಬ ಸಂದೇಶವು ಸ್ವಯಂಚಾಲಿತವಾಗಿ ಸೇರ್ಪಡೆಯಾಗುತ್ತದೆ.

ಆನ್‌ಲೈನ್ ಮಾಧ್ಯಮಗಳ ಮೂಲಕ ಸುಲಭವಾಗಿ ಸುಳ್ಳು ಅಥವಾ ಕುಚೋದ್ಯದ ಸುದ್ದಿಗಳನ್ನು ತ್ವರಿತಗತಿಯಲ್ಲಿ ಪ್ರಸರಿಸಬಹುದು. ಇಂಥ ಸುದ್ದಿಗಳಿಗೆ ಕಡಿವಾಣ ಹಾಕುವುದು ಅಷ್ಟು ಸುಲಭವಲ್ಲ. ಈ ಕುರಿತಂತೆ ಐರೋಪ್ಯ ಒಕ್ಕೂಟವು ಬಹಳ ಹಿಂದೆಯೇ 'ಸುಳ್ಳು ಸುದ್ದಿ ಹಾಗೂ ಆನ್‌ಲೈನ್ ತಪ್ಪು ಮಾಹಿತಿ' ಪ್ರಸರಣದ ವಿರುದ್ಧ ಏನೆಲ್ಲಾ ಕ್ರಮ ತೆಗೆದುಕೊಳ್ಳಬೇಕೆಂದು ನಿರ್ಧರಿಸಲು ಉನ್ನತ ಮಟ್ಟದ ಪರಿಣತ ಸಮಿತಿಯೊಂದನ್ನು ನೇಮಕ ಮಾಡಿತ್ತು. ಆ ಸಮಿತಿಯು 2018ರ ಜನವರಿಯಲ್ಲಿ ಕೆಲವೊಂದು ಶಿಫಾರಸುಗಳನ್ನು ಮಾಡಿತ್ತು. ಅವುಗಳಲ್ಲಿ ಪ್ರಮುಖವಾದವುಗಳೆಂದರೆ– 1. ಆನ್‌ಲೈನ್‌ನಲ್ಲಿ ಪ್ರಕಟವಾಗುವ ಸುದ್ದಿಗಳ ಪಾರದರ್ಶಕತೆಯನ್ನು ಹೆಚ್ಚಿಸುವುದು. 2. ತಪ್ಪು ಮಾಹಿತಿ ಪ್ರಸರಣಕ್ಕೆ ಕಡಿವಾಣ ಹಾಕಲು ಮಾಧ್ಯಮ ಹಾಗೂ ಮಾಹಿತಿ ಸಾಕ್ಷರತೆಯನ್ನು ಪ್ರೋತ್ಸಾಹಿಸುವುದು. 3. ತಪ್ಪು ಮಾಹಿತಿಯನ್ನು ತಕ್ಷಣವೇ ಗುರುತಿಸಬಲ್ಲ ತಂತ್ರಜ್ಞಾನ ಸಲಕರಣೆಗಳನ್ನು ಆನ್‌ಲೈನ್ ಮಾಧ್ಯಮದ ಬಳಕೆದಾರರು ಹಾಗೂ ಪತ್ರಕರ್ತರಿಗೆ ನೀಡುವುದು. 4. ಯುರೋಪಿಯನ್ ಸುದ್ದಿ ಮಾಧ್ಯಮದ ವೈವಿಧ್ಯ ಹಾಗೂ ಸುಸ್ಥಿರವಾದ ವಿಶಿಷ್ಟ ಸೊಗಡನ್ನು ಕಾಪಾಡಿಕೊಳ್ಳುವುದು. 5. ತಪ್ಪು ಮಾಹಿತಿಗಳಿಂದ ಯುರೋಪ್‌ನ ಮೇಲಾಗಿರುವ ದುಷ್ಪರಿಣಾಮಗಳ ಕುರಿತಂತೆ ಸಂಶೋಧನೆಗಳನ್ನು ಪ್ರೋತ್ಸಾಹಿಸುವುದು.

ಯುರೋಪ್ ಅಥವಾ ಅಮೆರಿಕ ಹೋರಾಡಬೇಕಿರುವುದು ಅನ್ಯ ದೇಶಗಳಿಂದ ಪ್ರಸರಣವಾಗುವ ಸುಳ್ಳು ಸುದ್ದಿ ಅಥವಾ ತಪ್ಪು ಮಾಹಿತಿಗಳ ಪ್ರಸರಣದ ವಿರುದ್ಧ. ಆದರೆ ಭಾರತದಲ್ಲಿ ಇದು ಆಂತರಿಕ ಸಮಸ್ಯೆಯಾಗಿಯೇ ಹೆಚ್ಚು ಕಾಡುತ್ತಿದೆ. ರಾಜಕೀಯ ಪಕ್ಷಗಳ ಸಿದ್ಧಾಂತಗಳಿಗೆ ಕಟಿಬದ್ಧರಾಗಿರುವ ಸ್ವಯಂ ಸೇವಕರ ತಂಡಗಳು ನಿರಂತರವಾಗಿ ಕಾರ್ಯವಹಿಸುತ್ತಿವೆ. ಜತೆಗೆ ರಾಜಕೀಯ ಪಕ್ಷಗಳೇ 'ಅಧಿಕೃತ' (?) ಮಾಹಿತಿ ತಂತ್ರಜ್ಞಾನ ಸೆಲ್‌ಗಳ ಮೂಲಕ ತಮ್ಮ ವಿರೋಧಿಗಳನ್ನು ಹಣಿಯುವಂಥ ಸುದ್ದಿಗಳ ಪ್ರಸರಣದಲ್ಲಿ ತೊಡಗಿಕೊಂಡಿವೆ.

ಮಾಹಿತಿ ತಂತ್ರಜ್ಞಾನ ಕಾಯ್ದೆ– 2000ದ ಅಡಿಯಲ್ಲಿ ಕಂಪ್ಯೂಟರ್ ಸೌಕರ್ಯ ಅಥವಾ ಸಂಪರ್ಕ ಸಾಧನದ ಮೂಲಕ ಸುಳ್ಳು ಸುದ್ದಿಯ ಪ್ರಸರಣವನ್ನು ತಡೆಗಟ್ಟಬಲ್ಲ ಸೆಕ್ಷನ್ 66ಎ ಜಾರಿಗೆ ಬರುವುದರಲ್ಲಿತ್ತು. ಯಾರಿಗಾದರೂ ಕೋಪ ತರಿಸುವ, ತೊಂದರೆಗೀಡು ಮಾಡುವ, ಅಪಾಯ ತಂದೊಡ್ಡುವ, ತಡೆ ಹಾಕುವ, ಅವಮಾನಿಸುವ, ಗಾಸಿ ಮಾಡುವ, ದ್ವೇಷ ಸಾಧಿಸುವ, ಹಗೆತನದ, ಕ್ರಿಮಿನಲ್ ಉದ್ದೇಶದ ಸುದ್ದಿಗಳನ್ನು ಸುಳ್ಳೆಂದು ಗೊತ್ತಿದ್ದರೂ ಪಸರಿಸುವ ಕಿಡಿಗೇಡಿಗಳ ವಿರುದ್ಧ ಇದನ್ನು ಬಳಸಬಹುದಿತ್ತು. ಆದರೆ ಸುಪ್ರೀಂ ಕೋರ್ಟ್ ಇದನ್ನು ಅಸಾಂವಿಧಾನಿಕವೆಂದು ತಳ್ಳಿಹಾಕಿದ ಮೇಲೆ, ಸಾಮಾಜಿಕ ಜಾಲತಾಣಗಳ ದುರ್ಬಳಕೆಯನ್ನು ತಡೆಗಟ್ಟುವ ನಿಯಮಗಳ ಕರಡನ್ನು ಕೇಂದ್ರ ಸರ್ಕಾರ 2018ರಲ್ಲಿ ಸಿದ್ಧಪಡಿಸಿತು.

2019ರ ಚುನಾವಣೆಗಳ ಸಂದರ್ಭದಲ್ಲಿ ಅಭ್ಯರ್ಥಿಗಳ ಸಾಮಾಜಿಕ ಜಾಲತಾಣ ಖಾತೆಗಳ ವಿವರಗಳನ್ನು ತನಗೆ ಕಡ್ಡಾಯವಾಗಿ ನೀಡಬೇಕೆಂದು ಚುನಾವಣಾ ಆಯೋಗ ಆದೇಶಿಸಿತ್ತು.

ಕಾನೂನಿನ ಕುಣಿಕೆಗಳು ಇಷ್ಟೆಲ್ಲಾ ಇದ್ದರೂ ಜಾಲತಾಣಗಳಲ್ಲಿ ಸಾಮಾಜಿಕ ಜವಾಬ್ದಾರಿ ಮರೆತು ಅರಿವಿದ್ದೋ ಅರಿವಿಲ್ಲದೆಯೋ ಸುಳ್ಳು ಸುದ್ದಿಗಳು, ತಪ್ಪು ಮಾಹಿತಿಗಳನ್ನು ಹಂಚಿಕೊಳ್ಳುವವರ ಸಂಖ್ಯೆ ಜಾಸ್ತಿಯಾಗುತ್ತಿದೆ. ಇದು ಆತಂಕಕಾರಿ ಬೆಳವಣಿಗೆ.

ವಾಚಕರ ವಾಣಿ

ಕೋವಿಡ್ ಪರೀಕ್ಷೆ ಕಡಿಮೆ ಮಾಡಿದ್ದೇಕೆ?

ರಾಜ್ಯದಲ್ಲಿ ತಿಂಗಳ ಹಿಂದೆ ಪ್ರತಿದಿನ ಸುಮಾರು 2 ಲಕ್ಷ ಕೋವಿಡ್ ಪರೀಕ್ಷೆಗಳನ್ನು ನಡೆಸಲಾಗುತ್ತಿತ್ತು. ಈಗ ಈ ಪ್ರಮಾಣ ಗಣನೀಯವಾಗಿ ಕಡಿಮೆಯಾಗಿದೆ ಎಂದು ವರದಿಯಾಗಿದೆ. ಪರೀಕ್ಷೆ ಪ್ರಮಾಣ ಇಳಿಸುವ ಮೂಲಕ ಸರ್ಕಾರ ಮತ್ತೊಂದು ಕೊರೊನಾ ಅಲೆಯನ್ನು ಆಹ್ವಾನಿಸುತ್ತಿರುವಂತೆ ಕಾಣುತ್ತಿದೆ. ಪರೀಕ್ಷೆಯ ಪ್ರಮಾಣವನ್ನು ಕಡಿಮೆಗೊಳಿಸಿರುವುದು ಯಾವ ಕಾರಣಕ್ಕಾಗಿ ಎಂಬುದು ತಿಳಿಯುತ್ತಿಲ್ಲ. ಕೋವಿಡ್ ಪರೀಕ್ಷೆಗಳನ್ನು ಕಡಿಮೆ ಮಾಡಿದರೆ ಸೋಂಕು ಮತ್ತಷ್ಟು ವ್ಯಾಪಕವಾಗಿ ಹರಡುತ್ತದೆ ಎಂದು ತಜ್ಞರು ಹೇಳಿದ್ದರೂ ಆಡಳಿತಾರೂಢರು ಸಂವೇದನಾಶೀಲತೆಯನ್ನು ಕಳೆದುಕೊಂಡಿರುವುದು ಇದರಿಂದ ಸ್ಪಷ್ಟವಾಗುತ್ತದೆ.

ಪರೀಕ್ಷೆಯ ಪ್ರಮಾಣವನ್ನು ಕಡಿಮೆ ಮಾಡುವುದರಿಂದ ಸೋಂಕಿತರು ತಮಗೆ ಸೋಂಕುಂಟಾಗಿರುವುದರ ಅರಿವಿಲ್ಲದೆ ಇತರರಿಗೂ ಅದನ್ನು ಹರಡುತ್ತಾರೆ. ರಾಜ್ಯ ಕೋವಿಡ್-19 ತಾಂತ್ರಿಕ ಸಲಹಾ ಸಮಿತಿಯು ನಾಮಕಾವಾಸ್ತೆ ಎನ್ನುವ ರೀತಿಯಲ್ಲಿ ಇದೆ. ಪರೀಕ್ಷೆಗಳನ್ನು ಕಡಿಮೆ ಮಾಡುವುದರಿಂದ ಸರ್ಕಾರಕ್ಕೆ ವೆಚ್ಚವೇನೂ ಕಡಿಮೆ ಆಗುವುದಿಲ್ಲ. ಏಕೆಂದರೆ ಪರೀಕ್ಷೆ ಮಾಡಿಸದ ಕಾರಣ ಜನ ಸೋಂಕಿಗೆ ಒಳಗಾದರೆ ಸರ್ಕಾರ ಭರಿಸಬೇಕಾದ ವೆಚ್ಚ ದುಪ್ಪಟ್ಟು ಆಗುತ್ತದೆ. ಮತ್ತೊಂದೆಡೆ, ಕಳೆದುಹೋದ ಅಮೂಲ್ಯ ಜೀವಗಳಿಗೆ ಬೆಲೆ ಕಟ್ಟಲಾಗದು. ಇದನ್ನು ಆಡಳಿತಾರೂಢರು ಮನವರಿಕೆ ಮಾಡಿಕೊಳ್ಳಬೇಕು.

ವಿಜಯಕುಮಾರ್ ಎಚ್.ಕೆ., ರಾಯಚೂರು

ಚಾಲಕರಿಗೆ ಪರಿಹಾರ: ಲೋಪ ಸರಿಯಾಗಲಿ

ವಿಶೇಷ ಆರ್ಥಿಕ ಪ್ಯಾಕೇಜ್‌ನ ಅಡಿ ವಾಹನ ಚಾಲಕರ ಖಾತೆಗೆ ತಲಾ ₹ 3 ಸಾವಿರ ಹಾಕುವುದಾಗಿ ರಾಜ್ಯ ಸರ್ಕಾರ ಹೇಳಿದೆ. ಸರಿಯಾದ ಖಾತೆದಾರರನ್ನು ಹುಡುಕಿ ಅವರ ಖಾತೆಗೆ ಹಣ ಹಾಕುವುದಾಗಿ ಸರ್ಕಾರ ಹೇಳಿದ್ದರೂ ಆ ಹಣ ಫಲಾನುಭವಿಗಳನ್ನು ತಲುಪದೇ ಇರುವ ಸಾಧ್ಯತೆಯೇ ಹೆಚ್ಚು. ವಾಹನ ಒಬ್ಬರದಾದರೆ ಅದರ ಚಾಲಕ ಬೇರೆಯಾಗಿರುತ್ತಾರೆ. ಹಾಗಾಗಿ ವಾಹನದ ನೋಂದಣಿ ಮೂಲಕ ಹಣದ ಬಟವಾಡೆ ಮಾಡಿದರೆ ಅದು ಚಾಲಕರ ಬದಲಿಗೆ ವಾಹನ ಮಾಲೀಕರ ಖಾತೆಗೆ ಜಮೆಯಾಗುತ್ತದೆ. ಆದ್ದರಿಂದ ಸರಿಯಾಗಿ ಪರೀಕ್ಷಿಸಿ ಜಮಾ ಮಾಡುವುದು ಒಳ್ಳೆಯದು. ಈ ಕಾರ್ಯದ ಪರಿಶೀಲನೆಗೆ ದಕ್ಷ ಅಧಿಕಾರಿಗಳನ್ನು ನಿಯೋಜಿಸಿದರೆ ಯೋಜನೆಯ ಫಲ ಸಿಗಬೇಕಾದವರಿಗೆ ಸಿಕ್ಕೀತು.

ಬಾಲಕೃಷ್ಣ ಎಂ.ಆರ್., ಬೆಂಗಳೂರು

ಹೊಸತು!

ಕೊರೊನಾ, ಕೋವಿಡ್
(ಎಷ್ಟು ಮಂದಿ 'ಡೆಡ್'?)
ಎಂದು ಕೇಳಿ, ಕೇಳಿ,
ಓದಿ, ಓದಿ, ನೋಡಿ, ನೋಡಿ
ಬೇಸರವಾಗಿತ್ತು;
ಚರ್ವಿತಚರ್ವಣ
ತಪ್ಪಿಸಲೆಂದು ಈಗ
ಮತ್ತೊಂದು ಹೊಸತು:
'ಕಪ್ಪು ಶಿಲೀಂಧ್ರ!'
(ಕಾಪಾಡಲಿ ಮಸಣದೊಡೆಯ
ರುದ್ರ)

ಸಿ.ಪಿ.ಕೆ., ಮೈಸೂರು

ಹಳ್ಳಿಗರಲ್ಲಿ ಅರಿವು ಮೂಡಿಸಿ

ಕೊರೊನಾದ ಎರಡನೇ ಅಲೆ ಈಗ ಸದ್ದಿಲ್ಲದೇ ಹಳ್ಳಿಗಳ ಕಡೆ ದಾಪುಗಾಲಿಡುತ್ತಿದೆ. ಆದರೂ ಹಳ್ಳಿಗರು ಇದರ ಪರಿವೆಯೇ ಇಲ್ಲದಂತೆ ವರ್ತಿಸುತ್ತಿದ್ದಾರೆ. ಕೆಲವೆಡೆ ಮಳೆಯಾಗಿದೆ. ಆ ಸಂತಸದಲ್ಲಿ ಕೋವಿಡ್ ನಿಯಮಗಳನ್ನು ಅನುಸರಿಸದೆ ಕೃಷಿ ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದಾರೆ. ಕೆಲವು ಹಳ್ಳಿಗಳಲ್ಲಿ ಆರೋಗ್ಯ ಇಲಾಖೆ ಹಾಗೂ ಪಂಚಾಯಿತಿ ಸಿಬ್ಬಂದಿಯೊಂದಿಗೆ ಜನರು ಸಹಕರಿಸುತ್ತಿಲ್ಲ ಎಂಬ ದೂರು ಇದೆ. ಹಳ್ಳಿಯಿಂದ ಹಳ್ಳಿಗೆ ನಿರಾತಂಕವಾಗಿ ಓಡಾಡುತ್ತಿರುವ ಜನ, ಸಣ್ಣಪುಟ್ಟ ಕೆಲಸಗಳಿಗೂ ಪ್ರತಿದಿನ ನಗರಗಳಿಗೆ ಹೋಗಿ ಬರುತ್ತಿದ್ದಾರೆ.

ಸ್ಥಳೀಯ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಜ್ವರ, ಶೀತ, ಕೆಮ್ಮಿನ ಚಿಕಿತ್ಸೆಗಾಗಿ ಜನ ಕಿಕ್ಕಿರಿದು ಸೇರುತ್ತಿದ್ದಾರೆ. ಇವರ್ಯಾರಿಗೂ ಕೊರೊನಾ ಪರೀಕ್ಷೆ ನಡೆಯುತ್ತಿಲ್ಲ. ಮುನ್ನೆಚ್ಚರಿಕೆ ಕ್ರಮಗಳ ಕುರಿತು ಅರಿವು ಮೂಡಿಸುವವರಿಲ್ಲ. ಲಸಿಕೆ ನೀಡಿಕೆಯು ಕುಂಟುತ್ತಾ ಸಾಗಿದೆ. ಹೀಗೇ ಮುಂದುವರಿದರೆ ಪರಿಸ್ಥಿತಿ ಹದಗೆಡುವ ಎಲ್ಲಾ ಸಾಧ್ಯತೆ ಇದೆ. ಜಿಲ್ಲಾ ಆಡಳಿತವು ಎಚ್ಚೆತ್ತುಕೊಳ್ಳಬೇಕು. ಜನರನ್ನು ಕೋವಿಡ್ ಪರೀಕ್ಷೆಗೆ ಒಳಪಡಿಸಬೇಕು. ಇಲ್ಲವಾದರೆ ಸೋಂಕಿನ ತೀವ್ರತೆ ಹೆಚ್ಚಾಗುವ ಸಂಭವವಿದೆ.

ಶಿವಕುಮಾರ್ ಯರಗಟ್ಟಿಹಳ್ಳಿ, ಚನ್ನಗಿರಿ

ಬೇಕು ಪುಸ್ತಕಗಳ ಸಾಂಗತ್ಯ

ಲಾಕ್‌ಡೌನ್‌ನ ಈ ಕಾಲಘಟ್ಟದಲ್ಲಿ ಸಮಯ ಕಳೆಯುವುದು ಹೇಗೆ ಎಂಬುದು ಬಹಳಷ್ಟು ಜನರನ್ನು ಬಾಧಿಸುತ್ತಿರುವ ಸಮಸ್ಯೆ. ಉದ್ಯೋಗದಲ್ಲಿ ಉಂಟಾದ ವ್ಯತ್ಯಯದಿಂದ ಜನರಿಗೆ ಸಮಯದ ಲಭ್ಯತೆ ಹೆಚ್ಚಾಗಿದೆ. ಸಣ್ಣಪುಟ್ಟ ಕೆಲಸಗಳಲ್ಲಿ ತೊಡಗಿದ್ದ ದುಡಿಯುವ ಕೈಗಳಿಗೆ ಕೆಲಸ ಇಲ್ಲದಂತಾಗಿದೆ. ಕೆಲವರು ಅನಿವಾರ್ಯವಾಗಿ ಪುಸ್ತಕದ ಓದಿನ ಮೊರೆ ಹೋಗುತ್ತಿದ್ದಾರೆ. ಮೊದಲಿನಿಂದ ಓದುವ ಹವ್ಯಾಸ ಇಟ್ಟುಕೊಂಡಿದ್ದವರು ಓದಿದ ಪುಸ್ತಕಗಳನ್ನು ಮರು ಓದುವ ಮೂಲಕ ಕಾಲ ಕಳೆಯುತ್ತಿದ್ದಾರೆ. ಹೊಸದಾಗಿ ಪುಸ್ತಕ ಕೊಳ್ಳುವ ಬಗ್ಗೆ ಕೆಲವರಾದರೂ ಚಿಂತಿಸುತ್ತಾರೆ. ಉಳ್ಳವರು ಅಮೆಜಾನ್ ಮೂಲಕ ಪುಸ್ತಕಗಳನ್ನು ತರಿಸಿಕೊಳ್ಳಲು ಅವಕಾಶವಿದೆ. ಆದರೆ ಈಗ ಸಮಸ್ಯೆ ಇರುವುದು ಸಾಮಾನ್ಯ ಓದುಗರಲ್ಲಿ. ಕಾರಣ, ಅಗತ್ಯ ವಸ್ತುಗಳ ಪಟ್ಟಿಯಿಂದ ಪುಸ್ತಕದ ಮಳಿಗೆಗಳನ್ನು ಕೈಬಿಟ್ಟಿರುವುದರಿಂದ ಬೆಳಿಗ್ಗೆ 10 ಗಂಟೆಯವರೆಗೆ ಕಾರ್ಯನಿರ್ವಹಿಸಬಹುದಾದ ಮಳಿಗೆಗಳ ಪಟ್ಟಿಯಲ್ಲಿ ಅವು ಸೇರಿಲ್ಲ. ಹೀಗೆ ಆಸಕ್ತ ಓದುಗರಿಗೆ 'ಪುಸ್ತಕ ಭಾಗ್ಯ' ದಯಪಾಲಿಸದೇ ಇರುವುದು ಸರಿಯಲ್ಲ. ಮನೆಗಳಲ್ಲಿ ಮಕ್ಕಳ ಕಾಟ ತಡೆಯಲು, ಅವರನ್ನು ಏಕತಾನತೆಯಿಂದ ಮುಕ್ತ ಮಾಡಿ ಪುಸ್ತಕ ಕೊಡಿಸುವ ಆಲೋಚನೆಯನ್ನು ದೂರ ಮಾಡಿದ್ದಾಗಿದೆ.

ಜೀವನಕ್ಕೆ ಅವಶ್ಯಕವಾದ ವಸ್ತುಗಳನ್ನು ಮಾರಾಟ ಮಾಡುವ ಅಂಗಡಿಗಳಲ್ಲಿ ಜನಜಂಗುಳಿ ಕಂಡುಬರುತ್ತಿದೆ. ಇಲ್ಲಿಗೆ ಬರುವವರು ಎಷ್ಟೋ ಕಡೆ ಕೋವಿಡ್ ನಿಯಮಾವಳಿಗಳನ್ನು ಪಾಲಿಸದೇ ಇರುವುದು ಎದ್ದು ಕಾಣುತ್ತಿದೆ. ಆದರೆ, ಕೆಲವೇ ಜನ ಭೇಟಿ ಕೊಡುವ ಪುಸ್ತಕದ ಮಳಿಗೆಗಳನ್ನು ತೆರೆಯಲು ಅವಕಾಶ ಕೊಡದಿರುವುದು, ಮುಂದಾಲೋಚನೆಯಿಲ್ಲದೆ ಜನರ ಬೌದ್ಧಿಕ ಸಾಮರ್ಥ್ಯದ ಮೇಲೆ ಹರಿಯಬಿಟ್ಟಿರುವ ಆಕ್ರಮಣಕಾರಿ ಹೆಜ್ಜೆಯಾಗಿದೆ. ಕೊರೊನಾದ ಈ ದುರಿತ ಕಾಲದಲ್ಲಿ ಅನುಭವಿಸುತ್ತಿರುವ ಸಂಕಷ್ಟಗಳನ್ನು ಸ್ವಲ್ಪವಾದರೂ ಮರೆತು, ಹೊಸ ಆಲೋಚನೆಗಳನ್ನು ಮೈಗೂಡಿಸಿಕೊಂಡು ಮುನ್ನಡೆಯಲು ಪುಸ್ತಕಗಳ ಸಾಂಗತ್ಯ ಬೇಕೇ ಬೇಕು. ಇದನ್ನು ಅರ್ಥಮಾಡಿಕೊಂಡು, ದಿನದಲ್ಲಿ ಸ್ವಲ್ಪ ಹೊತ್ತಾದರೂ ಅವುಗಳನ್ನು ತೆರೆಯಲು ಸರ್ಕಾರ ಅವಕಾಶ ಮಾಡಿಕೊಡಬೇಕು.

ಪ್ರೊ. ಎಂ.ಎಸ್.ರಘುನಾಥ್, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಕೋವಿಡ್ ಸಂಕಷ್ಟದ ಈ ಸಮಯದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ವರ್ಚಸ್ಸಿಗೆ ಮಸಿ ಬಳಿಯಲು ಕಾಂಗ್ರೆಸ್ ಪಕ್ಷವು ಟೂಲ್‌ಕಿಟ್ ಸಿದ್ಧಪಡಿಸಿದೆ ಎಂದು ಬಿಜೆಪಿ ಆರೋಪಿಸಿದೆ. '#ಕಾಂಗ್ರೆಸ್ ಟೂಲ್‌ಕಿಟ್ ಎಕ್ಸ್‌ಪೋಸ್ಡ್' ಎಂಬ ಹ್ಯಾಷ್‌ಟ್ಯಾಗ್‌ನಡಿ ಬಿಜೆಪಿ ವಾಗ್ದಾಳಿ ನಡೆಸಿದೆ. ಈ ಆರೋಪಗಳನ್ನು ಕಾಂಗ್ರೆಸ್ ಸಾರಾಸಗಟಾಗಿ ತಳ್ಳಿಹಾಕಿದೆ. ಬಿಜೆಪಿ ಬಿಡುಗಡೆ ಮಾಡಿರುವುದು ನಕಲಿ ದಾಖಲೆಗಳು ಎಂದಿದೆ. ಬಿಜೆಪಿ ಮುಖಂಡರಾದ ಜೆ.ಪಿ.ನಡ್ಡಾ, ಸಂಬಿತ್ ಪಾತ್ರಾ, ಸ್ಮೃತಿ ಇರಾನಿ, ಬಿ.ಎಲ್.ಸಂತೋಷ್ ಮತ್ತು ಇತರರ ವಿರುದ್ಧ ದೆಹಲಿ ಪೊಲೀಸ್ ಆಯುಕ್ತರಿಗೆ ದೂರು ಸಲ್ಲಿಸಿದೆ. ಬಿಜೆಪಿ ಮುಖಂಡರು ಟ್ವೀಟ್ ಮಾಡಿರುವ ಟೂಲ್‌ಕಿಟ್ ನಕಲಿ ಎಂದು ಹಲವು ಫ್ಯಾಕ್ಟ್‌ಚೆಕ್ ವೇದಿಕೆಗಳು ಹೇಳಿವೆ

ಟೂಲ್‌ಕಿಟ್ ಜಟಾಪಟಿ

ಟೂಲ್‌ಕಿಟ್‌ನಲ್ಲಿ ಏನಿದೆ?

ಬಿಜೆಪಿ ಬಿಡುಗಡೆ ಮಾಡಿರುವ ದಾಖಲೆಗಳು ಎರಡು ಅಂಶಗಳನ್ನು ಒಳಗೊಂಡಿವೆ. ನಾಲ್ಕು ಪುಟಗಳ ಕೋವಿಡ್–19 ಟೂಲ್‌ಕಿಟ್ ಮತ್ತು ನಾಲ್ಕು ಪುಟಗಳ ಸೆಂಟ್ರಲ್ ವಿಸ್ತಾ ಯೋಜನೆಯ ಕುರಿತ ಅಂಶಗಳಿವೆ. 'ಭಾರತದಲ್ಲಿ ಹುಟ್ಟಿಕೊಂಡಿರುವ ಕೋವಿಡ್‌ನ ಹೊಸ ರೂಪಾಂತರಕ್ಕೆ 'ಮೋದಿ ತಳಿ' ಎಂಬ ಪದವನ್ನು ಬಳಸಲು ಸಾಮಾಜಿಕ ಮಾಧ್ಯಮ ಸ್ವಯಂಸೇವಕರಿಗೆ ಕಾಂಗ್ರೆಸ್ ಸಲಹೆ ನೀಡಿದೆ' ಎಂಬುದು ಬಿಜೆಪಿ ಆರೋಪ.

ಇತ್ತೀಚೆಗೆ ನಡೆದ ಕುಂಭಮೇಳವು ವೈರಸ್ ಹರಡುವಿಕೆಗೆ ಭಾರಿ ವೇಗ ನೀಡಿತ್ತು ಎಂಬ ಅಂಶವನ್ನು ಪ್ರಸ್ತಾಪ ಮಾಡುವಂತೆ ಕಾಂಗ್ರೆಸ್ ಪಕ್ಷವು ತನ್ನ ಕಾರ್ಯಕರ್ತರು, ಸದಸ್ಯರಿಗೆ ಸೂಚಿಸಿದ್ದ ಅಂಶವು ಟೂಲ್‌ಕಿಟ್‌ನಲ್ಲಿ ಉಲ್ಲೇಖವಾಗಿದೆ. ಜೊತೆಗೆ 'ಈದ್ ಕೂಟಗಳ ಬಗ್ಗೆ ಪ್ರತಿಕ್ರಿಯಿಸಬೇಡಿ', 'ಯುವಕಾಂಗ್ರೆಸ್ ಅನ್ನು ಟ್ಯಾಗ್ ಮಾಡಿರುವ ಕೋವಿಡ್ ಎಸ್‌ಒಎಸ್ ಸಂದೇಶಗಳಿಗೆ ಮಾತ್ರ ಪ್ರತಿಕ್ರಿಯಿಸಿ' ಎಂಬ ಅಂಶಗಳನ್ನು ಕಾಂಗ್ರೆಸ್ ತಿಳಿಸಿತ್ತು ಎಂದು ಆಪಾದಿಸಲಾಗಿದೆ.

'ಈಗಾಗಲೇ ವಿದೇಶಿ ಮಾಧ್ಯಮಗಳಲ್ಲಿ ಪ್ರಕಟವಾಗಿರುವ ಕೊರೊನಾಪೀಡಿತರ ಅಂತ್ಯಕ್ರಿಯೆಯ ಘೋರ ಚಿತ್ರಗಳನ್ನು ಬಳಸಿಕೊಳ್ಳುವಂತೆ ಸೂಚಿಸಲಾಗಿದೆ. ಬಿಜೆಪಿಯ ಹಿರಿಯ ಮುಖಂಡರಿಗೆ ನಿರ್ದಿಷ್ಟ ವಿಶೇಷಣಗಳನ್ನು ಬಳಸಲು 'ಟೂಲ್‌ಕಿಟ್' ಸಲಹೆ ನೀಡುತ್ತದೆ. ಉದಾಹರಣೆಗೆ, 'ಕಾಣೆಯಾದ ಅಮಿತ್ ಶಾ', 'ನಿರ್ಬಂಧಿತ ಜೈಶಂಕರ್', 'ನಿರ್ಲಕ್ಷಿತ ರಾಜನಾಥ್ ಸಿಂಗ್' ಎಂಬುದಾಗಿ ಕರೆಯಲು ಸೂಚಿಸಲಾಗಿದೆ ಎಂಬುದು ಆರೋಪ.

ನರೇಂದ್ರ ಮೋದಿ ಅವರ ಕನಸಿನ 'ಸೆಂಟ್ರಲ್ ವಿಸ್ತಾ ಯೋಜನೆ'ಯನ್ನು ಎರಡನೇ ಭಾಗ ವಿಶ್ಲೇಷಣೆಗೆ ಒಳಪಡಿಸಿದೆ. ಯೋಜನೆಯ ವೆಚ್ಚ, ಪರಿಸರದ ಮೇಲೆ ಯೋಜನೆಯ ದುಷ್ಪರಿಣಾಮವನ್ನು ಪಟ್ಟಿ ಮಾಡಿದೆ.

ಟೂಲ್‌ಕಿಟ್ ಎಂದರೇನು?

ಟೂಲ್‌ಕಿಟ್ ಎಂಬುದು ಡಿಜಿಟಲ್ ಯುಗದ ಪ್ರತಿಭಟನೆಗಳಿಗೆ ಸರಕು ಒದಗಿಸುವ ಸಾಧನ. ಕರಪತ್ರಗಳಿಗೆ ಇದು ಸಮನಾಗಿರುತ್ತದೆ. ಪ್ರತಿಭಟನಕಾರರು ಇದನ್ನು ಬಳಸುತ್ತಾರೆ. ಸರಳವಾಗಿ ಹೇಳುವುದಾದರೆ, ಪ್ರತಿಭಟನೆಯನ್ನು ಹೇಗೆ ಮುಂದಕ್ಕೆ ಕೊಂಡೊಯ್ಯಬೇಕು, ಏನು ಮಾಡಬೇಕು, ಯಾವಾಗ ಮತ್ತು ಹೇಗೆ ಮಾಡಬೇಕು ಎಂಬುದನ್ನು ಇದು ವಿವರಿಸುತ್ತದೆ.

ಸಂಬಿತ್ ಪಾತ್ರಾ ಅವರು ಮಾಡಿದ್ದ ಟ್ವೀಟ್‌ನ ಸ್ಕ್ರೀನ್‌ಶಾಟ್

ಟೂಲ್‌ಕಿಟ್ ನಕಲಿ ಆಲ್ಟ್‌ನ್ಯೂಸ್, ದಿ ವೈರ್

ಕಾಂಗ್ರೆಸ್ ಸಿದ್ಧಪಡಿಸಿದೆ ಎಂದು ಬಿಜೆಪಿ ಹೇಳುತ್ತಿರುವ ಟೂಲ್‌ಕಿಟ್ ಅಸಲಿಯೇ ಅಥವಾ ನಕಲಿಯೇ ಎಂಬ ಚರ್ಚೆ ಆರಂಭವಾಗಿದೆ. ಈ ಬಗ್ಗೆ ಹಲವು ಫ್ಯಾಕ್ಟ್‌ಚೆಕ್ ವೇದಿಕೆಗಳು ಪರಿಶೀಲನೆ ನಡೆಸಿವೆ. ಆಲ್ಟ್‌ನ್ಯೂಸ್ ಮತ್ತು ದಿ ವೈರ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದ್ದು, ಟೂಲ್‌ಕಿಟ್ ಹೆಸರಿನಲ್ಲಿ ನಕಲಿ ದಾಖಲೆಯನ್ನು ಬಿಜೆಪಿ ಬಿಡುಗಡೆ ಮಾಡಿವೆ ಎಂದು ಹೇಳಿವೆ.

'ಸಂಬಿತ್ ಪಾತ್ರಾ ಅವರು ಟ್ವೀಟ್‌ನಲ್ಲಿ ತಲಾ ನಾಲ್ಕು ಪುಟಗಳ ಎರಡು ದಾಖಲೆಗಳನ್ನು ಬಿಡುಗಡೆ ಮಾಡಿದ್ದರು. ಅದರಲ್ಲಿ ಒಂದು ಸೆಂಟ್ರಲ್ ವಿಸ್ತಾಗೆ ಸಂಬಂಧಿಸಿದ್ದು. ಎರಡನೆಯದ್ದು, ಟೂಲ್‌ಕಿಟ್. ಸೆಂಟ್ರಲ್ ವಿಸ್ತಾ ದಾಖಲೆ ನಾವೇ ಸಿದ್ಧಪಡಿಸಿದ್ದು ಎಂದು ಕಾಂಗ್ರೆಸ್‌ನ ಸಂಶೋಧನಾ ಘಟಕ ಒಪ್ಪಿಕೊಂಡಿದೆ. ಸೆಂಟ್ರಲ್ ವಿಸ್ತಾ ದಾಖಲೆಯಲ್ಲಿರುವ ಕಾಂಗ್ರೆಸ್‌ನ ಲೆಟರ್‌ಹೆಡ್‌ಗೂ, ಟೂಲ್‌ಕಿಟ್‌ನಲ್ಲಿರುವ ಲೆಟರ್‌ಹೆಡ್‌ಗೂ ವ್ಯತ್ಯಾಸವಿದೆ. ಅಕ್ಷರಗಳು, ಸಂಖ್ಯೆಗಳ ವಿನ್ಯಾಸದಲ್ಲಿ ವ್ಯತ್ಯಾಸವಿದೆ' ಎಂದು ಆಲ್ಟ್‌ನ್ಯೂಸ್ ಹೇಳಿದೆ.

'ಬಿಜೆಪಿ ಬಿಡುಗಡೆ ಮಾಡಿರುವ ಟೂಲ್‌ಕಿಟ್‌ನಲ್ಲಿ ಮುಂದಿನ ದಿನಗಳಲ್ಲಿ ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ಮಾಹಿತಿ ಇದೆ. ಟೂಲ್‌ಕಿಟ್‌ನಲ್ಲಿರುವ ದಿನಾಂಕದ ಪ್ರಕಾರ ಅದನ್ನು ಮೇ ತಿಂಗಳಿನಲ್ಲಿ ಸಿದ್ಧಪಡಿಸಲಾಗಿದೆ. ವಿದೇಶಿ ಮಾಧ್ಯಮಗಳಲ್ಲಿ ಮೋದಿಯನ್ನು ತೆಗಳಿ ಬರಹಗಳು ಪ್ರಕಟವಾಗುವಂತೆ ನೋಡಿಕೊಳ್ಳಬೇಕು ಎಂದು ಆ ದಾಖಲೆಯಲ್ಲಿ ಇದೆ. ಆದರೆ, ಏಪ್ರಿಲ್ ತಿಂಗಳಿನಲ್ಲಿಯೇ ಅಂತಹ ಬರಹಗಳು ಮತ್ತು ವರದಿಗಳು ವಿದೇಶಿ ಮಾಧ್ಯಮಗಳಲ್ಲಿ ಪ್ರಕಟವಾಗಿವೆ' ಎಂದು ಆಲ್ಟ್‌ನ್ಯೂಸ್ ವಿವರಿಸಿದೆ.

'ಇನ್ನು 'ಮೋದಿ ಸ್ಟ್ರೈನ್' ಮತ್ತು 'ಇಂಡಿಯನ್ ಸ್ಟ್ರೈನ್' ಎಂಬ ಪದಗಳನ್ನು ಬಳಸಿ ಎಂದು ದಾಖಲೆಯಲ್ಲಿ ಹೇಳಲಾಗಿದೆ. ಮೇ 1ರಿಂದ ಮೇ 17ರವರೆಗೆ ಈ ಎರಡೂ ಪದಗಳು ಮತ್ತು ಹ್ಯಾಷ್‌ಟ್ಯಾಗ್‌ಗಳನ್ನು ಬಳಸಿ ಪ್ರಕಟವಾಗಿರುವ ವರದಿಗಳನ್ನು ಹಾಗೂ ಸಾಮಾಜಿಕ ಜಾಲತಾಣ ಪೋಸ್ಟ್‌ಗಳನ್ನು ಪರಿಶೀಲಿಸಲಾಗಿದೆ. ಭಾರತದ ಬಹುತೇಕ ಎಲ್ಲಾ ಮಾಧ್ಯಮಗಳು 'ಇಂಡಿಯನ್ ಸ್ಟ್ರೈನ್' ಎಂಬ ಪದವನ್ನು ಬಳಸಿವೆ. ಇನ್ನು ಸಂಬಿತ್ ಪಾತ್ರಾ ಅವರು ಈ ದಾಖಲೆಗಳನ್ನು ಬಿಡುಗಡೆ ಮಾಡಿದ ನಂತರ 15 ಬಾರಿ ಮಾತ್ರ ಇಂಡಿಯನ್ ಸ್ಟ್ರೈನ್ ಎಂಬ ಹ್ಯಾಷ್‌ಟ್ಯಾಗ್ ಟ್ವೀಟ್ ಆಗಿದೆ. 15 ಬಾರಿಯೂ ಬಿಜೆಪಿ ನಾಯಕರೇ ಅದನ್ನು ಟ್ವೀಟ್ ಮಾಡಿದ್ದಾರೆ. ಏಪ್ರಿಲ್‌ನಲ್ಲಾಗಲೀ, ಮೇನಲ್ಲಾಗಲೀ ಕಾಂಗ್ರೆಸ್ ನಾಯಕರು ಮತ್ತು ಕಾರ್ಯಕರ್ತರು ಈ ಹ್ಯಾಷ್‌ಟ್ಯಾಗ್ ಅನ್ನು ಬಳಸಿಲ್ಲ' ಎಂದು ಆಲ್ಟ್‌ನ್ಯೂಸ್ ವಿವರಿಸಿದೆ.

'ಮೋದಿ ಸ್ಟ್ರೈನ್' ಎಂಬ ಹ್ಯಾಷ್‌ಟ್ಯಾಗ್ ಅನ್ನು ಈವರೆಗೆ 5 ಬಾರಿ ಮಾತ್ರ ಟ್ವೀಟ್ ಮಾಡಲಾಗಿದೆ. ಕಾಂಗ್ರೆಸ್‌ನ ನಾಯಕರು ಮತ್ತು ಕಾರ್ಯಕರ್ತರು ಈ ಹ್ಯಾಷ್‌ಟ್ಯಾಗ್ ಅನ್ನು ಬಳಸಿಯೇ ಇಲ್ಲ. ಹೀಗಾಗಿ ಬಿಜೆಪಿ ಹೇಳುತ್ತಿರುವಂತೆ ಈ ಟೂಲ್‌ಕಿಟ್ ಅನ್ನು ಕಾಂಗ್ರೆಸ್ ಸಿದ್ಧಪಡಿಸಿಲ್ಲ. ಕಾಂಗ್ರೆಸ್‌ನ ಲೆಟರ್‌ಹೆಡ್ ಅನ್ನು ನಕಲು ಮಾಡಿ, ಈ ಟೂಲ್‌ಕಿಟ್ ಸಿದ್ಧಪಡಿಸಲಾಗಿದೆ. ಆದರೆ, ಲೆಟರ್‌ಹೆಡ್ ಸಹ ತಪ್ಪಾಗಿರುವ ಕಾರಣ ಇದು ನಕಲಿ ಟೂಲ್‌ಕಿಟ್ ಮತ್ತು ಈ ಟೂಲ್‌ಕಿಟ್ ಅನ್ನು ಕಾಂಗ್ರೆಸ್ ಸಿದ್ಧಪಡಿಸಿದೆ ಎಂಬುದು ಸುಳ್ಳು ಸುದ್ದಿ ಎಂದು ಸಾಬೀತಾಗಿದೆ' ಎಂದು ಆಲ್ಟ್‌ನ್ಯೂಸ್ ವಿಶ್ಲೇಷಿಸಿದೆ.

ದಿ ವೈರ್ ವರದಿ: 'ಸೌಮ್ಯ ವರ್ಮಾ ಅವರು ಈ ದಾಖಲೆ ಸಿದ್ಧಪಡಿಸಿದ್ದಾರೆ' ಎಂದು ಸಂಬಿತ್ ಪಾತ್ರಾ ಅವರು ಟ್ವೀಟ್ ಮಾಡಿದ್ದ ಸ್ಕ್ರೀನ್‌ಶಾಟ್ ಅನ್ನು ದಿ ವೈರ್ ಪರಿಶೀಲಿಸಿದೆ. ಸೆಂಟ್ರಲ್ ವಿಸ್ತಾ ದಾಖಲೆಯ ಡಿಜಿಟಲ್ ಪ್ರಾಪರ್ಟಿ ವಿವರವನ್ನು ಈ ಸ್ಕ್ರೀನ್‌ಶಾಟ್ ಒಳಗೊಂಡಿದೆ. ಈ ದಾಖಲೆಯನ್ನು ಮೈಕ್ರೊಸಾಫ್ಟ್ ವರ್ಡ್‌ನಲ್ಲಿ ಸಿದ್ಧಪಡಿಸಿ, ಅಲ್ಲಿಯೇ ಪಿಡಿಎಫ್ ಆಗಿ ಪರಿವರ್ತಿಸಲಾಗಿದೆ ಎಂದು ಪ್ರಾಪರ್ಟಿ ಹೇಳುತ್ತದೆ.

'ವಾಟ್ಸ್‌ಆ್ಯಪ್‌ನಲ್ಲಿ ಈ ದಾಖಲೆಯನ್ನು ಡೌನ್‌ಲೋಡ್ ಮಾಡಿಕೊಂಡಿರುವ ಕಾರಣ, ಈ ಕಡತ ವಾಟ್ಸ್‌ಆ್ಯಪ್‌ನ ಯುಆರ್‌ಎಲ್ ತೋರಿಸುತ್ತದೆ. ಆದರೆ, ಇಂತಹ ಕಡತಗಳಿಗೆ ವಾಟ್ಸ್‌ಆ್ಯಪ್ ನೀಡುವ ಯುಆರ್‌ಎಲ್‌ಗೂ, ಸಂಬಿತ್ ಪಾತ್ರಾ ಅವರು ನೀಡಿರುವ ಸ್ಕ್ರೀನ್‌ಶಾಟ್‌ನಲ್ಲಿರುವ ಯುಆರ್‌ಎಲ್‌ಗೂ ಭಾರಿ ವ್ಯತ್ಯಾಸವಿದೆ. ಸಂಬಿತ್ ಪಾತ್ರಾ ಅವರು ನೀಡಿರುವ ಸ್ಕ್ರೀನ್‌ಶಾಟ್‌ನಲ್ಲಿರುವ ಮಾಹಿತಿ ನಕಲಿ ಎಂದು ತಜ್ಞರು ಹೇಳಿದ್ದಾರೆ' ಎಂದು ದಿ ವೈರ್ ವರದಿ ಮಾಡಿದೆ.

ಬಿಜೆಪಿ ಹೇಳುವುದೇನು?

ಕಾಂಗ್ರೆಸ್ ಸಿದ್ಧಪಡಿಸಿದೆ ಎಂದು ಆರೋಪಿಸಲಾಗಿರುವ ಟೂಲ್‌ಕಿಟ್ ಬಿಜೆಪಿಯನ್ನು ಕೆರಳಿಸಿದೆ. ಎಬಿವಿಪಿಯ ಅಧಿಕೃತ ಟ್ವಿಟರ್ ಖಾತೆಯು ಈ ಟೂಲ್‌ಕಿಟ್ ಅನ್ನು ಹಂಚಿಕೊಂಡಿದೆ.

ಪಕ್ಷದ ಅಧ್ಯಕ್ಷ ಜೆ.ಪಿ. ನಡ್ಡಾ, ಮುಖಂಡರಾದ ಸ್ಮೃತಿ ಇರಾನಿ, ತೀರಥ್ ಸಿಂಗ್ ರಾವುತ್, ಪೀಯೂಷ್ ಗೋಯಲ್, ರಾಜ್ಯವರ್ಧನ್ ರಾಥೋಡ್, ತೇಜಸ್ವಿ ಸೂರ್ಯ, ಕಿರಣ್ ರಿಜಿಜು, ಅನುರಾಗ್ ಠಾಕೂರ್, ಪಿ.ಸಿ. ಮೋಹನ್, ಹರ್ದೀಪ್ ಸಿಂಗ್ ಪುರಿ, ಡಾ. ವಿನಯ್ ಸಹಸ್ರಬುದ್ಧೆ, ಅಮಿತ್ ಮಾಳವೀಯ, ಸಂಬಿತ್ ಪಾತ್ರಾ, ಬಿ.ಎಲ್.ಸಂತೋಷ್, ಪ್ರೀತಿ ಗಾಂಧಿ, ಸಿ.ಟಿ.ರವಿ, ಸಿಟಿಆರ್ ನಿರ್ಮಲ್ ಕುಮಾರ್ ಮೊದಲಾದವರು ಕಾಂಗ್ರೆಸ್ ಅನ್ನು ಖಂಡಿಸಿದ್ದಾರೆ.

ಈ ಜಾಗತಿಕ ಸಂಕಷ್ಟದ ಸಮಯದಲ್ಲಿ ತಪ್ಪು ಮಾಹಿತಿಯನ್ನು ಹರಡಲು ಪ್ರಯತ್ನಿಸುವುದು ಶೋಚನೀಯ ಸಂಗತಿ ಎಂದು ಕೇಂದ್ರ ಆರೋಗ್ಯ ಸಚಿವ ಡಾ. ಹರ್ಷವರ್ಧನ್ ಆರೋಪಿಸಿದ್ದಾರೆ.

'ಇಡೀದೇಶ ಆರೋಗ್ಯ ಸಂಕಷ್ಟವನ್ನು ಎದುರಿಸುತ್ತಿರುವ ಸಂದರ್ಭದಲ್ಲಿ ವಿರೋಧ ಪಕ್ಷವು ತನ್ನ ರಾಜಕೀಯ ಮಹತ್ವಾಕಾಂಕ್ಷೆಗಳನ್ನು ಬಲಪಡಿಸಿಕೊಳ್ಳಲು ಯತ್ನಿಸುತ್ತಿರುವುದನ್ನು ಜನರು ನೋಡುತ್ತಿದ್ದಾರೆ' ಎಂದು ಸಂಬಿತ್ ಪಾತ್ರಾ ಹೇಳಿದ್ದಾರೆ.

'ಟೂಲ್‌ಕಿಟ್‌ನಲ್ಲಿ, 'ಪ್ರಧಾನಿ ನರೇಂದ್ರ ಮೋದಿಯ ಖ್ಯಾತಿ' ಎಂಬ ಭಾಗವಿದೆ. ಅದರಲ್ಲಿ, ಪ್ರಧಾನಿಯವರ ಖ್ಯಾತಿಗೆ ಧಕ್ಕೆ ತರುವಂತೆ ಮತ್ತು ಜನಪ್ರಿಯತೆಯನ್ನು ಕುಗ್ಗಿಸುವಂತೆ ಸೂಚನೆಗಳನ್ನು ನೀಡಲಾಗಿದೆ' ಎಂದು ಗಂಭೀರವಾಗಿ ಆರೋಪಿಸಿದ್ದಾರೆ.

'ಸಮಾಜವನ್ನು ಒಡೆಯುವುದು ಮತ್ತು ಇತರರ ವಿರುದ್ಧ ವಿಷ ಹರಡುವುದರಲ್ಲಿ ಕಾಂಗ್ರೆಸ್ಸಿಗರು ನಿಸ್ಸೀಮರು. ಭಾರತವು ಕೋವಿಡ್-19 ವಿರುದ್ಧ ಹೋರಾಟ ನಡೆಸುತ್ತಿದ್ದು, ಕಾಂಗ್ರೆಸ್‌ನ ನಡೆಯನ್ನು ಗಮನಿಸುತ್ತಿದೆ. ಕಾಂಗ್ರೆಸ್, ಟೂಲ್‌ಕಿಟ್ ಮಾದರಿಗಳನ್ನು ಮೀರಿ, ದೇಶಕ್ಕಾಗಿ ರಚನಾತ್ಮಕವಾಗಿ ಏನನ್ನಾದರೂ ಮಾಡಬೇಕೆಂದು ಒತ್ತಾಯಿಸುತ್ತೇನೆ' ನಡ್ಡಾ ಟ್ವೀಟ್ ಮಾಡಿದ್ದಾರೆ.

'ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಅವರು ಏಪ್ರಿಲ್ 29ರಂದು ಸಾಮೂಹಿಕ ಅಂತ್ಯಸಂಸ್ಕಾರದ ಚಿತ್ರವನ್ನು ತಮ್ಮ ಇನ್‌ಸ್ಟಾಗ್ರಾಮ್ ಖಾತೆಯಲ್ಲಿ ಪ್ರಕಟಿಸಿದ್ದರು. ಏಪ್ರಿಲ್ 25ರಂದು ನ್ಯೂಯಾರ್ಕ್ ಟೈಮ್ಸ್ ಇಂತಹದೇ ಚಿತ್ರವನ್ನು ಬಳಸಿತ್ತು. ಇದಾದ ಕೆಲ ವಾರಗಳಲ್ಲಿ ಟೂಲ್‌ಕಿಟ್ ಸಿದ್ಧವಾಗಿದ್ದರೂ, ಪತ್ರಿಕಾ ವರದಿಗೆ ಟೂಲ್‌ಕಿಟ್ ಕಾರಣ' ಎಂದು ಸರ್ಕಾರದ ಆನ್‌ಲೈನ್ ಸಿಟಿಜನ್ ಎಂಗೇಜ್‌ಮೆಂಟ್ ಕಾರ್ಯಕ್ರಮ 'ಮೈಗೌಇಂಡಿಯಾ'ದ ಮಾಜಿ ನಿರ್ದೇಶಕ ಅಖಿಲೇಶ್ ಮಿಶ್ರಾ ಆಪಾದಿಸಿದ್ದಾರೆ.

'ಮನೆಗೆ ಮಗನೂ ಆಗಲಿಲ್ಲ ಸ್ಮಶಾನಕ್ಕೆ ಹೆಣವೂ ಆಗಲಿಲ್ಲ' ಎನ್ನುವಂತಹ ಒಂದು ರಾಜಕೀಯ ಪಕ್ಷ ನಮ್ಮ ದೇಶದಲ್ಲಿ ಇದ್ದರೆ ಅದು ಕಾಂಗ್ರೆಸ್. ಜನ ಕಾಂಗ್ರೆಸ್ ಪಕ್ಷವನ್ನು ಸೋಲಿಸಿ ಮೂಲೆಗುಂಪು ಮಾಡಿದ್ದರೂ ಅವರಿಗಿನ್ನೂ ಬುದ್ಧಿ ಬಂದಿಲ್ಲ...' ಎಂದು ಬಿಜೆಪಿ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಟ್ವೀಟ್ ಮಾಡಿದ್ದಾರೆ.

ಬಿಜೆಪಿ ನಾಯಕರ ವಿರುದ್ಧ ಕಾಂಗ್ರೆಸ್ ದೂರು

'ಬಿಜೆಪಿ ಹೇಳುತ್ತಿರುವ ಟೂಲ್‌ಕಿಟ್ ಅನ್ನು ತಾವು ಸಿದ್ಧಪಡಿಸಿಲ್ಲ' ಎಂದು ಕಾಂಗ್ರೆಸ್‌ನ ಸಂಶೋಧನಾ ಘಟಕದ ಮುಖ್ಯಸ್ಥ ರಾಜೀವ್ ಗೌಡ ಅವರು ಹೇಳಿದ್ದಾರೆ. 'ಬಿಜೆಪಿಯ ಸಂಬಿತ್ ಪಾತ್ರಾ ಅವರು ಬಿಡುಗಡೆ ಮಾಡಿರುವ ದಾಖಲೆಗಳಲ್ಲಿ ಸೆಂಟ್ರಲ್ ವಿಸ್ತಾ ಯೋಜನೆಗೆ ಸಂಬಂಧಿಸಿದ ದಾಖಲೆಯನ್ನು ನಾವೇ ಸಿದ್ಧಪಡಿಸಿದ್ದು. ಆದರೆ, ಕೇಂದ್ರ ಸರ್ಕಾರ ಮತ್ತು ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಟೂಲ್‌ಕಿಟ್ ಅನ್ನು ನಾವು ಸಿದ್ಧಪಡಿಸಿಲ್ಲ' ಎಂದು ರಾಜೀವ್ ಗೌಡ ಅವರು ವಿವಾದ ಸೃಷ್ಟಿಯಾದ ಮೊದಲ ದಿನವೇ ಟ್ವೀಟ್ ಮಾಡಿದ್ದರು.

'ನಮ್ಮ ಪಕ್ಷ ಮತ್ತು ಪಕ್ಷದ ಸಂಶೋಧನಾ ಘಟಕದ ಲೆಟರ್‌ಹೆಡ್ ಅನ್ನು ನಕಲು ಮಾಡಿ, 'ಟೂಲ್‌ಕಿಟ್' ಸಿದ್ಧಪಡಿಸಲಾಗಿದೆ. ಈ ಸಂಬಂಧ ಬಿಜೆಪಿ ನಾಯಕರ ವಿರುದ್ಧ ಫೋರ್ಜರಿ ಪ್ರಕರಣ ದಾಖಲಿಸುತ್ತೇವೆ' ಎಂದು ರಾಜೀವ್ ಹೇಳಿದ್ದರು. ಈ ಪ್ರಕಾರ ರಾಜೀವ್ ಮತ್ತು ಪಕ್ಷದ ಪದಾಧಿಕಾರಿಗಳು ದೆಹಲಿ ಪೊಲೀಸರಿಗೆ ದೂರು ನೀಡಿದ್ದಾರೆ.

ಸಂಬಿತ್ ಪಾತ್ರಾ, ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ, ಸಚಿವೆ ಸ್ಮೃತಿ ಇರಾನಿ ಮತ್ತು ಈ ದಾಖಲೆಗಳನ್ನು ಹಂಚಿಕೊಂಡಿದ್ದ ಪಕ್ಷದ ಎಲ್ಲಾ ನಾಯಕರ ವಿರುದ್ಧ ದೆಹಲಿ ಪೊಲೀಸರಿಗೆ ದೂರು ನೀಡಿದ್ದಾರೆ. ಈ ದೂರಿನ ಅನ್ವಯ ಎಫ್‌ಐಆರ್ ದಾಖಲಾಗಿದೆಯೇ ಇಲ್ಲವೇ ಎಂಬುದರ ಮಾಹಿತಿ ಬಹಿರಂಗವಾಗಿಲ್ಲ. ಕಾಂಗ್ರೆಸ್ ಆಗಲೀ, ಪೊಲೀಸರಾಗಲೀ ಈ ಬಗ್ಗೆ ಮಾಹಿತಿ ನೀಡಿಲ್ಲ.

ಇದೇ 19ರ ಬುಧವಾರ ಸಹ ಸಂಬಿತ್ ಪಾತ್ರಾ ಅವರು 'ಈ ದಾಖಲೆಯನ್ನು ಕಾಂಗ್ರೆಸ್ ಸಂಶೋಧನಾ ಘಟಕದ ಸೌಮ್ಯ ವರ್ಮಾ ಎಂಬುವವರು ಸಿದ್ಧಪಡಿಸಿದ್ದಾರೆ' ಎಂದು ಮತ್ತೊಂದು ಸ್ಕ್ರೀನ್‌ಶಾಟ್ ಅನ್ನು ಟ್ವೀಟ್ ಮಾಡಿದ್ದರು. ಇದಕ್ಕೂ ಕಾಂಗ್ರೆಸ್ ಸಮರ್ಥನೆ ನೀಡಿದೆ. 'ಸೆಂಟ್ರಲ್ ವಿಸ್ತಾಗೆ ಸಂಬಂಧಿಸಿದ ದಾಖಲೆಯನ್ನು ಸೌಮ್ಯ ವರ್ಮಾ ಅವರೇ ಸಿದ್ಧಪಡಿಸಿದ್ದಾರೆ. ಆದರೆ ಬಿಜೆಪಿ ಹೇಳುತ್ತಿರುವ ಟೂಲ್‌ಕಿಟ್‌ನ ಮೂಲ ದಾಖಲೆಯನ್ನು ನೀಡಲಿ. ಅದು ಎಷ್ಟು ಸಾಚಾ ಎಂಬುದನ್ನು ಪತ್ತೆ ಮಾಡಲು ವಿಧಿವಿಜ್ಞಾನ ಪರೀಕ್ಷೆ ನಡೆಯಲಿ' ಎಂದು ರಾಜೀವ್ ಗೌಡ ಸವಾಲು ಹಾಕಿದ್ದಾರೆ. ಬಿಜೆಪಿ ನಾಯಕರು ಇದಕ್ಕೆ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ಟ್ವಿಟರ್ ಖಾತೆ ಸ್ಥಗಿತಕ್ಕೆ ಮನವಿ: 'ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ, ಬಿ.ಎಲ್. ಸಂತೋಷ್, ಸಂಬಿತ್ ಪಾತ್ರಾ ಮತ್ತು ಕೇಂದ್ರ ಸಚಿವೆ ಸ್ಮೃತಿ ಇರಾನಿ ಅವರು ಸುಳ್ಳು ಸುದ್ದಿಗಳು ಮತ್ತು ತಪ್ಪು ಮಾಹಿತಿಯನ್ನು ಹಂಚಿಕೊಳ್ಳಲು ಟ್ವಿಟರ್ ಅನ್ನು ಬಳಸಿಕೊಳ್ಳುತ್ತಿದ್ದಾರೆ. ಈ ಮೂಲಕ ಸಮಾಜದಲ್ಲಿ ಅಶಾಂತಿ ಮೂಡಿಸಲು ಯತ್ನಿಸುತ್ತಿದ್ದಾರೆ. ಇವರೆಲ್ಲರ ಟ್ವಿಟರ್ ಖಾತೆಗಳನ್ನು ಶಾಶ್ವತವಾಗಿ ಸ್ಥಗಿತಗೊಳಿಸಬೇಕು' ಎಂದು ಕಾಂಗ್ರೆಸ್, ಟ್ವಿಟರ್‌ಗೆ ಪತ್ರ ಬರೆದಿದೆ.

'ಮಕ್ಕಳ ಬಾಧಿಸುವ 3ನೇ ಅಲೆಗೆ ಈಗಿನಿಂದಲೇ ಸಿದ್ಧತೆ ಬೇಕು'

● ಅಖಿಲ್ ಕಡಿದಾಳ್

ಪ್ರಜಾವಾಣಿ ಸಂದರ್ಶನ

ಡಾ. ವಿ. ರವಿ, ಸೋಂಕುಶಾಸ್ತ್ರಜ್ಞ

ಲಸಿಕೆ ಅಭಿಯಾನದ ವೇಗ ತಗ್ಗಿದೆ ಮತ್ತು ಕೋವಿಡ್–19ರ ಎರಡನೇ ಅಲೆ ಜೋರಾಗಿದೆ. ಅಕ್ಟೋಬರ್–ಡಿಸೆಂಬರ್ ಹೊತ್ತಿಗೆ ಮೂರನೇ ಅಲೆಯ ಆತಂಕವೂ ಎದುರಾಗಿದೆ. ಈ ಅಲೆಯು ಮಕ್ಕಳನ್ನು ತೀವ್ರವಾಗಿ ಬಾಧಿಸಬಹುದು ಎಂಬುದಕ್ಕೆ ಬಲವಾದ ಪುರಾವೆಗಳಿವೆ ಎಂದು ಸೋಂಕುಶಾಸ್ತ್ರಜ್ಞ ಡಾ. ವಿ. ರವಿ ಹೇಳಿದ್ದಾರೆ. ಶಿಶು ಆರೋಗ್ಯ ಮೂಲಸೌಕರ್ಯವನ್ನು ದೇಶ ಮತ್ತು ಕರ್ನಾಟಕವು ಉತ್ತಮಪಡಿಸಿಕೊಳ್ಳದಿದ್ದರೆ ಘೋರ ದೃಶ್ಯಗಳನ್ನು ಕಾಣಬೇಕಾದೀತು ಎಂಬ ಎಚ್ಚರಿಕೆಯನ್ನೂ ಅವರು ನೀಡಿದ್ದಾರೆ

● **ಮೂರನೇ ಅಲೆಯು ಮಕ್ಕಳನ್ನು ಬಾಧಿಸಲಿದೆ ಎಂದಿರಿ. ಮೂರನೇ ಅಲೆ ಬರುವುದು ಖಚಿತವೇ?**

ಯುರೋಪ್‌ನಲ್ಲಿ ಈಗ ಮೂರನೇ ಅಲೆ ಇದೆ. ಅಮೆರಿಕದಲ್ಲಿ ನಾಲ್ಕನೇ ಅಲೆ. ಸಾಂಕ್ರಾಮಿಕದಲ್ಲಿ ಅಲೆಗಳಿಂದ ತಪ್ಪಿಸಿಕೊಳ್ಳಲಾಗದು. ಜನರಿಗೆ ಎಷ್ಟು ಬೇಗ ಲಸಿಕೆ ಹಾಕಿಸಲಾಗುವುದು ಎಂಬುದರ ಮೇಲೆ ಸೋಂಕು ತಡೆಯು ಅವಲಂಬಿತ. ನಮ್ಮ ದೇಶದಲ್ಲಿ ವಯಸ್ಕರ ಒಂದು ವರ್ಗಕ್ಕೆ ಮಾತ್ರ ಲಸಿಕೆ ಹಾಕಲಾಗಿದೆ. ಈಗಿನ ಲಸಿಕೆ ಅಭಿಯಾನವು ಪೂರ್ಣಗೊಳ್ಳಲು ಮೂರರಿಂದ ಆರು ತಿಂಗಳು ಬೇಕು. ಆ ಹೊತ್ತಿಗೆ ಶೇಕಡ 50ರಷ್ಟು ಜನರಿಗೆ ಮಾತ್ರ ಲಸಿಕೆ ಹಾಕಲಾಗಿರುತ್ತದೆ. ಇವರಲ್ಲಿ ಯಾರೂ ಮಕ್ಕಳಲ್ಲ. ಏಕೆಂದರೆ ಮಕ್ಕಳ ಲಸಿಕೆ ಇನ್ನೂ ಸಿದ್ಧವೇ ಆಗಿಲ್ಲ.

● **ಮುಂದಿನ ಕೆಲವು ತಿಂಗಳಲ್ಲಿ ಏನನ್ನು ನಿರೀಕ್ಷಿಸಬಹುದು?**

ಎರಡನೇ ಅಲೆಯ ನಿಯಂತ್ರಣ ಜೂನ್ ಕೊನೆಯ ಹೊತ್ತಿಗಷ್ಟೇ ಸಾಧ್ಯವಾಗಬಹುದು. ಬಳಿಕ ಎರಡರಿಂದ ಮೂರು ತಿಂಗಳು ಏನೂ ಇರಲಿಕ್ಕಿಲ್ಲ. ನಂತರ ಮೂರನೇ ಅಲೆ ಆರಂಭವಾಗಬಹುದು. ಆ ಹೊತ್ತಿಗೆ ಲಸಿಕೆ ಹಾಕಿಸಿಕೊಂಡಿಲ್ಲದ ವಯಸ್ಕರಿಗೂ ಅಪಾಯ ಇದೆ. ಮಕ್ಕಳಲ್ಲಿ ಗಣನೀಯ ಪ್ರಮಾಣದಲ್ಲಿ ಸೋಂಕು ಹರಡಬಹುದು.

● **ಮಕ್ಕಳಿಗೆ ಹಿಂದೆಯೂ ಸೋಂಕು ಆಗಿತ್ತು. ಈ ಬಾರಿ ಸೋಂಕಿನ ಪ್ರಮಾಣ ಹೇಗಿರಬಹುದು?**

ಸೋಂಕಿಗೆ ಒಳಗಾಗುವ ಅಪಾಯ ಇರುವ ಮಕ್ಕಳ ಬಗ್ಗೆ ನಾವು ಮಾತನಾಡುತ್ತಿದ್ದೇವೆ. ಸೆರೊ ಸಮೀಕ್ಷೆಗಳ ಪ್ರಕಾರ ದೇಶದಲ್ಲಿರುವ ಮಕ್ಕಳ ಪೈಕಿ ಶೇ 25ರಷ್ಟು ಮಕ್ಕಳು ಕಳೆದ 17 ತಿಂಗಳಲ್ಲಿ ಸೋಂಕಿಗೆ ತೆರೆದುಕೊಂಡಿದ್ದಾರೆ. ಸುಮಾರು ಶೇ 60ರಷ್ಟು ಮಕ್ಕಳು ಸೋಂಕಿಗೆ ಒಳಗಾಗುವ ಅಪಾಯ ಹೊಂದಿದ್ದಾರೆ. ಸಂಖ್ಯೆಯಲ್ಲಿ ಹೇಳುವುದಾದರೆ ಇದು 18 ಕೋಟಿ. ಶೇ 20ರಷ್ಟು ಮಕ್ಕಳು ಸೋಂಕಿಗೆ ಒಳಗಾಗಬಹುದು ಎಂದಿಟ್ಟುಕೊಂಡರೂ ಆ ಸಂಖ್ಯೆಯು 3.6 ಕೋಟಿ. ಹೆಚ್ಚಿನ ಮಕ್ಕಳಲ್ಲಿ ಲಕ್ಷಣಗಳು ಸೌಮ್ಯವಾಗಿಯೇ ಇರಬಹುದು. ಆದರೆ, ಶೇ ಒಂದರಷ್ಟು ಮಕ್ಕಳಲ್ಲಿ ಗಂಭೀರ ಸಮಸ್ಯೆ ಉಂಟಾದರೂ 3.6 ಲಕ್ಷ ಮಕ್ಕಳನ್ನು ಆಸ್ಪತ್ರೆಗೆ ದಾಖಲಿಸಬೇಕಾಗುತ್ತದೆ.

● **ಈ ಪರಿಸ್ಥಿತಿ ನಿಭಾಯಿಸಲು ಶಿಶು ತೀವ್ರ ನಿಗಾ ಸೌಲಭ್ಯಗಳು ನಮ್ಮಲ್ಲಿ ಇವೆಯೇ?**

ಇಲ್ಲ. ಹಾಗಾಗಿಯೇ ನಮ್ಮ ಸಿದ್ಧತೆಗಳು ಈಗಲೇ ಆರಂಭಗೊಳ್ಳಬೇಕು. ಶಾಲೆ ಆರಂಭಿಸುವ ಬಗ್ಗೆಯೂ ನಮ್ಮ ಚರ್ಚೆಗಳು ಶುರುವಾಗಬೇಕು. ಶಿಶು ಒಳರೋಗಿ ಮೂಲಸೌಕರ್ಯ ಹೆಚ್ಚಿಸಬೇಕು.

● **ಲಸಿಕೆ ಹಾಕಿಸಿಕೊಂಡರೂ ಸೋಂಕು ತಡೆ ಸಾಧ್ಯವಾಗಿಲ್ಲ ಎಂಬ ನಿರಾಶೆ ಇದೆ. ಇದನ್ನು ಹೇಗೆ ನಿಭಾಯಿಸುವುದು?**

ಯಾವುದೇ ಲಸಿಕೆಗೆ ಸಂಬಂಧಿಸಿದಂತೆಯೂ ಮಾಹಿತಿ ಅತ್ಯಂತ ಸ್ಪಷ್ಟ. ಲಸಿಕೆಯು ಸಾವು ತಡೆಯುತ್ತದೆ ಮತ್ತು ಸೋಂಕಿನ ತೀವ್ರತೆಯನ್ನು ಕಡಿಮೆ ಮಾಡುತ್ತದೆ. ಲಸಿಕೆಯು ಸೋಂಕನ್ನು ತಡೆಯುತ್ತದೆ ಎಂಬ ಅತಿಯಾದ ನಿರೀಕ್ಷೆ ಜನರಲ್ಲಿ ಇದೆ. ಪೋಲಿಯೊ ಲಸಿಕೆ ಹಾಕಿಸಿಕೊಂಡ ಬಳಿಕವೂ ಸೋಂಕು ತಗಲುತ್ತದೆ, ಆದರೆ ರೋಗ ಬರುವುದಿಲ್ಲ.

● **ಕೊರೊನಾ ವೈರಾಣುವು ರೂಪಾಂತರಗೊಳ್ಳುತ್ತಿರುವುದರಿಂದ ಮುಂದಿನ ವರ್ಷಗಳಲ್ಲಿಯೂ ನಾವು ಲಸಿಕೆ ಹಾಕಿಸಿಕೊಳ್ಳಬೇಕಾಗುತ್ತದೆಯೇ?**

ಇಲ್ಲ ಎಂದು ಈಗಲೇ ಹೇಳಲಾಗದು. ಈಗ ಅನುಮೋದನೆ ದೊರೆತಿರುವ ಎಲ್ಲ ಲಸಿಕೆಗಳೂ ಈಗ ಇರುವ ವೈರಾಣು ತಳಿಗಳಿಗೆ ಪರಿಣಾಮಕಾರಿ. ಗಣನೀಯವಾಗಿ ರೂಪಾಂತರಗೊಂಡ ವೈರಾಣು ಮುಂದಿನ ದಿನಗಳಲ್ಲಿ ಕಾಣಿಸಿಕೊಂಡರೆ ಲಸಿಕೆ ಬೇಕಾಗಬಹುದು.

● **ಮುಂದಿನ ದಿನಗಳಲ್ಲಿ ಕಳವಳಕಾರಿಯಾದ ರೂಪಾಂತರ ವೈರಾಣು ಕಾಣಿಸಿಕೊಳ್ಳಬಹುದೇ?**

ಒಳ್ಳೆ ಪ್ರಶ್ನೆ, ಇಂತಹ ವೈರಾಣು ಯಾವಾಗ ಕಾಣಿಸಿಕೊಳ್ಳಬಹುದು ಎಂದು ಹೇಳುವುದು ಕಷ್ಟ. ಸೋಂಕಿಗೆ ಒಳಗಾದ ಒಬ್ಬನೇ ವ್ಯಕ್ತಿಯಲ್ಲಿ ಲಕ್ಷಾಂತರ ವೈರಾಣುಗಳು ಹುಟ್ಟುತ್ತವೆ. ಅವುಗಳಲ್ಲಿ ಅತ್ಯಂತ ಶಕ್ತವಾದವುಗಳಷ್ಟೇ ಬದುಕಿಕೊಳ್ಳುತ್ತವೆ. ಇವೇ ಇತರರಿಗೆ ತಗಲುತ್ತವೆ ಮತ್ತು ರೂಪಾಂತರಕ್ಕೂ ಕಾರಣವಾಗುತ್ತವೆ.

● **ಕೋವಿಡ್‌ನಿಂದ ಚೇತರಿಸಿಕೊಂಡವರಲ್ಲಿ ಸೃಷ್ಟಿಯಾಗುವ ನೈಸರ್ಗಿಕ ರೋಗ ನಿರೋಧಕ ಶಕ್ತಿಯು ಎಷ್ಟು ಕಾಲ ಇರುತ್ತದೆ?**

ಆರು ತಿಂಗಳು ಗರಿಷ್ಠ ಅವಧಿ. ಆದರೆ, ಲಸಿಕೆಯ ಮೂಲಕ ದೇಹಕ್ಕೆ ಸೇರಿಸಲಾಗುವ ರೋಗ ನಿರೋಧಕ ಶಕ್ತಿಯು ನೈಸರ್ಗಿಕ ರೋಗ ನಿರೋಧಕ ಶಕ್ತಿಗಿಂತ ಹೆಚ್ಚು ಕಾಲ ಇರುತ್ತದೆ.

● **ಮರು ಸೋಂಕಿನ ವಿಚಾರವು ಸಾಮಾನ್ಯವಾಗಿ ಗಣನೆಗೆ ಬರುವುದೇ ಇಲ್ಲ. ಇದರಿಂದಾಗಿ ಸೋಂಕಿನ ಅಪಾಯಕ್ಕೆ ಒಳಗಾಗುವ ಜನರ ಸಂಖ್ಯೆ ಹೆಚ್ಚುವುದಿಲ್ಲವೇ?**

ಮೊದಲ ಅಲೆಯಲ್ಲಿ ಮರು ಸೋಂಕು ಪ್ರಮಾಣ ಶೇ 1 ಅಷ್ಟೇ ಇತ್ತು. ಈಗ ಅದು ಶೇ 5ರಿಂದ ಶೇ 10ರ ನಡುವೆ ಇದೆ. ನನ್ನ ಬಲವಾದ ಅನಿಸಿಕೆ ಏನೆಂದರೆ, ಮರು ಸೋಂಕಿಗೆ ಒಳಗಾದವರಲ್ಲಿ ಬೇರೊಂದು ರೂಪಾಂತರ ತಳಿ ಇದೆ. ಮುಂದಿನ ಕೆಲವು ತಿಂಗಳಲ್ಲಿ ಕಳವಳಕಾರಿಯಾದ ರೂಪಾಂತರ ತಳಿಯು ಅಭಿವೃದ್ಧಿಯಾದರೆ ಮೂರನೇ ಅಲೆಯಲ್ಲಿ ಸೋಂಕು ಪ್ರಮಾಣ ಹೆಚ್ಚಬಹುದು.

ಗುಂಡಣ್ಣ



© 2021 by King Features Syndicate, Inc. World Rights reserved
www.Blondie.com

ದಿನ ಭವಿಷ್ಯ

ಶುಕ್ರವಾರ ಮೇ 21, 2021

ಶ್ರೀ ಪ್ಲವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ವೈಶಾಖ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಕೃತ್ತಿಕಾ ದಶಮಿ ಗಂ. 55-27 (ರಾ. 4-11) ಶುಕ್ರವಾರ ನಿತ್ಯ ನಕ್ಷತ್ರ ಪೂರ್ವಫಲ್ಗುಣಿ ಗಂ. 11-33 (ಹ. 10-38) ಹರ್ಷ ನಾಮ ಯೋಗ ಗಂ 27-31 ತೈತಲ ಕರಣ ಗಂ. 27-16 ವಿಷ ಗಂ. 28-56 ಅಮೃತ ಗಂ. 52-7: ರಾಹುಕಾಲ ಬೆ ಗಂ. 10-30 ರಿಂದ 12-00 ಗುಳಿಕ ಬೆ ಕಾಲ ಗಂ 7-30 ರಿಂದ 9-00 ಯಮಗಂಡ ಕಾಲ ಮ ಗಂ 3-00 ರಿಂದ 4-30 ಸೂರ್ಯೋದಯ: 5-57 ಸೂರ್ಯಾಸ್ತ: 6-35 ಅದೃಷ್ಟ ಸಂಖ್ಯೆ 5, 7

ಮೇಷ: ಕೈಗೊಂಡ ದೊಡ್ಡ ದೊಡ್ಡ ಯೋಜನೆಗಳಿಗೆ ವಿಘ್ನಗಳುಂಟಾಗದಂತೆ ಎಚ್ಚರಿಕೆ ಅಗತ್ಯ. ಗಂಭೀರ ನಡವಳಿಕೆಯಿಂದ ಉನ್ನತ ವ್ಯಕ್ತಿತ್ವದ ನಿರ್ಮಾಣ. ಅಧಿಕಾರ ಗೌರವ ಲಾಭವು ಉಂಟಾಗಲಿದೆ.

ವೃಷಭ: ಗುರಿ ಸಾಧನೆಗಾಗಿ ತಾಳ್ಮೆ ವಹಿಸುವುದು ಉತ್ತಮ. ವೃತ್ತಿ ಜೀವನದಲ್ಲಿನ ತೊಡಕಿನ ನಿವಾರಣೆಗಾಗಿ ತಜ್ಞರ ಸಹಾಯ ಪಡೆದು ಯೋಗ್ಯ ನಿರ್ಣಯ ಕೈಗೊಳ್ಳುವ ಸಾಧ್ಯತೆ. ಸಹಧರ್ಮಿಣಿಯಿಂದ ಸಕಾಲಿಕ ನೆರವು.

ಮಿಥುನ: ಇಚ್ಛಾಶಕ್ತಿಯ ಬಲದಿಂದಾಗಿ ಕೈಗೊಂಡ ಯೋಜನೆಗಳು ಉತ್ತಮ ಹಂತವನ್ನು ತಲುಪಿ ಹೆಚ್ಚಿನ ಸಮಾಧಾನ ದೊರೆಯಲಿದೆ. ನೆರೆಹೊರೆಯವರೊಡನೆ ಉತ್ತಮ ಬಾಂಧವ್ಯ ವೃದ್ಧಿ. ಸೂರ್ಯನ ಆರಾಧನೆಯಿಂದ ಹೆಚ್ಚಿನ ಯಶಸ್ಸು.

ಕರ್ಕಾಟಕ: ಆದಾಯದ ಹೊಸ ದಾರಿಯಿಂದಾಗಿ ಮಾನಸಿಕ ನೆಮ್ಮದಿ. ರಾಜಕೀಯದಲ್ಲಿ ಹೊಸ ಮಾರ್ಗ ಗೋಚರವಾಗಲಿದೆ. ಯೋಜನೆಗಳ ರೂಪುರೇಷೆಗಳನ್ನು ರಚಿಸಲು ಉತ್ತಮ ಕಾಲ.

ಸಿಂಹ: ಜಾಣ್ಮೆಯಿಂದ ಕಷ್ಟ ಸಾಧ್ಯವಾದುದರ ಸಾಧನೆ. ಅಧಿಕಾರ ಪ್ರಾಪ್ತಿಯ ಜೊತೆಗೆ ಕಷ್ಟದಲ್ಲಿರುವವರಿಗೆ ಸಹಾಯ ಹಸ್ತ ನೀಡಿ ತೃಪ್ತಿ ಹೊಂದುವಿರಿ. ಆಸೆ ಆಕಾಂಕ್ಷೆಗಳು ನೆರವೇರಿದ ಸಂಭ್ರಮ. ಮನೆಯಲ್ಲಿ ಸಂತೋಷದ ವಾತಾವರಣ.

ಕನ್ಯಾ: ವಿರೋಧಿಗಳ ಸಂಚು ಫಲಿಸದು. ಸಮಸ್ಯೆಗಳಿಂದ ಹೊರಬರುವುದಕ್ಕಾಗಿ ಇಮ್ಮಡಿ ಉತ್ಸಾಹದಿಂದ ಮುನ್ನುಗ್ಗಿ. ಜಯ ನಿಮ್ಮದಾಗಲಿದೆ. ನಿರಾಶರಾಗದೆ ಆಶಾವಾದ ಬೆಳೆಸಿಕೊಳ್ಳುವುದು.

ತುಲಾ: ಏರಿಳಿತದ ವ್ಯಾಪಾರ, ವ್ಯವಹಾರಗಳು ಒಂದು ಹಂತಕ್ಕೆ ಬರಲಿವೆ. ಜವಾಬ್ದಾರಿಯ ಸ್ಥಾನವೊಂದನ್ನು ಅಲಂಕರಿಸಬೇಕಾದೀತು. ಆತ್ಮವಿಶ್ವಾಸದಿಂದಾಗಿ ಜೀವನದ ದಿಕ್ಕು ಬದಲಾವಣೆ. ಸಹೋದ್ಯೋಗಿಗಳಿಂದ ಹೆಚ್ಚಿನ ಸಹಕಾರ.

ವೃಶ್ಚಿಕ: ಅತ್ಯಂತ ಶುಭದಿನ. ಹಮ್ಮಿಕೊಂಡ ಕೆಲಸ ಕಾರ್ಯಗಳಲ್ಲಿ ಹಿಂಜರಿಕೆಯಿಲ್ಲದೆ ಮುನ್ನಡೆ ಅನುಭವಿಸುವಿರಿ. ಮೃದುವಾದ ಮಾತುಗಳ ಮೂಲಕ ಮುಕ್ತ ಚರ್ಚೆಗಳಲ್ಲಿ ಭಾಗವಹಿಸುವಿರಿ. ವ್ಯಾಪಾರಸ್ಥರಿಗೆ ವ್ಯವಹಾರದಲ್ಲಿ ಮುನ್ನಡೆ.

ಧನು: ಬದುಕಿಗೆ ಸಂಬಂಧಿಸಿದ ವಿಚಾರಗಳ ಬಗ್ಗೆ ಮಹತ್ವದ ತೀರ್ಮಾನ ಕೈಗೊಳ್ಳುವಿರಿ. ಅಪೇಕ್ಷಿತರ ಭೇಟಿಯ ಸಾಧ್ಯತೆ. ಒಪ್ಪಂದ ವಿಚಾರಗಳಲ್ಲಿ ಯಶಸ್ಸನ್ನು ಸಾಧಿಸುವಿರಿ.

ಮಕರ: ಕೆಲಸ–ಕಾರ್ಯಗಳಲ್ಲಿ ಒತ್ತಡವಿಲ್ಲದ ನಿರಾಳತೆ. ಸಹೋದ್ಯೋಗಿಗಳ ಇಚ್ಛೆ ಪೂರೈಕೆಗಾಗಿ ಶಕ್ತಿ ಮೀರಿ ಶ್ರಮ ವಹಿಸುವಿರಿ. ರೈತಾಪಿ ವರ್ಗದವರಿಗೆ ಪರಿಸರ ವ್ಯತ್ಯಯದಿಂದಾಗಿ ಸ್ವಲ್ಪಮಟ್ಟಿನ ಆತಂಕ ಸೃಷ್ಟಿಯಾಗುವುದು.

ಕುಂಭ: ಚುರುಕಿನಿಂದ ಕಾರ್ಯಪ್ರವೃತ್ತರಾಗಿ ಯಶಸ್ಸನ್ನು ಗಳಿಸುವಿರಿ. ಉದಾಸೀನತೆ ಯಾವುದೇ ಕಾರಣಕ್ಕೂ ಸಲ್ಲದು. ಸಕಾಲದಲ್ಲಿ ಆದಾಯದಲ್ಲಿ ವೃದ್ಧಿಯಾಗಿ ತೃಪ್ತಿಯ ಹಿತಾನುಭವ.

ಮೀನ: ವೃತ್ತಿಯಲ್ಲಿ ನಿರೀಕ್ಷಿತ ಬದಲಾವಣೆ ಕಂಡುಬರಬಹುದು. ಆಸೆಪಟ್ಟು ನಿರ್ವಹಿಸಿದ ಕೆಲಸಕಾರ್ಯಗಳು ಸುಗಮವಾಗಿ ನೆರವೇರುವವು. ಅನಗತ್ಯ ಭಯದಿಂದ ಮುಕ್ತರಾಗಿ ನಿರಾಳತೆ ಕಂಡುಬರುವುದು.

ನಿಮ್ಮ ಜನ್ಮದಿನ 21-ಮೇ ಈ ದಿನ ಅತ್ಯಂತ ಶುಭಕರ. ರಾಜಕಾರಣಿಗಳಿಗೆ, ಹಿರಿಯ ಅಧಿಕಾರಿಗಳಿಗೆ, ಉನ್ನತ ಸ್ಥಾನದಲ್ಲಿರುವವರಿಗೆ ಹೆಚ್ಚಿನ ಜವಾಬ್ದಾರಿಯೊಂದಿಗೆ ಉನ್ನತ ಸ್ಥಾನಮಾನಗಳು ಒದಗಿ ಬರುವವು. ದೂರಾಲೋಚನೆಯಿಂದಾಗಿ ಸಂಭವಿಸಬಹುದಾದ ಅವಘಡಗಳಿಂದ ಪಾರಾಗುವಿರಿ. ತರಕಾರಿ, ಹಣ್ಣು ವ್ಯಾಪಾರಸ್ಥರಿಗೆ ಉತ್ತಮ ಲಾಭದ ನಿರೀಕ್ಷೆ.

ಬೆರಗಿನ ಬೆಳಕು

ಗುರುರಾಜ ಕರಜಗಿ

ಹೊಸದೇಶದಲ್ಲಿ ಹೊಸಪರೀಕ್ಷೆ

ವಿದೇಹರಾಜ, ಬ್ರಹ್ಮದತ್ತನ ಮಗಳು ಪಂಚಾಲಚಂಡಿಯನ್ನು ಮದುವೆಯಾದ ಮೇಲೆ ಸುಖವಾಗಿದ್ದ. ಮರುವರ್ಷ ಆಕೆ ಒಬ್ಬ ಪುತ್ರನಿಗೆ ಜನ್ಮವಿತ್ತಳು. ರಾಜಕುಮಾರನಿಗೆ ಹತ್ತು ವರ್ಷವಾದಾಗ ವಿದೇಹರಾಜ ತೀರಿಹೋದ. ಆಗ ಬೋಧಿಸತ್ವನಾದ ಮಹೋಷಧಕುಮಾರ, ರಾಜಕುಮಾರನಿಗೆ ಹೇಳಿದ. 'ರಾಜಕುಮಾರ, ನಾನು ಹಿರಿಯರಿಗೆ, ಪಂಡಿತರಿಗೆ ಹೇಳಿ ನಿನ್ನ ಛತ್ರಧಾರಣೆಯನ್ನು ಮಾಡಿಸಿ, ನಾನು ಚೂಳನಿ ರಾಜ ಬ್ರಹ್ಮದತ್ತನ ಕಡೆಗೆ ಹೋಗಿಬಿಡುತ್ತೇನೆ. ಯಾಕೆಂದರೆ, ನಿಮ್ಮ ತಾಯಿಯನ್ನು ಕರೆ ತರುವಾಗ ರಾಜ ನನ್ನನ್ನು ಅಲ್ಲಿಗೆ ಬರಲು ಆಮಂತ್ರಿಸಿದ್ದ. ಆದರೆ ನಾನು ರಾಜ ವಿದೇಹನಿಗೆ ನನ್ನ ರಾಜನಿಷ್ಠೆ, ಅವನಿರುವವರೆಗೂ ಅವನನ್ನು ಬಿಟ್ಟು ಬರಲಾರೆ ಎಂದು ಹೇಳಿದ್ದೆ. ಅವನು ತೀರಿದ ಮೇಲಾದರೂ ನಮ್ಮ ರಾಜ್ಯಕ್ಕೆ ಬಂದುಬಿಡು ಎಂದು ಆತ ಕೇಳಿದ್ದಕ್ಕೆ ನಾನು ಒಪ್ಪಿಗೆ ಕೊಟ್ಟಿದ್ದೆ. ಈಗ ಆ ಸಮಯ ಬಂದಿದೆ. ಈ ದೇಶವೂ ಅಬಾಧಿತವಾಗಿದೆ. ಯಾವ ಶತ್ರುಭಯವೂ ಇಲ್ಲ'. ಪಂಚಾಲಚಂಡಿ, 'ಪಂಡಿತ, ರಾಜಕುಮಾರ ತುಂಬ ಚಿಕ್ಕವನು, ಅವನನ್ನು ಬಿಟ್ಟು ಹೋಗಬೇಡ. ಬೇಕಾದರೆ ನಾನು ನನ್ನ ತಂದೆಯನ್ನು ಕೇಳಿಕೊಳ್ಳುತ್ತೇನೆ' ಎಂದು ಬೇಡಿಕೊಂಡಳು. ಆದರೆ ಮಾತು ಕೊಟ್ಟಂತೆ ಮಹೋಷಧಕುಮಾರ ಮಿಥಿಲೆಯನ್ನು ತೊರೆದು ಬ್ರಹ್ಮದತ್ತನ ಪಂಚಾಲನಗರಕ್ಕೆ ಬಂದ.

ಅವನ ಆಗಮನದ ವಿಷಯವನ್ನು ತಿಳಿದು ರಾಜ ಬ್ರಹ್ಮದತ್ತ ತಾನೇ ಸ್ವತ: ಅವನ ಸ್ವಾಗತ ಮಾಡಿ, ಆದರ ಸತ್ಕಾರದದೊಂದಿಗೆ ನಗರದಲ್ಲಿ ಕರೆತಂದ. ಆದರೆ ವಿಚಿತ್ರವೆಂದರೆ, ಹಿಂದೆ ತಾನೇ ಕೊಟ್ಟಿದ್ದ ಎಂಭತ್ತು ಹಳ್ಳಿಗಳ ಹೊರತಾಗಿ ಯಾವ ವಿಶೇಷ ಸ್ಥಾನವನ್ನು, ಮರ್ಯಾದೆಯನ್ನು ನೀಡಲಿಲ್ಲ. ಆದರೂ ಗೊಣಗದೆ ಮಹೋಷಧಕುಮಾರ ರಾಜನ ಸೇವೆಯಲ್ಲಿ ತೊಡಗಿದ. ಬ್ರಹ್ಮದತ್ತನ ರಾಜ್ಯದಲ್ಲಿ ಎಲ್ಲರೂ ಮಹೋಷಧಕುಮಾರನನ್ನು ಒಪ್ಪಿಕೊಂಡರೂ, ಪಟ್ಟದ ರಾಣಿ ನಂದಾದೇವಿಗೆ ಅಸಮಾಧಾನವಿತ್ತು. ವಿದೇಹರಾಜನ ಮಂತ್ರಿಯೊಬ್ಬ ತಮ್ಮ ನಾಡಿಗೆ ಬಂದು ತಮ್ಮ ರಾಜನನ್ನು, ಮಂತ್ರಿಗಳನ್ನು ಮತ್ತು ಸೈನ್ಯವನ್ನು ಮೋಸಗೊಳಿಸಿ ತಮ್ಮನ್ನು ವಿದೇಹಕ್ಕೆ ಕರೆದೊಯ್ದುದು ಆಕೆಗೆ ತುಂಬ ಅಪಮಾನಕರವಾಗಿತ್ತು. ತನ್ನ ಮಗಳು ಪಂಚಾಲಚಂಡಿ ಪ್ರಬಲದೇಶದ ರಾಜನನ್ನು ಮದುವೆಯಾದದ್ದು ಸಂತೋಷವೇ ಆದರೂ ಈ ರೀತಿ ಕಪಟದಿಂದ ಕದ್ದುಕೊಂಡು ಹೋದದ್ದು ಒಪ್ಪತಕ್ಕದ್ದಲ್ಲ ಎಂಬುದು ಆಕೆಯ ಮತ. ಹೀಗಾಗಿ ತನ್ನ ಗಂಡ ಬ್ರಹ್ಮದತ್ತ ಅವನಿಗೆ ಅಷ್ಟು ಮರ್ಯಾದೆ ಕೊಟ್ಟದ್ದು ಸರಿ ಎನ್ನಿಸಿರಲಿಲ್ಲ. ಕುಮಾರ ನಿಜವಾಗಿಯೂ ಬುದ್ಧಿವಂತನೇ ಅಥವಾ ಅದೊಂದು ಘಟನೆ ಆಕಸ್ಮಿಕವೇ ಎಂಬುದನ್ನು ಆಕೆ ತಿಳಿಯಬೇಕಿತ್ತು. ಆದ್ದರಿಂದ ರಾಣಿ ನಂದಾದೇವಿ ಸಾಮಾನ್ಯವಾಗಿ ರಾಜನ ಹತ್ತಿರವೇ ಇರುವ, ಐದು ಜನ ದಾಸಿಯರನ್ನು ಕರೆದು, ಮಾತನಾಡಿಸಿ, ಸಾಧ್ಯವಿದ್ದಾಗಲೆಲ್ಲ ಮಹೋಷಧಕುಮಾರನ ಬಗ್ಗೆ ಸಂಶಯ ಬರುವಂಥ ಮಾತುಗಳನ್ನು ಆಡಲು ಪ್ರೇರೇಪಿಸಿದ್ದಳು. ಅವರೂ ಅವಕಾಶಕ್ಕಾಗಿ ಕಾಯುತ್ತಿದ್ದರು. ಈ ಸಮಯದಲ್ಲಿ ಭೇರಿ ಎಂಬ ಪರಿವ್ರಾಜಿಕೆ ಅರಮನೆಯಲ್ಲಿ ನೆಲೆಸಲು ಬಂದಳು. ಆಕೆ ಮಹಾಸಾಧಕಿ, ಪಂಡಿತೆ ಹಾಗೂ ಭಾರೀ ಶಾಸ್ತ್ರವಿದೆಯಾಗಿದ್ದಳು. ರಾಣಿ ನಂದಾದೇವಿ ಆ ಪರಿವ್ರಾಜಿಕೆಯನ್ನು ಕಂಡು ಮಹೋಷಧಕುಮಾರನನ್ನು ಪರೀಕ್ಷಿಸಲು ಹೇಳಿದಳು. ದೇಶ ಬಿಟ್ಟು ಬೇರೆ ರಾಜನ ಬಳಿಗೆ ಬಂದರೂ ತನ್ನ ಪರೀಕ್ಷೆ ಮಾತ್ರ ತಪ್ಪಲಿಲ್ಲ ಎಂದು ಚಿಂತಿಸಿದ ಕುಮಾರ. ಯಾವುದೇ ಪರೀಕ್ಷೆಗೂ ಸಿದ್ಧನಾಗಲು ತೀರ್ಮಾನಿಸಿದ.

ಪದಬಂಧ 4603

– ವಿದ್ಯಾ ವಿನಯ್



ಎಡದಿಂದ ಬಲಕ್ಕೆ

1.ಪರಿಹಾರ ಕಾಣದ ಸಮಸ್ಯೆ (4)
3.ಶಿರವನ್ನು ಅತ್ತಿಂದಿತ್ತ ಅಲುಗಾಡಿಸು (4)
5.ಮನೋಗತದಂತೆ ನೀಡಿರುವ ಓಟು (2)
6.ಗುರುತು ಈ ಪರಿ ಬಂದಿದೆ! (4)
8.ಜಾಗರೂಕತೆಯಿಂದ ವೀಕ್ಷಿಸಿದ ಸ್ಥಳ! (2)
9.ಮೂಳೆಯೊಳಗಿನ ಮೆದುವಾದ ಕೊಬ್ಬು (2)
10.ತರತರದ ಕಾಯಿಪಲ್ಲೆ (4)
12.ಸುತ್ತದಲ್ಲಿ ಒತ್ತು ತೆಗೆದರೆ ಮಗ ಕಾಣುವನೇ? (2)
15.ಮೂರು ಮೈಲುಗಳ ಒಂದು ಅಳತೆ (4)
16.ದೇವಾಲಯದ ಸಭಾಮಂಟಪ (4)

ಮೇಲಿಂದ ಕೆಳಕ್ಕೆ

1.ಹಾವುಗಳ ಒಡೆಯ (2)
2.ಪ್ರತಿಭಾವಂತನ ಹತ್ತಿರ ಕಳೆದ ಪ್ರಾತಃಕಾಲ (3)
3.ತರಿಯನ್ನು ತರಲು ತೋರಿದ ಆತುರ! (4)
4.ಬುಗುರಿಯಾಟದಲ್ಲಿ ಕಚ್ಚು ಬೀಳುವಿಕೆ! (2)
5.ಮತದೊಳಗಿರುವ ಅಭಿಪ್ರಾಯ (4)
6.ಈ ಪರಿಯಾಗಿ ತಪ್ಪಿಸಿಕೊಳ್ಳುವಿಕೆ (3)
7.ಈತ ಮೃತ್ಯುದೇವತೆಯ ಕಿಂಕರ (4)
11.ಕಾಲ್ನಡಿಗೆಯಿಂದ ಹೋಗುವ ರಸ್ತೆ (4)
12.ಒಳ್ಳೆಯ ಅದೃಷ್ಟ (3)
13.ಸಂದೇಹದಿಂದಲೇ ನೋಡಿದಾಗ ಕಾಯ ಕಾಣುತ್ತಿದೆ! (2)
14.ಇದು ಬೀಗರ ಕೀಲಿ! (2)

4602ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಏಮಾರು 2.ಜಾಗರಣೆ 4.ಪ್ರಣಯಿನಿ 6.ಸಂತೋಷ 7.ರಭಾ 9.ಪಥಿಕ 11.ವರ 13.ಸಭಿಕ 14.ನಳಪಾಕ 16.ಮುಕ್ತಿಪಥ 17.ಹೊರಳೆ

ಮೇಲಿಂದ ಕೆಳಕ್ಕೆ: 1.ಏಕಪ್ರಕಾರ 2.ಜಾಡಿ 3.ರಜತೋತ್ಸವ 5.ನಿಕ್ಷೇಪ 8.ಭಾವಾಭಿವ್ಯಕ್ತಿ 10.ಕವನ 12.ರಣಕಹಳೆ 15.ರಥ

ಸುಡೊಕು 4989

9				5			4	3
	5		3		9			1
	4			1				
	3	2		9		7		6
			1		2		9	
7	9			3		2	1	
3	1		9		5		7	
				8		1	6	9
	6	9			1		3	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4988 ಸುಡೊಕು

4	2	1	3	8	9	5	6	7
8	7	9	1	5	6	4	2	3
3	6	5	4	2	7	9	8	1
6	8	7	5	9	4	3	1	2
2	1	4	7	6	3	8	5	9
5	9	3	8	1	2	6	7	4
9	3	2	6	7	8	1	4	5
1	4	8	2	3	5	7	9	6
7	5	6	9	4	1	2	3	8

ಅರ್ಚಕರು, ಸಿಬ್ಬಂದಿಗೆ ಆಹಾರ ಕಿಟ್

ಬೆಂಗಳೂರು: ಮುಜರಾಯಿ ಇಲಾಖೆ ಒಳಪಡುವ 'ಸಿ' ದರ್ಜೆ ದೇವಾಲಯಗಳಲ್ಲಿ ಕಾರ್ಯನಿರ್ವಹಿಸುವ ಮತ್ತು ಸಂಕಷ್ಟದಲ್ಲಿರುವ ಅರ್ಚಕರು ಹಾಗೂ ಸಿಬ್ಬಂದಿಗೆ ಆಹಾರದ ಕಿಟ್‌ಗಳನ್ನು ವಿತರಿಸಲು ಕಂದಾಯ ಇಲಾಖೆ ಆದೇಶ ಹೊರಡಿಸಿದೆ.

ಆಯಾ ಜಿಲ್ಲೆಯ 'ಎ' ಮತ್ತು 'ಬಿ' ದರ್ಜೆಯ ದೇವಾಲಯಗಳಲ್ಲಿ ದಾಸೋಹಕ್ಕೆಂದು ಸಂಗ್ರಹಿಸಿಟ್ಟಿರುವ ಅಕ್ಕಿ ಮತ್ತು ಇತರ ದವಸ ಧಾನ್ಯಗಳು ಹಾಳಾಗುವ ಸಾಧ್ಯತೆ ಇದೆ. ಆದ್ದರಿಂದ ತಕ್ಷಣವೇ ಆಹಾರದ ಕಿಟ್ ರೂಪದಲ್ಲಿ ಅರ್ಚಕರು ಮತ್ತು ಸಿಬ್ಬಂದಿಗೆ ವಿತರಿಸಬೇಕು ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಆಹಾರ ಧಾನ್ಯ ಲಭ್ಯ ಇಲ್ಲದಿದ್ದರೆ, ಸಿ ದರ್ಜೆ ದೇವಸ್ಥಾನದ ಅರ್ಚಕರು, ಸಿಬ್ಬಂದಿಗೆ ಮಾತ್ರ ನಿಧಿಯಿಂದ ವೆಚ್ಚ ಭರಿಸಿ ಕಿಟ್‌ಗಳನ್ನು ವಿತರಿಸಬೇಕು ಎಂದು ಕಂದಾಯ ಇಲಾಖೆ ಪ್ರಧಾನಕಾರ್ಯದರ್ಶಿ ಎನ್.ಮಂಜುನಾಥಪ್ರಸಾದ್ ತಿಳಿಸಿದ್ದಾರೆ.

ಭಾವಪೂರ್ಣ ಶ್ರದ್ಧಾಂಜಲಿ

ಬಿ.ಸಿ. ಅಂಕಪ್ಪ ರೆಡ್ಡಿ

ಶ್ರದ್ಧಾಂಜಲಿ

ಶ್ರೀ ಆರ್. ರಂಗಸ್ವಾಮಿ

ಲಸಿಕೆ ವಿಚಾರದಲ್ಲಿ ಕಾಂಗ್ರೆಸ್ ರಾಜಕೀಯ: ಕುಮಾರಸ್ವಾಮಿ ಆರೋಪ

ಎಚ್‌ಡಿಕೆ– ಸಿದ್ದರಾಮಯ್ಯ ಟ್ವೀಟ್ ಜಗಳ

ಪ್ರಜಾವಾಣಿ ವಾರ್ತೆ

ಕುಮಾರಸ್ವಾಮಿ

ಸಿದ್ದರಾಮಯ್ಯ

ಬೆಂಗಳೂರು: ಕೋವಿಡ್ ಲಸಿಕೆ ವಿಚಾರದಲ್ಲಿ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಮತ್ತು ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ನಡುವೆ ಟ್ವೀಟ್ ಸಮರ ಮುಂದುವರಿದಿದೆ.

ಸಿದ್ದರಾಮಯ್ಯ ಬುಧವಾರ ಟ್ವಿಟರ್‌ನಲ್ಲಿ ಮಾಡಿದ್ದ ಟೀಕೆಗಳಿಗೆ ಕುಮಾರಸ್ವಾಮಿ ಗುರುವಾರ ಅಲ್ಲೇ ಪ್ರತ್ಯುತ್ತರ ನೀಡಿದ್ದಾರೆ.

'ಲಸಿಕೆ ವಿಚಾರದಲ್ಲಿ ಕಾಂಗ್ರೆಸ್ ರಾಜಕೀಯ ಮಾಡುತ್ತಿದೆ' ಎಂಬ ಕುಮಾರಸ್ವಾಮಿ ಆರೋಪಕ್ಕೆ ಟ್ವಿಟರ್‌ನಲ್ಲಿ ಪ್ರತಿಕ್ರಿಯಿಸಿದ್ದ ಸಿದ್ದರಾಮಯ್ಯ, 'ಇಂತಹ ಬಾಲಿಶ ಹೇಳಿಕೆಗಳನ್ನು ನೀಡುವ ಮುನ್ನ ನಿಮ್ಮ ತಂದೆ ಎಚ್.ಡಿ. ದೇವೇಗೌಡರ ಸಲಹೆ ಪಡೆಯಿರಿ. ಜನರು ಲಸಿಕೆ ಹಾಕಿಸಿಕೊಳ್ಳದೇ ಇರುವುದಕ್ಕೆ ಕಾಂಗ್ರೆಸ್‌ನ ಅಪಪ್ರಚಾರ ಕಾರಣ ಎನ್ನುವ ಮೂಲಕ ಕುಮಾರಸ್ವಾಮಿ ಸ್ವಯಂ ಗೋಲು ಹೊಡೆದುಕೊಂಡಿದ್ದಾರೆ. ಅವರ ಮಾತಿನ ಪ್ರಕಾರ ದೇಶದ ಜನರು ಈಗ ಪ್ರಧಾನಿ ನರೇಂದ್ರ ಮೋದಿ ಮಾತಿಗೆ ಕಿವಿಗೊಡುವುದಿಲ್ಲ. ಕಾಂಗ್ರೆಸ್ ಮಾತಿಗೆ ಬೆಲೆ ಕೊಡುತ್ತಾರೆ' ಎಂದು ವ್ಯಂಗ್ಯವಾಡಿದ್ದರು.

ಗುರುವಾರ ಸರಣಿ ಟ್ವೀಟ್ ಮಾಡಿರುವ ಕುಮಾರಸ್ವಾಮಿ, 'ಶಾಂತಿ ಕಾಲದಲ್ಲಿ ಕಲಹಕ್ಕೆ ಬರುವುದು, ನೆರೆಮನೆಯ ಬೆಂಕಿಯಲ್ಲಿ ಬೇಳೆ ಬೇಯಿಸುವುದು ಕಾಂಗ್ರೆಸ್‌ನ ಜಾಡ್ಯ. ಈ ಅಂಟುರೋಗಕ್ಕೆ ಒಳಗಾಗಿರುವ ಸಿದ್ದರಾಮಯ್ಯ, ನನ್ನ ವಿರುದ್ಧ ಕಾಲು ಕೆರೆದುಕೊಂಡು ಬಂದಿದ್ದಾರೆ' ಎಂದು ತಿರುಗೇಟು ನೀಡಿದ್ದಾರೆ.

'ಲಸಿಕೆ ವಿಚಾರದಲ್ಲಿ ದೇಶದ ಎದುರು ಕಾಂಗ್ರೆಸ್ ಬೆತ್ತಲಾಗಿ ನಿಂತಿದೆ. ಲಸಿಕೆ ಕುರಿತು ಕಾಂಗ್ರೆಸ್ ಅನುಮಾನದ ಮಾತುಗಳನ್ನು ಆಡಲಿಲ್ಲವೆ? ಭಾರತದ್ದೇ ಕೊವ್ಯಾಕ್ಸಿನ್ ಕುರಿತು ಅಪಪ್ರಚಾರ ಮಾಡಲಿಲ್ಲವೆ? ಕಾಂಗ್ರೆಸ್‌ನ ಅಪಪ್ರಚಾರದಿಂದ ಜನರು ಲಸಿಕೆ ಹಾಕಿಸಿಕೊಂಡಿಲ್ಲ ಎಂದು ನಾನು ಹೇಳಿಲ್ಲ. ಲಸಿಕೆಯ ರಾಜಕಾರಣವನ್ನಷ್ಟೇ ವಿವರಿಸಿದ್ದೇನೆ. ನಾನು ವಿಶ್ಲೇಷಿಸಿದ್ದು ಲಸಿಕೆ ಪಡೆಯಲು ಕಾಂಗ್ರೆಸ್‌ನ ಮಾತು ಕಾರಣವಲ್ಲ' ಎಂದು ಹೇಳಿದ್ದಾರೆ.

ಎಲ್ಲ ಜನರಿಗೂ ಉಚಿತವಾಗಿ ಲಸಿಕೆ ನೀಡುವಂತೆ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರ ಜತೆಗೂಡಿ ದೇವೇಗೌಡರು ಪ್ರಧಾನಿಗೆ ಪತ್ರ ಬರೆದಿದ್ದರು ಎಂದು ಸಿದ್ದರಾಮಯ್ಯ ಹೇಳಿದ್ದಾರೆ. ಅದು ಸತ್ಯವಲ್ಲ. ವಿರೋಧ ಪಕ್ಷಗಳ ಹಲವು ನಾಯಕರ ಜತೆ ಸೇರಿ ದೇವೇಗೌಡರು ಪತ್ರ ಬರೆದಿದ್ದರು. ಪತ್ರಕ್ಕೆ ಸಹಿ ಮಾಡುವಂತೆ ಎಷ್ಟು ಮಂದಿ ನಾಯಕರು ಬೇಡಿಕೊಂಡಿದ್ದರು ಎಂಬುದನ್ನು ಸಿದ್ದರಾಮಯ್ಯ ದೆಹಲಿಗೆ ಹೋಗಿ ತಿಳಿಯಲಿ ಎಂದು ಕುಮಾರಸ್ವಾಮಿ ಸವಾಲು ಹಾಕಿದ್ದಾರೆ.

'ಲಾಕ್‌ಡೌನ್ ಜಾರಿಯಲ್ಲಿದ್ದರೂ ಕಾಂಗ್ರೆಸ್ ನಾಯಕರು ಬೀದಿಗೆ ಬಿದ್ದಿದ್ದಾರೆ. ಜನರಿಗೆ ನೆರವಾಗುವುದು ಇವರ ಉದ್ದೇಶವಲ್ಲ. ರಾಜಕೀಯ ಮೈಲೇಜ್ ಪಡೆಯುವುದು, ಮುಂದಿನ ಮುಖ್ಯಮಂತ್ರಿ ಆಗುವ ಕನಸುಗಳ ಕಾರಣ. ಶಾಂತಿ ಕಾಲದಲ್ಲಿ ಕಾಂಗ್ರೆಸ್ ಕಲಹಕ್ಕೆ ಇಳಿದು ಲಾಭ ಪಡೆಯುತ್ತದೆ ಎಂಬುದಕ್ಕೆ ಇದು ಸಾಕ್ಷಿ' ಎಂದು ಟೀಕಿಸಿದ್ದಾರೆ.

'ಕೇಂದ್ರದಿಂದ ಮತ್ತೆ ತಾರತಮ್ಯ'

'ಕಪ್ಪು ಶಿಲೀಂಧ್ರ ರೋಗಿಗಳಿಗೆ ನೀಡುವ ಲಿಪೋಸೋಮಾಲ್ ಎಂಫೋಟೆರಿಸಿನ್ ಬಿ ಲಸಿಕೆ ಹಂಚಿಕೆಯಲ್ಲೂ ಕೇಂದ್ರ ಸರ್ಕಾರ ರಾಜ್ಯಕ್ಕೆ ತಾರತಮ್ಯ ಮಾಡಿದೆ. ಗುಜರಾತ್, ಮಹಾರಾಷ್ಟ್ರ ರಾಜ್ಯಗಳಿಗೆ ಹೆಚ್ಚಿನ ಲಸಿಕೆ ನೀಡಿದ್ದು, ಕರ್ನಾಟಕಕ್ಕೆ ಅತ್ಯಂತ ಕಡಿಮೆ ಹಂಚಿಕೆ ಮಾಡಲಾಗಿದೆ' ಎಂದು ಕುಮಾರಸ್ವಾಮಿ ದೂರಿದ್ದಾರೆ.

ಕಪ್ಪು ಶಿಲೀಂಧ್ರ ರೋಗಿಗಳ ಚಿಕಿತ್ಸೆಗೆ ರಾಜ್ಯ ಸರ್ಕಾರ ತ್ವರಿತ ಕ್ರಮ ಕೈಗೊಳ್ಳಬೇಕು. ಹೆಚ್ಚಿನ ಪ್ರಮಾಣದಲ್ಲಿ ಲಸಿಕೆಗಳನ್ನು ಖರೀದಿಸಲು ತಕ್ಷಣ ಮುಂದಾಗಬೇಕು ಎಂದೂ ಅವರು ಆಗ್ರಹಿಸಿದ್ದಾರೆ.

ಕೋವಿಡ್: ಅಪೌಷ್ಟಿಕತೆ ಸುಳಿಯಲ್ಲಿ ಮಕ್ಕಳು

ಒಂದನೇ ಪುಟದಿಂದ

18 ವರ್ಷದೊಳಗಿನವರಿಗೆ ಲಸಿಕೆ ಇನ್ನೂ ಪ್ರಯೋಗದ ಹಂತದಲ್ಲಿಯೇ ಇರುವುದು ಇದಕ್ಕೆ ಕಾರಣ ಎಂದೂ ಹೇಳಲಾಗಿದೆ.

ಮಕ್ಕಳ ಆರೋಗ್ಯ ಹದಗೆಡಲು ಪ್ರಮುಖ ಕಾರಣವಾಗಿರುವ ಅಪೌಷ್ಟಿಕತೆಯ ಸಮಸ್ಯೆ ಕುರಿತು ಅಗತ್ಯವಿರುವಷ್ಟು ಗಮನ ಹರಿಸಿಲ್ಲ ಎಂಬ ಚರ್ಚೆಯೂ ಇದೆ. ಏಕೆಂದರೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಮಾಹಿತಿ ಪ್ರಕಾರ ಆರು ವರ್ಷದೊಳಗಿನ 34.74 ಲಕ್ಷ ಮಕ್ಕಳು ಅಂಗನವಾಡಿಗಳಲ್ಲಿ ದಾಖಲಾತಿ ಹೊಂದಿದ್ದಾರೆ. ಅವರಲ್ಲಿ ಶೇ 11.14 ರಷ್ಟು ಮಕ್ಕಳು ಅಪೌಷ್ಟಿಕತೆ ಸಮಸ್ಯೆ ಎದುರಿಸುತ್ತಿದ್ದಾರೆ.

ಡಾ. ಶ್ರೀನಿವಾಸ್ ಎಸ್.

ರಾಜ್ಯದಲ್ಲಿ ಈವರೆಗೆ 23 ಲಕ್ಷಕ್ಕೂ ಅಧಿಕ ಮಂದಿ ಕೊರೊನಾ ಸೋಂಕಿತರಾಗಿದ್ದಾರೆ. ಈ ಪೈಕಿ, 10 ವರ್ಷದೊಳಗಿನವರಲ್ಲಿ 65,857 ಮಕ್ಕಳು ಹಾಗೂ 10ರಿಂದ 20 ವರ್ಷದೊಳಗಿನವರಲ್ಲಿ 1.66 ಲಕ್ಷ ಮಂದಿ (ಮೇ 17) ಮಾತ್ರ ಕೋವಿಡ್ ಪೀಡಿತರಾಗಿದ್ದಾರೆ. ಸೋಂಕಿನ ತೀವ್ರತೆ ಅಷ್ಟಾಗಿ ಇರದ ಕಾರಣ ಮಕ್ಕಳಲ್ಲಿನ ಮರಣ ಪ್ರಮಾಣ ಶೇ 0.1ರಷ್ಟಿದೆ. ಆದರೆ, ಮೂರನೇ ಅಲೆಯಲ್ಲಿ ಸೋಂಕು ದೃಢ ಪ್ರಮಾಣ ಏರಿಕೆಯಾಗುವ ಸಾಧ್ಯತೆ ಇದೆ ಎಂದು ವೈದ್ಯಕೀಯ ತಜ್ಞರು ಎಚ್ಚರಿಕೆ ನೀಡಿದ್ದಾರೆ.

ಅಪೌಷ್ಟಿಕ ಮಕ್ಕಳಿಗೆ ಅಪಾಯ: ಮಕ್ಕಳಲ್ಲಿ ಅಪೌಷ್ಟಿಕತೆ ನಿವಾರಣೆಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಮತ್ತು ಆರೋಗ್ಯ ಇಲಾಖೆ ಪ್ರತಿ ವರ್ಷ ನೂರಾರು ಕೋಟಿ ರೂಪಾಯಿ ಖರ್ಚು ಮಾಡುತ್ತಿವೆ. ಕೋವಿಡ್ ಕಾಣಿಸಿಕೊಂಡ ಬಳಿಕ ಅಂಗನವಾಡಿ ಕೇಂದ್ರಗಳಿಗೆ ಬೀಗ ಬಿದ್ದ ಕಾರಣ ಮಕ್ಕಳ ಮನೆಗೆ ಆಹಾರ ಧಾನ್ಯ ವಿತರಿಸಲಾಗುತ್ತಿದೆ. ಇಷ್ಟಾಗಿಯೂ ಲಕ್ಷಾಂತರ ಮಕ್ಕಳು ಅಪೌಷ್ಟಿಕತೆಯಿಂದ ಬಳಲುತ್ತಿದ್ದಾರೆ. ಪರಿಣಾಮ ಈ ಸಮಸ್ಯೆ ಎದುರಿಸುತ್ತಿರುವ ಮಕ್ಕಳಲ್ಲಿ ಸೋಂಕಿನ ತೀವ್ರತೆ ಹೆಚ್ಚಾಗಿ ಇರಲಿದೆ ಎಂದು ಮಕ್ಕಳ ತಜ್ಞರು ಎಚ್ಚರಿಸಿದ್ದಾರೆ.

'ಈಗ 18 ವರ್ಷ ಮೇಲ್ಪಟ್ಟವರಿಗೆ ಲಸಿಕೆ ವಿತರಣೆ ಪ್ರಾರಂಭವಾಗಿದೆ. ಆದರೆ, ದೇಶದಲ್ಲಿ ಲಸಿಕೆಯ ಪ್ರಯೋಗ ಮಕ್ಕಳ ಮೇಲೆ ನಡೆಯದ ಕಾರಣ ಅವರಿಗೆ ವಿತರಿಸುತ್ತಿಲ್ಲ. ಹೀಗಾಗಿ, ಮೂರನೇ ಅಲೆಯು ಮಕ್ಕಳಿಗೆ ಹೆಚ್ಚು ಸಮಸ್ಯೆ ತಂದೊಡ್ಡುವ ಸಾಧ್ಯತೆಯಿದೆ' ಎಂದು ಕೋವಿಡ್ ತಾಂತ್ರಿಕ ಸಲಹಾ ಸಮಿತಿ ಸದಸ್ಯ ಡಾ. ಬಿ.ಎಲ್. ಶಶಿಭೂಷಣ್ 'ಪ್ರಜಾವಾಣಿ'ಗೆ ತಿಳಿಸಿದರು.

'ಮೂರನೇ ಅಲೆಯಲ್ಲಿ ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಸೋಂಕಿತರಾಗುವ ಸಾಧ್ಯತೆಯಿದೆ. ಆದಷ್ಟು ಬೇಗ ಲಸಿಕೆ ಒದಗಿಸುವ ಮೂಲಕ ಅವರಿಗೆ ರಕ್ಷಣೆ ಒದಗಿಸಬೇಕು. ಪ್ರಯೋಗದ ಪ್ರಕ್ರಿಯೆಯನ್ನು ವೇಗವಾಗಿ ನಡೆಸಬೇಕು. ಅಪೌಷ್ಟಿಕತೆ ಎದುರಿಸುತ್ತಿರುವ ಮಕ್ಕಳಿಗೆ ಹೆಚ್ಚಿನ ಅಪಾಯ ಇರಲಿದೆ' ಎಂದು ಭಾರತೀಯ ವೈದ್ಯಕೀಯ ಸಂಘದ (ಐಎಂಎ) ಮಕ್ಕಳ ಆರೋಗ್ಯ ಸ್ಥಾಯಿ ಸಮಿತಿಯ ಅಧ್ಯಕ್ಷ ಡಾ. ಎಸ್. ಶ್ರೀನಿವಾಸ್ ಎಚ್ಚರಿಸಿದರು.

ಅಪೌಷ್ಟಿಕ ಮಕ್ಕಳ ಸಂಖ್ಯೆ ಹೆಚ್ಚಿರುವ ಜಿಲ್ಲೆಗಳು (6 ವರ್ಷದೊಳಗಿನ ಮಕ್ಕಳು)

ಜಿಲ್ಲೆ	ಅಪೌಷ್ಟಿಕ ಮಕ್ಕಳು
ಬೆಳಗಾವಿ	61,709
ಬಳ್ಳಾರಿ	45,666
ರಾಯಚೂರು	43,177
ಕೊಪ್ಪಳ	33,842
ಬೀದರ್	28,272
ಕಲಬುರ್ಗಿ	26,907
ಯಾದಗಿರಿ	23,519
ವಿಜಯಪುರ	21,849
ಬಾಗಲಕೋಟೆ	18,187
ಗದಗ	17,289

'ಎಲ್ಲರಿಗೂ ಉಚಿತ ಲಸಿಕೆ ನೀಡಿ'

ನವದೆಹಲಿ: ದೇಶದ ಎಲ್ಲ ನಾಗರಿಕರಿಗೂ ಉಚಿತ ಲಸಿಕೆ ಒದಗಿಸಬೇಕು ಎಂದು ಹಿರಿಯ ಮಾಜಿ ಅಧಿಕಾರಿಗಳು ಪ್ರಧಾನಿ ಅವರನ್ನು ಒತ್ತಾಯಿಸಿದ್ದಾರೆ.

'ಅಂತರರಾಷ್ಟ್ರೀಯ ಸಮುದಾಯ ಮತ್ತು ಭಾರತದ ವಿಜ್ಞಾನಿಗಳು ಎಚ್ಚರಿಕೆ ನೀಡಿದ್ದರೂ ಮೊದಲ ಮತ್ತು ಎರಡನೇ ಅಲೆಯ ಅಂತರದ ನಡುವಣ ಅವಧಿಯನ್ನು ಮಹತ್ವದ ಸಂಪನ್ಮೂಲಗಳನ್ನು ಸಂಗ್ರಹಿಸಿಕೊಳ್ಳಲು ಬಳಸಿಕೊಳ್ಳಲಿಲ್ಲ. ಈ ಅವಧಿಯಲ್ಲಿ ವೈದ್ಯಕೀಯ ಸಿಬ್ಬಂದಿ ಹೆಚ್ಚಿಸಲು, ಹಾಸಿಗೆಗಳು, ಆಮ್ಲಜನಕ, ವೆಂಟಿಲೇಟರ್‌ಗಳು, ವೈದ್ಯಕೀಯಕ್ಕೆ ಸಂಬಂಧಿಸಿದ ಸಂಪನ್ಮೂಲಗಳನ್ನು ಸಂಗ್ರಹ ಮಾಡಿಕೊಳ್ಳಬಹುದಾಗಿತ್ತು' ಎಂದು ಪತ್ರದಲ್ಲಿ ತಿಳಿಸಿದ್ದಾರೆ. 'ವೈದ್ಯಕೀಯ ನೆರವಿಗಾಗಿ ನಾಗರಿಕರು ಪರದಾಡುತ್ತಿದ್ದಾರೆ. ಆದರೂ, ಬಿಕ್ಕಟ್ಟಿನ ಅಗಾಧ ಪ್ರಮಾಣವನ್ನು ನೋಡಿದಾಗ ಸರ್ಕಾರ ನಿರ್ಲಕ್ಷ್ಯ ಮನೋಭಾವ ಹೊಂದಿದೆ' ಎಂದಿದ್ದಾರೆ.

ಸಂಪುಟದ ಮಾಜಿ ಕಾರ್ಯದರ್ಶಿ ಕೆ.ಎಂ. ಚಂದ್ರಶೇಖರ್, ಮಾಜಿ ಆರೋಗ್ಯ ಕಾರ್ಯದರ್ಶಿ ಕೆ. ಸುಜಾತಾ ರಾವ್, ಮಾಜಿ ವಿದೇಶಾಂಗ ಕಾರ್ಯದರ್ಶಿ ಶಿವಶಂಕರ್ ಮೆನನ್, ಪ್ರಧಾನಿಯ ಮಾಜಿ ಸಲಹೆಗಾರ ಟಿ.ಕೆ.ಎ. ನಯ್ಯರ್, ಮಾಜಿ ಮುಖ್ಯ ಮಾಹಿತಿ ಆಯುಕ್ತ ವಜಾಹತ್ ಹಬಿಬುಲ್ಲಾ ಮತ್ತು ದೆಹಲಿಯ ಮಾಜಿ ಲೆಫ್ಟಿನೆಂಟ್ ಗವರ್ನರ್ ನಜೀಬ್ ಜಂಗ್ ಸೇರಿದಂತೆ ನಾಗರಿಕ ಸೇವೆಯ 116 ಮಾಜಿ ಅಧಿಕಾರಿಗಳು ಈ ಪತ್ರವನ್ನು ಬರೆದಿದ್ದಾರೆ.

ಪ್ರಜಾವಾಣಿ

ಸಿನಿ ಸಿಪ್ ಚಪ್ಪರಿಸಿದಷ್ಟೂ ನೆನಪು..

ರಾಜ್ ಕುಟುಂಬದ ಸಂಸ್ಕಾರ

ಸಿನಿಮಾ ತೆರೆಮೇಲೆ ಕಾಣದ ಅಪರೂಪದ ನೆನಪು ಸಹೃದಯರಿಗೆ ಗುಟುಕಿನ ರೂಪದಲ್ಲಿ...

ಪ್ರಜಾವಾಣಿ ಸಂವಾದ

facebook LIVE

ಫೇಸ್‌ಬುಕ್‌ನಲ್ಲಿ ನೇರ ಪ್ರಸಾರ

ಕೇರಳ ಸಚಿವ ಸಂಪುಟದಿಂದ ಶೈಲಜಾ ಟೀಚರ್‌ರನ್ನು ಕೈಬಿಟ್ಟದ್ದು ಸರಿಯೆ?

ಸಂವಾದದಲ್ಲಿ ಭಾಗವಹಿಸುವವರು



ಜಿ.ಎನ್.ನಾಗರಾಜ್ ಸಿಪಿಐ (ಎಂ) ರಾಜ್ಯ ಮುಖಂಡ



ಬಂಜಗೆರೆ ಜಯಪ್ರಕಾಶ್ ಲೇಖಕ, ಚಿಂತಕ

ಕ್ಯಾ.ಗಣೇಶ್ ಕಾರ್ಣಿಕ್ ಬಿಜೆಪಿ ರಾಜ್ಯ ವಕ್ತಾರ

ಶನಿವಾರ, 22-05-2021 ಸಮಯ- ಬೆಳಿಗ್ಗೆ 11 ರಿಂದ 12

fb.com/prajavani.net

ಕೋವಿಡ್: ಭಾರತಕ್ಕೆ ₹ 3,656 ಕೋಟಿ ಮೌಲ್ಯದ ಪರಿಹಾರ ಸಾಮಗ್ರಿ

ವಾಷಿಂಗ್ಟನ್ (ಪಿಟಿಐ): ಕೋವಿಡ್–19 ಪಿಡುಗಿನ ವಿರುದ್ಧ ಹೋರಾಡುತ್ತಿರುವ ಭಾರತಕ್ಕೆ ಅಮೆರಿಕ ಇದುವರೆಗೆ ₹ 3,656 ಕೋಟಿಗೂ (500 ದಶಲಕ್ಷ ಡಾಲರ್) ಅಧಿಕ ಮೊತ್ತದ ಪರಿಹಾರ ಸಾಮಗ್ರಿಗಳನ್ನು ಒದಗಿಸಿದೆ ಎಂದು ಶ್ವೇತಭವನ ಹೇಳಿದೆ.

'ಅಮೆರಿಕದ ಒಕ್ಕೂಟ ಸರ್ಕಾರವಲ್ಲದೇ, ವಿವಿಧ ರಾಜ್ಯ ಸರ್ಕಾರಗಳು ಕೂಡ ಪರಿಹಾರ ಸಾಮಗ್ರಿಗಳನ್ನು ಒದಗಿಸಿವೆ. ಹಲವಾರು ಕಂಪನಿಗಳು, ಸಂಘಟನೆಗಳು ನೆರವು ನೀಡಿವೆ. ಹಲವು ವ್ಯಕ್ತಿಗಳು ಸಹ ಈ ಕಾರ್ಯಕ್ಕೆ ಕೈಜೋಡಿಸಿದ್ದಾರೆ' ಎಂದು ಶ್ವೇತಭವನದ ಪತ್ರಿಕಾ ಕಾರ್ಯದರ್ಶಿ ಜೆನ್ ಸಾಕಿ ಅವರು ವರ್ಚುವಲ್ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ಕೋವಿಡ್–19 ಪಿಡುಗಿನಿಂದಾಗಿ ಭಾರತೀಯರು ಎಷ್ಟು ಕಷ್ಟಪಡುತ್ತಿದ್ದಾರೆ ಎಂಬುದು ನಮ್ಮ ಗಮನದಲ್ಲಿದೆ. ಆದರೆ, ಇನ್ನೂ ಅನೇಕ ರಾಷ್ಟ್ರಗಳು ಸಹ ಈ ಪಿಡುಗಿನಿಂದ ತತ್ತರಿಸಿದ್ದು, ಅವುಗಳಿಗೂ ನೆರವಿನ ಅಗತ್ಯವಿದೆ' ಎಂದರು.

'ದಕ್ಷಿಣ ಏಷ್ಯಾದ ಕೆಲವು ರಾಷ್ಟ್ರಗಳಿಗೆ ನೆರವು ನೀಡಲು ಅಧ್ಯಕ್ಷ ಜೋ ಬೈಡನ್ ಆಡಳಿತ ಕಾರ್ಯಪ್ರವೃತ್ತವಾಗಿದೆ.' ಎಂದು ವಿವರಿಸಿದರು.

ಉದ್ಯೋಗಾವಕಾಶ

Walk-in

Tata Group (Aerostructures) Hyderabad is Hiring!!!

REQUIREMENT

Position: Assembly Operator (Fitter)

Qualification: ITI - Fitter + Apprenticeship (NCVT)

Experience: 4 to 8 Years

Description: Hands on Experience in Aerostructure Assembly Process. Good understanding on Drawings, Familiar with Hand Tools and Cutting Tools.

Note: Candidates working in Aerospace industry are preferred.

Work Location: Hyderabad

Interested applicants please share your updated CV to Email Id: hrintern@tasl.aero & WhatsApp No: 8886690509

Note: Mentioning Subject - Tata Aero, Recruitment Drive

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

ಭವಿಷ್ಯ

Astrology

ವಾಹನ

Four Wheelers Selling

Others

7829724990

DH ಪ್ರಜಾವಾಣಿ

BOOK YOUR CLASSIFIEDS ONLINE

5 EASY STEP TO BOOK YOUR CLASSIFIEDS ADS ONLINE

5 Easy steps to book your ads

1 LOG INTO WWW.DHCLASSIFIEDS.COM

2 CHOOSE THE CATEGORY

3 CHOOSE THE AD DATES

4 COMPOSE THE MATTER

5 CONFIRM AND PAY

REAL ESTATE · JOB · NOTICE · NAME CHANGE · ANY OTHER CATEGORY

WWW.DHCLASSIFIEDS.COM

9880856233

9886213331

E-mail: dhclassified@deccanherald.co.in

ಅಕ್ಷಯ ತೃತೀಯಕ್ಕೆ ಕೊಳ್ಳಿರಿ ಟಾಟಾ ಏಸ್ ವ್ಯಾಪಾರವನ್ನು ಅಭಿವೃದ್ಧಿಪಡಿಸಿಕೊಳ್ಳಿ

ACE GOLD BS6

1.99%* ಬಡ್ಡಿದರ

₹15,000/-

Bangalore -7259784441

Bangalore/Mysore 95389 35533

Tumkur/Davanagere/Chitradurga 98950 23373

Mangalore/Shivamogga/Udupi/Hassan/Chikkamagalur/Karwar 96208 63338

Hubli/Haveri/Gadag/Bellary/Raichur - 9620955858

Bagalkot/Bijapur/Gulbarga/Bidar 80952 02223

Belgaum - 91088 64572

ಓದುಗರ ಗಮನಕ್ಕೆ

ಕಪ್ಪುಶಿಲೀಂಧ್ರ: ಸಾಂಕ್ರಾಮಿಕ ರೋಗವಾಗಿ ಪರಿಗಣಿಸಲು ಸೂಚನೆ

ಒಂದನೇ ಪುಟದಿಂದ

ಈ ಸೋಂಕನ್ನು ಸಾಂಕ್ರಾಮಿಕ ರೋಗ ಎಂದು ಪರಿಗಣಿಸಬೇಕು. ತಪಾಸಣೆ, ಪರೀಕ್ಷೆಗೆ ಸಂಬಂಧಿಸಿ ಸರ್ಕಾರ ಮತ್ತು ಖಾಸಗಿಯ ಎಲ್ಲ ಆಸ್ಪತ್ರೆಗಳು ಆಗಿಂದಾಗ್ಗೆ ಆರೋಗ್ಯ ಸಚಿವಾಲಯ ಹಾಗೂ ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿ (ಐಸಿಎಂಆರ್) ಬಿಡುಗಡೆ ಮಾಡುವ ಮಾರ್ಗದರ್ಶಿ ಸೂತ್ರಗಳನ್ನು ಪಾಲಿಸಬೇಕು ಎಂದು ರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳಿಗೆ ಸೂಚಿಸಲಾಗಿದೆ.

ಶಂಕಿತ ಅಥವಾ ದೃಢೀಕೃತ ಎಲ್ಲ ಪ್ರಕರಣಗಳ ಕುರಿತು ಸಮಗ್ರ ರೋಗ ಕಣ್ಗಾವಲು ಕಾರ್ಯಕ್ರಮದ (ಐಡಿಎಸ್‌ಪಿ) ಮೂಲಕ ಆರೋಗ್ಯ ಇಲಾಖೆಗೆ ವರದಿ ಮಾಡಬೇಕು ಎಂದು ಪತ್ರದಲ್ಲಿ ತಿಳಿಸಲಾಗಿದೆ.

ಔಷಧ ಆಮದಿಗೆ ಸಲಹೆ: ಕಪ್ಪು ಶಿಲೀಂಧ್ರ ರೋಗಕ್ಕೆ ಚಿಕಿತ್ಸೆ ನೀಡಲು ಬಳಸುವ 'ಅಂಫೊಟೆರಿಸಿನ್ ಬಿ' ಔಷಧವನ್ನು, ವಿಶ್ವದಲ್ಲಿ ಲಭ್ಯವಿರುವ ಯಾವುದೇ ಸ್ಥಳದಿಂದ ಆಮದು ಮಾಡಿಕೊಳ್ಳಲು ಕ್ರಮವಹಿಸಬೇಕು ಎಂದು ದೆಹಲಿ ಹೈಕೋರ್ಟ್ ಕೇಂದ್ರ ಸರ್ಕಾರಕ್ಕೆ ಸಲಹೆ ಮಾಡಿದೆ.

ನ್ಯಾಯಮೂರ್ತಿ ವಿಪಿನ್ ಸಿಂಘಿ ಮತ್ತು ಜಸ್‌ಮೀತ್ ಸಿಂಗ್ ಅವರಿದ್ದ ಪೀಠ, ಇದೇ ಸಂದರ್ಭದಲ್ಲಿ ಸದ್ಯ ಔಷಧದ ಉತ್ಪಾದನಾ ಸಾಮರ್ಥ್ಯ, ಲೈಸೆನ್ಸ್ ಪಡೆದಿರುವ ಉತ್ಪಾದಕರು, ಉತ್ಪಾದನಾ ಪ್ರಮಾಣ ವೃದ್ಧಿ ಕುರಿತಂತೆ ವಸ್ತುಸ್ಥಿತಿ ವರದಿಯನ್ನು ಸಲ್ಲಿಸಬೇಕು ಎಂದು ಸೂಚಿಸಿತು.

ಸದ್ಯ, ದೆಹಲಿಯಲ್ಲಿ ಕಪ್ಪು ಶಿಲೀಂಧ್ರದ 200 ಪ್ರಕರಣಗಳು ಪತ್ತೆಯಾಗಿವೆ ಎಂದು ಕೋರ್ಟ್‌ಗೆ ಸರ್ಕಾರ ಮಾಹಿತಿ ನೀಡಿತು.

ಲಸಿಕೆ ಟೆಂಡರ್: 24ಕ್ಕೆ ಕಡೆ ದಿನ

ಒಂದನೇ ಪುಟದಿಂದ

'ಟೆಂಡರ್‌ನಲ್ಲಿ ಭಾಗವಹಿಸಿದ ಕಂಪನಿಯಿಂದ (ಉತ್ಪಾದಕ ಅಥವಾ ವಿತರಕ) 2 ಕೋಟಿ ವಯಲ್ಸ್ ಖರೀದಿಸಬೇಕೆಂದೇನೂ ಇಲ್ಲ. ನಿಗದಿಪಡಿಸಿರುವ ಪ್ರಮಾಣಕ್ಕಿಂತ ಕಡಿಮೆ ಖರೀದಿಸುವ ಅವಕಾಶವನ್ನು ಮುಕ್ತವಾಗಿರಿಸಿ ಟೆಂಡರ್ ನಿಯಮ ರೂಪಿಸಲಾಗಿದೆ. ಬಿಡ್ ಸಲ್ಲಿಸಲು ಇದೇ 24 ಕೊನೆಯ ದಿನ. 25ರಂದು ಬೆಳಿಗ್ಗೆ 11.30ಕ್ಕೆ ಬಿಡ್‌ಗಳನ್ನು ತೆರೆಯಲಾಗುವುದು. ಯಾವೆಲ್ಲ ಕಂಪನಿಗಳು ಮತ್ತು ವಿತರಕರು ಭಾಗವಹಿಸಿದ್ದಾರೆಂಬ ಮಾಹಿತಿ ಅಂದು ಗೊತ್ತಾಗಲಿದೆ' ಎಂದು ಮೂಲಗಳು ಹೇಳಿವೆ.

'ಬಿಡ್ ತೆರೆದ ಬಳಿಕ ತಾಂತ್ರಿಕ ಸಮಿತಿ ಅವುಗಳ ಮೌಲ್ಯಮಾಪನ ನಡೆಸಲಿದೆ. 2 ಕೋಟಿ ವೈಯಲ್ಸ್‌ಗಳನ್ನು ಒಂದೇ ಬಾರಿಗೆ ಖರೀದಿಸಬೇಕೇ, ಹಂತ ಹಂತವಾಗಿ ಖರೀದಿಸಬೇಕೇ ಎಂದು ತಜ್ಞರ ಸಮಿತಿ ತೀರ್ಮಾನ ಕೈಕೊಳ್ಳಲಿದೆ. ಈ ಪ್ರಕ್ರಿಯೆ ಇದೇ 26 ಅಥವಾ 27ರಂದು ನಡೆಯಬಹುದು' ಎಂದು ಹೆಸರು ಹೇಳಲು ಬಯಸದ ಕೆಎಸ್‌ಎಂಎಸ್‌ಸಿಎಲ್ ಅಧಿಕಾರಿಯೊಬ್ಬರು ಹೇಳಿದರು.

'ಇಡೀ ದೇಶದಲ್ಲಿ ಲಸಿಕೆ ಉತ್ಪಾದನೆ ಪ್ರಮಾಣ ಕಡಿಮೆ ಇರುವುದರಿಂದ ಸಕಾಲದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಎಲ್ಲ ರಾಜ್ಯಗಳಿಗೆ ಪೂರೈಕೆ ಆಗುತ್ತಿಲ್ಲ. ಹೀಗಾಗಿ, ತೆಲಂಗಾಣ, ಮಹಾರಾಷ್ಟ್ರ ಸೇರಿದಂತೆ ಹಲವು ರಾಜ್ಯಗಳು ಲಸಿಕೆ ಪೂರೈಕೆಗೆ ಈಗಾಗಲೇ ಜಾಗತಿಕ ಟೆಂಡರ್ ಆಹ್ವಾನಿಸಿವೆ' ಎಂದೂ ಅವರು ಹೇಳಿದರು.

ನಿಧನ ವಾರ್ತೆ

ಎಂ.ಜಿ. ವೆಂಕಟೇಶ್

ಬೆಂಗಳೂರು: ರಂಗ ಸಂಘಟಕ, ನಟ ಹಾಗೂ ಬರಹಗಾರ ಎಂ.ಜಿ. ವೆಂಕಟೇಶ್ (69) ಅವರು ಗುರುವಾರ ಮೃತಪಟ್ಟಿದ್ದಾರೆ.



ಅವರಿಗೆ ತಿಂಗಳ ಹಿಂದೆ ಕೊರೊನಾ ಸೋಂಕು ತಗುಲಿತ್ತು. ನಗರದ ಆಸ್ಪತ್ರೆಯೊಂದಕ್ಕೆ ದಾಖಲಾಗಿದ್ದ ಅವರು ಗಂಭೀರವಾಗಿ ಅಸ್ವಸ್ಥರಾಗಿದ್ದರು. ವೆಂಟಿಲೇಟರ್ ಸಂಪರ್ಕ ಒದಗಿಸಿ, ಚಿಕಿತ್ಸೆ ಒದಗಿಸಲಾಗುತ್ತಿತ್ತು. ಚಿಕಿತ್ಸೆಗೆ ಸ್ಪಂದಿಸದೆಯೇ ಗುರುವಾರ ಮಧ್ಯಾಹ್ನ 2 ಗಂಟೆಗೆ ಮೃತಪಟ್ಟಿದ್ದಾರೆ. ಪತ್ನಿ ಹಾಗೂ ಪುತ್ರಿಯನ್ನು ಅವರು ಅಗಲಿದ್ದಾರೆ. ಅವರ ಅಂತ್ಯಕ್ರಿಯೆಯನ್ನು ಶುಕ್ರವಾರ ನಡೆಸಲು ಕುಟುಂಬದ ಸದಸ್ಯರು ನಿರ್ಧರಿಸಿದ್ದಾರೆ.

ಅವರ ಪತ್ನಿ ಹಾಗೂ ಪುತ್ರಿಗೆ ಕೂಡ ಕೊರೊನಾ ಸೋಂಕು ತಗುಲಿತ್ತು. ಆಸ್ಪತ್ರೆಗೆ ದಾಖಲಾಗಿದ್ದ ಅವರು ಚೇತರಿಸಿಕೊಂಡಿದ್ದಾರೆ.

ವೆಂಕಟೇಶ್ ಅವರು ಮುಖ್ಯ ಲೆಕ್ಕಪತ್ರ ಪರಿಶೋಧಕರ (ಸಿಎಜಿ) ಕಚೇರಿಯಲ್ಲಿ ಲೆಕ್ಕ ಪರಿಶೋಧಕರಾಗಿ ನಿವೃತ್ತಿ ಹೊಂದಿದ್ದರು. ಸಮುದಾಯ ಸಂಘಟನೆಯ ರಾಜ್ಯ ಪ್ರಧಾನ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿದ್ದರು. 'ಹಲ್ಲಾ ಬೋಲ್: ಸಫ್ದರ್ ಹಾಶ್ಮಿ ಸಾವು-ಬದುಕು' ಕೃತಿಯನ್ನು ಇಂಗ್ಲಿಷಿನಿಂದ ಕನ್ನಡಕ್ಕೆ ಅನುವಾದಿಸಿದ್ದರು.

ಯೋಗಗುರು ಹೊನ್ನಪ್ಪ ನಾಯ್ಕರ್

ಬೆಂಗಳೂರು: ಯೋಗಾಭ್ಯಾಸವನ್ನು ನಿತ್ಯಜೀವನದ ಒಂದು ಭಾಗವಾಗಿಸಿಕೊಂಡಿದ್ದ ವರನಟ ಡಾ.ರಾಜ್‌ಕುಮಾರ್ ಅವರ ಯೋಗಗುರು ಹಠಯೋಗಿ ಹೊನ್ನಪ್ಪ ನಾಯ್ಕರ್ ಅವರು ಕೋವಿಡ್‌ನಿಂದ ಗುರುವಾರ ನಿಧನರಾಗಿದ್ದಾರೆ.

ಅವರಿಗೆ 90 ವರ್ಷ ವಯಸ್ಸಾಗಿತ್ತು.



ಪೊಲೀಸ್ ಇಲಾಖೆಯಲ್ಲಿ ಕಾರ್ಯನಿರ್ವಹಿಸಿದ್ದ ಅವರು, ರಾಜ್‌ಕುಮಾರ್ ಹಾಗೂ ಅವರ ಕುಟುಂಬದ ಸದಸ್ಯರಿಗೆ ಯೋಗ ಗುರುವಾಗಿದ್ದರು. ರಾಘವೇಂದ್ರ ರಾಜ್‌ಕುಮಾರ್ ಅವರಿಗೆ ಪಾರ್ಶ್ವವಾಯುವಾದ ಸಂದರ್ಭದಲ್ಲಿ ಅವರ ಆರೋಗ್ಯವನ್ನು ಯೋಗಾಭ್ಯಾಸದ ಮುಖಾಂತರವೇ ಸುಧಾರಿಸಿದ್ದರು. ಇದನ್ನು ರಾಘವೇಂದ್ರ ರಾಜ್‌ಕುಮಾರ್ ಅವರೂ ಸ್ಮರಿಸಿದ್ದು, 'ಅಪ್ಪಾಜಿಯ ಯೋಗ ಗುರುಗಳು ಅಗಲಿದ್ದು ಈ ಕ್ಷಣ ಮನಸ್ಸಿಗೆ ತುಂಬಲಾರದಷ್ಟು ದುಃಖವಾಗಿದೆ. ಗುರು ಬ್ರಹ್ಮಃ ಗುರು ವಿಷ್ಣು ಗುರು ದೇವೋ ನಮಃ' ಎಂದು ಟ್ವಿಟರ್‌ನಲ್ಲಿ ಉಲ್ಲೇಖಿಸಿದ್ದಾರೆ.

ಹಲವು ನಟ–ನಟಿಯರು ಸೇರಿದಂತೆ ಗಣ್ಯವ್ಯಕ್ತಿಗಳಿಗೆ ಹೊನ್ನಪ್ಪ ನಾಯ್ಕರ್ ಯೋಗಗುರುಗಳಾಗಿದ್ದರು. ಇವರಿಗೆ ಮೂವರು ಪುತ್ರರಿದ್ದಾರೆ. ಬೆಂಗಳೂರಿನ ಜೆ.ಪಿ ನಗರದಲ್ಲಿ ಅವರು ವಾಸವಿದ್ದರು. ಕನಕಪುರದ ಬಳಿ ಇವರ ಯೋಗಾಶ್ರಮವಿದ್ದು, ಅಂತ್ಯಕ್ರಿಯೆಯನ್ನು ನಾಗದೇವನಹಳ್ಳಿ ಬಳಿ ನೆರವೇರಿಸಲು ಅವರ ಕುಟುಂಬಸ್ಥರು ತೀರ್ಮಾನಿಸಿದ್ದಾರೆ.

18–44: ಮುಂಚೂಣಿ ಕಾರ್ಯಕರ್ತರಿಗೆ ನಾಳೆಯಿಂದ ಲಸಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಲಸಿಕೆಯ ಕೊರತೆ ಕಾರಣದಿಂದ ಸರ್ಕಾರಿ ಆರೋಗ್ಯ ಕೇಂದ್ರಗಳಲ್ಲಿ 18ರಿಂದ 44 ವರ್ಷದ ಫಲಾನುಭವಿಗಳಿಗೆ ಲಸಿಕೆ ವಿತರಣೆ ಸ್ಥಗಿತಗೊಳಿಸಿದ್ದ ಸರ್ಕಾರ, ಶನಿವಾರದಿಂದ (ಮೇ 22) ಗುರುತಿಸಲಾದ ಕೋವಿಡ್ ಮುಂಚೂಣಿ ಕಾರ್ಯಕರ್ತರಿಗೆ ಲಸಿಕೆ ನೀಡಲು ಮುಂದಾಗಿದೆ.

ಈ ಸಂಬಂಧ ರಾಷ್ಟ್ರೀಯ ಆರೋಗ್ಯ ಅಭಿಯಾನದ ನಿರ್ದೇಶಕರು ಜಿಲ್ಲಾಧಿಕಾರಿಗಳು ಹಾಗೂ ಬಿಬಿಎಂಪಿ ಮುಖ್ಯ ಆಯುಕ್ತರಿಗೆ ಸೂಚನೆ ನೀಡಿದ್ದಾರೆ.

ರಾಜ್ಯ ಸರ್ಕಾರವು 2 ಕೋಟಿ ಡೋಸ್ 'ಕೋವಿಶೀಲ್ಡ್' ಲಸಿಕೆ ಖರೀದಿಗೆ ಸೀರಂ ಇನ್‌ಸ್ಟಿಟ್ಯೂಟ್‌ಗೆ ಕಾರ್ಯಾದೇಶ ನೀಡಿತ್ತು. ಆದರೆ, ಸಮರ್ಪಕವಾಗಿ ಪೂರೈಕೆಯಾಗದ ಕಾರಣ 18ರಿಂದ 44 ವರ್ಷದವರಿಗೆ ಲಸಿಕೆ ವಿತರಣೆ ಸ್ಥಗಿತ ಮಾಡಿ, ಲಸಿಕೆಯ ದಾಸ್ತಾನನ್ನು 45 ವರ್ಷ ಮೇಲ್ಪಟ್ಟವರಿಗೆ ಬಳಸಿಕೊಳ್ಳಲು ಸೂಚಿಸಿತ್ತು. ಆದರೆ, ಈಗ ಹಂತ ಹಂತವಾಗಿ ಲಸಿಕೆ ರಾಜ್ಯಕ್ಕೆ ಬರುತ್ತಿರುವ ಕಾರಣ ಸಾರಿಗೆ ಸಿಬ್ಬಂದಿ, ಅಂಚೆ ಇಲಾಖೆ ಸಿಬ್ಬಂದಿ ಒಳಗೊಂಡಂತೆ ಗುರುತಿಸಲಾದ ಮುಂಚೂಣಿ ಕಾರ್ಯಕರ್ತರಿಗೆ ವಿತರಣೆಯನ್ನು ಪುನಃ ಪ್ರಾರಂಭಿಸಲಿದೆ.

'18ರಿಂದ 44 ವರ್ಷದ ಫಲಾನುಭವಿಗಳಿಗೆ ನೀಡಲು ಲಸಿಕೆಯನ್ನು ಸರ್ಕಾರವು ಖರೀದಿಸಿದ್ದು, ರಾಜ್ಯ ಮಟ್ಟದ ಕಾರ್ಯಪಡೆಯಲ್ಲಿ ಗುರುತಿಸಲಾದ ಸಮೂಹಗಳಿಗೆ ಆದ್ಯತೆಯ ಮೇರೆಗೆ ಲಸಿಕೆ ನೀಡಲು ಸೂಚಿಸಲಾಗಿದೆ. ಮುಖ್ಯ ಕಾರ್ಯದರ್ಶಿ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಆದ್ಯತೆ ಗುಂಪುಗಳನ್ನು ಗುರುತಿಸಲಾಗಿದೆ. ಮೊದಲು ಮುಂಚೂಣಿ ಕಾರ್ಯಕರ್ತರಿಗೆ ಲಸಿಕೆ ನೀಡಲಾಗುತ್ತದೆ. ಬಳಿಕ ಆದ್ಯತೆ ಗುಂಪುಗಳಿಗೆ ಒದಗಿಸಲಾಗುತ್ತದೆ' ಎಂದು ಅಭಿಯಾನದ ನಿರ್ದೇಶಕರು ಸುತ್ತೋಲೆಯಲ್ಲಿ ತಿಳಿಸಿದ್ದಾರೆ.

ಅಂಗವಿಕಲರು, ಬೀದಿ ಬದಿ ವ್ಯಾಪಾರಿಗಳು, ಸಾರಿಗೆ ಸಿಬ್ಬಂದಿ, ಆಟೋ ರಿಕ್ಷಾ ಮತ್ತು ಕ್ಯಾಬ್ ಚಾಲಕರು, ಔಷಧ ತಯಾರಿಸುವ ಕಂಪನಿ ಸಿಬ್ಬಂದಿ, ಚಿತಾಗಾರ–ಸ್ಮಶಾನದಲ್ಲಿ ಕೆಲಸ ಮಾಡುವ ಸಿಬ್ಬಂದಿ, ನ್ಯಾಯಾಂಗ ಅಧಿಕಾರಿಗಳು, ವಿದ್ಯುತ್ ಮತ್ತು ನೀರು ಸರಬರಾಜು ಮಾಡುವವರು, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಕೆಲಸಗಾರರು ಸೇರಿದಂತೆ ಒಟ್ಟು 22 ವಿಭಾಗದಲ್ಲಿ ಮುಂಚೂಣಿ ಕಾರ್ಯಕರ್ತರನ್ನು ಗುರುತಿಸಲಾಗಿದೆ.

ಆದ್ಯತೆ ಗುಂಪಿನಲ್ಲಿ ಕಟ್ಟಡ ಕಾರ್ಮಿಕರು, ವಿಮಾನಯಾನ ಸಂಸ್ಥೆಗಳ ಸಿಬ್ಬಂದಿ, ರೈಲ್ವೆ ಸಿಬ್ಬಂದಿ, ಕೆ.ಎಂ.ಎಫ್ ಸಿಬ್ಬಂದಿ, ಬ್ಯಾಂಕ್ ಸಿಬ್ಬಂದಿ, ಹೋಟೆಲ್ ಮತ್ತು ಆತಿಥ್ಯ ಸೇವಾದಾರರು ಪೆಟ್ರೋಲ್ ಬಂಕ್ ಕೆಲಸಗಾರರು ಸೇರಿದಂತೆ 18 ವಿಭಾಗಗಳಲ್ಲಿ ವಿವಿಧ ವಲಯಗಳಲ್ಲಿ ಕೆಲಸ ಮಾಡುತ್ತಿರುವವರನ್ನು ಗುರುತಿಸಲಾಗಿದೆ.

ಬ್ರಾಹ್ಮಣ ಮಹಿಳೆಯ ಅಂತ್ಯಸಂಸ್ಕಾರ ಮಾಡಿದ ಸಂಸದ ನಾಸೀರ್ ಹುಸೇನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್‌ನಿಂದ ನಿಧನರಾದ ಬ್ರಾಹ್ಮಣ ಮಹಿಳೆಯೊಬ್ಬರ ಅಂತಿಮ ವಿಧಿವಿಧಾನ ನಡೆಸಲು ಕುಟುಂಬದವರು ಯಾರೂ ಇಲ್ಲವೆಂದು ತಿಳಿದಾಗ, ರಾಜ್ಯಸಭೆಯ ಕಾಂಗ್ರೆಸ್ ಸದಸ್ಯ ಸಯ್ಯದ್ ನಾಸೀರ್ ಹುಸೇನ್ ತಾವೇ ಮುಂದೆ ನಿಂತು ಆ ಕೆಲಸ ಮಾಡಿದ್ದಾರೆ.

ಬೆಂಗಳೂರಿನಲ್ಲಿ ನೆಲೆಸಿದ್ದ ತಮಿಳುನಾಡಿನ ಪ್ರೊ. ಸಾವಿತ್ರಿ ವಿಶ್ವನಾಥನ್ ಅವರ ಅಂತ್ಯಕ್ರಿಯೆಯನ್ನು ಹಿಂದೂ ಸಂಪ್ರದಾಯದ ಪ್ರಕಾರ ನಡೆಸಿದ ಸಯ್ಯದ್ ನಾಸೀರ್ ಹುಸೇನ್, ಬಳಿಕ ಕಾವೇರಿ ನದಿಯಲ್ಲಿ ಅಸ್ಥಿ ವಿಸರ್ಜನೆಯ ವಿಧಿವಿಧಾನಗಳನ್ನೂ ಮಾಡಿದ್ದಾರೆ. ಅವರ ಈ ಕೆಲಸಕ್ಕೆ ಸಾಮಾಜಿಕ ಜಾಲತಾಣದಲ್ಲಿ ವ್ಯಾಪಕ ಮೆಚ್ಚುಗೆ ವ್ಯಕ್ತವಾಗಿದೆ.

ಸಯ್ಯದ್ ನಾಸೀರ್ ಹುಸೇನ್ ಅವರು ಪ್ರೊ. ಸಾವಿತ್ರಿ ವಿಶ್ವನಾಥನ್ ಅವರ ಅಸ್ಥಿ ವಿಸರ್ಜನೆ ನಡೆಸಿದರು.

ಈ ಬಗ್ಗೆ ಮಾತನಾಡಿದ ಅವರು, 'ನಾನು ದೆಹಲಿ ವಿಶ್ವವಿದ್ಯಾಲಯದಲ್ಲಿದ್ದಾಗಲೇ ಪ್ರೊ. ಸಾವಿತ್ರಿ ವಿಶ್ವನಾಥನ್ ಪರಿಚಿತರು. ಅವರ ಕುಟುಂಬ ಮತ್ತು ನಮ್ಮ ಕುಟುಂಬ ಅನ್ಯೋನ್ಯವಾಗಿತ್ತು. ಈಗಲೂ ಅಷ್ಟೆ. ತಮಿಳ್ ಬ್ರಾಹ್ಮಿಣ್ ಕುಟುಂಬದಿಂದ ಬಂದ ಅವರು ದೆಹಲಿ ವಿಶ್ವವಿದ್ಯಾಲಯದ ಜಪಾನೀಸ್ ಮತ್ತು ಚೈನೀಸ್ ಅಧ್ಯಯನ ವಿಭಾಗದಲ್ಲಿ ಪ್ರಾಧ್ಯಾಪಕರಾಗಿದ್ದರು. ನಿವೃತ್ತಿಯ ಬಳಿಕ ತಂಗಿ ಮಹಾಲಕ್ಷ್ಮಿ ಅತ್ರೇಯಿ ಜೊತೆ 90ರ ದಶಕದ ಮಧ್ಯಭಾಗದಲ್ಲಿ ಬೆಂಗಳೂರಿಗೆ ಬಂದು ನೆಲೆಸಿದ್ದರು' ಎಂದರು.

'ಜಪಾನ್– ಇಂಡಿಯಾದ ಪ್ರಮುಖರ ಗುಂಪಿನ ಸದಸ್ಯೆಯಾಗಿದ್ದ (2000–2002) ಪ್ರೊ. ಸಾವಿತ್ರಿ ಅವರು, ಜಪಾನ್ ಜೊತೆಗಿನ ದ್ವಿಪಕ್ಷೀಯ ಮಾತುಕತೆಗಳ ಸಂದರ್ಭದಲ್ಲಿ ಪ್ರಧಾನಿ ಮತ್ತು ವಿದೇಶಾಂಗ ಸಚಿವರ ಜೊತೆಗೂ ಭಾಗವಹಿಸಿದ್ದಾರೆ. ಹಲವು ಪ್ರತಿಷ್ಠಿತ ಪ್ರಶಸ್ತಿಗಳಿಗೂ ಅವರು ಭಾಜನರಾಗಿದ್ದರು'

'ಪ್ರೊ. ಸಾವಿತ್ರಿ ವಿಶ್ವನಾಥನ್ ಮತ್ತು ಅವರ ತಂಗಿಗೆ ಕೋವಿಡ್ ದೃಢಪಟ್ಟ ಬಳಿಕ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ, ಚಿಕಿತ್ಸೆ ಫಲಿಸದೆ ಮೇ 5ರಂದು ಸಾವಿತ್ರಿ ನಿಧನರಾದರು. ಆಸ್ಪತ್ರೆಯಲ್ಲಿ ದಾಖಲಾದ ದಿನಗಳಿಂದ ಅವರ ಆರೋಗ್ಯವನ್ನು ದಿನಾ ಗಮನಿಸುತ್ತಿದ್ದೆ. ನಿಧನರಾದ ಸುದ್ದಿ ಗೊತ್ತಾದ ತಕ್ಷಣ ಬಿಬಿಎಂಪಿ ಮೂಲಕ ಅವರ ಅಂತ್ಯಸಂಸ್ಕಾರದ ವಿಧಿ ವಿಧಾನಗಳನ್ನು ನಾನೇ ಮಾಡಿದೆ. ತಮಿಳುನಾಡು ಮತ್ತು ಹೊರದೇಶಗಳಲ್ಲಿ (ಸಿಂಗಪುರ, ಲಂಡನ್) ಅವರ ಸಂಬಂಧಿಕರಿದ್ದಾರೆ. ಆದರೆ, ಕೋವಿಡ್ ಕಾರಣದಿಂದ ಅವರಿಗೆ ಬರಲು ಸಾಧ್ಯವಾಗಲಿಲ್ಲ. ಹೀಗಾಗಿ, 11ನೇ ದಿನ ಮೃತರ ಅಸ್ಥಿ ವಿಸರ್ಜನೆಯ ವಿಧಿವಿಧಾನಗಳನ್ನೂ ನಾನೇ ನೆರವೇರಿಸಿದೆ' ಎಂದು ಭಾವುಕರಾದರು.

'ಇದೇನೂ ಹೊಸತಲ್ಲ. ಅದೆಷ್ಟೋ ಹಿಂದೂ ಮೃತದೇಹಗಳ ಅಂತಿಮ ಕ್ರಿಯೆಯನ್ನು ಮುಸ್ಲಿಮರು, ಮುಸ್ಲಿಮರ ಅಂತಿಮ ವಿಧಿವಿಧಾನಗಳನ್ನು ಹಿಂದೂಗಳು, ಮೃತರ ಧರ್ಮ, ಸಂಪ್ರದಾಯಗಳಿಗೆ ಅನುಗುಣವಾಗಿ ಈ ಹಿಂದೆಯೂ ಮಾಡಿದ್ದಾರೆ. ಅಂಥದ್ದೇ ಮಾನವೀಯ ಕೆಲಸವನ್ನು ನಾನೂ ಮಾಡಿದ್ದೇನೆ. ಮಾನವೀಯ ಧರ್ಮವಿದು' ಎಂದು ಸಯ್ಯದ್ ನಾಸೀರ್ ಹುಸೇನ್ ಹೇಳಿದರು.

ಶ್ರದ್ಧಾಂಜಲಿ ಮತ್ತು ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:

ಸಂತೋಷ್ ಕುಮಾರ್ : 9880856233

ಜೆರ್ರಿ : 9731810277 | ರವಿಚಂದ್ರ : 9901641752

ವಿಶಾಲ್ : 9845114560 | ತನ್ವೀರ್ : 9886213331

ಇ–ಮೇಲ್ : dhclassifieds@deccanherald.co.in

ಶಾಸಕ ಪಿ.ರಾಜೀವಗೆ ಮಾತೃ ವಿಯೋಗ

ಹಾರೂಗೇರಿ (ಬೆಳಗಾವಿ ಜಿಲ್ಲೆ): ಕುಡಚಿ ಕ್ಷೇತ್ರದ ಬಿಜೆಪಿ ಶಾಸಕರೂ ಆಗಿರುವ ರಾಜ್ಯ ತಾಂಡಾ ಅಭಿವೃದ್ಧಿ ನಿಗಮದ ಅಧ್ಯಕ್ಷ ಪಿ.ರಾಜೀವ ಅವರ ತಾಯಿ ಶಾಂತಮ್ಮ ಪಾಂಡಪ್ಪ ಲಮಾಣಿ (70) ಕೋವಿಡ್‌ನಿಂದಾಗಿ ಬೆಳಗಾವಿಯ ಆಸ್ಪತ್ರೆಯಲ್ಲಿ ಗುರುವಾರ ಬೆಳಿಗ್ಗೆ ನಿಧನರಾದರು.

ಅವರಿಗೆ ಪತಿ, ಪುತ್ರ ಹಾಗೂ ಪುತ್ರಿ ಇದ್ದಾರೆ.

ಈ ಬಗ್ಗೆ ರಾಜೀವ ತಮ್ಮ ಫೇಸ್‌ಬುಕ್ ಖಾತೆಯಲ್ಲಿ ಭಾವನಾತ್ಮಕವಾಗಿ ಬರೆದುಕೊಂಡಿದ್ದಾರೆ.

'ಜನ್ಮ ನೀಡಿ, ಎದೆ ಹಾಲುಣಿಸಿ, ಕೈತುತ್ತು ನೀಡಿ, ಸೆರಗಿನಿಂದ ಮೈ ಒರೆಸಿ, ಅಕ್ಕರೆಯಿಂದ ಬದುಕಿನ ಮೌಲ್ಯಗಳನ್ನು ತಿಳಿಸಿ–ಬೆಳೆಸಿದ ನನ್ನವ್ವ ಕೋವಿಡ್‌ಗೆ ಬಲಿಯಾಗಿ ನನ್ನನ್ನು ಅನಾಥವಾಗಿಸಿದಳು. ಆಕೆಯ ಅಗಲಿಕೆಯಿಂದ ನನ್ನ ಹೃದಯ ನಲುಗಿದೆ.

ನಾನು, ನನ್ನ ಪತ್ನಿ, ಇಬ್ಬರು ಮಕ್ಕಳು, ಇಬ್ಬರು ಆಪ್ತಸಹಾಯಕರು ಕೋವಿಡ್‌ನಿಂದ ಚೇತರಿಸಿಕೊಳ್ಳುವಷ್ಟರಲ್ಲಿ ತಾಯಿ ಸೋಂಕಿಗೆ ಒಳಗಾದರು. ಅವರ ಆರೈಕೆಯಲ್ಲಿ ನಾನೇ ತೊಡಗಿದ್ದೆ.

ಶಾಂತಮ್ಮ ಲಮಾಣಿ

ನನ್ನಕ್ಕ ಹಾಗೂ ಅಕ್ಕನ ಮಗ ಮನೆಯಲ್ಲೇ ಚಿಕಿತ್ಸೆ ಪಡೆಯುತ್ತಿರುವುದರಿಂದ ಅವರಾರಿಗೂ ತಿಳಿಸದೆ ಮಾರ್ಗಸೂಚಿ ಅನ್ವಯ ಅಂತ್ಯಸಂಸ್ಕಾರ ನೆರವೇರಿಸಿದ್ದೇನೆ. ನನ್ನ ಮನೆಯ ವಾತಾವರಣ ಸದ್ಯಕ್ಕೆ ಹೆಚ್ಚು ಸೋಂಕುಪೀಡಿತ ಆಗಿರುವುದರಿಂದ ಸಾಂತ್ವನ ಹೇಳುವುದಕ್ಕಾಗಿ ಯಾರೂ ಬರಬಾರದೆಂದು ವಿನಂತಿಸುತ್ತೇನೆ. ಆದಷ್ಟು ಬೇಗ ನನ್ನ ಸಾಮಾಜಿಕ ಕರ್ತವ್ಯಕ್ಕೆ ಹಾಜರಾಗುತ್ತೇನೆ' ಎಂದು ತಿಳಿಸಿದ್ದಾರೆ.

ತೌತೆ ಚಂಡಮಾರುತದ ಮುನ್ನೆಚ್ಚರಿಕೆಯ ಕಡೆಗಣನೆ • ಸಾವಿನ ಸಂಖ್ಯೆ 49ಕ್ಕೆ ಏರಿಕೆ: ಮುಂಬೈ ಕರಾವಳಿಯಲ್ಲಿ ಮುಂದುವರಿದ ಶೋಧ

ಬಾರ್ಜ್ ದುರಂತ: 37 ಮಂದಿಯ ಸುಳಿವಿಲ್ಲ

ನವದೆಹಲಿ (ಪಿಟಿಐ): ತೌತೆ ಚಂಡಮಾರುತದ ಪ್ರಭಾವಕ್ಕೆ ಸಿಲುಕಿ ಅರಬ್ಬಿ ಸಮುದ್ರದಲ್ಲಿ ಬಾರ್ಜ್ ಮುಳುಗಡೆಯಾಗಿ ಮೃತರಾದವರ ಸಂಖ್ಯೆ 49ಕ್ಕೆ ಏರಿಕೆಯಾಗಿದೆ. ಇನ್ನೂ 37 ಜನರ ಸುಳಿವು ಸಿಕ್ಕಿಲ್ಲ ಎಂದು ಸರ್ಕಾರದ ಮೂಲಗಳು ತಿಳಿಸಿವೆ.

ಚಂಡಮಾರುತ ಅಪ್ಪಳಿಸಿದಾಗ ಪಶ್ಚಿಮ ಕರಾವಳಿಯ 342 ತೈಲ ಮತ್ತು ಅನಿಲ ಘಟಕಗಳಲ್ಲಿ ಕರ್ತವ್ಯದಲ್ಲಿದ್ದ 6,961 ಜನರು ಸುರಕ್ಷಿತವಾಗಿದ್ದಾರೆ. ಆದರೆ 99 ತೇಲುವ ಘಟಕಗಳ ಪೈಕಿ ಐದು ಬಾರ್ಜ್‌ಗಳಲ್ಲಿದ್ದ 714 ಜನರು ಅಪಾಯಕ್ಕೆ ಸಿಲುಕಿದ್ದರು. ಈ ಪೈಕಿ ಕನಿಷ್ಠ 49 ಮಂದಿ ಸಾವನ್ನಪ್ಪಿ, 37 ಮಂದಿ ನಾಪತ್ತೆಯಾಗಿದ್ದಾರೆ.

ಹವಾಮಾನ ಮುನ್ಸೂಚನೆಯ ಆಧಾರದ ಮೇಲೆ ಒಎನ್‌ಜಿಸಿ ತನ್ನ ತುರ್ತು ವ್ಯವಸ್ಥೆ ಸಕ್ರಿಯಗೊಳಿಸಿತ್ತು. ಸುರಕ್ಷಿತ ವಿಧಾನ ಪಾಲಿಸುವುದು ಅಥವಾ ಸುರಕ್ಷಿತ ಸ್ಥಳಗಳಿಗೆ ಹಿಂತಿರುಗುವುದು ಸೇರಿದಂತೆ ಸೂಕ್ತವಾದ ಕ್ರಮಗಳನ್ನು ತೆಗೆದುಕೊಳ್ಳುವಂತೆ ಆಯಾ ಘಟಕಗಳಿಗೆ ಸೂಚನೆ ರವಾನಿಸಿತ್ತು. ಹೀಗಾಗಿ 7,675 ಸಿಬ್ಬಂದಿ ಪೈಕಿ 6,961 ಜನರು ಸುರಕ್ಷಿತವಾಗಿದ್ದರು.

ಆದರೆ 714 ಸಿಬ್ಬಂದಿಯನ್ನು ಹೊತ್ತೊಯ್ಯುತ್ತಿದ್ದ ಐದು ಹಡಗುಗಳು ಪ್ರತಿಕೂಲ ಸಂದರ್ಭಗಳನ್ನು ಎದುರಿಸಬೇಕಾಯಿತು. ಖಾಸಗಿ ಗುತ್ತಿಗೆದಾರ ಕಂಪನಿ ಅಫ್ಕಾನ್ಸ್‌ಗಾಗಿ ಕೆಲಸ ಮಾಡುತ್ತಿದ್ದ ಮೂರು ದೋಣಿಗಳು, ಸಾಗರ್ ಭೂಷಣ್ ಹೆಸರಿನ ಒಂದು ಡ್ರಿಲ್‌ಶಿಪ್ ಮತ್ತು ಒಂದು ಬೋಟ್ ಇವುಗಳಲ್ಲಿ ಸೇರಿವೆ.

ಪ್ಲಾಟ್‌ಫಾರ್ಮ್ ಬಳಿ ಇರಲು ಪಿ -305 ಬಾರ್ಜ್ ನಿರ್ಧರಿಸಿತ್ತು. ಆದರೆ ಅದರ ಲಂಗರುಗಳು ಕಿತ್ತುಬಂದವು. ಇದರಲ್ಲಿದ್ದ 261 ಜನರ ಪೈಕಿ 186 ಮಂದಿಯನ್ನು ರಕ್ಷಿಸಲಾಯಿತು. ಉಳಿದ 26 ಜನರಿಗಾಗಿ ಶೋಧ ಮುಂದುವರಿದಿದೆ. ಉಳಿದ ಎರಡು ಬಾರ್ಜ್‌ಗಳಲ್ಲಿದ್ದ 440 ಸಿಬ್ಬಂದಿಯನ್ನು ಸುರಕ್ಷಿತವಾಗಿ ತೀರಕ್ಕೆ ಕರೆತರಲಾಯಿತು. 13 ಜನರನ್ನು ಹೊತ್ತೊಯ್ಯುತ್ತಿದ್ದ ಆ್ಯಂಕರ್ ನಿರ್ವಹಣೆಯ ಬೋಟ್ ವರಪ್ರದಾದಿಂದ ಇಬ್ಬರನ್ನು ರಕ್ಷಿಸಲಾಗಿದೆ. ಉಳಿದ 11 ಮಂದಿಗಾಗಿ ಹುಡುಕಾಟ ನಡೆಯುತ್ತಿದೆ.

ಮುಂಬೈ ಕರಾವಳಿಯಲ್ಲಿ ಸಿಲುಕಿದ್ದ ಜಿಎಎಲ್ ಕನ್‌ಸ್ಟ್ರಕ್ಟರ್ ಬಾರ್ಜ್‌ನಲ್ಲಿದ್ದ 137 ಜನರನ್ನು ರಕ್ಷಿಸಿ ತೀರಕ್ಕೆ ಕರೆತರಲಾಯಿತು —ಪಿಟಿಐ ಚಿತ್ರ

ಎಚ್ಚರಿಕೆ ನಿರ್ಲಕ್ಷ್ಯ, ತನಿಖೆಗೆ ಸಮಿತಿ

ತೌತೆ ಚಂಡಮಾರುತದ ಬಗ್ಗೆ ಮೇ 11ರಂದು ನೀಡಲಾಗಿದ್ದ ಎಚ್ಚರಿಕೆಯನ್ನು, ಒಎನ್‌ಜಿಸಿಯ ಹೀರಾ ಪ್ಲಾಟ್‌ಫಾರಂ ಬಳಿಯಲ್ಲಿದ್ದ ಪಪಾ-305 ಬಾರ್ಜ್‌ನ ಕ್ಯಾಪ್ಟನ್ ಕಡೆಗಣಿಸಿದ್ದರು. ಇದರಿಂದಲೇ ಚಂಡಮಾರುತಕ್ಕೆ ಸಿಲುಕಿ, ಬಾರ್ಜ್‌ಗೆ ಹಾನಿಯಾಯಿತು ಎಂದು ತಜ್ಞರು ಹೇಳಿದ್ದಾರೆ.

'ಮೇ 11ರಂದೇ ಚಂಡಮಾರುತದ ಎಚ್ಚರಿಕೆ ನೀಡಲಾಗಿತ್ತು. ಮೇ 17ರಂದು ಹೀರಾ ಪ್ಲಾಟ್‌ಫಾರಂ ಅನ್ನು ಹಾದುಹೋಗಲಿದೆ ಎಂದು ಎಚ್ಚರಿಕೆಯಲ್ಲಿ ಸೂಚನೆ ನೀಡಲಾಗಿತ್ತು. ಎಚ್ಚರಿಕೆ ನೀಡಿದ ದಿನದಿಂದ, ಚಂಡಮಾರುತ ಹಾದುಹೋಗುವ ದಿನದ ಮಧ್ಯೆ ಆರು ದಿನಗಳ ಸಮಯಾವಕಾಶವಿತ್ತು. ಈ ಅವಧಿಯಲ್ಲಿ ಬಾರ್ಜ್ ಅನ್ನು ಅಲ್ಲಿಂದ ತೆರವು ಮಾಡಬಹುದಿತ್ತು. ಅದರ ಸಿಬ್ಬಂದಿಯನ್ನೂ ಅಲ್ಲಿಂದ ತೆರವು ಮಾಡಬಹುದಿತ್ತು. ಆದರೆ ಎಚ್ಚರಿಕೆಯನ್ನು ಕಡೆಗಣಿಸಲಾಗಿತ್ತು' ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

'ಹವಾಮಾನ ಇಲಾಖೆ ನೀಡಿದ್ದ ಎಚ್ಚರಿಕೆಯನ್ನು ಮಹಾರಾಷ್ಟ್ರ ಸರ್ಕಾರ ಗಂಭೀರವಾಗಿ ಪರಿಗಣಿಸಿತ್ತು. ಹೀಗಾಗಿ ಕರಾವಳಿ ಪ್ರದೇಶದಿಂದ 13,000ಕ್ಕೂ ಹೆಚ್ಚು ಜನರನ್ನು ತೆರವು ಮಾಡಿತ್ತು. ಆದರೆ ಪಪಾ-305 ಕ್ಯಾಪ್ಟನ್ ಆ ಎಚ್ಚರಿಕೆಯನ್ನು ಕಡೆಗಣಿಸಿದ್ದರು' ಎಂದು ತಜ್ಞರು ಹೇಳಿದ್ದಾರೆ.

'ಒಂದು ವಾರ ಮೊದಲೇ ಎಚ್ಚರಿಕೆ ದೊರೆತಿತ್ತು. ಈ ಪ್ರದೇಶದಲ್ಲಿ ಇದ್ದ ಹಲವು ಹಡಗುಗಳು ಇಲ್ಲಿಂದ ತೆರಳಿದ್ದವು. ನಮ್ಮ ಬಾರ್ಜ್‌ನ ಕ್ಯಾಪ್ಟನ್‌ಗೂ ಇದನ್ನೇ ನಾವು ಹೇಳಿದ್ದೆವು. ಚಂಡಮಾರುತದ ವೇಳೆ ಪ್ರತಿಗಂಟೆಗೆ 40 ಕಿ.ಮೀ.ಗಿಂತಲೂ ಹೆಚ್ಚಿನ ವೇಗದಲ್ಲಿ ಗಾಳಿ ಬೀಸುವುದಿಲ್ಲ ಎಂದು ಅವರು ಕಡೆಗಣಿಸಿದರು. ಆದರೆ, ಚಂಡಮಾರುತ ಬಂದಾಗ ಪ್ರತಿಗಂಟೆಗೆ 100 ಕಿ.ಮೀ.ಗಿಂತಲೂ ಹೆಚ್ಚು ವೇಗದಲ್ಲಿ ಗಾಳಿ ಬೀಸುತ್ತಿತ್ತು. ನಮ್ಮ ಬಾರ್ಜ್‌ನ 5 ಲಂಗರುಗಳು ತುಂಡಾದವು' ಎಂದು ಬಾರ್ಜ್‌ನ ಮುಖ್ಯ ಎಂಜಿನಿಯರ್ ರೆಹಮಾನ್ ಶೇಕ್ ಹೇಳಿದ್ದಾರೆ ಎಂದು ಪತ್ರಿಕೆಗಳು ವರದಿ ಮಾಡಿದ್ದವು.

ಈ ಅವಘಡದ ಬಗ್ಗೆ ತನಿಖೆ ನಡೆಸಲು ಉನ್ನತಮಟ್ಟದ ಸಮಿತಿ ರಚಿಸಲಾಗುವುದು ಎಂದು ಇಂಧನ ಸಚಿವಾಲಯ ಹೇಳಿದೆ.

ಸಚಿವ ಧರ್ಮೇಂದ್ರ ಪ್ರಧಾನ್ ರಾಜೀನಾಮೆಗೆ ಒತ್ತಾಯ

ಬಾರ್ಜ್ ದುರಂತದ ಹೊಣೆ ಹೊತ್ತು ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಖಾತೆಯ ಸಚಿವ ಧರ್ಮೇಂದ್ರ ಪ್ರಧಾನ್ ಅವರು ರಾಜೀನಾಮೆ ನೀಡಬೇಕು. ಸರ್ಕಾರಿ ಸ್ವಾಮ್ಯದ ತೈಲ ಶೋಧ ಕಂಪನಿ ಒಎನ್‌ಜಿಸಿಯ ಮುಖ್ಯಸ್ಥರ ಮೇಲೆಯೂ ಕ್ರಮ ಕೈಗೊಳ್ಳಬೇಕು ಎಂದು ಮಹಾರಾಷ್ಟ್ರದ ಆಡಳಿತಾರೂಢ ಮಹಾ ವಿಕಾಸ ಅಘಾಡಿ (ಎಂಎವಿ) ಒತ್ತಾಯಿಸಿದೆ.

ಹವಾಮಾನ ಇಲಾಖೆ ನೀಡಿದ್ದ ಮುನ್ನೆಚ್ಚರಿಕೆಯನ್ನು ಒಎನ್‌ಜಿಸಿ ನಿರ್ಲಕ್ಷಿಸಿದೆ ಎಂದು ಶಿವಸೇನಾ, ಎನ್‌ಸಿಪಿ ಮತ್ತು ಕಾಂಗ್ರೆಸ್ ಮುಖಂಡರು ಹೇಳಿದ್ದಾರೆ.

'ಮಹಾರಾಷ್ಟ್ರದಲ್ಲಿ ಇಂತಹ ದುರಂತ ನಡೆದಿದ್ದರೆ ರಾಜೀನಾಮೆ ನೀಡುವಂತೆ ಬಿಜೆಪಿ ಆಗ್ರಹಿಸುತ್ತಿತ್ತು. ಧರ್ಮೇಂದ್ರ ಪ್ರಧಾನ್ ನೇತೃತ್ವದ ಪೆಟ್ರೋಲಿಯಂ ಸಚಿವಾಲಯದ ಅಧೀನದಲ್ಲಿ ಒಎನ್‌ಜಿಸಿ ಇದೆ. ಹಾಗಾಗಿ, ಅವರ ರಾಜೀನಾಮೆಯನ್ನು ಬಿಜೆಪಿ ಏಕೆ ಕೇಳಬಾರದು? ಭಾರಿ ಸಂಖ್ಯೆಯಲ್ಲಿ ಜನರ ಪ್ರಾಣ ಹಾನಿಗೆ ಯಾರು ಹೊಣೆ? ಪರಿಹಾರ ಮತ್ತು ಇತರ ನೆರವನ್ನು ನೀಡಿ, ಪರಸ್ಪರ ದೋಷಾರೋಪಣೆಯಿಂದ ಪ್ರಯೋಜನ ಇಲ್ಲ' ಎಂದು ಶಿವಸೇನಾ ವಕ್ತಾರ ಅರವಿಂದ ಸಾವಂತ್ ಹೇಳಿದ್ದಾರೆ.

'ಇದು ಮಾನವ ನಿರ್ಮಿತ ದುರಂತ ಎಂಬುದು ಅತ್ಯಂತ ಸ್ಪಷ್ಟ. ಧರ್ಮೇಂದ್ರ ಪ್ರಧಾನ್ ಅವರೇ ಇದರ ಹೊಣೆ ಹೊರಬೇಕು. ಕಾರ್ಮಿಕರ ಜೀವವನ್ನು ಅಪಾಯಕ್ಕೆ ಒಡ್ಡಿರುವುದರ ಹೊಣೆ ಇರುವ ಎಲ್ಲರ ವಿರುದ್ಧವೂ ಕ್ರಮ ಕೈಗೊಳ್ಳಬೇಕು' ಎಂದು ಮಹಾರಾಷ್ಟ್ರ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಸಚಿನ್ ಸಾವಂತ್ ಹೇಳಿದ್ದಾರೆ.

ಗುಜರಾತ್: ಸಾವಿನ ಸಂಖ್ಯೆ 53ಕ್ಕೆ ಏರಿಕೆ

ತೌತೆ ಚಂಡಮಾರುತದ ಅಬ್ಬರಕ್ಕೆ ಗುರುವಾರದ ಹೊತ್ತಿಗೆ ಗುಜರಾತ್‌ನ ವಿವಿಧ ಭಾಗಗಳಲ್ಲಿ ಸುಮಾರು 53 ಮಂದಿ ಜೀವ ಕಳೆದುಕೊಂಡಿದ್ದಾರೆ. ಗೋಡೆ ಕುಸಿದು ಹೆಚ್ಚಿನ ಸಾವು ನೋವುಗಳು ಸಂಭವಿಸಿವೆ. ಚಂಡಮಾರುತವು ಗುಜರಾತ್ ಕರಾವಳಿಯನ್ನು ಸೋಮವಾರ ಪ್ರವೇಶಿಸಿದ ನಂತರದ 28 ತಾಸು ಭಾರಿ ಹಾನಿಗೆ ಕಾರಣವಾಗಿತ್ತು.

'ಬೇರೆ ರಾಜ್ಯಗಳಿಗೂ ಪರಿಹಾರ ಕೊಡಿ'

ಮುಂಬೈ (ಪಿಟಿಐ): ತೌತೆ ಚಂಡಮಾರುತದಿಂದ ಮಹಾರಾಷ್ಟ್ರ, ಗೋವಾ ಸೇರಿ ಆರು ರಾಜ್ಯಗಳಲ್ಲಿ ಹಾನಿ ಆಗಿದೆ. ಆದರೆ, ಕೇಂದ್ರ ಸರ್ಕಾರವು ಗುಜರಾತ್‌ಗೆ ಮಾತ್ರ ಹಣಕಾಸಿನ ಪರಿಹಾರ ಘೋಷಿಸಿದೆ ಎಂದು ಎನ್‌ಸಿಪಿ ಗುರುವಾರ ಹೇಳಿದೆ.

ಮಹಾರಾಷ್ಟ್ರ ಮತ್ತು ಗೋವಾ ರಾಜ್ಯಗಳಿಗೂ ಕೇಂದ್ರ ಸರ್ಕಾರವು ಪರಿಹಾರ ಪ್ರಕಟಿಸಲಿದೆ ಎಂಬ ವಿಶ್ವಾಸವನ್ನು ಶಿವಸೇನಾ ವ್ಯಕ್ತಪಡಿಸಿದೆ.

'ಕಳೆದ ವರ್ಷ ನಿಸರ್ಗ ಚಂಡಮಾರುತ ಅಪ್ಪಳಿಸಿದ್ದಾಗ ಕೊಂಕಣ ಪ್ರದೇಶದಲ್ಲಿ ಭಾರಿ ಹಾನಿ ಆಗಿತ್ತು. ಆದರೆ, ಕೇಂದ್ರದ ಪರಿಹಾರ ಅತ್ಯಲ್ಪವಾಗಿತ್ತು. ಈಗ 'ತೌತೆ'ಯಿಂದ ಆರು ರಾಜ್ಯಗಳಿಗೆ ಹಾನಿಯಾಗಿದ್ದರೂ ಗುಜರಾತ್‌ಗೆ ಮಾತ್ರ ಪರಿಹಾರ ಘೋಷಣೆ ಆಗಿದೆ' ಎಂದು ಮಹಾರಾಷ್ಟ್ರದ ಸಚಿವ ಜಯಂತ ಪಾಟೀಲ್ ಟ್ವೀಟ್ ಮಾಡಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರು ಗುಜರಾತ್‌ನಲ್ಲಿ ಮಾತ್ರ ವೈಮಾನಿಕ ಸಮೀಕ್ಷೆ ನಡೆಸಿರುವುದನ್ನು ಮಹಾರಾಷ್ಟ್ರದ ಆಡಳಿತಾರೂಢ ಮಹಾ ವಿಕಾಸ ಅಘಾಡಿಯ ಅಂಗ ಪಕ್ಷಗಳಾದ ಶಿವಸೇನಾ, ಎನ್‌ಸಿಪಿ ಮತ್ತು ಕಾಂಗ್ರೆಸ್ ಉದ್ದೇಶಪೂರ್ವಕವಾಗಿ ವಿವಾದವಾಗಿಸಲು ಶ್ರಮಿಸುತ್ತಿವೆ ಎಂದು ಬಿಜೆಪಿ ಮುಖಂಡ ದೇವೇಂದ್ರ ಫಡಣವೀಸ್ ಹೇಳಿದ್ದಾರೆ.

ಚಂಡಮಾರುತದಿಂದ ಬಾಧಿತವಾದ ಎಲ್ಲ ರಾಜ್ಯಗಳಿಗೂ ಕೇಂದ್ರದ ನೆರವು ಸಿಗಲಿದೆ ಎಂದು ಪ್ರಧಾನಿ ಸ್ಪಷ್ಟವಾಗಿ ಹೇಳಿದ್ದಾರೆ ಎಂದೂ ಅವರು ತಿಳಿಸಿದ್ದಾರೆ.

ಕಪ್ಪು ಶಿಲೀಂಧ್ರ 'ಸಾಂಕ್ರಾಮಿಕ ರೋಗ' ತೆಲಂಗಾಣ ಘೋಷಣೆ

ಹೈದರಾಬಾದ್ (ಪಿಟಿಐ): ಕಪ್ಪು ಶಿಲೀಂಧ್ರ ರೋಗವನ್ನು (ಬ್ಲ್ಯಾಕ್ ಫಂಗಸ್) 'ಸಾಂಕ್ರಾಮಿಕ ರೋಗ' ಎಂದು ತೆಲಂಗಾಣ ಸರ್ಕಾರ ಗುರುವಾರ ಘೋಷಿಸಿದೆ.

ಈ ಸಂಬಂಧ ಸಾಂಕ್ರಾಮಿಕ ರೋಗಗಳ ಕಾಯ್ದೆ– 1897ರಡಿ ಅಧಿಸೂಚನೆ ಹೊರಡಿಸಲಾಗಿದೆ.

ಈ ರೋಗದ ಪತ್ತೆ ಹಾಗೂ ಚಿಕಿತ್ಸೆಗೆ ಸಂಬಂಧಪಟ್ಟಂತೆ ಕೇಂದ್ರ ಆರೋಗ್ಯ ಸಚಿವಾಲಯ ಹಾಗೂ ಭಾರತೀಯ ವೈದ್ಯಕೀಯ ಸಂಶೋಧನಾ ಪರಿಷತ್ತು (ಐಸಿಎಂಆರ್) ನೀಡಿರುವ ಮಾರ್ಗಸೂಚಿಗಳನ್ನು ಎಲ್ಲಾ ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳು ಪಾಲಿಸಬೇಕು ಎಂದು ಅಧಿಸೂಚನೆಯಲ್ಲಿ ತಿಳಿಸಲಾಗಿದೆ.

'ಅಂತರರಾಷ್ಟ್ರೀಯ ಪ್ರಯಾಣ ಪುನರಾರಂಭ ಸುರಕ್ಷಿತವಲ್ಲ'

ಕೋಪನ್‌ಹೇಗನ್: ಕೋವಿಡ್ ರೋಗ ಇನ್ನೂ ಹತೋಟಿಗೆ ಬಾರದ ಕಾರಣ ಅಂತರರಾಷ್ಟ್ರೀಯ ಪ್ರಯಾಣವನ್ನು ಕೈಬಿಡುವುದು ಸೂಕ್ತ ಎಂದು ವಿಶ್ವ ಆರೋಗ್ಯ ಸಂಸ್ಥೆಯ (ಡಬ್ಲ್ಯುಎಚ್‌ಒ) ಯುರೋಪ್ ನಿರ್ದೇಶಕ ಹಾನ್ಸ್ ಕ್ಲುಗೆ ಗುರುವಾರ ಸಲಹೆ ನೀಡಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಈ ಸಂದರ್ಭದಲ್ಲಿ ನಾವು ಹೆಚ್ಚು ಎಚ್ಚರಿಕೆಯಿಂದ ಇರಬೇಕು ಮತ್ತು ಅಂತರರಾಷ್ಟ್ರೀಯ ಪ್ರಯಾಣ ಪುನರಾರಂಭಿಸುವುದರ ಬಗ್ಗೆ ಮರುಚಿಂತನೆ ನಡೆಸಬೇಕು' ಎಂದಿದ್ದಾರೆ.

'ಕೊರೊನಾ: ಅನಾಥರಾದ ಮಕ್ಕಳಿಗೆ ಉಚಿತ ಶಿಕ್ಷಣ ನೀಡಿ'

ನವದೆಹಲಿ (ಪಿಟಿಐ): ಕೋವಿಡ್ ಪಿಡುಗಿನ ಸಂದರ್ಭದಲ್ಲಿ ತಂದೆ–ತಾಯಿ ಕಳೆದುಕೊಂಡು ಅನಾಥರಾಗಿರುವ ಮಕ್ಕಳಿಗೆ ಉಚಿತವಾಗಿ ಶಿಕ್ಷಣವನ್ನು ನೀಡಬೇಕು ಎಂದು ಒತ್ತಾಯಿಸಿ ಕಾಂಗ್ರೆಸ್ ಪಕ್ಷದ ಅಧ್ಯಕ್ಷೆ ಸೋನಿಯಾಗಾಂಧಿ ಅವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದಿದ್ದಾರೆ.

ದುರಂತದ ಸಂದರ್ಭದಲ್ಲಿ ದೇಶ ಈ ಮಕ್ಕಳಿಗೆ ಉತ್ತಮ ಭವಿಷ್ಯದ ಭರವಸೆ ನೀಡಬೇಕಾಗಿದೆ. ಇಂತಹ ಮಕ್ಕಳಿಗೆ ನವೋದಯ ವಿದ್ಯಾಲಯಗಳಲ್ಲಿ ಉಚಿತ ಶಿಕ್ಷಣ ಒದಗಿಸಲು ಒತ್ತು ನೀಡಬೇಕು ಎಂದೂ ಸಲಹೆ ಮಾಡಿದ್ದಾರೆ.

'ತಂದೆ, ತಾಯಿ ಅಥವಾ ಇಬ್ಬರನ್ನೂ ಕಳೆದುಕೊಂಡಿರುವ ಅನೇಕ ನಿದರ್ಶನಗಳಿವೆ. ಈಗ ಅಂತಹ ಮಕ್ಕಳ ಜೊತೆಗೆ ದೇಶ ನಿಲ್ಲಬೇಕಾಗಿದೆ. ಗ್ರಾಮೀಣ ಭಾಗದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಕೈಗೆಟುಕುವ ದರದಲ್ಲಿ ಗುಣಮಟ್ಟದ ಶಿಕ್ಷಣ ನೀಡುವ ಉದ್ದೇಶದಿಂದ ತಮ್ಮ ಪತಿ, ಮಾಜಿ ಪ್ರಧಾನಿ ರಾಜೀವ್ ಗಾಂಧಿ ನವೋದಯ ವಿದ್ಯಾಲಯಗಳನ್ನು ಸ್ಥಾಪಿಸಿದ್ದರು. ದೇಶದಾದ್ಯಂತ ಇಂಥ 661 ಶಾಲೆಗಳಿವೆ' ಎಂದು ಅವರು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ರಾಜಸ್ಥಾನದ ಮಾಜಿ ಸಿ.ಎಂ. ನಿಧನ

ಜೈಪುರ: ಕೋವಿಡ್‌ನಿಂದ ಬಳಲುತ್ತಿದ್ದ ಕಾಂಗ್ರೆಸ್‌ನ ಹಿರಿಯ ನಾಯಕ ಮತ್ತು ರಾಜಸ್ಥಾನದ ಮಾಜಿ ಮುಖ್ಯಮಂತ್ರಿ ಜಗನ್ನಾಥ್ ಪಹಾಡಿಯಾ (89) ಬುಧವಾರ ರಾತ್ರಿ ನಿಧನರಾದರು.

ಜಗನ್ನಾಥ್ ಅವರು 1980–81ರಲ್ಲಿ ರಾಜಸ್ಥಾನದ ಮುಖ್ಯಮಂತ್ರಿಯಾಗಿದ್ದರು. ಹರಿಯಾಣ ಮತ್ತು ಬಿಹಾರದಲ್ಲಿ ರಾಜ್ಯಪಾಲರಾಗಿಯೂ ಕಾರ್ಯ ನಿರ್ವಹಿಸಿದ್ದರು.

'ಕೋವಿಸೆಲ್ಫ್' ಹೋಮ್ ಟೆಸ್ಟಿಂಗ್ ಕಿಟ್‌ಗೆ ಅನುಮೋದನೆ ನೀಡಿದ ಐಸಿಎಂಆರ್

ಕೋವಿಡ್: ಮನೆಯಲ್ಲಿ 15 ನಿಮಿಷದಲ್ಲೇ ಪರೀಕ್ಷೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೋವಿಡ್ -19 ಪರೀಕ್ಷೆಯನ್ನು ಇನ್ನು ಮುಂದೆ ಮನೆಯಲ್ಲೇ ಕುಳಿತು ಕೇವಲ 15 ನಿಮಿಷಗಳಲ್ಲೇ ಮಾಡಿಕೊಳ್ಳಬಹುದು.

ಕೋವಿಡ್ -19 ಸೋಂಕು ಪತ್ತೆಗಾಗಿ ರ್‍ಯಾಪಿಡ್ ಆ್ಯಂಟಿಜೆನ್ ಪರೀಕ್ಷೆಯನ್ನು (ಆರ್‌ಎಟಿ) ಮನೆಯಲ್ಲೇ ಕೈಗೊಳ್ಳುವುದಕ್ಕೆ ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿ (ಐಸಿಎಂಆರ್) ಅನುಮೋದನೆ ನೀಡಿದೆ.

ಸೋಂಕಿನ ಲಕ್ಷಣಗಳಿರುವ ವ್ಯಕ್ತಿಗಳು ಮತ್ತು ಕೋವಿಡ್–19 ಸೋಂಕು ದೃಢಪಟ್ಟ ರೋಗಿಗಳ ಜತೆ ನಿಕಟ ಸಂಪರ್ಕದಲ್ಲಿದ್ದವರು ಮನೆಯಲ್ಲಿಯೇ 'ಹೋಮ್ ಟೆಸ್ಟಿಂಗ್ ಕಿಟ್' ಬಳಸಿ ರ್‍ಯಾಪಿಡ್ ಆ್ಯಂಟಿಜೆನ್ ಪರೀಕ್ಷೆ ಕೈಗೊಳ್ಳಬಹುದು ಎಂದು ತಿಳಿಸಿದೆ.

ಪುಣೆಯ ಮೈಲ್ಯಾಬ್ ಡಿಸ್ಕವರಿ ಸೊಲ್ಯುಷನ್ಸ್ ಲಿಮಿಟೆಡ್ ಕಂಪನಿಯ ಆರ್‌ಎಟಿ ಕಿಟ್‌ಗೆ ಮಾನ್ಯತೆ ನೀಡಿ ಅನುಮೋದನೆ ನೀಡಲಾಗಿದೆ ಎಂದು ಐಸಿಎಂಆರ್ ತಿಳಿಸಿದೆ.

'ಕೋವಿಸೆಲ್ಫ್ (ಪ್ಯಾಥೊಕ್ಯಾಚ್) ಕೋವಿಡ್-19 ಒಟಿಸಿ ಆ್ಯಂಟಿಜೆನ್ ಎಲ್‌ಎಫ್ ಡಿವೈಸ್' ಎಂಬ ಹೋಮ್ ಟೆಸ್ಟಿಂಗ್ ಕಿಟ್ ಅನ್ನು ಮೈಲ್ಯಾಬ್ ಡಿಸ್ಕವರಿ ಸೊಲ್ಯುಷನ್ಸ್ ತಯಾರಿಸಿದೆ. ಈ ಕಿಟ್‌ಗೆ ₹250 ನಿಗದಿಪಡಿಸಲಾಗಿದೆ.

ಸದ್ಯ ಪ್ರತಿ ವಾರ 70 ಲಕ್ಷ ಕಿಟ್‌ಗಳನ್ನು ಉತ್ಪಾದಿಸುವ ಸಾಮರ್ಥ್ಯವನ್ನು ಮೈಲ್ಯಾಬ್ ಕಂಪನಿ ಹೊಂದಿದೆ. ಮುಂದಿನ ದಿನಗಳಲ್ಲಿ ಪ್ರತಿ ವಾರಕ್ಕೆ 1 ಕೋಟಿ ಕಿಟ್ ಉತ್ಪಾದಿಸುವ ಉದ್ದೇಶ ಹೊಂದಲಾಗಿದೆ.

ಕಳೆದ ವರ್ಷವೂ ಮೈಲ್ಯಾಬ್ ಕಂಪನಿಯೇ ಮೊದಲ ಆರ್‌ಟಿ–ಪಿಸಿಆರ್ ಕಿಟ್‌ಗಳನ್ನು ನೀಡಿತ್ತು.

ಈ ರ್‍ಯಾಪಿಡ್ ಆ್ಯಂಟಿಜನ್ ಪರೀಕ್ಷೆಗೆ ಮೂಗಿನ ದ್ರವ ಬಳಸಬೇಕು. ತಯಾರಕರು ಕಿಟ್ ಜತೆ ನೀಡಿರುವ ಸೂಚನೆಯಂತೆ ಈ ಪರೀಕ್ಷಾ ಪ್ರಕ್ರಿಯೆಯನ್ನು ಕೈಗೊಳ್ಳಬೇಕು. 'ಕೋವಿಸೆಲ್ಫ್' 15 ನಿಮಿಷದಲ್ಲೇ ಫಲಿತಾಂಶ ನೀಡುತ್ತದೆ ಎಂದು ತಿಳಿಸಿದೆ.

ಆದರೆ, ಮನಬಂದಂತೆ ರ್‍ಯಾಪಿಡ್ ಆ್ಯಂಟಿಜನ್ ಪರೀಕ್ಷೆಗಳನ್ನು ಕೈಗೊಳ್ಳಬಾರದು. ಸೋಂಕಿನ ಲಕ್ಷಣಗಳಿರುವ ವ್ಯಕ್ತಿಗಳು ಮತ್ತು ಕೋವಿಡ್–19 ರೋಗಿಗಳ ಜತೆ ನಿಕಟ ಸಂಪರ್ಕದಲ್ಲಿದ್ದವರು ಮಾತ್ರ ಈ ಪರೀಕ್ಷೆ ಕೈಗೊಳ್ಳಬೇಕು.

ಆರ್‌ಎಟಿ ಕಿಟ್‌ನಲ್ಲಿ ಸೋಂಕು ದೃಢಪಟ್ಟರೆ ಮತ್ತೊಮ್ಮೆ ಪರೀಕ್ಷೆ ಮಾಡಿಸಿಕೊಳ್ಳಬೇಕಾಗಿಲ್ಲ. ಈ ಪರೀಕ್ಷೆಯನ್ನೇ ಅಧಿಕೃತವಾಗಿ ಪರಿಗಣಿಸಬಹುದು ಎಂದು ಐಸಿಎಂಆರ್ ಹೇಳಿದೆ.

ಕೋವಿಡ್–19 ರೋಗ ಲಕ್ಷಣಗಳಿದ್ದರೂ, ಆರ್‌ಎಟಿನಲ್ಲಿ 'ನೆಗೆಟಿವ್' ಎಂದು ಕಂಡುಬಂದರೆ ಅವರು ಆರ್‌ಟಿ-ಪಿಸಿಆರ್ ಪರೀಕ್ಷೆಗೆ ಒಳಪಡಬೇಕು. ಕೆಲವೊಮ್ಮೆ ರ್‍ಯಾಪಿಡ್ ಆ್ಯಂಟಿಜನ್ ಟೆಸ್ಟ್‌ನಲ್ಲಿ 'ಪಾಸಿಟಿವ್' ಪ್ರಕರಣಗಳು ಪತ್ತೆಯಾಗುವುದಿಲ್ಲ ಎಂದು ಹೇಳಿದೆ.

ಮೊಬೈಲ್ ಆ್ಯಪ್ ಅಗತ್ಯ

'ಹೋಮ್ ಟೆಸ್ಟಿಂಗ್ ಕಿಟ್' ಬಳಸಲು ಮೊಬೈಲ್ ಆ್ಯಪ್ ಅಗತ್ಯವಾಗಿದೆ. ಬಳಕೆದಾರರು ಗೂಗಲ್ ಪ್ಲೇ ಸ್ಟೋರ್ ಮತ್ತು ಆ್ಯಪಲ್ ಆ್ಯಪ್ ಸ್ಟೋರ್‌ನಲ್ಲಿ ಲಭ್ಯವಿರುವ ಈ ಆ್ಯಪ್ ಅನ್ನು ಡೌನ್‌ಲೋಡ್ ಮಾಡಿಕೊಳ್ಳಬೇಕು.

ಈ ಮೊಬೈಲ್ ಆ್ಯಪ್‌ನಲ್ಲಿ ಪರೀಕ್ಷೆ ಪ್ರಕ್ರಿಯೆ ಕುರಿತು ಸಮಗ್ರ ಮಾರ್ಗದರ್ಶನ ದೊರೆಯುತ್ತದೆ. ರೋಗಿಗೆ ಪಾಸಿಟಿವ್ ಅಥವಾ ನೆಗೆಟಿವ್ ಫಲಿತಾಂಶದ ಮಾಹಿತಿಯನ್ನು ನೀಡುತ್ತದೆ ಎಂದು ಐಸಿಎಂಆರ್ ತಿಳಿಸಿದೆ.

ಬಳಕೆದಾರರು ಕೋವಿಡ್ ಪರೀಕ್ಷೆಯ ಸ್ಟ್ರಿಪ್ ಚಿತ್ರವನ್ನು ತೆಗೆದು ಆ್ಯಪ್ ಬಳಸಿರುವ ಮೊಬೈಲ್‌ನಲ್ಲಿ ಅಪ್‌ಲೋಡ್ ಮಾಡಬೇಕು. ಈ ಮಾಹಿತಿ ಐಸಿಎಂಆರ್ ಕೋವಿಡ್ 19 ಟೆಸ್ಟಿಂಗ್ ಪೋರ್ಟಲ್‌ನ ಸರ್ವರ್‌ಗೆ ರವಾನೆಯಾಗುತ್ತದೆ. ಇಲ್ಲಿ ರೋಗಿಗಳ ಖಾಸಗಿತನಕ್ಕೆ ಧಕ್ಕೆಯಾಗುವುದಿಲ್ಲ, ಎಲ್ಲ ವಿವರ ಸುರಕ್ಷಿತವಾಗಿರುತ್ತದೆ ಎಂದು ಐಸಿಎಂಆರ್ ಹೇಳಿದೆ.

'ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಜಾರಿಯಲ್ಲಿದೆ'

'ಬಹುತೇಕ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಸ್ವಯಂ ಪರೀಕ್ಷೆ ಕೈಗೊಳ್ಳಲು ನಾಗರಿಕರಿಗೆ ಅವಕಾಶ ನೀಡಲಾಗಿದೆ. ಸೋಂಕಿನ ಸರಪಳಿ ತುಂಡರಿಸಲು ಇದು ಪ್ರಬಲ ಅಸ್ತ್ರ ಎಂದು ಪರಿಗಣಿಸಲಾಗಿದೆ. ಸುಲಭವಾಗಿ ಬಳಸಬಹುದಾದ ಈ ಕಿಟ್ ಜತೆ ಮೊಬೈಲ್ ಆ್ಯಪ್ ಸಂಪರ್ಕ ಇರುತ್ತದೆ ಎಂದು ಮೈಲ್ಯಾಬ್ ಡಿಸ್ಕವರಿ ಸೊಲ್ಯುಷನ್ಸ್‌ನ ನಿರ್ದೇಶಕ ಸುಜೀತ್ ಜೈನ್ ತಿಳಿಸಿದ್ದಾರೆ.

ಒಂದು ಸೆಕೆಂಡ್‌ನಲ್ಲಿ ಫಲಿತಾಂಶ

ನವದೆಹಲಿ(ಪಿಟಿಐ): ಜೊಲ್ಲಿನ ಮಾದರಿಯ ಪರೀಕ್ಷೆ ಕೈಗೊಳ್ಳುವ ಮೂಲಕ ಕೇವಲ ಒಂದು ಸೆಕೆಂಡ್‌ನಲ್ಲಿ ಕೊರೊನಾ ಸೋಂಕು ಇರುವುದನ್ನು ಪತ್ತೆ ಮಾಡಬಹುದು ಎಂದು ವಿಜ್ಞಾನಿಗಳು ತಿಳಿಸಿದ್ದಾರೆ.

ಈ ವಿನೂತನ ಪರೀಕ್ಷೆಗೆ ಸೆನ್ಸರ್ ವ್ಯವಸ್ಥೆಯನ್ನು ವಿಜ್ಞಾನಿಗಳು ಅಭಿವೃದ್ಧಿಪಡಿಸಿದ್ದಾರೆ. ಇದರಿಂದ, ಈಗಿರುವ ಪರೀಕ್ಷಾ ಪದ್ಧತಿಗಳಿಂದಲೂ ಅತಿ ವೇಗದಲ್ಲಿ ಫಲಿತಾಂಶ ದೊರೆಯಲಿದೆ.

'ವ್ಯಾಕ್ಯುಮ್ ಸೈನ್ಸ್ ಆ್ಯಂಡ್ ಟೆಕ್ನಾಲಜಿ ಬಿ' ನಿಯತಕಾಲಿಕೆಯಲ್ಲಿ ಈ ಬಗ್ಗೆ ಲೇಖನ ಪ್ರಕಟಿಸಲಾಗಿದೆ.

'ಎಲೆಕ್ಟ್ರೋಡ್‌ಗಳ ಮೇಲೆ ಜೊಲ್ಲಿನ ಮಾದರಿಯನ್ನು ಹಾಕಲಾಗುತ್ತದೆ. ಇದನ್ನು ಸೆನ್ಸರ್ ಪಟ್ಟಿಗಳನ್ನು ಕನೆಕ್ಟರ್ ಮೂಲಕ ಸರ್ಕ್ಯೂಟ್ ಬೋರ್ಡ್‌ಗೆ ಸಂಪರ್ಕ ಕಲ್ಪಿಸಲಾಗುತ್ತದೆ. ಇಲ್ಲಿ ದೊರೆಯುವ ಫಲಿತಾಂಶವನ್ನು ವಿಶ್ಲೇಷಿಸಲಾಗುತ್ತದೆ' ಎಂದು ಲೇಖಕ ಮಿಂಘಾನ್ ಷಿಯಾನ್ ವಿವರಿಸಿದ್ದಾರೆ.

ಮನೆ, ಮನೆಗೆ ತೆರಳಿ ಲಸಿಕೆ ಮರುಚಿಂತನೆ ಅಗತ್ಯ: ಕೋರ್ಟ್

ಮುಂಬೈ (ಪಿಟಿಐ): 'ಹಿರಿಯ ನಾಗರಿಕರು, ಅಶಕ್ತರು, ಅಂಗವಿಕಲರಿಗೆ ಲಸಿಕೆಯನ್ನು ನೀಡಲು ಮನೆ, ಮನೆಗೆ ತೆರಳುವ ಬಗ್ಗೆ ಮರುಚಿಂತಿಸಬೇಕು' ಎಂದು ಬಾಂಬೆ ಹೈಕೋರ್ಟ್ ಕೇಂದ್ರ ಸರ್ಕಾರಕ್ಕೆ ಸಲಹೆ ಮಾಡಿದೆ.

ಲಸಿಕೆಯು ಪೋಲಾಗುವುದು, ಪ್ರತಿಕೂಲ ಪರಿಣಾಮವಾಗುವ ಸಾಧ್ಯತೆ ಸೇರಿ ವಿವಿಧ ಕಾರಣಗಳಿಂದ ಮನೆ, ಮನೆಗೆ ತೆರಳಿ ಲಸಿಕೆ ನೀಡಲಾಗದು ಎಂದು ಕೇಂದ್ರ ತಿಳಿಸಿದೆ. ಇದು, ನಿರಾಶಾಯಕ ಬೆಳವಣಿಗೆ. ಕೇಂದ್ರ ಮತ್ತು ಮುಂಬೈ ಮಹಾನಗರಪಾಲಿಕೆಯು ಈ ಬಗ್ಗೆ ಮರುಚಿಂತನೆ ನಡೆಸಬೇಕು ಎಂದು ಕೋರ್ಟ್ ಹೇಳಿದೆ.

ಮುಖ್ಯ ನ್ಯಾಯಮೂರ್ತಿ ದೀಪಂಕರ್ ದತ್ತಾ ಮತ್ತು ನ್ಯಾಯಮೂರ್ತಿ ಜಿ.ಎಸ್.ಕುಲಕರ್ಣಿ ಅವರಿದ್ದ ಪೀಠವು, ಲಸಿಕೆ ಅಭಿಯಾನ ಕುರಿತು ಕೇಂದ್ರ ಸರ್ಕಾರವು ರಚಿಸಿರುವ ರಾಷ್ಟ್ರೀಯ ಪರಿಣತರ ತಂಡಕ್ಕೆ ಈ ಬಗ್ಗೆ ಸೂಚನೆ ನೀಡಿತು. ಪ್ರಕರಣದ ವಿಚಾರಣೆಯನ್ನು ಜೂನ್ 2ಕ್ಕೆ ಮುಂದೂಡಲಾಯಿತು.

ರಾಷ್ಟ್ರೀಯ ಪರಿಣತರ ತಂಡ ಒಂದು ವೇಳೆ ಮನೆ ಮನೆಗೆ ತೆರಳಿ ಲಸಿಕೆ ನೀಡಲು ಸಮ್ಮತಿಸಿದರೆ ಅದಕ್ಕಾಗಿ ಕೋರ್ಟ್ ಆದೇಶಕ್ಕಾಗಿ ಕಾಯದೆ ತ್ವರಿತಗತಿಯಲ್ಲಿ ಅಭಿಯಾನ ಆರಂಭಿಸಬೇಕು ಎಂದು ಕೋರ್ಟ್ ಮುಂಬೈ ಮಹಾನಗರಪಾಲಿಕೆಗೆ ಸೂಚಿಸಿತು.

ಲಸಿಕೆ ಪಡೆಯಲು ನೆರವಿಗೆ ವಾಟ್ಸ್‌ಆ್ಯಪ್ ಚಾಟ್‌ಬಾಟ್

ನವದೆಹಲಿ: ಹಿರಿಯ ನಾಗರಿಕರಿಗೆ ತಮ್ಮ ಲಸಿಕೆ ಪಡೆಯುವ ಕುರಿತ ಮಾಹಿತಿ ತಲುಪಿಸಲು ಸೇವಾ ಸಂಸ್ಥೆಯಾದ ರಾಬಿನ್‌ಹುಡ್ ಆರ್ಮಿ ಈಗ ವಾಟ್ಸ್‌ಆ್ಯಪ್ ಚಾಟ್‌ಬಾಟ್ ಸಂದೇಶ ಸೇವೆಯನ್ನು ಆರಂಭಿಸಿದೆ.

ಯೆಲ್ಲೊ ಮೆಸೆಂಜರ್ ಸಹಯೋಗದಲ್ಲಿ ಚಾಟ್‌ಬಾಟ್ ಅಭಿವೃದ್ಧಿಪಡಿಸಲಾಗಿದೆ. ಈ ಮೂಲಕ ಸೇವಾ ಸಂಸ್ಥೆಯ ಸದಸ್ಯರು ಹಿರಿಯ ನಾಗರಿಕರಿಗೆ ಲಸಿಕೆ ಪಡೆಯಲು ನೆರವು ಒದಗಿಸಲಿದ್ದಾರೆ.

ಆಸಕ್ತರು ಸೇವೆ ಪಡೆಯಲು +91 8971966164 ಸಂಖ್ಯೆಗೆ 'Hi' ಸಂದೇಶ ಕಳುಹಿಸಬಹುದು. ಈ ಸೇವೆಯು ಪ್ರಸ್ತುತ 21 ರಾಜ್ಯಗಳ 186 ನಗರಗಳಲ್ಲಿ ಲಭ್ಯವಿದೆ.

'ದೇಶ ಕಠಿಣ ಪರಿಸ್ಥಿತಿ ಎದುರಿಸುತ್ತಿದೆ'

ನವದೆಹಲಿ(ಪಿಟಿಐ): 'ಕೋವಿಡ್–19 ಸಂದರ್ಭದಲ್ಲಿ ಭಾರತ ಸದ್ಯ ಕಠಿಣ ಪರಿಸ್ಥಿತಿಯನ್ನು ಎದುರಿಸುತ್ತಿದೆ' ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ತಿಳಿಸಿದ್ದಾರೆ.

ನಿಕ್ಕಿ ಗುರುವಾರ ಆಯೋಜಿಸಿದ್ದ 'ಏಷ್ಯಾದ ಭವಿಷ್ಯ' ಕುರಿತು ಆನ್‌ಲೈನ್ ವಿಚಾರಸಂಕಿರಣದಲ್ಲಿ ಮಾತನಾಡಿದ ಅವರು, 'ಕೋವಿಡ್–19 ಪರಿಸ್ಥಿತಿಯನ್ನು ಒಂದು ಬಾರಿಯ ಸಮಸ್ಯೆ ಎಂದು ಪರಿಗಣಿಸಬಾರದು. ಇದು ಪದೇ ಪದೇ ಎದುರಾಗುವ ಸವಾಲು ಎನ್ನುವುದನ್ನು ಅರಿತುಕೊಳ್ಳಬೇಕು' ಎಂದು ಅವರು ಹೇಳಿದರು.

'ಕಳೆದ ಒಂದೂವರೆ ವರ್ಷದಿಂದ ಕೋವಿಡ್–19 ಸಾಂಕ್ರಾಮಿಕ ಕಾಯಿಲೆ ಹಲವು ರೀತಿಯ ಸಮಸ್ಯೆಗಳು ಮತ್ತು ಸವಾಲುಗಳನ್ನು ಸೃಷ್ಟಿಸಿದೆ. ಈ ಕಾಯಿಲೆ ನಿಯಂತ್ರಿಸಲು ಅಂತರರಾಷ್ಟ್ರೀಯ ಸಹಕಾರ ಅಗತ್ಯ' ಎಂದು ಪ್ರತಿಪಾದಿಸಿದರು.

ಅರುಣಾಚಲ ಗಡಿ ಸಮೀಪ ಹೆದ್ದಾರಿ ನಿರ್ಮಿಸಿದ ಚೀನಾ

ಬೀಜಿಂಗ್ (ಪಿಟಿಐ): ಅರುಣಾಚಲ ಪ್ರದೇಶದ ಗಡಿ ಸಮೀಪದಲ್ಲೇ ಬ್ರಹ್ಮಪುತ್ರ ಕಣಿವೆಯ ಮೂಲಕ ಹಾದು ಹೋಗುವ ಹೆದ್ದಾರಿ ನಿರ್ಮಾಣ ಕಾರ್ಯವನ್ನು ಚೀನಾ ಪೂರ್ಣಗೊಳಿಸಿದೆ.

ಯಾರ್‌ಲುಂಗ್ ಜಾಂಗ್‌ಬೊ ಗ್ರ್ಯಾಂಡ್ ಕಣಿವೆ ನಡುವೆ ಈ ಹೆದ್ದಾರಿ ಹಾದುಹೋಗಲಿದೆ. ಈ ಹೆದ್ದಾರಿ ನಿರ್ಮಾಣಕ್ಕೆ 31 ಕೋಟಿ ಡಾಲರ್ (₹2,264.38 ಕೋಟಿ) ವೆಚ್ಚವಾಗಿದೆ. ಕಳೆದ ಶನಿವಾರ ನಿರ್ಮಾಣ ಕಾಮಗಾರಿ ಪೂರ್ಣಗೊಂಡಿದೆ ಎಂದು ಕ್ಸಿನ್ಹುವಾ ಸುದ್ದಿ ಸಂಸ್ಥೆ ವರದಿ ಮಾಡಿದೆ.

ನಿಯಿಂಗ್‌ಚಿ ನಗರ ಮತ್ತು ಮೆಡೋಗ್ ನಡುವಿನ 67.22 ಕಿ.ಮೀ ಹೆದ್ದಾರಿ ರಸ್ತೆ ನಿರ್ಮಾಣ ಕಾರ್ಯ ಶನಿವಾರ ಬೆಳಿಗ್ಗೆ ಪೂರ್ಣಗೊಂಡಿದೆ. ಇದರಿಂದ ಸಂಚಾರದ ಅವಧಿಯು ಎಂಟು ಗಂಟೆಗಳಷ್ಟು ಕಡಿಮೆಯಾಗಲಿದೆ. ಮೆಡೊಗಾ ಟಿಬೆಟ್‌ನ ಕೊನೆಯ ಪ್ರದೇಶವಾಗಿದ್ದು, ಅರುಣಾಚಲ ಪ್ರದೇಶದ ಗಡಿಗೆ ಹತ್ತಿರವಾಗಿದೆ.

2014ರಲ್ಲಿ ಈ ಹೆದ್ದಾರಿ ನಿರ್ಮಾಣ ಯೋಜನೆ ಆರಂಭಿಸಲಾಗಿತ್ತು. 6009 ಮೀಟರ್ ಆಳವಾದ ಯರ್‌ಲುಂಗ್ ಜಾಂಗ್‌ಬೊ ವಿಶ್ವದದಲ್ಲೇ ಆಳವಾದ ಕಣಿವೆಯಾಗಿದೆ.

ಈ ಹೆದ್ದಾರಿ ನಂತರ ಬ್ರಹ್ಮಪುತ್ರ ಕಣಿವೆಯಲ್ಲಿ ಮೆಗಾ ಅಣೆಕಟ್ಟು ನಿರ್ಮಿಸಲು ಚೀನಾ ಉದ್ದೇಶಿಸಿದೆ. ಈ ಯೋಜನೆಗೆ ಈಗಾಗಲೇ ಚೀನಾ ಸಂಸತ್ ಅನುಮೋದನೆ ನೀಡಿದೆ.

ಸಂಕ್ಷಿಪ್ತ ಸುದ್ದಿ

ಆಕ್ಷೇಪಾರ್ಹ ಟ್ವೀಟ್: ಪ್ರಕರಣ ದಾಖಲು

ಔರಂಗಬಾದ್: ಆಕ್ಷೇಪಾರ್ಹ ಟ್ವೀಟ್ ಪೋಸ್ಟ್ ಮಾಡಿದ್ದಕ್ಕಾಗಿ ಅಲೀಗಡ ಮುಸ್ಲಿಂ ವಿಶ್ವವಿದ್ಯಾಲಯದ ಮಾಜಿ ವಿದ್ಯಾರ್ಥಿ ನಾಯಕ ಶರ್ಜೀಲ್ ಉಸ್ಮಾನಿ ವಿರುದ್ಧ ಮಹಾರಾಷ್ಟ್ರದ ಜಾಲ್ನಾ ಜಿಲ್ಲೆಯ ಪೊಲೀಸರು ಗುರುವಾರ ಎಫ್‌ಐಆರ್ ದಾಖಲಿಸಿದ್ದಾರೆ.

ಉಸ್ಮಾನಿ ಅವರು ತಮ್ಮ ಈಚಿನ ಟ್ವೀಟ್‌ಗಳಲ್ಲಿ ರಾಮನನ್ನು ಕುರಿತು ಅಗೌರವ ಸೂಚಿಸುವ ಪದಗಳಲ್ಲಿ ಬರೆದಿದ್ದಾರೆ ಮತ್ತು ಧಾರ್ಮಿಕ ಭಾವನೆಗಳಿಗೆ ಧಕ್ಕೆ ತಂದಿದ್ದಾರೆ ಎಂದು ಹಿಂದೂ ಜಾಗರಣ ಮಂಚ್‌ನ ಕಾರ್ಯಕರ್ತ ಅಂಬಾದಾಸ್ ಅಂಭೋರೆ ಬುಧವಾರ ಪೊಲೀಸರಿಗೆ ದೂರು ನೀಡಿದ್ದರು.

ಪ್ಯಾಲೆಸ್ಟೀನ್ ಧ್ವಜ ಹಾರಿಸಲು ಕರೆ: ಸೆರೆ

ಲಖನೌ: ಗಾಜಾದಲ್ಲಿ ಇಸ್ರೇಲ್ ನಡೆಸಿದ ವಾಯು ದಾಳಿಯ ವಿರುದ್ಧ ತಮ್ಮ ಪ್ರತಿಭಟನೆಯನ್ನು ದಾಖಲಿಸಲು ಮುಸ್ಲಿಮರು ತಮ್ಮ ಮನೆ ಮತ್ತು ವಾಹನಗಳ ಮೇಲೆ ಪ್ಯಾಲೆಸ್ಟೀನ್ ಧ್ವಜವನ್ನು ಹಾರಿಸುವಂತೆ ಕರೆ ನೀಡಿದ್ದ ಯುವಕನನ್ನು ಗುರುವಾರ ಬಂಧಿಸಲಾಗಿದೆ.

ಅಜಂಗಡ ಜಿಲ್ಲೆಯ ನಿವಾಸಿ ಯಾಸೀರ್ ಅಖ್ತರ್, ಶುಕ್ರವಾರದ ಪ್ರಾರ್ಥನೆ ಬಳಿಕ ಧ್ವಜವನ್ನು ಹಾರಿಸುವಂತೆ ಫೇಸ್‌ಬುಕ್ ಮೂಲಕ ಕರೆ ನೀಡಿದ್ದ.

ನಾರದ ಪ್ರಕರಣ ವಿಚಾರಣೆ ಮುಂದೂಡಿಕೆ

ಕೋಲ್ಕತ್ತ (ಪಿಟಿಐ): ನಾರದ ಮಾರುವೇಷದ ಕಾರ್ಯಾಚರಣೆ ಸಂಬಂಧ ಬಂಧಿಸಲಾಗಿರುವ ಟಿಎಂಸಿ ಮುಖಂಡರಿಗೆ ಸಂಬಂಧಿಸಿದ ಜಾಮೀನು ಅರ್ಜಿಯನ್ನು ವಿಶೇಷ ನ್ಯಾಯಾಲಯದಿಂದ ಹೈಕೋರ್ಟ್‌ಗೆ ವರ್ಗಾಯಿಸಬೇಕು ಸಿಬಿಐ ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು 'ಅನಿವಾರ್ಯ ಕಾರಣಗಳಿಂದಾಗಿ' ಮುಂದೂಡಲಾಗಿದೆ ಎಂದು ಕಲ್ಕತ್ತ ಹೈಕೋರ್ಟ್ ಗುರುವಾರ ಹೇಳಿದೆ.

'ಅನಿವಾರ್ಯ ಕಾರಣಗಳಿಂದಾಗಿ ಒಂದನೇ ವಿಭಾಗೀಯ ನ್ಯಾಯಪೀಠವು ಗುರುವಾರ ಅರ್ಜಿಯ ವಿಚಾರಣೆ ನಡೆಸುವುದಿಲ್ಲ' ಎಂಬುದಾಗಿ ಹೈಕೋರ್ಟ್‌ನ ವೆಬ್‌ಸೈಟ್‌ನಲ್ಲಿ ನೋಟಿಸ್ ಪ್ರಕಟಿಸಲಾಗಿದೆ.

ಉಗ್ರರಿಗೆ ನೆರವು ಪ್ರಕರಣ ಸೇವೆಯಿಂದ ಪೊಲೀಸ್ ಅಧಿಕಾರಿ ವಜಾ

ಜಮ್ಮು: ಭಯೋತ್ಪಾದನೆ ನೆರವು ಪ್ರಕರಣ ಸಂಬಂಧ ಎನ್‌ಐಎ ಬಂಧಿಸಿ, ಆರೋಪಪಟ್ಟಿಯನ್ನು ದಾಖಲಿಸಿದ್ದ ಪೊಲೀಸ್ ಅಧಿಕಾರಿ ದೇವಿಂದರ್ ಸಿಂಗ್ ಅವರನ್ನು ಜಮ್ಮು ಮತ್ತು ಕಾಶ್ಮೀರ ಆಡಳಿತ ಗುರುವಾರ ಸೇವೆಯಿಂದ ವಜಾ ಮಾಡಿದೆ.

ಸಿಂಗ್ ಅವರನ್ನು ನಿಷೇಧಿತ ಹಿಜ್‌ಬುಲ್ ಮುಜಾಹಿದ್ದೀನ್‌ನ ಉಗ್ರರು ಕಾಶ್ಮೀರದಿಂದ ಜಮ್ಮುವಿಗೆ ಬರಲು ನೆರವಾಗಿದ್ದರು ಎಂಬುದಕ್ಕೆ ಸಂಬಂಧಿಸಿ ಕಳೆದ ವರ್ಷದ ಜನವರಿಯಲ್ಲಿ ಬಂಧಿಸಲಾಗಿತ್ತು. ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಪ್ರಕರಣ ತನಿಖೆ ಕೈಗೊಂಡಿತ್ತು.

ತಕ್ಷಣದಿಂದ ಜಾರಿಗೆ ಬರುವಂತೆ ಸಂವಿಧಾನದ ವಿಧಿ 311ರ ಅನುಸಾರ ಸೇವೆಯಿಂದ ವಜಾ ಮಾಡಲಾಗಿದೆ ಎಂದು ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ತಿಳಿಸಿದ್ದಾರೆ. ಇದರ ಆಧಾರದಲ್ಲಿ ಜಮ್ಮುವಿನ ಸಾಮಾನ್ಯ ಆಡಳಿತ ವಿಭಾಗವು ವಜಾ ಆದೇಶವನ್ನು ನೀಡಿದೆ.

86 YEARS FULFILLING OPPORTUNITIES

Rotary Club of Bangalore

ಯಾರು ಮಾನವೀಯತೆಯನ್ನು ಪ್ರಬಲಗೊಳಿಸಲು ಬೆಂಬಲಿಸುತ್ತಾರೋ ಅವರು ಗೌರವಕ್ಕೆ ಅರ್ಹರಾಗಿರುತ್ತಾರೆ.

Exemplars ಕೋವಿಡ್ ಸಮಯದಲ್ಲಿ

ನಿಮ್ಮ ನಗರಕ್ಕೆ ಒಳಿತನ್ನು ಮಾಡುವ ನಿಜ ಜೀವನದ ಹೀರೋಗಳನ್ನು ಅರ್ಜಿ ಸಲ್ಲಿಸಲು ಅಥವಾ ನಾಮನಿರ್ದೇಶನ ಮಾಡಲು **ರೋಟರಿ ಕ್ಲಬ್ ಆಫ್ ಬೆಂಗಳೂರು** ಆಹ್ವಾನಿಸುತ್ತಿದೆ.

ಅವರು ತಮ್ಮ ಕನಸುಗಳನ್ನು ಅನುಸರಿಸುತ್ತಾರೆ, ಪಟ್ಟುಬಿಡದೆ ಕೆಲಸ ಮಾಡುತ್ತಾರೆ, ಸವಾಲುಗಳನ್ನು ನಿವಾರಿಸಿ ಮತ್ತು ಅಸಾಧ್ಯವನ್ನು ಸಾಧಿಸುತ್ತಾರೆ. ಅವರು ನಮಗೆ ಹೆಮ್ಮೆ ತರುತ್ತಾರೆ.

ಪ್ರಶಸ್ತಿ ವಿಭಾಗಗಳು
ಸಿಟಿಜನ್ ಎಕ್ಸ್ಟ್ರಾ ಆರ್ಡಿನೇರ್
ಕಾರ್ಪೊರೇಟ್ ನಾಗರಿಕ
ಕೆಲಸದಲ್ಲಿನ ಹೆಮ್ಮೆ
ಅತ್ಯುತ್ತಮ NGO
ಯುವ ಐಕಾನ್
ಪರಿಸರ ಸಂರಕ್ಷಣೆ
ಇತ್ತೀಚಿಗೆ ಆರಂಭಿಸಿದ ಸಂಸ್ಥೆಯ ಯಶಸ್ಸು

31 ಮೇ 2021 ರ ಒಳಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ
www.rotaryclubofbangalore.org
ಪ್ರಶಸ್ತಿ ಘೋಷಿಸಿದ ದಿನಾಂಕ: 4 ಜೂನ್ 2021.
ಆಯ್ಕೆದಾರರು ಬೆಂಗಳೂರಿನ ಪ್ರಮುಖ ಪ್ರಜೆಗಳಾಗಿರುತ್ತಾರೆ.

ಹೆಚ್ಚಿನ ಮಾಹಿತಿಗಾಗಿ
Rtn. ಸಂಜಯ್ ಉದಾನಿ: 98450 16031
Rtn. ಪ್ರದೀಪ್ ಬಿಜೂರ್: 98809 32480
Ms. ಹಮ್ಸಿನಿ: 98452 02190

Powered by DH DECCAN HERALD

ಭಾರತ–ಆಸ್ಟ್ರೇಲಿಯಾ ನಡುವೆ ಸೆಪ್ಟೆಂಬರ್ ತಿಂಗಳಲ್ಲಿ ಹೊನಲು ಬೆಳಕಿನ ಪಂದ್ಯ ಆಯೋಜನೆ

ಮಹಿಳಾ ತಂಡಕ್ಕೆ ಪಿಂಕ್ ಬಾಲ್ ಟೆಸ್ಟ್

ನವದೆಹಲಿ (ಪಿಟಿಐ): ಭಾರತ ಮಹಿಳಾ ಕ್ರಿಕೆಟ್ ತಂಡವು ಸೆಪ್ಟೆಂಬರ್ 30 ರಿಂದ ಅಕ್ಟೋಬರ್ 3ರವರೆಗೆ ಆಸ್ಟ್ರೇಲಿಯಾದಲ್ಲಿ ನಡೆಯಲಿರುವ ಹೊನಲು ಬೆಳಕಿನ ಟೆಸ್ಟ್ ಪಂದ್ಯದಲ್ಲಿ ಆಡಲಿದೆ.

ಭಾರತದ ಮಹಿಳಾ ಕ್ರಿಕೆಟ್ ತಂಡವು ಇದೇ ಮೊದಲ ಬಾರಿಗೆ ಪಿಂಕ್ ಬಾಲ್ ಟೆಸ್ಟ್‌ನಲ್ಲಿ ಆಡಲಿದೆ. ಪರ್ತ್‌ನಲ್ಲಿ ಈ ಪಂದ್ಯವು ಆಯೋಜನೆಗೊಳ್ಳಲಿದೆ ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಕಾರ್ಯದರ್ಶಿ ಜಯ್ ಶಾ ತಿಳಿಸಿದ್ದಾರೆ.

'ಮಹಿಳಾ ಕ್ರಿಕೆಟ್ ಅಭಿವೃದ್ಧಿಗಾಗಿ ನಾವು ಬದ್ಧರಾಗಿದ್ದೇವೆ. ಆ ಪ್ರಯತ್ನದಲ್ಲಿ ಇದೊಂದು ಮಹತ್ವದ ಹೆಜ್ಜೆಯಾಗಿದೆ. ಭಾರತದ ಮಹಿಳಾ ಕ್ರಿಕೆಟ್ ಮಟ್ಟಿಗೆ ಇದು ಐತಿಹಾಸಿಕ ಪಂದ್ಯವಾಗಲಿದೆ' ಎಂದು ಶಾ ಟ್ವೀಟ್ ಮಾಡಿದ್ದಾರೆ.

ಜೂನ್ 16ರಂದು ಭಾರತ ಕ್ರಿಕೆಟ್ ತಂಡವು ಇಂಗ್ಲೆಂಡ್ ಪ್ರವಾಸ ಕೈಗೊಳ್ಳಲಿದೆ. ಅಲ್ಲಿ ಟೆಸ್ಟ್ ಪಂದ್ಯ ಆಡಲಿದೆ. ಏಳು ವರ್ಷಗಳ ನಂತರ ಟೆಸ್ಟ್ ಆಡಲಿರುವುದು ವಿಶೇಷ.

ಅಲ್ಲಿಂದ ಆಸ್ಟ್ರೇಲಿಯಾಕ್ಕೆ ತಂಡವು ತೆರಳುವುದು. ಮೂರು ಏಕದಿನ ಪಂದ್ಯಗಳಲ್ಲಿ (ಸೆ. 19ರಿಂದ 24) ಮತ್ತು ಮೂರು ಟಿ20 ಪಂದ್ಯಗಳನ್ನು (ಅ. 7 ರಿಂದ 11) ಆಡಲಿದೆ.

ಭಾರತವು ಆಸ್ಟ್ರೇಲಿಯಾದ ವಿರುದ್ಧ ಕೊನೆಯ ಬಾರಿಗೆ 2006ರಲ್ಲಿ ಟೆಸ್ಟ್ ಪಂದ್ಯ ಆಡಿತ್ತು. ಮಹಿಳಾ ಕ್ರಿಕೆಟ್‌ನಲ್ಲಿ 2017ರಲ್ಲಿ ನಡೆದಿದ್ದ ಹೊನಲು ಬೆಳಕಿನ ಟೆಸ್ಟ್‌ನಲ್ಲಿ ಆಸ್ಟ್ರೇಲಿಯಾ ಮತ್ತು ಇಂಗ್ಲೆಂಡ್ ತಂಡಗಳು ಸಿಡ್ನಿಯಲ್ಲಿ ಆಡಿದ್ದವು. ಅದರ ನಂತರ ಈಗ ಮತ್ತೊಂದು ಪ್ರಯೋಗಕ್ಕಾಗಿ ಸಿದ್ಧತೆ ನಡೆಯುತ್ತಿದೆ.

'ಈ ಸಂದರ್ಭದಲ್ಲಿ ಇಂತಹ ಆಯೋಜನೆಯು ಸವಾಲಿನದ್ದು ನಿಜ. ಆದರೆ, ಮಹಿಳಾ ಕ್ರಿಕೆಟಗರಿಗೆ ಟೆಸ್ಟ್ ಆಡುವ ಉತ್ತಮ ಅವಕಾಶ ಲಭಿಸುತ್ತಿದೆ. ಅದರಲ್ಲೂ ಆಸ್ಟ್ರೇಲಿಯಾದಲ್ಲಿ ಪಿಂಕ್‌ಬಾಲ್ ಟೆಸ್ಟ್ ಆಡುವುದು ಕಠಿಣ ಸವಾಲು. ಆದರೆ ನಮ್ಮ ತಂಡವು ಉತ್ತಮವಾಗಿ ಸಿದ್ಧತೆ ಮಾಡಿಕೊಳ್ಳುವುದು ಖಚಿತ' ಎಂದು ಜಯ್ ಶಾ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಭಾರತ ಮಹಿಳಾ ತಂಡದವರು ಅಭ್ಯಾಸ ಮಾಡಿದ ಸಂದರ್ಭದ ಸಂಗ್ರಹ ಚಿತ್ರ

ದೇಶಿ ಸರಣಿ ಆಯೋಜಿಸಿ: ಶಾಂತಾ

ನವದೆಹಲಿ: ಮಹಿಳೆಯರ ಟೆಸ್ಟ್ ಕ್ರಿಕೆಟ್ ಮತ್ತೆ ಆರಂಭವಾಗುತ್ತಿರುವುದು ಸ್ವಾಗತಾರ್ಹ. ಭಾರತ ತಂಡವು ಇದೇ ವರ್ಷ ಆಸ್ಟ್ರೇಲಿಯಾದಲ್ಲಿ ಪಿಂಕ್ ಬಾಲ್ ಟೆಸ್ಟ್ ಆಡಲು ತೆರಳುವ ಮುನ್ನ ದೇಶಿ ವಿಭಾಗದಲ್ಲಿ ಹೊನಲು ಬೆಳಕಿನ ಪಂದ್ಯಗಳನ್ನು ಆಯೋಜಿಸಬೇಕು ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಅಪೆಕ್ಸ್ ಕೌನ್ಸಿಲ್ ಸದಸ್ಯೆ ಶಾಂತಾ ರಂಗಸ್ವಾಮಿ ಸಲಹೆ ನೀಡಿದ್ದಾರೆ. ಭಾರತ ತಂಡವು ಮುಂದಿನ ತಿಂಗಳು ಇಂಗ್ಲೆಂಡ್ ವಿರುದ್ಧ ಟೆಸ್ಟ್ ಆಡಲಿದೆ. ಕಳೆದ ಏಳು ವರ್ಷಗಳಿಂದ ತಂಡವು ಟೆಸ್ಟ್‌ನಲ್ಲಿ ಆಡಿಲ್ಲ. 2018ರಿಂದ ಮಹಿಳೆಯರ ದೇಶಿ ಕ್ರಿಕೆಟ್ ಟೂರ್ನಿಗಳೂ ಹೆಚ್ಚು ನಡೆದಿಲ್ಲ.

ಶಾಂತಾ ರಂಗಸ್ವಾಮಿ

'ಹೋದ ವರ್ಷ ಮಹಿಳೆಯರಿಗಾಗಿ ಕೆಲವು ಟೂರ್ನಿಗಳನ್ನು ಆಯೋಜಿಸಲು ಬಿಸಿಸಿಐ ಚಿಂತನೆ ಮಾಡಿತ್ತು. ಆದರೆ ಕೋವಿಡ್ ಕಾರಣದಿಂದಾಗಿ ಎಲ್ಲ ಯೋಜನೆಗಳು ತಲೆಕೆಳಗಾದವು. ಇದೀಗ ಇಂಗ್ಲೆಂಡ್ ಟೆಸ್ಟ್ ಪ್ರವಾಸಕ್ಕೆ ಯೋಜನೆ ಮಾಡಿದೆ. ಇದರೊಂದಿಗೆ ಆಸ್ಟ್ರೇಲಿಯಾ ವಿರುದ್ಧದ ಹೊನಲು ಬೆಳಕಿನ ಟೆಸ್ಟ್ ಪಂದ್ಯದ ದಿನಾಂಕ ಪ್ರಕಟಿಸಿರುವುದು ಶ್ಲಾಘನೀಯ. ದೀರ್ಘ ಮಾದರಿಯ ಕ್ರಿಕೆಟ್‌ಗೆ ಹೆಚ್ಚು ಒತ್ತು ಕೊಡಬೇಕು. ಆದರೆ ಕೆಂಪು ಚೆಂಡಿನ ಕ್ರಿಕೆಟ್‌ನಲ್ಲಿ ಭಾರತದ ಆಟಗಾರ್ತಿಯರು ಹೆಚ್ಚು ಆಡಿದ ಅನುಭವ ಇಲ್ಲ. ಆದ್ದರಿಂದ ದೇಶಿ ಟೂರ್ನಿಗಳನ್ನು ಆಯೋಜಿಸಬೇಕು' ಎಂದು ಹೇಳಿದರು.

'ಪುರುಷರ ತಂಡವು ಜುಲೈನಲ್ಲಿ ಶ್ರೀಲಂಕಾದಲ್ಲಿ ಸರಣಿ ಆಡಲು ತೆರಳುತ್ತಿರುವುದು ಸಂತಸದ ವಿಷಯ. ಅದೇ ಹೊತ್ತಿಗೆ ಶ್ರೀಲಂಕಾದಲ್ಲಿಯೇ ಮಹಿಳೆಯರಿಗಾಗಿಯೂ ಒಂದು ಸರಣಿ ಆಯೋಜಿಸುವುದು ಒಳ್ಳೆಯದು' ಎಂದು ಭಾರತ ಮಹಿಳಾ ತಂಡದ ಮಾಜಿ ನಾಯಕಿ ಶಾಂತಾ ಸಲಹೆ ನೀಡಿದರು.

ಶ್ರೀಲಂಕಾ ಪ್ರವಾಸ: ಭಾರತ ತಂಡಕ್ಕೆ ದ್ರಾವಿಡ್ ಕೋಚ್

ನವದೆಹಲಿ/ಕೊಲಂಬೊ: ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿ (ಎನ್‌ಸಿಎ) ಮುಖ್ಯಸ್ಥ ರಾಹುಲ್ ದ್ರಾವಿಡ್ ಅವರನ್ನು ಜುಲೈನಲ್ಲಿ ಶ್ರೀಲಂಕಾ ಪ್ರವಾಸ ಕೈಗೊಳ್ಳಲಿರುವ ಭಾರತ ತಂಡದ ಮುಖ್ಯ ಕೋಚ್ ಆಗಿ ನೇಮಕ ಮಾಡಲಾಗಿದೆ.

ವಿರಾಟ್ ಕೊಹ್ಲಿ ಬಳಗ ಇಂಗ್ಲೆಂಡ್ ಎದುರಿನ ಟೆಸ್ಟ್ ಸರಣಿ ಮತ್ತು ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್‌ನಲ್ಲಿ ಪಾಲ್ಗೊಳ್ಳಲಿದೆ. ಇದೇ ಸಂದರ್ಭದಲ್ಲಿ ಮತ್ತೊಂದು ತಂಡ ಶ್ರೀಲಂಕಾಗೆ ತೆರಳಲಿದೆ. ಮುಖ್ಯ ಕೋಚ್ ರವಿಶಾಸ್ತ್ರಿ ಅವರು ಕೊಹ್ಲಿ ಬಳಗದೊಂದಿಗೆ ಇರುವರು.

ಶ್ರೀಲಂಕಾ ಪ್ರವಾಸ ಕೈಗೊಳ್ಳುವ ತಂಡಕ್ಕೆ ಕೋಚ್ ಆಗಿ ರಾಹುಲ್ ದ್ರಾವಿಡ್ ಅವರನ್ನು ಪರಿಗಣಿಸುವ ಸಾಧ್ಯತೆ ಇದೆ ಎಂಬ ವದಂತಿ ಇತ್ತು. ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಗುರುವಾರ ಇದನ್ನು ಖಚಿತಪಡಿಸಿದೆ. ಪಾರಸ್ ಮ್ಹಾಂಬ್ರೆ ಅವರು ಬೌಲಿಂಗ್ ಕೋಚ್ ಆಗಿರುವರು ಎಂದು ತಿಳಿಸಲಾಗಿದೆ.

ಶ್ರೀಲಂಕಾದಲ್ಲಿ ಭಾರತ ತಂಡ ತಲಾ ಮೂರು ಏಕದಿನ ಮತ್ತು ಟಿ20 ಪಂದ್ಯಗಳನ್ನು ಆಡಲಿದೆ. ತಂಡ ದಲ್ಲಿ ಯುವ ಆಟಗಾರರು ಮತ್ತು ಏಕದಿನ ಹಾಗೂ ಟಿ20 ಕ್ರಿಕೆಟ್‌ನಲ್ಲಿ ಪಳಗಿರುವವರು ಇದ್ದಾರೆ. ನಾಯಕ ಸ್ಥಾನಕ್ಕೆ ಹಾರ್ದಿಕ್ ಪಾಂಡ್ಯ, ಶಿಖರ್ ಧವನ್ ಮತ್ತು ಶ್ರೇಯಸ್ ಅಯ್ಯರ್ ಅವರ ಪೈಕಿ ಒಬ್ಬರನ್ನು ಪರಿಗಣಿಸುವ ಸಾಧ್ಯತೆ ಇದೆ.

ರಾಹುಲ್ ದ್ರಾವಿಡ್ –ಪ್ರಜಾವಾಣಿ ಚಿತ್ರ

ಹೆಚ್ಚುವರಿ ಪಂದ್ಯಗಳ ಸಾಧ್ಯತೆ: ಕೋವಿಡ್‌ನಿಂದ ಉಂಟಾಗಿರುವ ನಷ್ಟವನ್ನು ಸರಿದೂಗಿಸಲು ಪ್ರವಾಸಿ ತಂಡಗಳೊಂದಿಗೆ ಹೆಚ್ಚುವರಿ ಪಂದ್ಯಗಳನ್ನು ಆಯೋಜಿಸಲು ಶ್ರೀಲಂಕಾ ಕ್ರಿಕೆಟ್ ನಿರ್ಧರಿಸಿದೆ. ಹೀಗಾಗಿ ಭಾರತ ತಂಡ ಹೆಚ್ಚುವರಿಯಾಗಿ ಮೂರು ಏಕದಿನ ಪಂದ್ಯಗಳನ್ನು ಆಡುವ ಸಾಧ್ಯತೆ ಇದೆ. ಆಗಸ್ಟ್‌ನಲ್ಲಿ ದಕ್ಷಿಣ ಆಫ್ರಿಕಾ ಎದುರು, ಸೆಪ್ಟೆಂಬರ್‌ನಲ್ಲಿ ಸ್ಕಾಟ್ಲೆಂಡ್ ವಿರುದ್ಧ ಮತ್ತು ನವೆಂಬರ್‌ನಲ್ಲಿ ಅಫ್ಗಾನಿಸ್ತಾನ ವಿರುದ್ಧ ಶ್ರೀಲಂಕಾದ ಸರಣಿಗಳು ನಡೆಯಲಿವೆ. ಕಳೆದ ವರ್ಷ ಮಾರ್ಚ್ ತಿಂಗಳಲ್ಲಿ ಇಂಗ್ಲೆಂಡ್ ತಂಡ ಲಂಕಾ ಪ್ರವಾಸವನ್ನು ರದ್ದುಗೊಳಿಸಿತ್ತು. ಆದರೆ ಡಿಸೆಂಬರ್‌ನಲ್ಲಿ ಸರಣಿ ನಡೆದಿತ್ತು. ಆ ಪಂದ್ಯಗಳಿಗೆ ಪ್ರೇಕ್ಷಕರಿಗೆ ಪ್ರವೇಶ ಇರಲಿಲ್ಲ. ಶ್ರೀಲಂಕಾ ತಂಡ ಸದ್ಯ ಬಾಂಗ್ಲಾದೇಶದಲ್ಲಿದ್ದು ಮೂರು ಏಕದಿನ ಪಂದ್ಯಗಳನ್ನು ಆಡಲಿದೆ.

ಶಮ್ಮಿ ಪುನರಾಯ್ಕೆ

ಕೊಲಂಬೊ (ಪಿಟಿಐ): ಶ್ರೀಲಂಕಾ ಕ್ರಿಕೆಟ್‌ನ ಅಧ್ಯಕ್ಷರಾಗಿ ಮತ್ತೊಮ್ಮೆ ಶಮ್ಮಿ ಸಿಲ್ವಾ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾ ಸಮಿತಿ ಗುರುವಾರ ತಿಳಿಸಿದೆ. 2023ರ ವರೆಗೆ ಅವರು ಈ ಹುದ್ದೆಯಲ್ಲಿರುತ್ತಾರೆ. 2019ರಲ್ಲಿ ಅವರು ಮೊದಲ ಬಾರಿ ಅಧ್ಯಕ್ಷರಾಗಿ ಆಯ್ಕೆಯಾಗಿದ್ದರು. ಅದಕ್ಕೂ ಮೊದಲು ಉಪಾಧ್ಯಕ್ಷರಾಗಿದ್ದರು.

ಶಮ್ಮಿ ಸಿಲ್ವಾ – ಟ್ವಿಟರ್ ಚಿತ್ರ

ಉಪಾಧ್ಯಕ್ಷರಾಗಿ ರವಿನ್ ವಿಕ್ರಮರತ್ನೆ ಮತ್ತು ಜಯಂತ ಧರ್ಮದಾಸ, ಕಾರ್ಯದರ್ಶಿಯಾಗಿ ಮೋಹನ್ ಡಿ ಸಿಲ್ವಾ ಆಯ್ಕೆಯಾಗಿದ್ದಾರೆ.

ಕ್ರೀಡಾಪಟುಗಳ ವಿಮೆ: ಸಂಖ್ಯೆ ಹೆಚ್ಚಳ

ನವದೆಹಲಿ (ಪಿಟಿಐ): ಕ್ರೀಡಾಪಟುಗಳು, ಕೋಚ್‌ಗಳು ಮತ್ತು ಸಿಬ್ಬಂದಿಗೆ ನೀಡುವ ವೈದ್ಯಕೀಯ ಮತ್ತು ಅಪಘಾತ ವಿಮೆಯ ಫಲಾನುಭವಿಗಳ ಸಂಖ್ಯೆಯನ್ನು ಹೆಚ್ಚಿಸಲು ಕೇಂದ್ರ ಸರ್ಕಾರ ನಿರ್ಧರಿಸಿದೆ. ಈ ವರ್ಷ 13,000 ಮಂದಿ ವಿಮೆ ಸೌಲಭ್ಯ ಪಡೆದುಕೊಳ್ಳಲಿದ್ದಾರೆ ಎಂದು ಭಾರತ ಕ್ರೀಡಾ ಪ್ರಾಧಿಕಾರ ತಿಳಿಸಿದೆ.

'ರಾಷ್ಟ್ರೀಯ ಶಿಬಿರಕ್ಕೆ ಆಯ್ಕೆಯಾದವರು, ಆಯ್ಕೆಯಾಗುವ ಸಾಧ್ಯತೆ ಇರುವವರು, ಖೇಲೊ ಇಂಡಿಯಾದಲ್ಲಿ ಪಾಲ್ಗೊಳ್ಳುವವರು, ಸಾಯ್‌ನಲ್ಲಿ ತರಬೇತಿ ಪಡೆಯುತ್ತಿರುವ ಜೂನಿಯರ್ ಕ್ರೀಡಾಪಟುಗಳು ತಲಾ ₹ ಐದು ಲಕ್ಷ ವಿಮೆಗೆ ಒಳಗಾಗಲಿದ್ದಾರೆ' ಎಂದು ಕ್ರೀಡಾ ಸಚಿವ ಕಿರಣ್ ರಿಜಿಜು ತಿಳಿಸಿದ್ದಾರೆ.

ಮಿಲ್ಖಾ ಸಿಂಗ್‌ಗೆ ಕೋವಿಡ್

ನವದೆಹಲಿ/ಚಂಡೀಗಢ (ಪಿಟಿಐ): ಸ್ಪ್ರಿಂಟ್ ದಿಗ್ಗಜ ಮಿಲ್ಖಾ ಸಿಂಗ್ ಅವರಿಗೆ ಕೊವಿಡ್ ಇರುವುದು ಗುರುವಾರ ದೃಢಪಟ್ಟಿದೆ. ಅವರು ಚಂಡೀಗಢದಲ್ಲಿರುವ ತಮ್ಮ ನಿವಾಸದಲ್ಲಿ ಪ್ರತ್ಯೇಕವಾಸದಲ್ಲಿದ್ದಾರೆ.

ಮಿಲ್ಖಾ ಸಿಂಗ್ –ಪಿಟಿಐ ಚಿತ್ರ

'ಕೋವಿಡ್ ಲಕ್ಷಣ ಇರಲಿಲ್ಲ. ಆದರೆ ಕೆಲಸಕ್ಕಿದ್ದ ವ್ಯಕ್ತಿಯೊಬ್ಬರಿಗೆ ಪಾಸಿಟಿವ್ ಆಗಿತ್ತು. ಹೀಗಾಗಿ ಎಲ್ಲರೂ ಪರೀಕ್ಷೆ ಮಾಡಿಸಿಕೊಂಡೆವು. ಬುಧವಾರ ವರದಿ ಬಂದಿದ್ದು ನನಗೆ ಮಾತ್ರ ಸೋಂಕು ಇರುವುದು ದೃಢವಾಗಿದೆ. ಇದನ್ನು ಕಂಡು ಅಚ್ಚರಿ ಯಾಗಿದೆ' ಎಂದು ಮಿಲ್ಖಾ ಸಿಂಗ್ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

'ನನಗೀಗ 91 ವರ್ಷ. ನಿತ್ಯವೂ ವ್ಯಾಯಾಮ ಮಾಡುತ್ತೇನೆ. ಕೋವಿಡ್ ಕಾಲದಲ್ಲಿ ದೈಹಿಕ ಚಟುವಟಿಕೆಗಳನ್ನು ನಡೆಸುವುದು ಮತ್ತು ಆರೋಗ್ಯಕರವಾಗಿ ಇರುವುದು ಮುಖ್ಯ ಎಂದು ಪ್ರತಿಯೊಬ್ಬರಿಗೂ ಹೇಳುತ್ತಿದ್ದೇನೆ' ಎಂದು ಅವರು ತಿಳಿಸಿದ್ದಾರೆ.

ಏಷ್ಯನ್ ಗೇಮ್ಸ್‌ನಲ್ಲಿ ನಾಲ್ಕು ಚಿನ್ನ ಗೆದ್ದಿರುವ ಮಿಲ್ಖಾ ಸಿಂಗ್ ಕಾಮನ್ವೆಲ್ತ್ ಗೇಮ್ಸ್‌ನಲ್ಲೂ ಚಿನ್ನದ ಪದಕ ಗೆದ್ದಿದ್ದರು. ರೋಮ್ ಒಲಿಂಪಿಕ್ಸ್‌ನ 400 ಮೀಟರ್ಸ್ ಓಟದಲ್ಲಿ ನಾಲ್ಕನೇ ಸ್ಥಾನ ಗಳಿಸಿದ್ದರು. ಅಲ್ಲಿ ಅವರು ಗುರಿ ಮುಟ್ಟಿದ ಅವಧಿ ರಾಷ್ಟ್ರೀಯ ದಾಖಲೆಯಾಗಿತ್ತು.

ಭುವನೇಶ್ವರ್ ಕುಮಾರ್‌ಗೆ ಪಿತೃವಿಯೋಗ

ನವದೆಹಲಿ (ಪಿಟಿಐ): ಭಾರತ ಕ್ರಿಕೆಟ್ ತಂಡದ ಮಧ್ಯಮವೇಗಿ ಭುವನೇಶ್ವರ್ ಕುಮಾರ್ ಅವರ ತಂದೆ ಕಿರಣಪಾಲ್ ಸಿಂಗ್ (63) ಗುರುವಾರ ನಿಧನರಾದರು.

ಅವರು ಕಳೆದ ಎಂಟು ತಿಂಗಳುಗಳಿಂದ ಜಠರದ ಕ್ಯಾನ್ಸರ್‌ನಿಂದ ಬಳಲುತ್ತಿದ್ದರು. ಎರಡು ವಾರಗಳ ಹಿಂದೆ ಮೀರತ್‌ನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅವರಿಗೆ ಪತ್ನಿ ಇಂದ್ರೇಶದೇವಿ, ಮಗ ಭುವನೇಶ್ವರ್ ಕುಮಾರ್ ಮತ್ತು ಮಗಳು ರೇಖಾ ಇದ್ದಾರೆ.

ನಿಧನ ಸುದ್ದಿ

ಹಾಕಿ ಕೋಚ್ ಮನೋಹರ್ ಕಾಟ್ಕೆ

ಬೆಂಗಳೂರು: ಭಾರತ ಕ್ರೀಡಾ ಪ್ರಾಧಿಕಾರದ ಹಾಕಿ ಕೋಚ್ ಆಗಿದ್ದ ಮನೋಹರ ಎಸ್.ಕಾಟ್ಕೆ (66) ಗುರುವಾರ ಹೃದಯಾಘಾತದಿಂದ ನಿಧನರಾದರು ಎಂದು ಹಾಕಿ ಕರ್ನಾಟಕ ತಿಳಿಸಿದೆ. ಅವರಿಗೆ ಪತ್ನಿ ಮತ್ತು ಪುತ್ರ ಇದ್ದಾರೆ. ಮೈಸೂರು ಮತ್ತು ಮಡಿಕೇರಿಯ ಕೋಚ್ ಆಗಿದ್ದ ಅವರು 1984ರಿಂದ ಸಾಯ್‌ನಲ್ಲಿ ದ್ದರು. ಬೆಂಗಳೂರಿನ ಸೇಂಟ್ ಜೋಸೆಫ್ ಇಂಡಿಯನ್ ಹೈಸ್ಕೂಲ್‌ನಲ್ಲೂ ಕಾರ್ಯನಿರ್ವಹಿಸಿದ್ದರು. ರಾಜ್ಯ ಮತ್ತು ಬೆಂಗ ಳೂರು ವಿವಿ ತಂಡಕ್ಕೂ ತರಬೇತಿ ನೀಡಿದ್ದಾರೆ.

ಮನೋಹರ ಎಸ್.ಕಾಟ್ಕೆ

ಅವರ ಬಳಿ ತರಬೇತಿ ಪಡೆದವರು ಒಲಿಂಪಿಕ್ಸ್, ವಿಶ್ವಕಪ್, ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಪಾಲ್ಗೊಂಡಿದ್ದಾರೆ. ಅರ್ಜುನ್ ಹಾಲಪ್ಪ, ವಿ.ಆರ್. ರಘುನಾಥ್, ವಿಕ್ರಂ ಕಾಂತ್, ನಿಕಿನ್ ತಿಮ್ಮಯ್ಯ, ಎಸ್.ಕೆ.ಉತ್ತಪ್ಪ, ನಿತಿನ್ ತಿಮ್ಮಯ್ಯ. ಬಿ.ಎಂ.ಗೀತಾ, ಸುಜಾತ, ಹೇಮಲತಾ ಈ ಪೈಕಿ ಪ್ರಮುಖರು.

ವಾಲಿಬಾಲ್ ಆಟಗಾರ ವೆಂಕಟೇಶ್

ನಂಗಲಿ: ರಾಷ್ಟ್ರೀಯ ವಾಲಿಬಾಲ್ ಮಾಜಿ ಆಟಗಾರ ಎನ್.ಕೆ. ವೆಂಕಟೇಶ್(48) ಕೋವಿಡ್‌ನಿಂದ ಗುರುವಾರ ನಿಧನರಾಗಿದ್ದಾರೆ.

ಮೃತರಿಗೆ ಪತ್ನಿ ಮತ್ತು ಇಬ್ಬರು ಪುತ್ರಿಯರು ಇದ್ದಾರೆ.

ವೆಂಕಟೇಶ್

ಕೊರೊನಾ ಸೋಂಕಿನಿಂದ ಬಳಲುತ್ತಿದ್ದ ಅವರನ್ನು ಬೆಂಗ ಳೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ. ಸಂಜೆ ಅಂತ್ಯಸಂಸ್ಕಾರ ನೆರವೇರಿತು. 1990–91ರಲ್ಲಿ ಕೋಯಿಕ್ಕೋಡ್‌ನಲ್ಲಿ ನಡೆದಿದ್ದ ರಾಷ್ಟ್ರೀಯ ವಾಲಿಬಾಲ್ ಟೂರ್ನಿಯಲ್ಲಿ ಕರ್ನಾಟಕದ ಪರವಾಗಿ ಕೇರಳ ರಾಜ್ಯದ ವಿರುದ್ಧ ಆಡಿದ್ದರು. ಒಟ್ಟು 13 ಪಂದ್ಯಗಳಲ್ಲಿ ರಾಜ್ಯವನ್ನು ಪ್ರತಿನಿಧಿಸಿದ್ದರು.

ಐಪಿಎಲ್‌ಗಾಗಿ ಟೆಸ್ಟ್ ಸರಣಿ ಮುಂದೂಡಿಕೆ?

ಲಂಡನ್ (ಪಿಟಿಐ): ಕೋವಿಡ್‌ನಿಂದಾಗಿ ಮುಂದೂಡಿರುವ ಐಪಿಎಲ್ ಟೂರ್ನಿಯನ್ನು ಪೂರ್ಣಗೊಳಿಸುವುದಕ್ಕಾಗಿ ಭಾರತದ ಎದುರಿನ ಟೆಸ್ಟ್ ಸರಣಿಯನ್ನು ಮುಂದೂಡುವಂತೆ ಇಂಗ್ಲೆಂಡ್ ಮತ್ತು ವೇಲ್ಸ್ ಕ್ರಿಕೆಟ್ ಮಂಡಳಿಯನ್ನು (ಇಸಿಬಿ) ಬಿಸಿಸಿಐ ಕೋರಿದೆ.

ಈ ವಿಷಯವನ್ನು ಬಿಸಿಸಿಐ ಅಥವಾ ಇಸಿಬಿ ಅಧಿಕೃತವಾಗಿ ಹೇಳಿಕೊಂಡಿಲ್ಲ. ಆದರೆ ಇಂಗ್ಲೆಂಡ್ ತಂಡದ ಮಾಜಿ ನಾಯಕ ಹಾಗೂ ಹೆಸರಾಂತ ಕ್ರಿಕೆಟಿಗ ಮೈಕೆಲ್ ಅಥರ್ಟನ್ ಈ ಬೆಳವಣಿಗೆಗಳ ಬಗ್ಗೆ ಮಾಹಿತಿ ನೀಡಿರುವುದಾಗಿ ಸ್ಥಳೀಯ ಪತ್ರಿಕೆ ವರದಿ ಮಾಡಿದೆ.

ಇಂಗ್ಲೆಂಡ್‌ನಲ್ಲಿ ನಡೆಯಲಿರುವ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್ ನಂತರ ಟೆಸ್ಟ್ ಸರಣಿ ಅರಂಭವಾಗಲು ಆರು ವಾರಗಳ ಕಾಲಾವಕಾಶವಿದೆ. ಆಗಸ್ಟ್ ನಾಲ್ಕರಿಂದ ಸರಣಿ ನಡೆಯಲಿದೆ. ಈ ಅವಕಾಶವನ್ನು ಬಳಸಿಕೊಂಡು ಇಂಗ್ಲೆಂಡ್ ಅಥವಾ ಯುಎಇಯಲ್ಲಿ ಐಪಿಎಲ್ ಆಯೋಜಿಸಲು ಬಿಸಿಸಿಐ ಚಿಂತನೆ ನಡೆಸಿದೆ.

ಮೂರು ತಿಂಗಳಲ್ಲಿ 84 ಲಕ್ಷ ಉದ್ಯೋಗ ನಷ್ಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದಲ್ಲಿ ಕೋವಿಡ್–19ರ ಎರಡನೆಯ ಅಲೆಯು ತೀವ್ರಗೊಂಡ ನಂತರದಲ್ಲಿ ಜನ ಉದ್ಯೋಗ ಕಳೆದುಕೊಳ್ಳುತ್ತಿರುವ ಪ್ರಮಾಣವೂ ಜಾಸ್ತಿ ಆಗಿದೆ ಎಂದು 'ಸೆಂಟರ್ ಫಾರ್ ಮಾನಿಟರಿಂಗ್ ಇಂಡಿಯನ್ ಎಕಾನಮಿ' (ಸಿಎಂಐಇ) ಸಂಸ್ಥೆ ಸಿದ್ಧಪಡಿಸಿರುವ ವರದಿಯೊಂದು ಹೇಳಿದೆ.

ಮಾಸಿಕ ವೇತನ ಸಿಗುವ ಉದ್ಯೋಗಗಳ ಸಂಖ್ಯೆಯು ಏಪ್ರಿಲ್ ತಿಂಗಳಿನಲ್ಲಿ 34 ಲಕ್ಷದಷ್ಟು ಕಡಿಮೆ ಆಗಿದೆ ಎಂದು ಸಿಎಂಐಇ ಹೇಳಿದೆ. 'ಹೆಚ್ಚಿನವರು ಬಯಸುವ ಈ ಬಗೆಯ, ಸಂಬಳದ ಉದ್ಯೋಗಗಳ ಸಂಖ್ಯೆಯು ಫೆಬ್ರುವರಿ ನಂತರ ಕಡಿಮೆ ಆಗುತ್ತಿದೆ. ಫೆಬ್ರುವರಿ, ಮಾರ್ಚ್, ಏಪ್ರಿಲ್ ತಿಂಗಳುಗಳಲ್ಲಿ ದೇಶದಲ್ಲಿ ಆಗಿರುವ ಈ ಬಗೆಯ ಉದ್ಯೋಗಗಳ ನಷ್ಟ 86 ಲಕ್ಷ' ಎಂದು ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಮಹೇಶ್ ವ್ಯಾಸ್ ಸಿದ್ಧಪಡಿಸಿರುವ ವರದಿ ಹೇಳಿದೆ.

ದೇಶದಲ್ಲಿ 2019–20ರಲ್ಲಿ ಮಾಸಿಕ ವೇತನ ಕೊಡುವ ಒಟ್ಟು 8.59 ಕೋಟಿ ಉದ್ಯೋಗಗಳು ಇದ್ದವು. ಇದರ ಸಂಖ್ಯೆಯು ಈ ವರ್ಷದ ಏಪ್ರಿಲ್ ವೇಳೆಗೆ 7.33 ಕೋಟಿಗೆ ಇಳಿಕೆ ಕಂಡಿದೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಮುಖ್ಯಾಂಶಗಳು
- ಕೃಷಿ ಕ್ಷೇತ್ರದಲ್ಲೂ ಉದ್ಯೋಗ ನಷ್ಟ
- ಕೆಲಸ ಅರಸುತ್ತಿರುವವರ ಸಂಖ್ಯೆ ಹೆಚ್ಚಳ
- ಎರಡನೆಯ ಅಲೆ ಆರ್ಥಿಕ ಪುನಶ್ಚೇತನಕ್ಕೆ ಅಡ್ಡಿ

ಈ ವರ್ಷದ ಮಾರ್ಚ್ ಹಾಗೂ ಏಪ್ರಿಲ್ ತಿಂಗಳಲ್ಲಿ ಕೆಲಸ ಅರಸುವವರ ಸಂಖ್ಯೆಯಲ್ಲಿಯೂ ಏರಿಕೆ ಆಗಿದೆ. ಕೆಲಸ ಮಾಡಲು ಸಿದ್ಧವಿರುವ, ಸಕ್ರಿಯವಾಗಿ ಕೆಲಸ ಅರಸುತ್ತಿರುವವರ ಸಂಖ್ಯೆಯಲ್ಲಿ 62 ಲಕ್ಷದಷ್ಟು ಹೆಚ್ಚಳ ಕಂಡುಬಂದಿದೆ. ಇಂಥವರ ಸಂಖ್ಯೆ ಮಾರ್ಚ್‌ನಲ್ಲಿ 2.77 ಕೋಟಿ ಇತ್ತು. ಇದು ಏಪ್ರಿಲ್‌ಗೆ 3.39 ಕೋಟಿಗೆ ತಲುಪಿದೆ.

ಹಿಂದಿನ ವರ್ಷದ ಲಾಕ್‌ಡೌನ್ ನಂತರದಲ್ಲಿ ಬೆಳ್ಳಿ ರೇಖೆಯಂತೆ ಕಾಣಿಸಿದ್ದ ಕೃಷಿ ವಲಯದಲ್ಲಿಯೂ ಉದ್ಯೋಗ ಸಂಖ್ಯೆ ಕಡಿಮೆ ಆಗಿರುವುದನ್ನು ಸಿಎಂಐಇ ಗುರುತಿಸಿದೆ. ಮಾರ್ಚ್‌ನಲ್ಲಿ ದೇಶದ ಕೃಷಿ ವಲಯವು 12 ಕೋಟಿ ಜನರಿಗೆ ಉದ್ಯೋಗ ನೀಡಿತ್ತು. ಇದು ಏಪ್ರಿಲ್‌ನಲ್ಲಿ 11.4 ಕೋಟಿಗೆ ಇಳಿದಿದೆ.

2021–22ರಲ್ಲಿ ಕೂಡ ಉದ್ಯೋಗ ಮಾರುಕಟ್ಟೆಯ ಚಿತ್ರಣವು ಆಶಾದಾಯಕವಾಗಿ ಕಾಣಿಸುತ್ತಿಲ್ಲ. ಕೋವಿಡ್–19ರ ಎರಡನೆಯ ಅಲೆಯು ಆರ್ಥಿಕ ಪುನಶ್ಚೇತನಕ್ಕೆ ಅಡ್ಡಿಯಾಗಿ ನಿಂತಿದೆ. ಹೊಸ ಉದ್ಯೋಗಗಳನ್ನು ದೊಡ್ಡ ಪ್ರಮಾಣದಲ್ಲಿ ಸೃಷ್ಟಿಸಬಲ್ಲ ಹೂಡಿಕೆಗಳು ಈ ವರ್ಷ ಆಗುವ ಸಾಧ್ಯತೆ ಕಡಿಮೆ. ಸರ್ಕಾರಗಳು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ (ನರೇಗಾ) ಅಡಿಯಲ್ಲಿ ಉದ್ಯೋಗ ಕಲ್ಪಿಸಿ, ಬೆಂಬಲವಾಗಿ ನಿಲ್ಲಬೇಕಾಗಬಹುದು ಎಂದು ವರದಿಯಲ್ಲಿ ವಿವರಿಸಲಾಗಿದೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	15030
ಇಂದಿನ ಅಂತ್ಯ	14906
▼	124
ದಿನದ ಗರಿಷ್ಠ	15069

ವಿನಿಮಯ ದರ

$ ಡಾಲರ್	73.12
£ ಪೌಂಡ್	103.24
€ ಯುರೊ	89.1
¥ ಯೆನ್ (100ಕ್ಕೆ)	67.12

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹500
12 ಮೊಟ್ಟೆಗೆ	₹66
ಮೈಸೂರು	
100 ಮೊಟ್ಟೆಗೆ	₹500

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1570 (1570)
ಸೋಯಾ (ರಿಫೈನ್ಡ್)	₹1460 (1477)
ಸೂರ್ಯಕಾಂತಿ (ರಿಫೈನ್ಡ್)	₹1670 (1700)
ಪಾಮೋಲಿನ್	₹1345 (1360)

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ	
ಬಂಟ್ವಾಳ	
ಹೊಸತು	23500-40000
ಹಳತು	42500-50000
ಕಾರ್ಕಳ	
ಹೊಸತು	36000-40000
ಪುತ್ತೂರು	
ಹೊಸತು	28000-39500
ಸುಳ್ಯ	
ಹೊಸತು	23500-39000
ಯಲ್ಲಾಪುರ	
ಬಿಳಿಗೋಟು	27210-31110
ಚಾಲಿ	32610-36180
ರಾಶಿ	38780-39510
ತಟ್ಟಿಬೆಟ್ಟೆ	34090-34090
ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	700- 800
ನಡುಗೋಲು	850-900
ರಾಶಿ	950-1000
ರಾಶಿ ಉತ್ತಮ	1000-1050
ಜರಡಿ	1150 -1200
ಹೆರಕಿದ್ದು	1500-1600
ಹಸಿರು ಸಾಧಾರಣ	900-1000
ಹಸಿರು ಉತ್ತಮ	1100-1200
ಹಸಿರು ಅತಿ ಉತ್ತಮ	1400-1500
ಕಾಳು ಮೆಣಸು	340
ರೇಷ್ಮೆಗೂಡು	
ರಾಮನಗರ	
ಮಿಶ್ರ ತಳಿ (ಸಿ.ಬಿ)	215-350
ದ್ವಿತಳಿ (ಬಿ.ವಿ)	280-385

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	10,350	10,350	10,350	150.95
ಎಸಿ	4,145	4,000	3950	ಲಂಡನ್
ಆರ್‌ಪಿ	3,000	5,050	5,160	1502
ಆರ್‌ಸಿ	3,000	2,970	2960	

ಮುಂಬೈ ಧಾರಣೆ

ಶೇಂಗಾ

20-5-2021

ಜಾವಾ 70/80(ಹೊಸ)	9850-9900
ಜಾವಾ 80/90(ಹೊಸ)	9350-9400
ದಪ್ಪ ಮಧ್ಯಪ್ರದೇಶ(ಹೊಸ)	10150-10200
ದಪ್ಪ ಗುಜರಾತ್(ಹೊಸ)	9400-9500

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1580 (1580)
ಒಂದು ವಾರದ ಡೆಲಿವರಿ	1575 (1575)
ಸೋಯಾ ಕಚ್ಚಾ	1420 (1440)
ಪಾಮ್ ವಾರದ ಡೆಲಿವರಿ	1343 (1358)
ಸೂರ್ಯಕಾಂತಿ ಎಣ್ಣೆ ಕಚ್ಚಾ	1620 (1640)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ
48,350 (48,200)
ಬೆಳ್ಳಿ ಕೆ.ಜಿ
71,525 (71,150)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಚಿನ್ನದ ಬೆಲೆ ₹ 237ರಷ್ಟು ಏರಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಚಿನ್ನದ ಬೆಲೆಯು 10 ಗ್ರಾಂಗೆ ₹ 237ರಷ್ಟು ಏರಿಕೆ ಆಗಿ, ₹ 47,994ರಂತೆ ಮಾರಾಟವಾಗಿದೆ. ಜಾಗತಿಕ ಮಾರುಕಟ್ಟೆಯಲ್ಲಿ ಆಗುತ್ತಿರುವ ಬೆಲೆ ಏರಿಕೆಯ ಪರಿಣಾಮವಾಗಿ ಇಲ್ಲಿಯೂ ಬೆಲೆ ಜಾಸ್ತಿ ಆಗಿದೆ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ಅಭಿಪ್ರಾಯ ವ್ಯಕ್ತಪಡಿಸಿದೆ. ಬೆಳ್ಳಿಯ ದರದಲ್ಲಿ ಕೆ.ಜಿ.ಗೆ ₹ 153ರಷ್ಟು ಜಾಸ್ತಿ ಆಗಿ ₹ 71,421ಕ್ಕೆ ತಲುಪಿದೆ. 'ಕೋವಿಡ್ ಪ್ರಕರಣಗಳು ಹೆಚ್ಚುತ್ತಿರುವ ಕಾರಣ ಚಿನ್ನದ ಖರೀದಿ ಜಾಸ್ತಿ ಆಗಿದೆ' ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್‌ನ ಹಿರಿಯ ವಿಶ್ಲೇಷಕ ತಪನ್ ಪಟೇಲ್ ಹೇಳಿದ್ದಾರೆ.

'ಎರಡನೆಯ ಅಲೆಯಿಂದಾಗಿ ವಾಹನೋದ್ಯಮಕ್ಕೆ ಪೆಟ್ಟು'

ಮುಂಬೈ (ಪಿಟಿಐ): ಕೊರೊನಾ ವೈರಾಣುವಿನ ಎರಡನೆಯ ಅಲೆಯು ದೇಶಿ ಆಟೊಮೊಬೈಲ್ ಉದ್ಯಮದ ಚೇತರಿಕೆಗೆ ಪೆಟ್ಟು ನೀಡಿದೆ ಎಂದು ರೇಟಿಂಗ್ಸ್ ಸಂಸ್ಥೆ ಐಸಿಆರ್‌ಎ ಹೇಳಿದೆ. ಸತತ ಎರಡು ವರ್ಷಗಳಲ್ಲಿ ಸವಾಲು ಎದುರಿಸಿದ್ದ ದೇಶಿ ಆಟೊಮೊಬೈಲ್ ಉದ್ಯಮವು, ಕೊರೊನಾ ಎರಡನೆಯ ಅಲೆ ಎದುರಾಗದಿದ್ದರೆ ಪ್ರಸಕ್ತ ಹಣಕಾಸು ವರ್ಷದಲ್ಲಿ ಚೇತರಿಕೆ ಕಾಣುತ್ತಿತ್ತು ಎಂದೂ ಐಸಿಆರ್‌ಎ ಅಭಿಪ್ರಾಯ ವ್ಯಕ್ತಪಡಿಸಿದೆ.

ವಾಹನಗಳಿಗೆ ಅಗತ್ಯವಿರುವ ಬಿಡಿಭಾಗಗಳನ್ನು ತಯಾರಿಸುವ ಹಲವು ಉದ್ಯಮಗಳು ಕಾರ್ಯಾಚರಣೆ ಸ್ಥಗಿತಗೊಳಿಸಿವೆ. ಬೇರೆ ಬೇರೆ ಪ್ರದೇಶಗಳಲ್ಲಿ ವಾಹನಗಳ ಡೀಲರ್‌ಗಳಿಗೆ ಮಳಿಗೆ ತೆರೆಯಲು ಸ್ಥಳೀಯ ಲಾಕ್‌ಡೌನ್ ನಿರ್ಬಂಧಗಳಿಂದಾಗಿ ಸಾಧ್ಯವಾಗಿಲ್ಲ ಎಂದು ಸಂಸ್ಥೆ ಹೇಳಿದೆ.

ಎರಡನೆಯ ಅಲೆಯು ದ್ವಿಚಕ್ರ ವಾಹನಗಳ ಮಾರಾಟದ ಮೇಲೆ ಹೆಚ್ಚಿನ ಪರಿಣಾಮ ಉಂಟುಮಾಡುವ ಸಾಧ್ಯತೆ ಇದೆ ಎಂದು ಅದು ಅಂದಾಜು ಮಾಡಿದೆ. 'ವೈದ್ಯಕೀಯ ಉದ್ದೇಶಗಳಿಗಾಗಿ ಮಾಡಿರುವ ವೆಚ್ಚಗಳ ಪರಿಣಾಮವಾಗಿ ವ್ಯಕ್ತಿಗಳು ಹಾಗೂ ಕುಟುಂಬಗಳ ಖರೀದಿ ಸಾಮರ್ಥ್ಯ ಗಣನೀಯವಾಗಿ ಕುಗ್ಗಿದೆ. ಇದರಿಂದಾಗಿ ವಾಹನಗಳ ಖರೀದಿ ಮೇಲೆ ಪರಿಣಾಮ ಉಂಟಾಗಲಿದೆ' ಎಂದು ಐಸಿಆರ್‌ಎ ರೇಟಿಂಗ್ಸ್ ಸಂಸ್ಥೆಯ ಉಪಾಧ್ಯಕ್ಷ ಶಂಶೇರ್ ದಿವಾನ್ ಹೇಳಿದ್ದಾರೆ.

80 ಎನ್‌ಪಿಎ ಖಾತೆಗಳು 'ಬ್ಯಾಡ್ ಬ್ಯಾಂಕ್'ಗೆ?

ನವದೆಹಲಿ (ಪಿಟಿಐ): ದೊಡ್ಡ ಮೊತ್ತದ 80 ಎನ್‌ಪಿಎ ಖಾತೆಗಳನ್ನು ಬ್ಯಾಂಕ್‌ಗಳು 'ರಾಷ್ಟ್ರೀಯ ಆಸ್ತಿ ಪುನರ್‌ರಚನಾ ಕಂಪನಿ'ಗೆ ವರ್ಗಾವಣೆ ಮಾಡುವ ಸಾಧ್ಯತೆ ಇದೆ. ಈ ಕಂಪನಿಯು ಜೂನ್‌ನಿಂದ ಕೆಲಸ ಆರಂಭಿಸಲಿದೆ.

2021–22ನೇ ಸಾಲಿನ ಬಜೆಟ್‌ನಲ್ಲಿ ಎನ್‌ಎಆರ್‌ಸಿಎಲ್ (ಅಥವಾ ಬ್ಯಾಡ್ ಬ್ಯಾಂಕ್) ಆರಂಭಿಸುವ ಘೋಷಣೆ ಮಾಡಲಾಗಿದೆ. ಮಾಮೂಲಿ ಬ್ಯಾಂಕ್‌ಗಳ ಎನ್‌ಪಿಎ ಖಾತೆಗಳನ್ನು ತನ್ನ ಸುಪರ್ದಿಗೆ ತೆಗೆದುಕೊಂಡು, ಸಾಲ ವಸೂಲಿಗೆ ಸಂಬಂಧಿಸಿದ ಮುಂದಿನ ಕ್ರಮಗಳನ್ನು ಬ್ಯಾಡ್ ಬ್ಯಾಂಕ್ ಕೈಗೊಳ್ಳುತ್ತದೆ. ಬ್ಯಾಡ್ ಬ್ಯಾಂಕ್‌ಗೆ ವಹಿಸಲು ಗುರುತಿಸಿರುವ ಎನ್‌ಪಿಎ ಖಾತೆಗಳು ತಲಾ ₹ 500 ಕೋಟಿಗಿಂತ ಹೆಚ್ಚಿನ ಸಾಲ ಬಾಕಿ ಇರಿಸಿಕೊಂಡಿವೆ ಎಂದು ಮೂಲಗಳು ತಿಳಿಸಿವೆ. ಬ್ಯಾಡ್ ಬ್ಯಾಂಕ್ ಆರಂಭವಾದ ನಂತರ, ಒಟ್ಟು ₹ 2 ಲಕ್ಷ ಕೋಟಿಗಿಂತ ಹೆಚ್ಚಿನ ಮೌಲ್ಯದ ಎನ್‌ಪಿಎ ಖಾತೆಗಳು ಬ್ಯಾಂಕ್‌ಗಳಿಂದ ಬ್ಯಾಡ್ ಬ್ಯಾಂಕ್‌ಗೆ ವರ್ಗಾವಣೆ ಆಗುವ ನಿರೀಕ್ಷೆ ಇದೆ. ವಂಚನೆ ಎಂದು ಘೋಷಣೆ ಆಗಿರುವ ಖಾತೆಗಳು ಬ್ಯಾಡ್ ಬ್ಯಾಂಕ್‌ಗೆ ವರ್ಗಾವಣೆ ಆಗುವುದಿಲ್ಲ.

ತೆರಿಗೆ ವಿವರ ಸಲ್ಲಿಸಲು ಹೊಸ ಪೋರ್ಟಲ್

ನವದೆಹಲಿ (ಪಿಟಿಐ): ಆದಾಯ ತೆರಿಗೆ ವಿವರಗಳನ್ನು ಅಂತರ್ಜಾಲದ ಮೂಲಕ ಸಲ್ಲಿಸಲು ನೆರವಾಗುವ ಹೊಸ ಪೋರ್ಟಲ್‌ಗೆ ಆದಾಯ ತೆರಿಗೆ ಇಲಾಖೆಯು ಜೂನ್ ಆರಂಭದಲ್ಲಿ ಚಾಲನೆ ನೀಡುವ ಸಾಧ್ಯತೆ ಇದೆ.

ಹೊಸ ಪೋರ್ಟಲ್ ಈಗಿನ ಪೋರ್ಟಲ್‌ಗಿಂತ ಬಳಕೆದಾರ ಸ್ನೇಹಿ ಆಗಿರಲಿದೆ ಎಂದು ಇಲಾಖೆ ಹೇಳಿದೆ. ಈಗಿರುವ www.incometaxindiaefiling.gov.in ಪೋರ್ಟಲ್‌ನಿಂದ ಹೊಸ www.incometaxgov.in ಪೋರ್ಟಲ್‌ಗೆ ಬದಲಾಗುವ ಪ್ರಕ್ರಿಯೆ ಜೂನ್ 7ರ ಮೊದಲು ಪೂರ್ಣವಾಗಲಿದೆ ಎಂದು ಆದೇಶವೊಂದರಲ್ಲಿ ಹೇಳಲಾಗಿದೆ.